ವಿಶ್ವವಾಣಿ
ವಿಶ್ವಾಸವೇ ವಿಶ್ವ

- 3 ಬಾರಿ ಸ್ಪರ್ಧಿಸಿ ಎರಡು ಬಾರಿ ಗೆದ್ದ 2ನೇ ಅಧ್ಯಕ್ಷ
- 1892ರ ಗ್ರೋವರ್ ಸಾಧನೆ ಸರಿಗಟ್ಟಿದ ಟ್ರಂಪ್
- 2020ರ ಬೈಡೆನ್ ಎದುರಿನ ಸೋಲಿಗೆ ಮುಯ್ಯಿ
- ತೊಡಕಾಗದ ಕ್ರಿಮಿನಲ್ ಪ್ರಕರಣ
- ಮಹಿಳಾ ಅಧ್ಯಕ್ಷರಾಗುವ ಕಮಲಾ ಕನಸು ಭಗ್ನ

## ಡೊನಾಲ್ಡ್‌ಗೆ ಕಮಲಾ ಬೌಲ್ಡ್

**279ಕ್ಕೂ ಹೆಚ್ಚು ಎಲೆಕ್ಟೋರಲ್ ಮತ ಗಳಿಕೆ**

**ಅಮೆರಿಕದ 47ನೇ ಅಧ್ಯಕ್ಷರಾಗಲು ಟ್ರಂಪ್ ಸಜ್ಜು**

**ಇಂದು ಸಂಜೆ ವೇಳೆಗೆ ಫಲಿತಾಂಶದ ಪೂರ್ಣ ಚಿತ್ರಣ**

ಅಮೆರಿಕದ 47ನೇ ಅಧ್ಯಕ್ಷರನ್ನಾಗಿ ನನ್ನನ್ನು ಆಯ್ಕೆ ಮಾಡಿದ ಅಮೆರಿಕದ ಜನತೆಗೆ ನಾನು ಧನ್ಯವಾದ ಅರ್ಪಿಸುತ್ತೇನೆ. ನಾನು ನಿಮಗಾಗಿ, ನಿಮ್ಮ ಕುಟುಂಬ ಹಾಗೂ ಭವಿಷ್ಯಕ್ಕಾಗಿ ಹೋರಾಡುತ್ತೇನೆ.
- ಡೊನಾಲ್ಡ್ ಟ್ರಂಪ್

### ಪುಟ ತೆರೆದಂತೆ...

ಮಧು ಬಂಗಾರಪ್ಪ ಕನ್ನಡವೂ, ಶಶಿ ತರೂರ್ ಇಂಗ್ಲಿಷೂ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಏಲಿಯನ್‌ಗಳು ಬಂದರೆ ಭಾರತಕ್ಕೇ ಬರಬೇಕು!
ಕಾಡುದಾರಿ
ಹರೀಶ್ ಕೇರ
ಸಂ.ಗಮ | 7

### ಮಾತಂದ್ರೆ ಮಾತು



ಹದಿನೇಳು ಕೆರೆಗಳಿಗೆ ನೀರು ತುಂಬಿಸಿದ್ದೇನೆ ಎಂದು ಆ ವ್ಯಕ್ತಿ ಹೇಳುತ್ತಾರೆ. ಆದರೆ ನೀರು ತುಂಬಿಸಲು ಮೂಲ ಕಾರಣವಾದ ಇಗ್ಗಲೂರು ಅಣೆಕಟ್ಟು ಕಟ್ಟಿಸಿದವರು ಯಾರಪ್ಪಾ? ನಾನು ಮುಖ್ಯಮಂತ್ರಿ ಆಗಿದ್ದಾಗ ₹150 ಕೋಟಿ ಬಿಡುಗಡೆ ಮಾಡಿದೆ. ಅಣೆಕಟ್ಟೆಯನ್ನು ಉದ್ಘಾಟನೆ ಮಾಡಿದ್ದೆ. ಆಗಲೇ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿಸಿದೆ. ಸದಾನಂದಗೌಡರು ಸಿಎಂ ಆಗಿದ್ದಾಗ ಹದಿನೇಳು ಕೆರೆಗಳಿಗೆ ನೀರು ತುಂಬಿಸಲು ಹಣ ಕೊಟ್ಟರು. ಯೋಗೇಶ್ವರ ಮಾಡಿದ್ದು ಏನೂ ಇಲ್ಲ.
**ಎಚ್.ಡಿ.ದೇವೇಗೌಡ**
ಮಾಜಿ ಪ್ರಧಾನಿ

### ದಾರಿದೀಪೋಕ್ತಿ

ಜೀವನದಲ್ಲಿ ನೀರಿನಂತೆ ಇರಬೇಕು. ಯಾವುದೇ ಲಕ್ಸುರಿ ಅದಕ್ಕೆ ಬೇಕಿಲ್ಲ, ಅದಿಲ್ಲದೇ ಬದುಕಿಲ್ಲ. ಅದು ಯಾವ ಪಾತ್ರೆಗಾದರೂ ಫಿಟ್ ಆಗುತ್ತದೆ. ಇಲ್ಲದಿದ್ದರೆ, ಕೆರೆಯಂತೆ ಇದ್ದುಬಿಡುತ್ತದೆ. ಬಿಟ್ಟರೆ ತೊರೆಯಂತೆ, ನದಿಯಂತೆ ಹರಿಯುತ್ತದೆ. ಜಲಪಾತದಂತೆ ಧುಮುಕುತ್ತದೆ. ಮಹಾಸಾಗರದಂತೆಯೂ ವಿಶಾಲವಾಗಿ ಹರಡಿಕೊಂಡೂ ಇದ್ದು ಬಿಡಬಹುದು. ಎಲ್ಲೆಡೆಯೂ ಸಲ್ಲುವುದು.

### ವಕ್ರತುಂಡೋಕ್ತಿ

ಆಗಾಗ ನೀರು ಕುಡಿಯುವುದು ದೇಹಕ್ಕೆ ಒಳ್ಳೆಯದು. ಆಗೊಮ್ಮೆ-ಈಗೊಮ್ಮೆ ಅದರಲ್ಲಿ ವಿಸ್ಕಿ ಬೆರೆತಿದ್ದರೆ ಒಳ್ಳೆಯದೇ.

### ಫನ್‌ತರಂಗ
- ರಘುಪತಿ ಶೃಂಗೇರಿ -

ಅಮೆರಿಕಾ ಚುನಾವಣೆಯಲ್ಲಿ ಗೆದ್ದ ಟ್ರಂಪ್
(ಟ್ರಂಪ್ Vs ಕಮಲ ಪೈಪೋಟಿ) ಸುದ್ದಿ

# ಕೆಂಪಾದವ್ರೋ ಎಲ್ಲ ಟ್ರಂಪಾದವ್ರೋ

**ನ್ಯೂಯಾರ್ಕ್:** ಭಾರಿ ಕುತೂಹಲ ಮೂಡಿಸಿದ್ದ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಐತಿಹಾಸಿಕ ಗೆಲುವು ದಾಖಲಿಸಿದ್ದು, ವಿಶ್ವದ ದೊಡ್ಡಣ್ಣನ ಸ್ಥಾನದಲ್ಲಿರುವ ಅಮೆರಿಕದ 47ನೇ ಅಧ್ಯಕ್ಷರಾಗಲು ಸಜ್ಜಾಗಿದ್ದಾರೆ. ಮತ ಏಣಿಕೆ ಮುಂದುವರಿದಿದ್ದು, ಟ್ರಂಪ್ 279 ಚುನಾವಣಾ ಮತಗಳನ್ನು ಪಡೆಯುವ ಮೂಲಕ 2ನೇ ಬಾರಿಗೆ ಅಮೆರಿಕದ ಚುಕ್ಕಾಣಿ ಹಿಡಿಯುವುದು ಖಚಿತವಾಗಿದೆ. ಪ್ರತಿಸ್ಪರ್ಧಿ, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ 223 ಮತಗಳನ್ನು ಪಡೆದಿದ್ದಾರೆ. ಗೆಲುವು ಸಾಧಿಸಲು 270 ಮತಗಳನ್ನು ಪಡೆಯಬೇಕಿದ್ದು, ಅದಕ್ಕಿಂತ ಒಂಬತ್ತು ಮತಗಳನ್ನು ಟ್ರಂಪ್ ಹೆಚ್ಚು ಪಡೆದುಕೊಂಡಿದ್ದಾರೆ. ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ನಿರ್ಣಾಯಕವಾಗಿರುವ ಏಳು ರಾಜ್ಯಗಳ ಪೈಕಿ ನಾಲ್ಕರಲ್ಲಿ ಟ್ರಂಪ್ ಜಯಭೇರಿ ಬಾರಿಸಿದ್ದಾರೆ. ಪೆನ್ಸಿಲ್ವೇನಿಯಾ, ಜಾರ್ಜಿಯಾ, ನಾರ್ತ್ ಕೆರೊಲಿನಾ, ಟೆಕ್ಸಾಸ್, ಫ್ಲೋರಿಡಾ, ಇಂಡಿಯಾನಾ, ಕೆಂಟುಕಿ ಒಳಗೊಂಡಂತೆ 30ಕ್ಕೂ ಹೆಚ್ಚು ರಾಜ್ಯಗಳಲ್ಲಿ ಟ್ರಂಪ್ ಗೆಲುವು ದಾಖಲಿಸಿದ್ದರೆ, ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್ ಕೇವಲ 20 ರಾಜ್ಯಗಳಲ್ಲಿ ಜಯ ಗಳಿಸಿದ್ದಾರೆ.

ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಐತಿಹಾಸಿಕ ಗೆಲುವು ಸಾಧಿಸಿರುವ ಸ್ನೇಹಿತ ಟ್ರಂಪ್ ಅವರಿಗೆ ಅಭಿನಂದನೆಗಳು. ನಮ್ಮ ಜನರಿಗಾಗಿ, ಜಾಗತಿಕ ಶಾಂತಿ, ಸಮೃದ್ಧಿ ಮತ್ತು ಸದೃಢತೆಗಾಗಿ ಒಟ್ಟಾಗಿ ಕೆಲಸ ಮಾಡೋಣ. ಭಾರತ ಮತ್ತು ಅಮೆರಿಕ ನಡುವಿನ ಜಾಗತಿಕ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಎದುರು ನೋಡುತ್ತಿದ್ದೇನೆ.
- **ನರೇಂದ್ರ ಮೋದಿ** ಪ್ರಧಾನಿ

### ಭಾರತೀಯರದ್ದೇ ಕಮಾಲ್

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರನ್ನು ಆಯ್ಕೆ ಮಾಡುವಲ್ಲಿ ಭಾರತೀಯ ಮೂಲದ ಸುಮಾರು 52 ಲಕ್ಷ ಮತದಾರರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಈ ಹಿಂದೆ ಬಿಳಿಯರ ಪಕ್ಷ ಎಂದು ಗುರುತಿಸಿ ರಿಪಬ್ಲಿಕನ್ ಪಕ್ಷದ ವಿರುದ್ಧ ಮತ ಚಲಾಯಿಸುತ್ತಿದ್ದ ಭಾರತೀಯರು ಈ ಬಾರಿ ಕಮಲಾ ಹ್ಯಾರಿಸ್ ಭಾರತೀಯ ಸಂಜಾತೆ ಯಾದರೂ ಟ್ರಂಪ್ ಪರ ಮತ ಹಾಕಿದ್ದಾರೆ. ಬಾಂಗ್ಲಾ ಹಿಂದೂಗಳ ಪರ ಟ್ರಂಪ್ ಹೇಳಿಕೆ ಭಾರತೀಯರನ್ನು ರಿಪಬ್ಲಿಕನ್ ಪಕ್ಷದ ಪರ ತಿರುಗಿಸಿದೆ.

### ಭಾರತದ ಮೇಲೆ ಪರಿಣಾಮ

- ಮೋದಿ ಮತ್ತು ಟ್ರಂಪ್ ಉತ್ತಮ ಸ್ನೇಹಿತರಾಗಿದ್ದು, ಭಾರತ-ಅಮೆರಿಕ ಸಂಬಂಧಕ್ಕೆ ಬಲ
- ರಷ್ಯಾ-ಉಕ್ರೇನ್ ಯುದ್ಧಕ್ಕೆ ಅಂತ್ಯ ಹಾಡುವ ಟ್ರಂಪ್ ಭರವಸೆ ಈಡೇರಿದರೆ ಭಾರತಕ್ಕೆ ಅನುಕೂಲ. ಕಚ್ಚಾ ತೈಲ ದರ ಇಳಿಕೆ.
- ಕೆನಡಾದಲ್ಲಿ ಮಾಡುತ್ತಿರುವ ಖಲಿಸ್ತಾನಿಗಳ ಅಟಾಟೋಪಕ್ಕೆ ಬ್ರೇಕ್ ಬೀಳುವ ಸಾಧ್ಯತೆ.
- ಬಿಗಿ ವಲಸೆ ನೀತಿಯಿಂದ ಅಮೆರಿಕದಲ್ಲಿ ಉದ್ಯೋಗ ಪಡೆಯುವ ಭಾರತೀಯರ ಕನಸಿಗೆ ತೊಡಕು.

ಈ ಅಭಿಯಾನದ ಸಮಯದಲ್ಲಿ ಶ್ರಮಿಸಿದ ಹಾಗೂ ಸಂತಸವನ್ನು ಮರಳಿ ತಂದ ಪ್ರತಿಯೊಬ್ಬರಿಗೂ ಧನ್ಯವಾದಗಳು.
-ಕಮಲಾ ಹ್ಯಾರಿಸ್




### ರುಪಾಯಿ ಸೇರಿ ವಿವಿಧ ದೇಶಗಳ ಕರೆನ್ಸಿ ಮೌಲ್ಯ ಕುಸಿತ

**ಮುಂಬೈ:** ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ದಾಖಲಿಸಿರುವುದಾಗಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಘೋಷಿಸುತ್ತಿದ್ದಂತೆ ಭಾರತದ ರುಪಾಯಿ ಸೇರಿದಂತೆ ವಿವಿಧ ರಾಷ್ಟ್ರಗಳ ಕರೆನ್ಸಿಗಳು ದಾಖಲೆಯ ಕುಸಿತ ಕಂಡಿವೆ. ಹಿಂದಿನ ದರಕ್ಕಿಂತ ಶೇ.0.2ರಷ್ಟು ಕುಸಿತ ದಾಖಲಿಸಿರುವ ರುಪಾಯಿ, ಬುಧವಾರ ಪ್ರತಿ ಡಾಲರ್‌ಗೆ ₹84.28ರಷ್ಟು ದಾಖಲಿಸಿದೆ. ಇದರಿಂದ ರುಪಾಯಿ ಮೌಲ್ಯವು ಕಳೆದ ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಂತಾಗಿದೆ.

### ಕಮಲಾ ಹ್ಯಾರಿಸ್ ಸೋತಿದ್ದು ಏಕೆ ?

1. ಡೆಮಾಕ್ರಟಿಕ್ ಅಭ್ಯರ್ಥಿಯಾಗಿ ತಡವಾಗಿ ಘೋಷಣೆ ಮಾಡಿದ್ದು
2. ಡೆಮಾಕ್ರಟಿಕ್ ಅಧ್ಯಕ್ಷರಾಗಿ ಜೋ ಬೈಡೆನ್ ಕಳಪೆ ನಿರ್ವಹಣೆ
3. ಭಾರತೀಯ ಸಂಜಾತೆಯಾದರೂ ಎನ್ನಾರೈಗಳ ಬೆಂಬಲ ಸಿಗಲಿಲ್ಲ
4. ಭಾರತೀಯರ ಪರ, ಕಾಶ್ಮೀರ ಪರ ನಿಲುವಿನಲ್ಲಿ ದ್ವಂದ್ವ ಧೋರಣೆ
5. ಉಕ್ರೇನ್, ಇಸ್ರೇಲ್ ಯುದ್ಧದಲ್ಲಿ ಬೈಡೆನ್ ಸರಕಾರದ ವೈಫಲ್ಯ
6. ತುಳಸಿ ಗಬ್ಬಾರ್ಡ್‌ರಂತಹ ಡೆಮಾಕ್ರಾಟಿಕ್ ನಾಯಕರ ಬಂಡಾಯ
7. ಗ್ರಾಮೀಣ, ಉಪನಗರ ಪ್ರದೇಶಗಳಲ್ಲಿ ನಿರೀಕ್ಷೆಗಿಂತ ಕಡಿಮೆ ಮತ
8. ಏಷ್ಯಾ, ಲ್ಯಾಟಿನ್ ಅಮೆರಿಕ ಮತದಾರರ ಬೆಂಬಲ ಕುಸಿತ

### ಟ್ರಂಪ್ ಗೆದ್ದಿದ್ದು ಹೇಗೆ?

1. 3 ಬಾರಿ ಹತ್ಯೆ ಯತ್ನದ ಅನುಕಂಪ ಮತಗಳು
2. ದೇಶ ಮೊದಲು ಘೋಷಣೆಗೆ ಸಾರ್ವತ್ರಿಕ ಬೆಂಬಲ
3. ಕಠಿಣ ವಲಸೆ ನೀತಿಗೆ ಮೂಲ ಅಮೆರಿಕನ್ನರ ಒಲವು
4. ಯುದ್ಧ ನಿಲ್ಲಿಸುವ ಘೋಷಣೆಗೆ ಮತದಾರರ ಬೆಂಬಲ
5. ಸ್ಪೇಸ್ ಎಕ್ಸ್ ಸಂಸ್ಥಾಪಕ ಎಲಾನ್ ಮಸ್ಕ್ ಬಹಿರಂಗ ಬೆಂಬಲ
6. ಗ್ರಾಮೀಣ ಪ್ರದೇಶ, ಉಪನಗರಗಳಲ್ಲಿ ಮತ ಕ್ರೋಢೀಕರಣ
7. 52 ಲಕ್ಷ ಭಾರತೀಯ ಸಂಜಾತ ಮತದಾರರ ಬೆಂಬಲ
8. ಮತವಾಗಿ ಬದಲಾದ ಬಾಂಗ್ಲಾ ಹಿಂದೂಗಳ ಪರ ಹೇಳಿಕೆ

ನಾಗಸಂದ್ರ – ಮಾದಾವರವರೆಗಿನ ವಿಸ್ತರಿತ ಮಾರ್ಗಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಂಸದ ತೇಜಸ್ವಿ ಸೂರ್ಯ, ನೆಲಮಂಗಲ ಶಾಸಕ ಶ್ರೀನಿವಾಸಯ್ಯ, ದಾಸರಹಳ್ಳಿ ಶಾಸಕ ಮುನಿರಾಜು ಅವರ ಜತೆ ಪ್ರಾಯೋಗಿಕವಾಗಿ ಚಾಲನೆ ನೀಡಿ ಪ್ರಯಾಣಿಸಿದರು.

## ಪ್ರಧಾನಮಂತ್ರಿ ವಿದ್ಯಾಲಕ್ಷ್ಮಿ ಯೋಜನೆಗೆ ಸಂಪುಟ ಅಸ್ತು

**ದೆಹಲಿ:** ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡುವ ಪಿಎಂ ವಿದ್ಯಾಲಕ್ಷ್ಮಿ ಯೋಜನೆ ಜಾರಿಗೆ ಕೇಂದ್ರ ಸಚಿವ ಸಂಪುಟ ಸಭೆ ಬುಧವಾರ ಅನುಮೋದನೆ ನೀಡಿದೆ. ಉನ್ನತ ಶಿಕ್ಷಣ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ಹಣದ ಕೊರತೆ ಅಡ್ಡಿಯಾಗಬಾರದು ಎನ್ನುವ ಕಾರಣಕ್ಕೆ ಈ ಯೋಜನೆ ಜಾರಿ ಮಾಡಲಾಗುತ್ತಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಈ ಯೋಜನೆಯ ಪ್ರಕಾರ, ಗುಣ ಮಟ್ಟದ ಉನ್ನತ ಶಿಕ್ಷಣ ನೀಡುವ ಸಂಸ್ಥೆಗಳಿಗೆ ಸೇರಿಕೊಳ್ಳುವ ವಿದ್ಯಾರ್ಥಿಗಳಿಗೆ ಬ್ಯಾಂಕ್‌ಗಳಲ್ಲಿ ಬಡ್ಡಿರಹಿತ ಸಾಲ ದೊರೆಯಲಿದೆ. ಜತೆಗೆ ಸಾಲ ಪಡೆಯುವ ವೇಳೆ ಅವರು ಆಧಾರವಾಗಿ ಸ್ವತ್ತು ಇಡುವ ಅಗತ್ಯವಿಲ್ಲ. ವಿದ್ಯಾರ್ಥಿಗಳ ಬೋಧನಾ ಶುಲ್ಕ ಸೇರಿದಂತೆ ಅವರು ಆಯ್ಕೆ ಮಾಡಿಕೊಂಡ ಕೋರ್ಸ್‌ಗೆ ವ್ಯಯಿಸುವ ಇತರ ಖರ್ಚನ್ನೂ ಈ ಯೋಜನೆ ಭರಿಸಲಿದೆ. ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕದ ಚೌಕಟ್ಟಿನಲ್ಲಿ ರ್‍ಯಾಂಕ್ ಪಡೆದಿರುವ 100 ಸರಕಾರಿ ಮತ್ತು ಖಾಸಗಿ ಸಂಸ್ಥೆಗಳು ಮತ್ತು ಕೇಂದ್ರ ಸರಕಾರ ನಡೆಸುವ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸೇರುವ ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿ ಗಳಾಗಬಹುದು.

**ವಿಚಾರಣೆ ಎದುರಿಸಿ 25ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರ ನೀಡಿದ ಸಿದ್ದರಾಮಯ್ಯ**

## ಮುಡಾ: ಸಿಎಂ ವಿಚಾರಣೆ ಮುಕ್ತಾಯ

**ಮೈಸೂರು/ಬೆಂಗಳೂರು:** ಭಾರಿ ವಿವಾದಕ್ಕೆ ಕಾರಣವಾಗಿರುವ ಮುಡಾ ಪ್ರಕರಣದ ವಿಚಾರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಹಾಜರಾಗಿ, ಸುಮಾರು ಎರಡು ಗಂಟೆ ವಿಚಾರಣೆ ಎದುರಿಸಿದ್ದಾರೆ.

ಚನ್ನಪಟ್ಟಣ ಉಪಚುನಾವಣಾ ಪ್ರಚಾರ ಕಾರ್ಯದಲ್ಲಿದ್ದ ಸಿದ್ದರಾಮಯ್ಯ ಅವರು ಮೈಸೂರಿಗೆ ತೆರಳಿ, ಲೋಕಾಯುಕ್ತ ಎಸ್‌ಪಿ ಉದ್ದೇಶ್ ಎದುರಿಗೆ ವಿಚಾರಣೆಗೆ ಹಾಜರಾದರು. ಸಿದ್ದರಾಮಯ್ಯ ಅವರು ವಿಚಾರಣೆಗೆ ಆಗಮಿಸುತ್ತಾರೆ ಎನ್ನುವ ಕಾರಣಕ್ಕೆ ಮೈಸೂರು ಲೋಕಾಯುಕ್ತ ಕಚೇರಿ ಮುಂಭಾಗ ಬಿಗಿಭದ್ರತೆ ಒದಗಿಸಲಾಗಿತ್ತು.

ಬೆಳಗ್ಗೆ 10 ಗಂಟೆ 09 ನಿಮಿಷಕ್ಕೆ ಮೈಸೂರು ಲೋಕಾಯುಕ್ತ ಕಚೇರಿಗೆ ಆಗಮಿಸಿದ್ದ ಸಿಎಂ, ವಿಚಾರಣೆ ಮುಗಿಸಿ 12 ಗಂಟೆ 8 ನಿಮಿಷಕ್ಕೆ ಲೋಕಾಯುಕ್ತ ಕಚೇರಿಯಿಂದ ಖಾಸಗಿ ಕಾರಿನಲ್ಲಿ ತೆರಳಿದರು. ವಿಚಾರಣೆಯ ಅರ್ಧದಲ್ಲಿ 'ವಿರಾಮ ಬೇಕೆ?' ಎಂದು ಸಿದ್ದರಾಮಯ್ಯ ಅವರಿಗೆ ಪೊಲೀಸರು ಕೇಳಿದ್ದಾರೆ. ಆದರೆ ವಿಶ್ರಾಂತಿ ಅಗತ್ಯವಿಲ್ಲ ಎಂದು ಹೇಳಿ ವಿಚಾರಣೆ ಮುಂದುವರಿಸಲು ತಿಳಿಸಿದರು ಎಂದು ತಿಳಿದುಬಂದಿದೆ. ಇದಕ್ಕೂ ಮೊದಲು ವಿಚಾರಣೆ ಆರಂಭಕ್ಕೂ ಮೊದಲು ವಿಚಾರಣೆ ನಡೆಸಬೇಕಿದ್ದ ಅಧಿಕಾರಿಗಳಿಗೆ, 'ತಮ್ಮನ್ನು ಮುಖ್ಯಮಂತ್ರಿ ಎಂದು ವಿಚಾರಣೆ ಮಾಡದೇ, ಸಾಮಾನ್ಯವ್ಯಕ್ತಿಯೆಂದುಕೊಂಡು ವಿಚಾರಣೆ ನಡೆಸಿ' ಎಂದು ಹೇಳಿದ್ದರು ಎನ್ನಲಾಗಿದೆ.
→ 4

### ಗೋಬ್ಯಾಕ್ ಪ್ರತಿಭಟನೆ; ಬಂಧನ

ಸಿಎಂ ವಿಚಾರಣೆಗೆ ಹಾಜರಾಗಲು ಮೈಸೂರು ಲೋಕಾಯುಕ್ತ ಕಚೇರಿಗೆ ಆಗಮಿಸುವ ವೇಳೆಗೆ ಕಚೇರಿಯ ಹೊರಭಾಗದಲ್ಲಿ ಬಿಜೆಪಿ ಶಾಸಕ ಶ್ರೀವತ್ಸ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. 'ಗೋಬ್ಯಾಕ್ ಸಿದ್ದರಾಮಯ್ಯ' ಎಂಬ ಘೋಷಣೆ ಕೂಗುವುದರೊಂದಿಗೆ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಬಿಜೆಪಿಗರು ಆಗ್ರಹಿಸಿದರು. ಈ ವೇಳೆ ಪೊಲೀಸರು ಶ್ರೀವತ್ಸ ಸೇರಿದಂತೆ ಬಿಜೆಪಿ ನಾಯಕರನ್ನು ವಶಕ್ಕೆ ಪಡೆದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾಯುಕ್ತ ವಿಚಾರಣೆಗೆ ಒಳಪಟ್ಟಿದ್ದಾರೆ. ಆದರೆ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಸಿದ್ದರಾಮಯ್ಯ ನನ್ನ ರಾಜಕೀಯ ಜೀವನ ತೆರೆದ ಪುಸ್ತಕ ಎಂದೆಲ್ಲ ಹೇಳುತ್ತಿದ್ದಾರೆ. ಅವರು ಪ್ರಾಮಾಣಿಕರಾಗಿದ್ದರೆ, ಮುಡಾ ಪ್ರಕರಣದ ಸತ್ಯಾಸತ್ಯತೆ ಹೊರಬರಬೇಕು ಎನ್ನುವ ಆಶಯವಿದ್ದರೆ ಕೂಡಲೇ ಸಿಬಿಐ ತನಿಖೆಗೆ ಆದೇಶಿಸಲಿ.
- **ಬಿ.ಎಸ್.ಯಡಿಯೂರಪ್ಪ** ಮಾಜಿ ಮುಖ್ಯಮಂತ್ರಿ

### ವಿಚಾರಣೆ ಬಳಿಕ ಸಿಎಂ ಹೇಳಿದ್ದೇನು?

- ಮುಡಾ ಪ್ರಕರಣದ ಯಾವುದೇ ದಾಖಲೆ ನನ್ನ ಬಳಿಯಿಲ್ಲ; ಇದೊಂದು ಸುಳ್ಳು ಕೇಸ್
- ಲೋಕಾಯುಕ್ತ ಪೊಲೀಸರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ
- ಮತ್ತೆ ಬರುವಂತೆ ಅವರೇನು ಹೇಳಿಲ್ಲ; ಕರೆದರೆ ಮತ್ತೆ ವಿಚಾರಣೆಗೆ ಬರುವೆ
- ಬಿಜೆಪಿಯವರಿಗೆ ಕಾನೂನಿನ ಮೇಲೆ ಗೌರವವಿಲ್ಲ; ಅದಕ್ಕೆ ಲೋಕಾಯುಕ್ತವನ್ನು ಟೀಕಿಸುತ್ತಿದ್ದಾರೆ

ಈ ಪ್ರಕರಣವನ್ನು ಸಿಬಿಐಗೆ ವಹಿಸಲು ಕೇಳುತ್ತಿರುವ ಬಿಜೆಪಿಯವರು ಯಾವುದಾದರೂ ಕೇಸ್ ಸಿಬಿಐಗೆ ಕೊಟ್ಟಿದ್ದಾರಾ? ಲೋಕಾಯುಕ್ತ ಪೊಲೀಸ್ ಮಾಡಿದ್ದು ಯಾರು? ಬಿಜೆಪಿ-ಜೆಡಿಎಸ್ ಸುಳ್ಳು ಆರೋಪಗಳನ್ನು ಮಾಡಿವೆ. ಬಿಜೆಪಿಯವರಿಗೆ ಕಾನೂನಿನ ಮೇಲೆ ಗೌರವವಿಲ್ಲ. ಸುಳ್ಳು ಆರೋಪಗಳಿಗೆ ಕೋರ್ಟ್‌ನಲ್ಲಿ ಉತ್ತರಿಸುವೆ. - **ಸಿದ್ದರಾಮಯ್ಯ** ಸಿಎಂ

## ಎಫ್‌ಐಆರ್ ರದ್ದು ಎಚ್‌ಡಿಕೆ ಅರ್ಜಿ

**ಬೆಂಗಳೂರು:** ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ದೂರು ಸಂಬಂಧ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಬುಧವಾರ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆಯ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ತಮ್ಮ ವಿರುದ್ಧ ಮಾನ ಹಾನಿ ಹೇಳಿಕೆ ನೀಡಿ ಬೆದರಿಕೆ ಹಾಕಿದ್ದಾರೆಂದು ಎಂ.ಚಂದ್ರಶೇಖರ್ ಬೆಂಗಳೂರಿನ ಸಂಜಯ್‌ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

## 370ನೇ ವಿಧಿ ಪರ ಸದನ ನಿರ್ಣಯ

**ಶ್ರೀನಗರ:** 2019ರ ಆಗಸ್ಟ್‌ನಲ್ಲಿ ಕೇಂದ್ರ ಸರಕಾರವು ಹಿಂಪಡೆದಿದ್ದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸುವಂತೆ ಆಗ್ರಹಿಸಿ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಬುಧವಾರ ಐತಿಹಾಸಿಕ ನಿರ್ಣಯವನ್ನು ಅಂಗೀಕರಿಸಲಾಗಿದೆ. ಸದ್ಯ ನಡೆಯುತ್ತಿರುವ ವಿಧಾನಸಭೆ ಅಧಿವೇಶನದ ಮೂರನೇ ದಿನವಾದ ಬುಧವಾರ ನ್ಯಾಷನಲ್ ಕಾನ್ಫರೆನ್ಸ್ (ಎನ್ಸಿ) ಪಕ್ಷದ ನಾಯಕ ಮತ್ತು ಉಪ ಮುಖ್ಯಮಂತ್ರಿ ಸುರಿಂದರ್ ಕುಮಾರ್ ಚೌಧರಿ ಅವರು ನಿರ್ಣಯವನ್ನು ಮಂಡಿಸಿದರು.

**ವಕ್ಫ್ ಕಾಯಿದೆ ವಿರೋಧಿಸಿ ಶೋಭಾ-ಯತ್ನಾಳ್ ನೇತೃತ್ವದ ಅನಿರ್ದಿಷ್ಟಾವಧಿ ಧರಣಿ ನಾಲ್ಕನೇ ದಿನಕ್ಕೆ**
**ವಕ್ಫ್ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಂಬಿಕಾ ಪಾಲ್ ಇಂದು ಹುಬ್ಬಳ್ಳಿ, ವಿಜಯಪುರಕ್ಕೆ ಭೇಟಿ**

## ಪಾಲ್ ಭೇಟಿಗೆ ಕಾಂಗ್ರೆಸ್ ವಿರೋಧ

**ವಿಜಯಪುರ:** ಕೇಂದ್ರ ಸರಕಾರದ ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಅವರು ಗುರುವಾರ ಹುಬ್ಬಳ್ಳಿ ಮತ್ತು ವಿಜಯಪುರಕ್ಕೆ ಭೇಟಿ ನೀಡುತ್ತಿದ್ದು, ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ. ಸಚಿವೆ ಶೋಭಾ ಕರಂದ್ಲಾಜೆ ವಿನಂತಿ ಮೇರೆಗೆ ತರಾತುರಿಯಾಗಿ ಹುಬ್ಬಳ್ಳಿ, ವಿಜಯಪುರ ಪ್ರವಾಸ ಕೈಗೊಂಡಿರುವ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಾಲ್ ಅವರು ಕೇವಲ ಒಬ್ಬರೇ ಬರುತ್ತಿರುವುದು ಖಂಡನೀಯ. ಸಮಿತಿಯ ಎಲ್ಲ ಸದಸ್ಯರನ್ನು ತಮ್ಮ ಜತೆ ಪ್ರವಾಸಕ್ಕೆ ಕರೆತರಬೇಕಿತ್ತು. ಅಧ್ಯಕ್ಷರೊಬ್ಬರೇ ಬಂದು ಕೇವಲ ಬಿಜೆಪಿಯ ಧರಣಿನಿರತರನ್ನು ಭೇಟಿ ಮಾಡಿ ಹೋಗುವುದು ಸರಿಯಲ್ಲ, ಇದು ಏಕಮುಖವಾಗುತ್ತದೆ. ಇದು ಜಂಟಿ ಸಂಸದೀಯ ಸಮಿತಿಯ ಸದಸ್ಯರಿಗೆ ಮಾಡುತ್ತಿರುವ ಅವಮಾನ ಮತ್ತು ಕರ್ತವ್ಯ ಲೋಪ ಎಂದು ಕೆಪಿಸಿಸಿ ವಕ್ತಾರ ಎಸ್.ಎಂ.ಪಾಟೀಲ ಗಣಿಹಾರ ಮತ್ತು ಮಾಜಿ ಶಾಸಕ ಪ್ರೊ.ರಾಜು ಆಲಗೂರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



### ಮುಂದುವರಿದ ಅಹೋರಾತ್ರಿ ಧರಣಿ

ವಕ್ಫ್ ಕಾಯ್ದೆಯನ್ನು ರದ್ದುಗೊಳಿಸಬೇಕು, ರೈತರ, ಮಠ ಮಾನ್ಯಗಳ ಜಮೀನು ಹಾಗೂ ಸರಕಾರಿ ಆಸ್ತಿಗಳ ಪಹಣಿಯಲ್ಲಿ ನಮೂದಿಸಿರುವ ವಕ್ಫ್ ಹೆಸರನ್ನು ತಕ್ಷಣ ತೆಗೆಯುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನ ಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಹೊರಾಂಗಣದಲ್ಲಿ ನಡೆಯುತ್ತಿರುವ ಅನಿರ್ಧಿಷ್ಟಾವಧಿ ಅಹೋರಾತ್ರಿ ಧರಣಿ 4ನೇ ದಿನಕ್ಕೆ ಕಾಲಿರಿಸಿದೆ.

### ವಿಧಾನಸೌಧ ಮುತ್ತಿಗೆ: ಎಚ್ಚರಿಕೆ

ಕಲಬುರಗಿ: ಕೃಷಿಕರ ಜಮೀನು, ಮಠ-ಮಂದಿರಗಳಿಗೆ ಆಸ್ತಿಗಳ ಉತಾರದಲ್ಲಿ ನಮೂದಾಗಿರುವ ವಕ್ಫ್ ಮಂಡಳಿಯ ಹೆಸರನ್ನು ನವೆಂಬರ್ 20ರ ಒಳಗಾಗಿಯೇ ಶಾಶ್ವತವಾಗಿ ತೆಗೆದುಹಾಕಬೇಕು. ಪ್ರತಿಯೊಂದು ಪಹಣಿಯೂ ವಾರಸುದಾರರ ಹೆಸರಲ್ಲಿ ಮಾತ್ರ ಇರಬೇಕು. ಕಾಲಹರಣ ಮಾಡಿದರೆ ರಾಜ್ಯವ್ಯಾಪಿ ಉಗ್ರ ಹೋರಾಟ ಮಾಡಿ, ವಿಧಾನಸೌಧಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಬಾಗಲಕೋಟೆಯ ಶ್ರದ್ಧಾನಂದ ಮಠದ ಜಗದೀಶಾನಂದ ಸ್ವಾಮೀಜಿ ಮತ್ತು ಮಕಣಾಪುರ ಮಠದ ಸೋಮೇಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದರು.

**ಕಾಂಗ್ರೆಸ್‌ನಿಂದ ಲ್ಯಾಂಡ್ ಜಿಹಾದ್‌ಗೆ ಕುಮ್ಮಕ್ಕು:** ಈ ಕುರಿತು ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರದ ಕುಮ್ಮಕ್ಕಿನಿಂದ ಲ್ಯಾಂಡ್ ಜಿಹಾದ್ ನಡೆಯುತ್ತಿದ್ದು, ಇದನ್ನು ಪರಿಶೀಲಿಸಲು ಬರುವಂತೆ ನಾನು ಮಾಡಿಕೊಂಡ ವಿನಂತಿ ಮೇರೆಗೆ ಜಂಟಿ ಸಂಸದೀಯ ಸಮಿತಿ ಅಧ್ಯಕ್ಷರು ರಾಜ್ಯಕ್ಕೆ ಬರುತ್ತಿದ್ದಾರೆ. ಇದನ್ನು ಕಾಂಗ್ರೆಸ್ ವಿರೋಧಿಸುತ್ತಿರುವುದು ಖಂಡನೀಯ. ಅವರು ಜಂಟಿ ಸದನ ಸಮಿತಿಯಲ್ಲಿ ಬಿಜೆಪಿ ಸೇರಿದಂತೆ ಎಲ್ಲ ವಿರೋಧ ಪಕ್ಷಗಳ ಪ್ರತಿನಿಧಿಗಳು ಇದ್ದಾರೆ.
→ 4

**ನಮ್ಮ ಮೆಟ್ರೋದಿಂದ ಭದ್ರತಾ ಕಾರ್ಯಾಚರಣೆಗೆ ಪ್ರತ್ಯೇಕ ಕೇಂದ್ರ ಸ್ಥಾಪನೆ**

## ಹುಸಿ ಬಾಂಬ್ ಬೆದರಿಕೆ ವಿರುದ್ಧ ಹೊಸ ಅಸ್ತ್ರ

ವಿಶ್ವವಾಣಿ ವಿಶೇಷ

**ಬೆಂಗಳೂರು:** ವಿಮಾನ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಿಗೆ ಇತ್ತೀಚಿನ ದಿನದಲ್ಲಿ ಹುಸಿ ಬಾಂಬ್ ಬೆದರಿಕೆ ಪ್ರಕರಣಗಳು ಹೆಚ್ಚಾಗುತ್ತಿರುವ ಬೆನ್ನಲ್ಲೇ, ನಮ್ಮ ಮೆಟ್ರೋ ಇದರ ವಿರುದ್ಧ ಹೋರಾಟಕ್ಕೆ ಹೊಸ ಕೇಂದ್ರ ಸ್ಥಾಪನೆಗೆ ಸಿದ್ಧತೆ ನಡೆಸಿಕೊಂಡಿದೆ.

ಬೆಂಗಳೂರಿನ ಸಾರ್ವಜನಿಕ ಸಂಚಾರದ ಜೀವನಾಡಿಯಾಗಿರುವ ನಮ್ಮ ಮೆಟ್ರೋ ಸೈಬರ್ ಬೆದರಿಕೆ, ಐಟಿ ಮತ್ತು ಸಿಸಿಟಿವಿ ಕಣ್ಗಾವಲುಗಳನ್ನು ನಿರ್ವಹಿಸಲು ಭದ್ರತಾ ಕಾರ್ಯಾಚರಣಾ ಕೇಂದ್ರವನ್ನು ಸ್ಥಾಪನೆ ಮಾಡಲು ಮುಂದಾಗಿದೆ.

ಬೈಯಪ್ಪನಹಳ್ಳಿ ಮೆಟ್ರೋ ನಿಲ್ದಾಣದಲ್ಲಿ ಬಿಎಂಆರ್‌ಸಿಎಲ್‌ನ ಮೊದಲ ಭದ್ರತಾ ಕಾರ್ಯಾಚರಣೆ ಕೇಂದ್ರ ಸ್ಥಾಪನೆಯಾಗಲಿದ್ದು, ನಮ್ಮ ಮೆಟ್ರೋಗೆ ಬರುವ ಸೈಬರ್ ಬೆದರಿಕೆ, ಐಟಿ ಮತ್ತು ಸಿಸಿಟಿವಿ ಕಣ್ಗಾವಲುಗಳನ್ನು ಈ ಕೇಂದ್ರದ ಮೂಲಕ ನಿರ್ವಹಣೆ ಮಾಡಲು ಮುಂದಾಗಿದೆ. ಬೆಂಗಳೂರಿನಲ್ಲೇ ಮೊದಲ ಮೆಟ್ರೋ ಸೈಬರ್ ಬೆದರಿಕೆ ನಿರ್ವಹಣೆ ಮಾಡಲು ಭದ್ರತಾ ಕಾರ್ಯಾಚರಣೆ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದ್ದು, ಎಐ ತಂತ್ರಜ್ಞಾನ ಮತ್ತು ತರೆ ಬೆದರಿಕೆಗಳನ್ನು ಎದುರಿಸುವುದು ಈ ಕೇಂದ್ರದ ಕೆಲಸವಾಗಿರಲಿದೆ. ಮೆಟ್ರೋ ಜಾಲದ ಸಂಪೂರ್ಣ ನಿಯಂತ್ರಣ ಈ ಕೇಂದ್ರದಲ್ಲಿ ಇರಲಿದೆ. ಬೆದರಿಕೆಗಳು ಬಮದಾಗ ಅಗತ್ಯ ಸಾಧನಗಳ ಮೂಲಕ ಮೂಲವನ್ನು ಪತ್ತೆ ಹೆಚ್ಚಲಿದೆ.

### ಘಟಕದ ಕೆಲಸವೇನು?

- ನಮ್ಮ ಮೆಟ್ರೋಗೆ ಬರುವ ಸೈಬರ್ ಬೆದರಿಕೆ, ಐಟಿ ಮತ್ತು ಸಿಸಿಟಿವಿ ಕಣ್ಗಾವಲುಗಳನ್ನು ಈ ಕೇಂದ್ರದ ಮೂಲಕ ನಿರ್ವಹಣೆ ಮಾಡಲಾಗುತ್ತದೆ. ಬೆಂಗಳೂರಿನಲ್ಲಿಯೇ ಮೊದಲ ಮೆಟ್ರೋ ಸೈಬರ್ ಬೆದರಿಕೆ ನಿರ್ವಹಣೆ ಮಾಡಲು ಭದ್ರತಾ ಕಾರ್ಯಾಚರಣೆ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದ್ದು, ಎಐ ತಂತ್ರಜ್ಞಾನ ಮತ್ತು ಬೆದರಿಕೆಗಳನ್ನು ಎದುರಿಸುವುದು ಈ ಕೇಂದ್ರದ ಕೆಲಸವಾಗಿರಲಿದೆ. ವಿವಿಧ ಮೂಲಗಳಿಂದ ಸಂಗ್ರಹ ಮಾಡಿದ ದತ್ತಾಂಶಗಳನ್ನು ಸಂಸ್ಕರಣೆ ಮಾಡುವುದು. ಅನುಮಾಸ್ಪದ ನಡೆಗಳು ಕಂಡುಬಂದರೆ ಎಚ್ಚರಿಸುವುದು. ಸುಧಾರಿತ ತಂತ್ರಜ್ಞಾನದ ಮೂಲಕ ಸಂಭಾವ್ಯ ಬೆದರಿಕೆ, ದಾಳಿಗಳನ್ನು ಗುರುತಿಸುವುದು ಮುಂತಾದ ಕಾರ್ಯಗಳನ್ನು ಈ ಕೇಂದ್ರ ಮಾಡಲಿದೆ.
- ಭವಿಷ್ಯದಲ್ಲಿ ಇಂತಹ ದಾಳಿಯ ಘಟನೆಗಳನ್ನು ತಪ್ಪಿಸಲು ಅಗತ್ಯವಾದ ಭದ್ರತಾ ಕ್ರಮಗಳನ್ನು ಜಾರಿಗೆ ತರಲು ಸಹ ಕೇಂದ್ರ ಸಲಹೆಗಳನ್ನು ನೀಡಲಿದೆ. ಬಿಎಂಆರ್‌ಸಿಎಲ್ ಐಟಿ ತಂಡಗಳು ಮತ್ತು ಭದ್ರತಾ ವಿಶ್ಲೇಷಕರ ನಡುವಿನ ಸಮನ್ವಯವನ್ನು ಸಹ ಈ ಕೇಂದ್ರ ನಿರ್ವಹಣೆ ಮಾಡಲಿದೆ. ದೋಷಗಳನ್ನು ಗುರುತಿಸುವುದು, ದೋಷ ಪೂರಿತ ತಂತ್ರಾಂಶ ಅಪ್‌ಡೇಟ್ ಮಾಡುವ ಕಾರ್ಯವನ್ನು ಕೇಂದ್ರ ನೋಡಿಕೊಳ್ಳಲಿದೆ.

# ಕಾವೇರಿದ ತುಮುಲ್ ಕದನ

10 ಸ್ಥಾನಗಳಿಗೆ ನ.10ರಂದು ಮತದಾನ | ಒಟ್ಟು 21 ಮಂದಿ ಅಖಾಡಕ್ಕೆ

ರಂಗನಾಥ ಕೆ.ಮರಡಿ, ತುಮಕೂರು

ತುಮಕೂರು ಹಾಲು ಒಕ್ಕೂಟದ(ತುಮುಲ್) ನಿರ್ದೇಶಕರ ಚುನಾವಣಾ ಕದನ ರಂಗೇರಿದ್ದು, ಕಲಿಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ನ.10 ರಂದು ಮತದಾನ ನಡೆಯಲಿದ್ದು 10 ಮಂದಿ ನಿರ್ದೇಶಕರ ಸ್ಥಾನಕ್ಕೆ 21 ಮಂದಿ ಅಖಾಡಕ್ಕೆ ಇಳಿದಿದ್ದಾರೆ.

ಕರ್ನಾಟಕ ಸಾರಿಗೆ ನಿಗಮದ ಅಧ್ಯಕ್ಷ ಹಾಗೂ ಶಾಸಕ ಶ್ರೀನಿವಾಸ್ ಅವರ ಪತ್ನಿ ಭಾರತಿ ದೇವಿ, ತುಮುಲ್ ಮಾಜಿ ಅಧ್ಯಕ್ಷರಾದ ಮಹಾಲಿಂಗಯ್ಯ, ಕೊಂಡವಾಡಿ ಚಂದ್ರಶೇಖರ್ ಸೇರಿದಂತೆ ಪ್ರಭಾವಿಗಳು ಕಣದಲ್ಲಿದ್ದು ಗೆಲುವಿಗಾಗಿ ರಣತಂತ್ರ ರೂಪಿಸಿದ್ದಾರೆ.

ಕೊರಟಗೆರೆ ತಾಲೂಕಿನಲ್ಲಿ ಮೂರು ಮಂದಿ ಸ್ಪರ್ಧಿಸಿದ್ದು ಉಳಿದ ತಾಲೂಕುಗಳಲ್ಲಿ ಎರಡು ಮಂದಿ ಕದನಕ್ಕಿಳಿದಿದ್ದು, ನೇರಾ ನೇರಾ ಪೈಪೋಟಿ ಕಂಡುಬಂದಿದೆ. ತುಮುಲ್ ಗದ್ದುಗೆ ಏರಲು ತಾಲೂಕುವಾರು ಹಾಲಿ ಹಾಗೂ ಮಾಜಿ ಶಾಸಕರು ಅಖಾಡಕ್ಕೆ ಇಳಿದು ಬೆಂಬಲಿಗರನ್ನು ಗೆಲ್ಲಿಸಿಕೊಳ್ಳಲು ತಂತ್ರಗಾರಿಕೆ ರೂಪಿಸಿದ್ದಾರೆ.

**1146 ಮತದಾರರು:** ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ ಒಟ್ಟು 1383 ಡೇರಿಗಳು ಸದಸ್ಯತ್ವ ಹೊಂದಿದ್ದು, 1146 ಡೇರಿಗಳು ಮತದಾನದ ಹಕ್ಕು ಪಡೆದುಕೊಂಡಿದೆ. ಉಳಿದ 237 ಡೇರಿಗಳು ಮತದಾನದ ಹಕ್ಕು ಚಲಾಯಿಸಲು ಅನರ್ಹಗೊಂಡಿವೆ.

ಅರ್ಹ ಮತದಾರಿಗೆ ಈಗಾಗಲೇ ಡೆಲಿಗೇಟ್ ಫಾರ್ಮ್ ವಿತರಿಸಲಾಗಿದೆ. ತುಮಕೂರು ಕ್ಷೇತ್ರದಲ್ಲಿ ಅಧಿಕ ಮತದಾರರಿದ್ದು, ಪಾವಗಡದಲ್ಲಿ ಕೇವಲ 47 ಮಂದಿ ಮತದಾರರಿದ್ದಾರೆ.

### ಅಖಾಡದ ಅಭ್ಯರ್ಥಿಗಳ ವಿವರ

| ಕ್ಷೇತ್ರ | ಕಾಂಗ್ರೆಸ್ ಬಣ | ಎನ್‌ಡಿಎ ಬಣ |
|---|---|---|
| ತುಮಕೂರು | ಎಚ್.ವಿ.ನಂಜೇಗೌಡ | ಎಚ್.ಕೆ.ರೇಣುಕಪ್ರಸಾದ್ |
| ಗುಬ್ಬಿ | ಕೆ.ಪಿ.ಭಾರತಿದೇವಿ | ಜಿ.ಚಂದ್ರಶೇಖರ್ |
| ಚಿಕ್ಕನಾಯಕನಹಳ್ಳಿ | ಬಿ.ಎನ್.ಶಿವಪ್ರಕಾಶ್ | ಎಸ್.ರಾಜಶೇಖರ್ |
| ತಿಪಟೂರು | ಎಂ.ಕೆ.ಪ್ರಕಾಶ್ | ತ್ರಿಯಂಬಕ |
| ತುರುವೇಕೆರೆ | ಸಿ.ವಿ.ಮಹಲಿಂಗಯ್ಯ | ಪಿ.ಟಿ.ಗಂಗಾಧರಯ್ಯ |
| ಕುಣಿಗಲ್ | ಕೆ.ಎಂ.ಮಾಸ್ತಿಕರೀಗೌಡ | ಡಿ.ಕೃಷ್ಣಕುಮಾರ್ |
| ಮಧುಗಿರಿ | ಬಿ.ನಾಗೇಶಬಾಬು | ಚಂದ್ರಶೇಖರ್ |
| ಕೊರಟಗೆರೆ | ಈಶ್ವರಯ್ಯ | ವಿ.ಸಿದ್ದಗಂಗಯ್ಯ |
| ಶಿರಾ | ಸಿ.ಆರ್.ಉಮೇಶ್ | ಎಸ್. ಆರ್.ಗೌಡ |
| ಪಾವಗಡ | ಚನ್ನಮಲ್ಲಪ್ಪ | ಚಂದ್ರಶೇಖರರೆಡ್ಡಿ |

### ಮತದಾರರ ವಿವರ

ತುಮಕೂರು-151, ಕುಣಿಗಲ್-141, ತಿಪಟೂರು-136, ಗುಬ್ಬಿ-120, ತುರುವೇಕೆರೆ-116, ಕೊರಟಗೆರೆ-115, ಚಿಕ್ಕನಾಯಕನಹಳ್ಳಿ-109, ಶಿರಾ-107, ಮಧುಗಿರಿ-104, ಪಾವಗಡ-47

ಒಟ್ಟು -1,146 ಮತದಾರರು

## ಸಮಾಚಾರ ಸಣ್ಣದಲ್ಲ

### ಎಸ್‌ಡಿಎಂನಲ್ಲಿ ಕಂಚಿಶ್ರೀಗಳ ವಾಸ್ತವ್ಯ

**ಹಾಸನ:** ಕಾಂಚೀಪುರಂನ ಕಂಚಿ ಕಾಮಕೋಟಿ ಪೀಠಾಧ್ಯಕ್ಷರಾದ ಶ್ರೀ ಶಂಕರ ವಿಜಯೇಂದ್ರ ಸರಸ್ವತಿ ಶಂಕರಾಚಾರ್ಯ ಸ್ವಾಮೀಜಿ ನ.7 ರಂದು ಪುರ ಪ್ರವೇಶ ಮಾಡಲಿದ್ದು, ಮೂರು ದಿನ ತಣ್ಣೀರುಹಳ್ಳದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನಲ್ಲಿ ತಮ್ಮ ಪೂಜಾ ಕೈಂಕರ್ಯ ನೆರವೇರಿಸಿ, ಆಶೀರ್ವಚನ ನೀಡಲಿದ್ದಾರೆ. ಎಸ್‌ಡಿಎಂ ಕಾಲೇಜು ಪ್ರಾಚಾರ್ಯೆ ಡಾ.ಶೈಲಜಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ.7 ರಿಂದ 9 ರ ವರೆಗೆ ಶ್ರೀರಾಮೇಶ್ವರ ದೇವಸ್ಥಾನ ಆವರಣದಲ್ಲಿ ಪೂಜಾ ಕೈಂಕರ್ಯ ನೆರವೇರಲಿದೆ. ಭಕ್ತರಿಗೆ ಆಶೀರ್ವಚನ ನೀಡಲಿದ್ದಾರೆ. ಶ್ರೀಗಳ ಜತೆ 65 ಮಂದಿ ಶಿಷ್ಯ ಗಣವೂ ಆಗಮಿಸಲಿದ್ದು ಮೂರು ದಿನಗಳ ನಂತರ ಧರ್ಮಸ್ಥಳಕ್ಕೆ ಪ್ರಯಾಣ ಬೆಳೆಸುವರು ಎಂದು ಹೇಳಿದರು. ಗೋಷ್ಠಿಯಲ್ಲಿ ಕಾಲೇಜಿನ ಅಧೀಕ್ಷಕ ಡಾ.ಮುರಳೀಧರ್ ಪೂಜಾರಿ, ಡಾ.ಶಿವಕುಮಾರ್, ಡಾ.ಗುರು ಬಸವರಾಜು ಯಲಗಚ್ಚಿನ, ಬ್ರಾಹ್ಮಣ ಸಭಾದ ವೆಂಕಟೇಶ್ ಇದ್ದರು.

### ಕಂಬಾರರ ನಾಟಕ 10ರಂದು ಪ್ರದರ್ಶನ

**ಬೆಂಗಳೂರು:** ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡ ಅಭಿನಯಿಸುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ: ಚಂದ್ರಶೇಖರ ಕಂಬಾರರ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ನ.10ರ ಭಾನುವಾರ ಸಂಜೆ 6 ಗಂಟೆಗೆ ಬಸವೇಶ್ವರನಗರದ ಕೆ. ಇ. ಎ.ಪ್ರಭಾತ್ ರಂಗಮಂದಿರದಲ್ಲಿ (ಕರ್ನಾಟಕ ಇಂಜಿನಿಯರ್ಸ್ ಅಕಾಡೆಮಿ) ಪ್ರದರ್ಶನಗೊಳ್ಳುತ್ತಿದೆ.



ತುಮಕೂರು: ವಿಶ್ವವಾಣಿ ದೀಪಾವಳಿ ವಿಶೇಷ ಸಂಚಿಕೆಯನ್ನು ಟಿಎಂಸಿಸಿ ಬ್ಯಾಂಕ್ ಅಧ್ಯಕ್ಷ ಎನ್.ಎಸ್.ಜಯಕುಮಾರ್ ಅವರು ಬಿಡುಗಡೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

### ಸರಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

**ತುಮಕೂರು:** ತುಮಕೂರು ಜಿಲ್ಲಾ ಸರಕಾರಿ ವಕೀಲರು ಜಿಲ್ಲೆಯ ಕುಣಿಗಲ್, ಶಿರಾ, ಮಧುಗಿರಿ, ತಿಪಟೂರು, ತುರುವೇಕೆರೆ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರಕಾರಿ ವಕೀಲರ ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ. ತಾಲೂಕು ವಕೀಲರ ಹುದ್ದೆಗಳಿಗೆ 7 ವರ್ಷ ಹಾಗೂ ಜಿಲ್ಲಾ ವಕೀಲರ ಹುದ್ದೆಗೆ 10 ವರ್ಷಗಳ ಕಾಲ ವಕೀಲ ವೃತ್ತಿಯನ್ನು ಪೂರೈಸಿರಬೇಕು. ಅರ್ಹ ವಕೀಲರು ತಮ್ಮ ಲಿಖಿತ ಅರ್ಜಿಯೊಂದಿಗೆ ವಿದ್ಯಾರ್ಹತೆಗೆ ಸಂಬಂಧಿಸಿದ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿ ಹಾಗೂ ಫೋಟೋ ಲಗತ್ತಿಸಿ ನವೆಂಬರ್ 19ರೊಳಗಾಗಿ ಜಿಲ್ಲಾಧಿಕಾರಿಗೆ ಸಲ್ಲಿಸಬೇಕು ಎಂದು ಅವರು ತಿಳಿಸಿದ್ದಾರೆ.

### ಮರುಪಾವತಿ: ಖಾಸಗಿ ಶಾಲೆಗಳಿಗೆ ಅವಕಾಶ

**ತುಮಕೂರು:** ತಾಲೂಕು ವ್ಯಾಪ್ತಿಯ ಖಾಸಗಿ ಶಾಲಾ ಆಡಳಿತ ಮಂಡಳಿಗಳು 2024-25ರ ಆರ್‌ಟಿಇ ಶುಲ್ಕ ಮರುಪಾವತಿಗೆ ಆನ್‌ಲೈನ್ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಹ ಖಾಸಗಿ ಅನುದಾನರಹಿತ ಶಾಲೆಗಳು 2025ರ ಜನವರಿ 31ರೊಳಗಾಗಿ ಪ್ರಸ್ತಾವ ಸಲ್ಲಿಸಬಹುದಾಗಿದೆ ಎಂದು ತುಮಕೂರು ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

# ಅಭಿವೃದ್ಧಿ ನನ್ನ ಆದ್ಯತೆ, ಮಾದರಿ ಶಾಸಕನಾಗುವ ಹಂಬಲ: ಪ್ರದೀಪ್

ಚಿಕ್ಕಬಳ್ಳಾಪುರದಲ್ಲಿ ನಡೆದ ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಶಾಸಕ ಪ್ರದೀಪ್ ಈಶ್ವರ್‌ಅವರನ್ನು ಸನ್ಮಾನಿಸಲಾಯಿತು.

**ಚಿಕ್ಕಬಳ್ಳಾಪುರ:** ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳ ಶಾಸಕರ ಪೈಕಿ ಚಿಕ್ಕಬಳ್ಳಾಪುರದ ಎಂಎಲ್‌ಎ ಭಿನ್ನವಾಗಿ ಕಾಣಬೇಕು.ಈ ಮಹದಾಸೆಯನ್ನು ಇಟ್ಟುಕೊಂಡೇ ಕ್ಷೇತ್ರದಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದೇನೆ, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ಕಾರ್ಮಿಕರಿಗೆ, ಬಡವರಿಗೆ ಏನೆಲ್ಲಾ ಮಾಡಬೇಕೋ ಅದನ್ನು ಮಾಡುತ್ತಿದ್ದೇನೆ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ನಗರದ ಸೆಂಟ್ ಜೋಸೆಫ್ ಶಾಲೆಯ ಆವರಣದಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ ಕ್ಷೇತ್ರದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮಪಡಿಸಿ ಬಡಮಕ್ಕಳ ಬಾಳಲ್ಲಿ ಬೆಳಕು ಮೂಡಿಸಲು ನಾನಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಶಿಕ್ಷಕರು ಮನಸ್ಸು ಮಾಡಿದರೆ ಅಸಾಧ್ಯವಾದ್ದು ಯಾವುದೂ ಇಲ್ಲ ಎಂಬುದು ನನ್ನ ನಂಬಿಕೆ.ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಉದ್ಘಾಟಿಸಲು ನನ್ನನ್ನು ಕರೆದಿರುವುದು ಸಂತೋಷ ತಂದಿದೆ. ಕಾರಣ ಪೆರೇಸಂದ್ರ ಪ್ರೌಢಶಾಲೆಯಲ್ಲಿ ಓದುವಾಗ ನಾನು ಕೂಡ ಕ್ವಿಜ್ ಮೂಲಕ ತಾಲೂಕು ಮಟ್ಟಕ್ಕೆ ಸ್ಪರ್ಧಿಯಾಗಿ ಬಂದಿದ್ದೆ ಎಂದು ಸ್ಮರಿಸಿದರು. ಪ್ರತಿಭಾ ಕಾರಂಜಿಯನ್ನು ಯಾಂತ್ರಿಕವಾಗಿ ಮಾಡಿ ಕೈತೊಳೆದುಕೊಳ್ಳದೆ, ಮಕ್ಕಳಲ್ಲಿ ಅಡಗಿರುವ ನಿಜವಾದ ಪ್ರತಿಭಾನ್ವೇಷಣೆ ಮಾಡುವ ವೇದಿಕೆ ಆಗಬೇಕಿದೆ. ಪ್ರತಿಭಾವಂತ ವಿದ್ಯಾರ್ಥಿಗಳೇ ಇಲ್ಲಿ ಬರುವ ಕಾರಣ ತೀರ್ಪುಗಾರರು ಅರ್ಹರನ್ನು ಜಿಲ್ಲಾ ಮಟ್ಟಕ್ಕೆ ಆರಿಸಿ ಕಳಿಸಬೇಕಿದೆ. ನಿಮ್ಮ ಪ್ರದೀಪ್ ಈಶ್ವರ್ ತಾನು ದುಡಿದ ಹಣದಲ್ಲಿ ಮಕ್ಕಳಿಗೆ ಬಟ್ಟೆ, ಮಹಿಳೆಯರಿಗೆ ಅರಿಸಿಣ ಕುಂಕುಮ, ಆಂಬ್ಯುಲೆನ್ಸ್ ಸೇವೆ ಒದಗಿಸುತ್ತಿದಾರೆಯೇ ವಿನಃ ರಾಜಕಾರಣದಲ್ಲಿ ಹಣ ಮಾಡಿ ಇದನ್ನೆಲ್ಲಾ ಮಾಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಬಿಇಒ ನರೇಂದ್ರಕುಮಾರ್, ಗಂಗರೇಕಾಲುವೆ ನಾರಾಯಣಸ್ವಾಮಿ, ಶಿಕ್ಷಕರ ಸಂಘದ ನಾರಾಯಣಸ್ವಾಮಿ, ಕೆ.ಜಿ.ಶ್ರೀನಿವಾಸ್, ಪಾತಮುತ್ತಕಪಲ್ಲಿ ಚಲಪತಿಗೌಡ, ಶಶಿಧರ್,ರಾಜೇಂದ್ರಬಾಬು, ನರೇಶ್, ನಾಗೇಶ್, ನಾರಾಯಣಸ್ವಾಮಿ, ಮತ್ತಿತರರು ಇದ್ದರು.

# ಫುಟ್‌ಪಾತ್ ಅಂಗಡಿ ಹಾವಳಿ, ವಾಹನ ಸವಾರರಿಗೆ ಕಿರಿಕಿರಿ

**ತಿಪಟೂರು:** ತಾಲೂಕಿನ ಜನತೆಗೆ ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿ ಹಬ್ಬದ ಉಡುಗೊರೆಯಾಗಿ ಶಾಸಕ ಕೆ.ಷಡಕ್ಷರಿ ಟ್ರಾಫಿಕ್ ಸಿಗ್ನಲ್ ಲೈಟ್ ವ್ಯವಸ್ಥೆಗೆ ಚಾಲನೆ ನೀಡಿದ್ದಾರೆ. ಆದರೆ ಅವುಗಳಿಗೆ ಆರಂಭದಲ್ಲೇ ಕಿರಿಕಿರಿ ಎದುರಾಗಿದೆ.

ನಗರದ ಸಿಂಗ್ರಿ ನಂಜಪ್ಪ ವೃತ್ತದಿಂದ ಹಾದುಹೋಗಿರುವ ರೈಲ್ವೆ ಸ್ಟೇಷನ್ ರಸ್ತೆಯು ಕಿರಿದಾಗಿದ್ದು,ರಸ್ತೆಗೆ ಹೊಂದಿಕೊಂಡಂತೆ ಇರುವ ಪೈ ಹೋಟೆಲ್ ಮುಂಭಾಗ ಕೆಲ ಫುಟ್ ಬಾತ್ ಅಂಗಡಿಗಳು ತಲೆಯೆತ್ತಿವೆ. ಇದರಿಂದಾಗಿ ವಾಹನ ಸವಾರರಿಗೆ ಬಹಳಷ್ಟು ತೊಂದರೆಯಾಗುತ್ತಿದೆ.

ರೈಲ್ವೆ ಸ್ಟೇಷನ್ ರಸ್ತೆಯು ವಾಹನಗಳ ಸಂಚಾರ ದಟ್ಟಣೆಯಿಂದ ಕೂಡಿದ್ದು, ಟ್ರಾಫಿಕ್ ಸಿಗ್ನಲ್ ಲೈಟ್ ಹತ್ತಿರ ಸವಾರರು ಗಾಡಿಗಳನ್ನು ನಿಲ್ಲಿಸಲು ಜಾಗದ ಅವಶ್ಯಕತೆ ಇದೆ. ಇನ್ನು ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಲ್ಲಿಯೂ ಸಿಗ್ನಲ್ ಲೈಟ್ ಗಳು ಇದ್ದು ,ಸಿಗ್ನಲ್ ಲೈಟ್ ಪಕ್ಕದಲ್ಲಿಯೇ ಬಸ್ ನಿಲ್ದಾಣಗಳಿವೆ.

ನಿಗದಿತ ಸಮಯಕ್ಕೆ ವಾಹನಗಳನ್ನು ಚಲಾಯಿಸಲು ಚಾಲಕರು ಹರಸಹಾಸ ಪಡುವಂತಾಗಿದೆ.

ಸಿಗ್ನಲ್ ಲೈಟ್ ಪಕ್ಕದಲ್ಲಿ ಇರುವ ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸುವುದು ಒಳ್ಳೆಯದು ಎನ್ನುತ್ತಾರೆ ಸ್ಥಳೀಯರು.

ರೈಲ್ವೆ ಸ್ಟೇಷನ್ ರಸ್ತೆಯಲ್ಲಿ ಫುಟ್‌ಪಾತ್ ಅಂಗಡಿಗಳಿಂದಾಗಿ ಸಿಗ್ನಲ್ ಹತ್ತಿರ ಗಾಡಿಗಳನ್ನು ನಿಲ್ಲಿಸಲು ಜಾಗ ಇಲ್ಲ, ಕೂಡಲೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕೆಲವೊಂದಷ್ಟು ಫುಟ್ ಪಾತ್ ಮೇಲಿನ ಅಂಗಡಿಗಳನ್ನು ತೆರವುಗೊಳಿಸಬೇಕು.
-ಲಿಂಗರಾಜು, ಜೆಡಿಎಸ್ ಮುಖಂಡ

ಐಬಿ ಸರ್ಕಲ್ ಹತ್ತಿರ ಸಿಗ್ನಲ್ ಲೈಟ್ ಗೆ ಹೊಂದಿಕೊಂಡಂತೆ ಬಸ್ ನಿಲ್ದಾಣಗಳು ಇವೆ. ನಿಗದಿತ ಸಮಯಕ್ಕೆ ವಾಹನಗಳ ಚಲಾಯಿಸಲು ಸಮಸ್ಯೆ ಆಗುತ್ತಿದೆ. ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸುವುದು ಒಳ್ಳೆಯದು.
-ಸುದರ್ಶನ್. ಸ್ಥಳೀಯರು

ಗ್ರಾಮೀಣ ಭಾಗದ ಜನರಿಗೆ ಟ್ರಾಫಿಕ್ ಸಿಗ್ನಲ್ ಸಿಸ್ಟಮ್ ಹೊಸದಾಗಿದ್ದು,ತಾಲೂಕಿನ ಸಾರ್ವಜನಿಕರಿಗೆ ಈ ಸಿಸ್ಟಂಗೆ ಹೊಂದಿಕೊಳ್ಳಲು ಕಾಲಾವಕಾಶ ಬೇಕಾಗಿದೆ. ಕೆಲವೊಂದಷ್ಟು ಜನರಿಗೆ ಟ್ರಾಫಿಕ್ ಬಗ್ಗೆ ಹಾಗೂ ಸಂಚಾರಿ ನಿಯಮಗಳನ್ನು ಪಾಲಿಸುವ ಬಗ್ಗೆ ಅರಿವು ಮೂಡಿಸಬೇಕಿದೆ. ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆಯಿಂದ ಈ ಕೆಲಸ ಆಗಬೇಕಿದೆ.

ಪಾದಚಾರಿಗಳ ಅನುಕೂಲಕ್ಕಾಗಿ ಜೀಬ್ರಾ ಕ್ರಾಸ್ ಗಳನ್ನು ಮಾಡಿದ್ದು ಅದರ ಮೇಲೆಯೇ ವಾಹನ ನಿಲ್ಲಿಸಿದರೇ ಪಾದಚಾರಿಗಳು ರಸ್ತೆ ದಾಟಲು ಪರದಾಡುವಂತಾಗಿದೆ. ಪಾದಚಾರಿಗಳಿಗೆ ಗ್ರೀನ್ ಸಿಗ್ನಲ್ ಕೊಟ್ಟರೂ ವಾಹನಗಳ ಅಡ್ಡಾದಿಡ್ಡಿ ಓಡಾಟ ಅಡ್ಡಿಯಾಗಿದೆ. ವಾಹನ ಸಂಚಾರ ನಿಯಂತ್ರಿಸುವ ಪೊಲೀಸ್ ಸಿಬ್ಬಂದಿಗೆ ಪಬ್ಲಿಕ್ ಅನೌನ್ಸ್ಮೆಂಟ್ ಸಿಸ್ಟಮ್ ಹಾಗೂ ಕಮೆಂಟ್ ಮೈಕ್ ಕೊಡಬೇಕಾಗಿದೆ. ನಗರಸಭೆ ಮತ್ತು ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಪಾದಚಾರಿಗಳಿಗೆ ಹಾಗೂ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿರುವ ಫುಟ್ ಬಾತ್ ಅಂಗಡಿಗಳನ್ನು ತೆರವುಗೊಳಿಸಲಿ ಎಂಬದು ಸಾರ್ವಜನಿಕರ ಆಗ್ರಹ.

# ಸ್ಮಶಾನ ಜಾಗವೂ ಖಬರ್‌ಸ್ಥಾನ!

**ಕುಣಿಗಲ್:** ಕುಂಬಾರ್ ಗುಂಡಿ ಸ್ಮಶಾನ ಜಾಗವನ್ನು ದಿಶಾಂಕ ಆಪ್ ನಲ್ಲಿ ಖಬರ್‌ಸ್ಥಾನ ಎಂದು ಬರುತ್ತಿರುವುದನ್ನು ಕೂಡಲೇ ಸರಿಪಡಿಸುವಂತೆ ತಾಲೂಕು ವಿಶ್ವ ಹಿಂದೂ ಪರಿಷತ್ ಭಜರಂಗದಳ ತಹಸಿಲ್ದಾರ್‌ಗೆ ಒತ್ತಾಯಿಸಿದೆ.

ಪಟ್ಟಣದ ಕಸಬಾ ಗ್ರಾಮದ ಸರ್ವೆ ನಂಬರ್ ಸರ್ವೆ ನಂಬರ್ 89ರ ರಲ್ಲಿ 20.04 ಎಕರೆ ಕುಂಬಾರ ಗುಂಡಿ ಸ್ಮಶಾನ ಜಾಗವನ್ನು ಖಬರ್‌ಸ್ಥಾನ ಎಂದು ಬರುತ್ತಿದ್ದು ಸುಮಾರು ದಶಕಗಳಿಂದ ಕುಂಬಾರ ಗುಂಡಿ ಸ್ಮಶಾನದಲ್ಲಿ ಜಾಗ ಇದ್ದು, ಇತ್ತೀಚಿಗೆ ಸರ್ವೆ ಇಲಾಖೆಯು ಬಳಿಕೆಗೆ ನೀಡಿರುವ ಜಾಗದಲ್ಲಿ ಖಬರ ಸ್ಥಾನ ಎಂಬ ಹೆಸರು ಬರುತ್ತಿದೆ. ಇದರ ಆದೇಶವಾಗಲಿ ಪುರಾವ್ ಗಳಾಗಲಿ ದಾಖಲೆಗಳು ಇಲ್ಲದೆ ಕುಂಬಾರ ಗುಂಡಿ ಸರ್ವರ ಸ್ಮಶಾನವಾಗಿದೆ. ಪರಿಶಿಷ್ಟ ಜಾತಿ, ಆರ್ಯವೈಶ್ಯ, ಕ್ರಿಶ್ಚಿಯನ್ಸ್, ತಿಗಳ, ಮಡಿವಾಳ, ಬಣಜಿಗ, ಹೀಗೆ ಎಲ್ಲ ಜಾತಿ ವರ್ಗಗಳಿಗೆ ಇದು ರುದ್ರಭೂಮಿ. ಈ ಸಾರ್ವಜನಿಕ ಸ್ಮಶಾನದಲ್ಲಿ ನೂತನವಾಗಿ ವಿದ್ಯುತ್ ಚಿತಗಾರವನ್ನು ಸಹ ಕೋಟ್ಯಾಂತರ ವೆಚ್ಚದಲ್ಲಿ ನಿರ್ಮಿಸಿದ್ದು ಇತ್ತೀಚಿಗೆ ಈ ಜಾಗವು ಖಬರ್ ಸ್ಥಾನ ಎಂದು ಪಹಣಿಯಲ್ಲಿದ್ದು ಕೂಡಲೇ ತಾಲೂಕು ಆಡಳಿತ ಸರಿಪಡಿಸಿ ಖಬರ್ ಸ್ಥಾನ ಎಂಬ ಹೆಸರು ಕೂಡಲೇ ತೆಗೆದುಹಾಕಬೇಕೆಂದು ತಹಸೀಲ್ದಾರ್ ರಶ್ಮಿ ಅವರಿಗೆ ಭಜರಂಗದಳದ ಹಾಗೂ ವಿಶ್ವ ಹಿಂದೂ ಪರಿಷತ್ತಿನ ಗಿರೀಶ್ ಹಾಗೂ ಕಾರ್ಯಕರ್ತರು ಮನವಿ ಸಲ್ಲಿಸಿದರು.

# ಜಾಗ ಒತ್ತುವರಿ? ಕಾಟಾಚಾರಕ್ಕೆ ಸರ್ವೆ !

**ನೆಲಮಂಗಲ:** ಸೋಲೂರು ಹೋಬಳಿಯ ಲಕ್ಕೇನಹಳ್ಳಿ ಗ್ರಾಮದಲ್ಲಿ ಪ್ರತಿಷ್ಠಿತ ಯಜಾಕಿ ಕಂಪನಿಯಿಂದ ಸರಕಾರಿ ಜಾಗ ಕಬಳಿಸಿರುವ ಆರೋಪ ಹಲವು ವರ್ಷಗಳಿಂದ ಕೇಳಿ ಬಂದಿತ್ತು. ಕೆಲ ದಿನಗಳ ಹಿಂದೆ ಶಾಸಕ ಎನ್.ಶ್ರೀನಿವಾಸ್ ಯಜಾಕಿ ಕಂಪನಿ ಸರಕಾರಿ ಜಾಗ ಒತ್ತುವರಿ ಆಗಿದಿಯಾ ಇಲ್ಲವಾ ಎಂದು ಸರ್ವೆ ನಡೆಸಿ ಮಾಹಿತಿ ನೀಡಿ ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆಯನ್ನು ನೀಡಿದ್ದರು. ಅದರಂತೆ ಅಧಿಕಾರಿಗಳು ಸರ್ವೆ ಕಾರ್ಯ ನಡೆಸಿದರು. ಆದರೆ ಅಧಿಕಾರಿಗಳು ಆಗಮಿಸಿ ಕಾಟಾಚಾರಕ್ಕೆ ಸರ್ವೆ ನಡೆಸಿ ಮಿಕ್ಕಿದ್ದು ಮುಂದಿನ ವಾರ ಸರ್ವೆ ಮಾಡುತ್ತೇವೆ ಎಂದು ವಾಪಾಸಾದರು. ಶಾಸಕರ ಸೂಚನೆಗೂ ಬೆಲೆ ಕೊಡದೆ, ಕಂಪನಿಯೊಂದಿಗೆ ಶಾಮೀಲಾಗಿರುವ ಸಂಶಯ ಸಾರ್ವಜನಿಕರಲ್ಲಿ ಮೂಡಿದೆ.

ಮಹದೇವ್ ಎನ್ನುವ ವ್ಯಕ್ತಿಯು ಅಧಿಕಾರಿಗಳೊಂದಿಗೆ ಶಾಮಿಲಾಗಿ ಅಕ್ರಮವಾಗಿ ಜಮೀನು ಪಡೆದು, ತದನಂತರ ಕೆಐಎಡಿಬಿಗೆ ಮಾರಾಟ ಮಾಡಿ, ಇವರೇ ಮತ್ತೆ ಪಡೆದುಕೊಂಡು, ಖಾಸಗಿ ಕಂಪನಿಗೆ ಜಾಗವನ್ನು ಬಾಡಿಗೆ ನೀಡಿದ್ದಾರೆ. ಈ ಜಾಗವನ್ನು ಕೂಡಲೇ ತೆರವುಗೊಳಿಸಬೇಕು ಎಂದು ಸ್ಥಳೀಯ ನಿವಾಸಿ ಕುಮಾರ್ ಒತ್ತಾಯಿಸಿದ್ದಾರೆ.

# ಹಸಮಣೆ ಏರಬೇಕಿದ್ದ ಪೇದೆ ಬರ್ಬರ ಹತ್ಯೆ

**ಹಾಸನ:** ಹಸಮಣೆ ಏರಲು ಅಣಿಯಾಗಿದ್ದ ಪೊಲೀಸ್ ಪೇದೆಯನ್ನು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ತಾಲೂಕಿನ ದುದ್ದ ಬಳಿ ಕಳೆದ ರಾತ್ರಿ ನಡೆದಿದೆ.

ಅರಸೀಕೆರೆ ತಾಲೂಕು ಬಾಗೇಶಪುರ ಗ್ರಾಮದ ವಿಜಯಕುಮಾರ್ ಎಂಬುವರ ಪುತ್ರ ಹರೀಶ್ ಬಿ.ವಿ.(32)ಕೊಲೆಯಾದ ಪೇದೆ. ಕೊಲೆಯಾದ ಹರೀಶ್ ಬೆಂಗಳೂರಿನ ಕೆಎಸ್‌ಐಎಸ್‌ಎಫ್‌ನಲ್ಲಿ ಕಾನ್‌ಸ್ಟೇಬಲ್ ಆಗಿ ಸೇವೆ ಸಲ್ಲಿಸುತ್ತಿದ್ದ.

ಮದುವೆ ನಿಶ್ಚಯ:

ಹರೀಶ್‌ಗೆ ಇದೇ ತಿಂಗಳ 11 ರಂದು ಗಂಡಸಿ ಹೋಬಳಿಯ ಯುವತಿಯೊಂದಿಗೆ ಮದುವೆ ನಿಶ್ಚಯ ಆಗಿತ್ತು. ಇದಕ್ಕಾಗಿ ಹಾಸನದ ಆರ್.ಸಿ.ಕಲ್ಯಾಣ ಮಂಟಪದಲ್ಲಿ ವಿವಾಹವಿತ್ತು. ಕರ್ತವ್ಯಕ್ಕೆ ರಜೆ ಹಾಕಿ ನ.3 ರಂದು ಸ್ವಗ್ರಾಮಕ್ಕೆ ಬಂದಿದ್ದ ಮಧುಮಗ, ಸ್ನೇಹಿತರು, ಸಂಬಂಧಿಗಳಿಗೆ ಸೋಮವಾರ ತನ್ನ ಬುಲ್ಲೆಟ್ ಮೋಟಾರ್ ಬೈಕಿನಲ್ಲಿ ಲಗ್ನ ಪತ್ರಿಕೆ ಹಂಚುತ್ತಿದ್ದ. ಅಂತೆಯೇ ರಾತ್ರಿ 9.30 ರಿಂದ 10.20 ನಡುವೆ ಲಗ್ನಪತ್ರಿಕೆ ಹಂಚಿ ಮನೆಗೆ ವಾಪಸ್ ಆಗುತ್ತಿದ್ದಾಗ, ದುದ್ದ ಗ್ರಾಮದ ಡಾಬಾ ಸರ್ಕಲ್‌ನ ರೈಲ್ವೆ ಬ್ರಿಡ್ಜ್ ಹತ್ತಿರ ಏಕಾಏಕಿ ಅಟ್ಯಾಕ್ ಮಾಡಿದ ದುಷ್ಕರ್ಮಿಗಳು ಕಣ್ಣಿಗೆ ಖಾರದಪುಡಿ ಎರಚಿ ಮನಸೋ ಇಚ್ಛೆ ಮಾರಣಾಂತಿಕ ಹಲ್ಲೆ ಮಾಡಿ ಜೀವ ತೆಗೆದು ಪರಾರಿಯಾಗಿದ್ದಾರೆ.

ಸ್ಥಳಕ್ಕೆ ಎಸ್ಪಿ ಮಹಮದ್ ಸುಜೀತಾ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ವಾರದೊಳಗೆ ಹರೀಶ್ ವೈವಾಹಿಕ ಜೀವನಕ್ಕೆ ಕಾಲಿಡಬೇಕಿತ್ತು. ಆದರೀಗ ಬೇರೆಯದೇ ಆಗಿದೆ.

ರಾತ್ರಿ 10.30ರ ಸುಮಾರಿಗೆ ಹರೀಶ್ ಅವರ ಚಿಕ್ಕಪ್ಪನ ಮಗ ಮಂಜುನಾಥ್‌ಗೆ ಹರೀಶ್‌ನ ಕೊಲೆ ಮಾಹಿತಿ ತಿಳಿದಿದೆ. ಕೂಡಲೇ ಸ್ಥಳಕ್ಕೆ ಹೋಗಿ ನೋಡಿದಾಗ ಹರೀಶ ರಕ್ತಸಿಕ್ತವಾಗಿ ರೈಲ್ವೆ ಬ್ರಿಡ್ಜ್ ಕಾಯರ್ ಫ್ಯಾಕ್ಟರಿ ಮುಂದೆ ಬಿದ್ದಿತ್ತು. ತಲೆ ಹಾಗೂ ಮುಖಕ್ಕೆ ಹರಿತವಾದ ಆಯುಧದಿಂದ ಹೊಡೆಯಲಾಗಿತ್ತು. ಬೈಕ್ ಪಕ್ಕ ಖಾರದ ಪುಡಿ ಪ್ಲಾಸ್ಟಿಕ್ ಕವರ್ ಸಹ ಬಿದ್ದಿದೆ.

### ಅಕ್ರಮ ಸಂಬಂಧ ಕಾರಣವೇ..?

ಹತ್ಯೆ ನಂತರ ವಿಚಾರಣೆ ನಡೆಸಿದಾಗ ಕೊಲೆಗೆ ಅಕ್ರಮ ಸಂಬಂಧ ಕಾರಣ ಎಂಬ ಮಾಹಿತಿ ಹೊರ ಬಿದ್ದಿದೆ. ಕೊಲೆಯಾಗಿರುವ ಹರೀಶನ ಅಕ್ಕ ಪುಷ್ಪ ಎಂಬುವರು ಹಾಸನದ ಬಿ.ಕಾಟೀಹಳ್ಳಿಯಲ್ಲಿ ವಾಸವಾಗಿದ್ದಾರೆ. ಪುಷ್ಪ ಅವರ ಮನೆಯ ಪಕ್ಕ ಹಂಪನಹಳ್ಳಿ ಗ್ರಾಮದ ತನ್ನದೇ ಹೆಸರಿನ ಹರೀಶ್ ಎಂಬವರ ಪತ್ನಿ ಜತೆ ಪೊಲೀಸ್ ಪೇದೆ ಅಕ್ರಮ ಸಂಬಂಧ ಹೊಂದಿದ್ದ. ಇದೇ ಕಾರಣಕ್ಕೆ ಪೇದೆ ಹರೀಶ್ ಮತ್ತು ಯೋಧ ಹರೀಶ್ ನಡುವೆ ಅನೇಕ ಸಲ ಜಗಳ ನಡೆದಿತ್ತು ಎನ್ನಲಾಗಿದೆ. ದುದ್ದ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

# ನ.10 ರಂದು ನಟ ಡಾಲಿಯಿಂದ ಟೀಸರ್ ಬಿಡುಗಡೆ

**ಕೋಲಾರ:** ತಾಲೂಕಿನ ವೇಮಗಲ್ ಪಟ್ಟಣದಲ್ಲಿ ಜಿಲ್ಲೆಯಲ್ಲೇ ಮಾದರಿಯಾಗಿ ನ.10 ರಂದು ಅದ್ದೂರಿ ಕನ್ನಡ ರಾಜ್ಯೋತ್ಸವ ಹಾಗೂ ಜಿಪಂ ಮಾಜಿ ಅಧ್ಯಕ್ಷ ಸಿ.ಎಸ್.ವೆಂಕಟೇಶ್ ನಿರ್ಮಿಸಿರುವ 'ಬಡವರ ಮಕ್ಳೂ ಬೆಳಿಬೇಕು ಕಣ್ರಯ್ಯ' ಕನ್ನಡ ಚಲನಚಿತ್ರದ ಟೀಸರ್ ಬಿಡುಗಡೆ ಮಾಡಲಾಗುತ್ತಿದೆ.

10 ರಂದು ಸಂಜೆ 6 ಗಂಟೆಗೆ ಕ್ರೀಡಾಂಗಣದಲ್ಲಿ ಸಿನಿತಾರೆಯರ ಸಾರಥ್ಯದಲ್ಲಿ 20 ಸಾವಿರಕ್ಕೂ ಹೆಚ್ಚು ಅಭಿಮಾನಿಗಳ ಸಮ್ಮುಖದಲ್ಲಿ ಟೀಸರ್ ಲಾಂಚ್ ಮಾಡಲಾಗುತ್ತಿದೆ. ನಂತರ ರಸಮಂಜರಿ ನಡೆಯಲಿದೆ ಎಂದು ಚಿತ್ರದ ನಿರ್ಮಾಪಕ ಸಿ.ಎಸ್.ವೆಂಕಟೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಶೀಘ್ರ ಚಿತ್ರ ಬಿಡುಗಡೆ ಮಾಡಲಾಗುತ್ತದೆ. ಚಿತ್ರದಲ್ಲಿ ಚಂದ್ರಪ್ರಭ, ರಾಜವರ್ಧನ್, ಲಾವಣ್ಯ, ಸುಚೇಂದ್ರಪ್ರಸಾದ್, ಸಂಗೀತಾ ನಟಿಸಿದ್ದು ಕೌಟುಂಬಿಕ ಚಿತ್ರದಲ್ಲಿ 4 ಸುಮಧುರ ಹಾಡುಗಳಿವೆ. ಬಡವರ ಮಕ್ಕಳನ್ನು ಪ್ರೋತ್ಸಾಹಿಸಿದರೆ ಯಾವ ರೀತಿ ಉನ್ನತಿ ಸಾಧಿಸುತ್ತಾರೆ ಎಂಬುದು ಚಿತ್ರದ ತಿರುಳಾಗಿದ್ದು ಟೀಸರ್ ಬಿಡುಗಡೆಗೆ ಶಿವರಾಜಕುಮಾರ್, ಗಣೇಶ್, ಸುದೀಪ್ ಅವರನ್ನು ಆಹ್ವಾನಿಸಲಾಗಿದೆ ಎಂದು ನುಡಿದರು.

ಕೋಲಾರದ ವೇಮಗಲ್‌ನಲ್ಲಿ ಚಿತ್ರದ ಪೋಸ್ಟರ್‌ನ್ನು ನಿರ್ಮಾಪಕ ಸಿ.ಎಸ್.ವೆಂಕಟೇಶ್ ಬಿಡುಗಡೆ ಮಾಡಿದರು.

# ಮಾಸಾಶನಕ್ಕೆ ಮರು ಚಾಲನೆ

**ತುಮಕೂರು:** ತಾಲೂಕು ವ್ಯಾಪ್ತಿಯ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಮಾಸಾಶನ ಮಂಜೂರಾಗಿ ವಿವಿಧ ಕಾರಣಗಳಿಂದ ರದ್ದಾಗಿರುವ ಮಾಸಾಶನವನ್ನು ಮರು ಚಾಲನೆಗೊಳಿಸಲಾಗುವುದು ಎಂದು ತಹಸೀಲ್ದಾರ್ ರಾಜೇಶ್ವರಿ ತಿಳಿಸಿದ್ದಾರೆ. ತುಮಕೂರು ನಗರದಲ್ಲಿ 3900 ಹಾಗೂ ಗ್ರಾಮಾಂತರದಲ್ಲಿ 1748 ಫಲಾನುಭವಿಗಳ ಮಾಸಾಶನ ವಿವಿಧ ಕಾರಣಗಳಿಂದ ರದ್ದಾಗಿದ್ದು, ಈ ಮಾಸಾಶನವನ್ನು ಕೂಡಲೇ ಮರು ಚಾಲನೆಗೊಳಿಸಲಾಗುವುದು. ಫಲಾನುಭವಿಗಳು ತಮ್ಮ ಆಧಾರ್ ಕಾರ್ಡ್, ಬ್ಯಾಂಕ್ ಖಾತೆ, ಮಾಸಾಶನ ಆದೇಶದ ಪ್ರತಿ ಹಾಗೂ ಎನ್.ಪಿ.ಸಿ.ಐ. ಲಿಂಕ್ ಪ್ರತಿಯನ್ನು ಸಂಬಂಧಿಸಿದ ಗ್ರಾಮ ಆಡಳಿತ ಅಧಿಕಾರಿಗೆ ನೀಡಿ ಮರು ಚಾಲನೆ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

# ವಾಹನ ನಿರೀಕ್ಷಕರ ಸಸ್ಪೆಂಡ್‌ಗೆ ಆಗ್ರಹ

**ತುಮಕೂರು:** ತುಮಕೂರು ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ದುರಾಡಳಿತ ಹೆಚ್ಚುತ್ತಿದ್ದು, ಕಳೆದ ಐದು ವರ್ಷಗಳಿಂದ ಠಿಕಾಣಿ ಹೂಡಿರುವ ವಾಹನ ನಿರೀಕ್ಷಕ ಸದ್ರುಲ್ಲಾ ಷರೀಫ್ ಅವರನ್ನು ಅಮಾನತು ಮಾಡುವಂತೆ ತುಮಕೂರು ಲಾರಿ ಮಾಲೀಕರುಗಳ ಸಂಘ ಸಾರಿಗೆ ಆಯುಕ್ತರಿಗೆ ಪತ್ರ ಬರೆದು ಒತ್ತಾಯಿಸಿದೆ.

ಆರ್ ಟಿಒ ಕಚೇರಿ ಭ್ರಷ್ಟಾಚಾರ ತಾಣವನ್ನಾಗಿ ಮಾರ್ಪಡಿಸಿಕೊಂಡಿರುವ ಸದ್ರುಲ್ಲಾ ಷರೀಫ್ ಅವರು ಖಾಸಗಿ ವ್ಯಕ್ತಿಗಳ ಮೂಲಕ ಡಿಎಲ್, ಎಫ್ ಸಿಗಳನ್ನು ಕಚೇರಿಯ ಹೊರಗಡೆ ಮಾಡುತ್ತಿದ್ದಾರೆ. ಶಾಲಾ-ಕಾಲೇಜು, ವಾಣಿಜ್ಯ ವಾಹನಗಳನ್ನು ಆರ್ ಟಿಒ ಕಚೇರಿಗೆ ಕರೆಸದೇ, ಶಾಲೆಗಳ ಬಳಿ ಹಾಗೂ ವಾಣಿಜ್ಯ ವಾಹನಗಳು ಇರುವ ಸ್ಥಳಕ್ಕೆ ಹೋಗಿ ಎಫ್.ಸಿ (ಫಿಟ್ನೆಸ್ ಸರ್ಟಿಫಿಕೇಟ್) ಗಳನ್ನು ನೀಡುತ್ತಿದ್ದು ಕಾನೂನು ಮೀರಿ ವರ್ತಿಸುತ್ತಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಖಾಸಗಿ ವ್ಯಕ್ತಿಗಳನ್ನು ಇಟ್ಟುಕೊಂಡು ಡಿ.ಎಲ್, ಎಫ್.ಸಿ. ಅನುಪಯುಕ್ತ ವಾಹನಗಳ ವರದಿ ತೆಗೆಸಿ ತುಮಕೂರು, ಕುಣಿಗಲ್, ಶಿರಾ ಹಾಗೂ ಗುಬ್ಬಿ ಕ್ರಷರ್ ಗಳಿಂದ ಅಧಿಕ ಭಾರ ಸಾಗಣೆಗೆ ಹಣ ಪಡೆಯುತ್ತಿದ್ದಾರೆ. ಸರಕಾರ ಕೂಡಲೇ ಇವರನ್ನು ವರ್ಗಾವಣೆ ಮಾಡಬೇಕು ಎಂದು ಲಾರಿ ಮಾಲೀಕರ ಸಂಘ ಆಗ್ರಹಿಸಿದೆ.

# ಸರಕಾರಿ ನೌಕರರ ಸಂಘಕ್ಕೆ ಆಯ್ಕೆ

**ಚಿಕ್ಕನಾಯಕನಹಳ್ಳಿ:** ತಾಲೂಕು ಸರಕಾರಿ ನೌಕರರ ಸಂಘದ ನಿರ್ದೇಶಕರಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಥಮದರ್ಜೆ ಸಹಾಯಕರಾದ ಪಿ. ಸುನೀಲ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹೊನ್ನಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮತ್ತು ಕಿರಿಯ ಸಹದ್ಯೋಗಿಗಳು ಒಮ್ಮತದಿಂದ ನನ್ನನ್ನು ಸರಕಾರಿ ನೌಕರರ ಸಂಘದ ನಿರ್ದೇಶಕನನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ.

ನೌಕರರಿಗೆ ಸರಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಲು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಸುನೀಲ್ ಕುಮಾರ್ ಭರವಸೆ ವ್ಯಕ್ತಪಡಿಸಿದರು.

# ಹಣಕ್ಕಾಗಿ ಹೆತ್ತಮ್ಮನ ಕೊಂದ ಪಾಪಿ

**ಅರಕಲಗೂಡು:** ಕುಡಿಯಲು ಹಣ ನೀಡಲಿಲ್ಲ ಎಂಬ ಕಾರಣಕ್ಕೆ ಹೆತ್ತ ತಾಯಿಯನ್ನೇ ಪಾಪಿ ಪುತ್ರ ಮನಬಂದಂತೆ ಥಳಿಸಿ ಕೊಲೆ ಮಾಡಿರುವ ಘಟನೆ ತಾಲೂಕಿನ ಮಧುರನಹಳ್ಳಿಯಲ್ಲಿ ನಡೆದಿದೆ. ಚಿಕ್ಕಮ್ಮ (61) ಕೊಲೆಯಾದ ದುರ್ದೈವಿ. ಭರತ್ (26) ಎಂಬಾತನೇ ತನ್ನ ತಾಯಿಯನ್ನೇ ಹೊಡೆದು ಕೊಂದ ಆರೋಪಿ. ಚಿಕ್ಕಮ್ಮನವರ ಪತಿ ಕಳೆದ ವರ್ಷ ಅಪಘಾತದಲ್ಲಿ ಮೃತಪಟ್ಟಿದ್ದರು. ಪೈಂಟ್ ಕೆಲಸ ಮಾಡುತ್ತಿದ್ದ ಭರತ್, ಕುಡಿತದ ದಾಸನಾಗಿದ್ದ. ಅ.29 ರಂದು ಕಂಠಪೂರ್ತಿ ಕುಡಿದು ಮನೆಗೆ ಬಂದಿದ್ದ ಭರತ್, ಮತ್ತಷ್ಟು ಕುಡಿಯಲು ಹಣ ಕೊಡು ಎಂದು ತಾಯಿಯನ್ನು ಪೀಡಿಸಿದ್ದಾನೆ. ಗಂಡನಿಲ್ಲದ ನೋವಿನ ನಡುವೆಯೂ ಮಗ ಕೊಡುತ್ತಿದ್ದ ಕಿರುಕುಳದಿಂದ ಬೇಸತ್ತ ಚಿಕ್ಕಮ್ಮ ಹಣ ನೀಡಲು ನಿರಾಕರಿಸಿದಳು. ಇದರಿಂದ ಕೋಪಗೊಂಡ ಪಾಪಿ, ದೊಣ್ಣೆಯಿಂದ ತಾಯಿಗೆ ಹೊಡೆದು, ತಲೆಯನ್ನು ಗೋಡೆಗೆ ಗುದ್ದಿಸಿ ಎಸ್ಕೇಪ್ ಆಗಿದ್ದ. ಕುಸಿದು ಬಿದ್ದ ಚಿಕ್ಕಮ್ಮನನ್ನು ನೆರೆಹೊರೆಯವರು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು.

# ಪಟ್ಟಿ ಪರಿಷ್ಕರಣೆಗಾಗಿ ವಿಶೇಷ ಆಂದೋಲನ

**ತುಮಕೂರು:** ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2025ಕ್ಕೆ ಸಂಬಂಧಿಸಿದಂತೆ ಮತದಾರರ ಅನುಕೂಲಕ್ಕಾಗಿ ನವೆಂಬರ್ 9, 10, 23 ಹಾಗೂ 24ರಂದು ವಿಶೇಷ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಈ ವಿಶೇಷ ಆಂದೋಲನದಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿ(ಬಿಎಲ್‌ಒ)ಗಳು ಸಂಬಂಧಪಟ್ಟ ಮತಗಟ್ಟೆಗಳಲ್ಲಿ ಹಾಜರಿದ್ದು, ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತಿದ್ದುಪಡಿ ಮತ್ತು ತೆಗೆದುಹಾಕುವಿಕೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ.

ಸಾರ್ವಜನಿಕರು ತಮ್ಮ ನಿವಾಸ ವ್ಯಾಪ್ತಿಯ ಮತಗಟ್ಟೆಗಳ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳು ನಮೂದಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬಹುದಾಗಿದೆ. ಮತದಾರರ ಸೇರ್ಪಡೆಗೆ ನಮೂನೆ 6, ಅನಿವಾಸಿ ಭಾರತೀಯರ ಹೆಸರುಗಳ ಸೇರ್ಪಡೆಗೆ ನಮೂನೆ 6ಎ, ಸೇರ್ಪಡೆಗೆ ಆಕ್ಷೇಪಣೆ/ಹೆಸರು ತೆಗೆದು ಹಾಕಲು ನಮೂನೆ 7 ಮತ್ತು ಮತದಾರರ ನಿವಾಸ ಬದಲಾವಣೆ/ ಪ್ರಸ್ತುತ ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಡಿಗೆ ನಮೂನೆ 8ರಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಈಗಾಗಲೇ ಅಕ್ಟೋಬರ್ 29ರಂದು ಕರಡು ಮತದಾರರ ಪಟ್ಟಿಯನ್ನು ಪ್ರಚುರಪಡಿಸಲಾಗಿದ್ದು, ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ನ. 28ರವರೆಗೆ ಕಾಲಾವಕಾಶವಿದ್ದು, ಈ ವಿಶೇಷ ಆಂದೋಲನದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಅವರು ಮನವಿ ಮಾಡಿದ್ದಾರೆ.

**ಮಾನ್ಯ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಮಾಲೂರು.**

**ಪ್ರಕರಣ ಸಂಖ್ಯೆ: ಓ.ಎಸ್. ನಂ.274/2022**

ವಾದಿಗಳು - 1. ಶ್ರೀ ಪಿ.ಎಸ್. ಮುನಿಶಾಮಚಾರಿ ಬಿನ್ ಲೇಟ್ ಸುಬ್ಬಚಾರಿ ವಯಸ್ಸು ಸುಮಾರು 68 ವರ್ಷ, ವಾಸ : ಪಡವನಹಳ್ಳಿ ಗ್ರಾಮ, ಡಿ.ಎನ್. ದೊಡ್ಡಿ ಅಂಚೆ, ಲಕ್ಕೂರು ಹೋಬಳಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ -563139

ವಿರುದ್ಧ

ಪ್ರತಿವಾದಿ - 1. ವಿ.ರಾಜಗೋಪಾಲಚಾರಿ ಬಿನ್ ಲೇಟ್ ವೆಂಕಟಾಚಾರಿ, ವಯಸ್ಸು ಸುಮಾರು 60 ವರ್ಷ ವಾಸ: ನಂ.102, 1ನೇ ಮಹಡಿ, ಪಾಪಯ್ಯರೆಡ್ಡಿ ಲೇಔಟ್, ಮಾರತ್ ಹಳ್ಳಿ ಅಂಚೆ, ಮುನೆಕೊಳಾಲ, ಬೆಂಗಳೂರು 560037.

**ಸಾರ್ವಜನಿಕ ಪ್ರಕಟಣೆ**

ವಾದಿಗಳು ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಲಕ್ಕೂರು ಹೋಬಳಿ, ಯಕ್ಕದೊಡ್ಡಿ (ಪಡವನಹಳ್ಳಿ) ಗ್ರಾಮಕ್ಕೆ ಸೇರಿದ ಸ.ನಂ.34/2 ರ ವಿಸ್ತೀರ್ಣ 0-17 ಗುಂಟೆ ಜಮೀನಿನ ಮೇಲೆ ಪ್ರತಿವಾದಿಯ ವಿರುದ್ಧ ಪ್ರಕರಣವನ್ನು ಈ ಮೇಲ್ಕಂಡ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಪ್ರತಿವಾದಿ/ಎದುರುದಾರರಿಗೆ ನೋಟೀಸು ಜಾರಿಯಾಗಿರುವುದಿಲ್ಲ. ಪ್ರತಿವಾದಿ/ಎದುರುದಾರರಾಗಲಿ ಅಥವಾ ಅವರ ಪರವಾಗಿ ಯಾರಾದರೂ ಈ ಮೇಲ್ಕಂಡ ದಾವೆಯಲ್ಲಿ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ತಕರಾರು / ಆಕ್ಷೇಪಣೆ ಇದ್ದಲ್ಲಿ ಅಂತಹವರು ಖುದ್ದಾಗಿ ಆಗಲೀ ಅಥವಾ ವಕೀಲರ ಮುಖಾಂತರ ಆಗಲೀ ದಿನಾಂಕ 20-12-2024ರಂದು ಬೆಳಿಗ್ಗೆ 11-00 ಗಂಟೆಗೆ ಮಾಲೂರಿನ ಹಿರಿಯ ಶ್ರೇಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು / ಆಕ್ಷೇಪಣೆ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ದಿನಾಂಕ: 06/11/2024 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಛೀಫ್ ಮಿನಿಸ್ಟರಿಯಲ್ ಆಫೀಸರ್
ಗೌರವಾನ್ವಿತ ಹಿರಿಯ ಶ್ರೇಣಿ ನ್ಯಾಯಾಲಯ
ಮಾಲೂರು

**ಬಿ.ಎನ್.ಪ್ರಶಾಂತ್,** ವಕೀಲರು,
ಶಿವಣ್ಣ ಬಿಲ್ಡಿಂಗ್, ಕಾರಂಜಿ ಬಡಾವಣೆ, ಮಾಲೂರು.

**ಗೌರವಾನ್ವಿತ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.**

**ಸಿಮಿಸ್ ಸಂಖ್ಯೆ-399/2024**

ಅರ್ಜಿದಾರರು : ಆಶಾ ರಾಣಿ ಕೆ ಬಿನ್ ಲೇಟ್ ಕೋಟೆಪ್ಪ- 24 ವರ್ಷ, ವಾಸ - ಗಿರಿಗೌಡನಹಳ್ಳಿ ಗ್ರಾಮ, ಪುರವರ ಹೋಬಳಿ, ಮಧುಗಿರಿ ತಾಲೂಕು.

ವಿರುದ್ಧ

ಎದುರುದಾರರು: ಡೆಪ್ಯುಟಿ ತಹಶೀಲ್ದಾರ್, ನಾಡಕಚೇರಿ, ಪುರವರ, ಪುರವರ ಹೋಬಳಿ, ಮಧುಗಿರಿ ತಾಲೂಕು.

**ಸಾರ್ವಜನಿಕ ಪ್ರಕಟಣೆ**

ಮೇಲ್ಕಂಡ ಅರ್ಜಿದಾರರ ತಂದೆಯಾದ ಕೋಟೆಪ್ಪ ಬಿನ್ ಲೇಟ್ ವೆಂಕಟರಮಣಪ್ಪ ರವರು ದಿನಾಂಕ-10-06-2002 ರಂದು ಮಧುಗಿರಿ ತಾಲೂಕು, ಪುರವರ ಹೋಬಳಿ, ಗಿರಿ ಗೌಡನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ-07-12-2024 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲಿ ತಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

2024 ನೇ ವರ್ಷದ ನವಂಬರ್ ತಿಂಗಳ 5ನೇ ದಿನ ನ್ಯಾಯಾಲಯದ ಅಪ್ಪಣೆಯ ಮೇರೆಗೆ,

ನ್ಯಾಯಾಲಯದ ಮೊಹರಿನೊಂದಿಗೆ
ಶಿರಸ್ತೆದಾರರು
ಗೌರವಾನ್ವಿತ ಅಧಿಕ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮಧುಗಿರಿ.

ಅರ್ಜಿದಾರರ ಪರ ವಕೀಲರು:
**ಪಿ.ಆರ್.ಪಾಂಡುರಂಗಪ್ಪ**
ವಕೀಲರು, ಮಧುಗಿರಿ

## ಸಮಾಚಾರ ಸಣ್ಣದಲ್ಲ

### ಸಿಎಂ ರಾಜೀನಾಮೆಗೆ ಬಿಜೆಪಿ ಪ್ರತಿಭಟನೆ

**ಮೈಸೂರು:** ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಅವರು ಮೈಸೂರು ಲೋಕಾಯುಕ್ತ ಕಚೇರಿಗೆ ವಿಚಾರಣೆಗೆ ಹಾಜರಾದ ವೇಳೆಯೇ ಬಿಜೆಪಿ ಕಾರ್ಯಕರ್ತರು ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟಿಸಿದರು. ಶಾಸಕ ಶ್ರೀವತ್ಸ ನೇತೃತ್ವದಲ್ಲಿ ಬಿಜೆಪಿ ನಾಯಕರು, ಮಹಿಳಾ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು, ರಾಜ್ಯ ಸರ್ಕಾರ ಹಾಗೂ ಸಿಎಂ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿ, ಸಿದ್ದರಾಮಯ್ಯ ರಾಜೀನಾಮೆ ನೀಡುವಂತೆ ಆಗ್ರಹಿಸಿದ್ದಾರೆ. ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಬಿಜೆಪಿ ನಾಯಕರು ಆಗಮಿಸಿರುವ ವಾಹನಗಳ ಸಮೇತ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು, ಸ್ವಲ್ಪ ಸಮಯದ ನಂತರ ಬಿಡುಗಡೆ ಮಾಡಿದರು. ಇನ್ನೊಂದೆಡೆ ಬಿಜೆಪಿ ಮಹಿಳಾ ಕಾರ್ಯಕರ್ತರನ್ನು ಕೂಡ ಪೊಲೀಸರು ವಶಕ್ಕೆ ಪಡೆದರು. ಈ ವೇಳೆ ಪ್ರತಿಭಟನಾಕಾರರು, ಪೊಲೀಸರು ಕಾಂಗ್ರೆಸ್ ಸರ್ಕಾರದ ಏಜೆಂಟ್ ರಂತೆ ವರ್ತಿಸುತ್ತಿದ್ದಾರೆ. ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಆಸ್ಪತ್ರೆಗೆ ಸಂಜೆ ವೈದ್ಯರ ಸೌಲಭ್ಯಕ್ಕೆ ಕ್ರಮ: ಶಾಸಕ

**ಹಲಗೂರು:** ಹಲಗೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೂತನವಾಗಿ ಹೆಚ್ಚುವರಿ ಕೊಠಡಿಗಳ ಕಟ್ಟಡ ಹಾಗೂ ಸ್ಥಳಾಂತರಗೊಂಡ ಎಂಡಿಸಿಸಿ ಬ್ಯಾಂಕ್ ಶಾಖೆಯ ನೂತನ ಕಟ್ಟಡವನ್ನ ಶಾಸಕ ಪಿ.ಎಂ. ನರೇಂದ್ರ ಸ್ವಾಮಿ ಉದ್ಘಾಟಿಸಿದರು. ನಂತರ ಮಾತನಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೇಲಂತಸ್ತಿನ ಹೆಚ್ಚುವರಿ ಸುಸಜ್ಜಿತವಾದ ಕೊಠಡಿಗಳ ಕಟ್ಟಡದ ಕಾಮಗಾರಿ ಪೂರ್ಣಗೊಂಡು ಉದ್ಘಾಟನೆ ಮಾಡಲಾಗಿದೆ, ಇದೇ ವೇಳೆ ಸಂಜೆ ವೈದ್ಯರಿಲ್ಲದೆ ಯಾವುದೇ ಚಿಕಿತ್ಸೆ ಲಭ್ಯವಾಗುತ್ತಿಲ್ಲ. ಈ ಬಗ್ಗೆ ಕ್ರಮ ವಹಿಸಲಾಗುವುದು. ಶೀಘ್ರದಲ್ಲೇ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿ ಪ್ರಾರಂಭಿಸಿ ವರ್ಷದೊಳಗೆ ಮುಗಿಸಿ ಸೇವೆಗೆ ಒದಗಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಡಾ.ವೀರಭದ್ರಪ್ಪ, ವೈದ್ಯಾಧಿಕಾರಿ ಡಾ.ಸೌಮ್ಯಶ್ರೀ, ಪಿಡಿಒ ಚೆಂದಿಲ್, ಹಲಗೂರು ಗ್ರಾ.ಪಂ.ಅಧ್ಯಕ್ಷೆ ಶಶಿಕಲಾ ಆರ್. ಗ್ರಾ.ಪಂ. ಉಪಾಧ್ಯಕ್ಷೆ ಲತಾ, ಗ್ರಾ.ಪಂ.ಸದಸ್ಯರಾದ ಲಿಯಾಕತ್ ಅಲಿ,ಜಮೀಲ್ ಪಾಷಾ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಪಿ.ರಾಜು, ಪದ್ಮನಾಭ, ಸಿದ್ದಯ್ಯ,ಬಾ.ಗೋ. ಕುಮಾರ್,ಮಾಜಿ ಗ್ರಾ.ಪಂ.ಅಧ್ಯಕ್ಷ ಮರಿಸ್ವಾಮಿ, ಪ್ರಜ್ವಲ್, ಮೋಹನ್, ಶಿವಣ್ಣ, ಜೀವನ್ ಕುಮಾರ್ ಇದ್ದರು.

### ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಕೈಜೋಡಿಸಿ

**ಮಂಡ್ಯ:** ಜಿಲ್ಲೆಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ಗ್ರಾಮೀಣ ಜನತೆ ಕೈಜೋಡಿಸಬೇಕೆಂದು ಎಂದು ಅಖಿಲ ಕರ್ನಾಟಕ ಅಂಬರೀಶ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬೇಲೂರು ಸೋಮಶೇಖರ್ ಹೇಳಿದರು. ತಾಲೂಕಿನ ಬೇಲೂರು ಗ್ರಾಮಕ್ಕೆ ಆಗಮಿಸಿದ ಸಾಹಿತ್ಯ ಸಮ್ಮೇಳನದ ಪ್ರಚಾರ ರಥಕ್ಕೆ ಅದ್ದೂರಿಯಾಗಿ ಸ್ವಾಗತ ಕೋರಿದ ಬಳಿಕ ಅವರು ಮಾತನಾಡಿದರು. ಡಿ.20,21, 22ರಂದು ಮಂಡ್ಯ ಜಿಲ್ಲೆಯಲ್ಲಿ ನಡೆಯುವ ಕನ್ನಡಿಗರ ಅಸ್ಮಿತೆ ಸಮ್ಮೇಳನ ನಮ್ಮ ಪಾಲಿಗೆ ವರವಾಗಿದೆ. ಎಲ್ಲರೂ ಸಹಕಾರ ನೀಡೋಣ ಎಂದು ನುಡಿದರು.
ಬೇಲೂರು ಗ್ರಾಪಂ ಅಧ್ಯಕ್ಷೆ ಸುವರ್ಣವತಿ, ವಿಠಲ್ ಗೌಡ, ಬಿ.ಬಿ.ಶಂಕರ್, ಡೇರಿ ನಿರ್ದೇಶಕರಾದ ದೊಡ್ಡದ್ಯಾವಯ್ಯ, ರಘು, ಮಹೇಶ್, ಮುಖಂಡರಾದ ಪ್ರಕಾಶ್, ಸರ್ವೇಶ್, ವರಪ್ರಸಾದ್, ಕಸಾಪತಾ ಅಧ್ಯಕ್ಷ ಚಂದ್ರಲಿಂಗು, ಅಪ್ಪಾಜಪ್ಪ, ಪಿಡಿಒ ಸಿದ್ದರಾಜು, ಗಾಯಕ ಶೇಖರ್ ಇದ್ದರು.

### ನಕಲಿ ದಾಖಲೆ ಸೃಷ್ಟಿಸಿ ನಿವೇಶನ ಮಂಜೂರು

**ಮೈಸೂರು:** 1965ರಲ್ಲಿ ಕುರುಬಾರಹಳ್ಳಿ ಗ್ರಾಮದ ಸರ್ವೆ ನಂಬರ್ ನಾಲ್ಕರ 16/1 ರ ನಾಲ್ಕು ಎಕರೆ ಭೂಮಿ ಸ್ವಾಧೀನ ಪಡಿಸಿಕೊಂಡಿದ್ದು, ಕೊಳ್ಳೇಗಾಲ ತಾಲೂಕಿನ ಮುಡಿಗುಂಡ ಗ್ರಾಮದ ದೀಪು ರಾಜೇಂದ್ರ ಎಂಬವರು ಈ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಪೋಡಿ ಆಗದ ಜಾಗಕ್ಕೆ 2023-24ರಲ್ಲಿ 15ಕ್ಕೂ ಹೆಚ್ಚು ನಿವೇಶನ ಮಂಜೂರು ಮಾಡಿಸಿಕೊಂಡಿದ್ದಾರೆ. ಇದರಲ್ಲಿ ಮುಡಾದ ಅಧಿಕಾರಿ ವರ್ಗ ಶಾಮೀಲಾಗಿದೆ ಎಂದು ಮೈಸೂರು ಸೇನೆ ಸಂಘಟನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಕೆ.ಎಚ್.ಹನುಮಂತರಾಜು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ವಿಶೇಷ ಭೂ ಸ್ವಾಧೀನಾಧಿಕಾರಿ ಆರ್.ಶ್ರುತಿ, ಸಿಬ್ಬಂದಿ ಪಿ. ರಘು, ದರ್ಶನ್ ಮತ್ತಿತರರು ಭಾಗಿಯಾಗಿದ್ದಾರೆ. ಬೊಕ್ಕಸಕ್ಕೆ ಕೋಟ್ಯಂತರ ರೂ. ನಷ್ಟವುಂಟಾಗಿದೆ. ಈ ಕುರಿತು ಲಕ್ಷ್ಮೀಪುರಂ ಹಾಗೂ ಲೋಕಾಯುಕ್ತ ಕಚೇರಿಗೆ ದೂರು ನೀಡಲಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಸಂಘಟನೆಯ ಇನ್ನಿತರರಾದ ಜಯಣ್ಣ, ರಂಗಸ್ವಾಮಿ, ಸ್ವಾಮಿ ನಾಯಕ್ ಹಾಗೂ ಷೇರ್ ಖಾದರ್ ಇದ್ದರು.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

{ ಸಿದ್ದರಾಮಯ್ಯ } ಮುಖ್ಯಮಂತ್ರಿ

ಲೋಕಾಯುಕ್ತ ಸ್ವತಂತ್ರ ತನಿಖಾ ಸಂಸ್ಥೆ . ಬಿಜೆಪಿ ಅವರಿಗೆ ಕಾನೂನಿನ ಮೇಲೆ ಗೌರವ ವಿಲ್ಲ. ಲೋಕಾಯುಕ್ತ ಅಧಿಕಾರಿಗಳು ಮತ್ತೆ ವಿಚಾರಣೆಗೆ ಬರಲು ನನಗೆ ಹೇಳಿಲ್ಲ. ಹಾಗಾಗಿ ಮತ್ತೆ ಬರುವ ಪ್ರಮೇಯ ಬರಲಾರದು. ಸ್ನೇಹಮಯಿ ಕೃಷ್ಣ ಏನು ದೂರು ನೀಡಿದ್ದಾರೊ ಅದಕ್ಕಾಗಿ ನನ್ನ ವಿಚಾರಣೆಗೆ ಕರೆದಿದ್ದಾರೆ, ವಿಚಾರಣೆ ಎದುರಿಸಿದ್ದೇನೆ.

# ಅದ್ದೂರಿ ಕನಕ ಜಯಂತಿ

## ಪೂರ್ವಭಾವಿ ಸಭೆ | ನ. 18ರಂದು ಆಚರಣೆ | ಜಿಲ್ಲಾಡಳಿತದಿಂದ ಸಿದ್ಧತೆ

**ಚಾಮರಾಜನಗರ:** ಜಿಲ್ಲಾಕೇಂದ್ರದಲ್ಲಿ ನವೆಂಬರ್ 18ರಂದು ಭಕ್ತಶ್ರೇಷ್ಠ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಎಲ್ಲರ ಸಹಕಾರದೊಂದಿಗೆ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕನಕದಾಸರ ಜಯಂತಿ ಆಚರಣೆ ಸಂಬಂಧ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಭಕ್ತಶ್ರೇಷ್ಠ ಕನಕದಾಸರ ಜಯಂತಿ ಅಂಗವಾಗಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಪ್ರವಾಸಿ ಮಂದಿರದಿಂದ ಹೊರಡುವ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಜಿಲ್ಲಾಡಳಿತ ಭವನ ತಲುಪಲಿದೆ. ಅಲಂಕೃತ ಬೆಳ್ಳಿರಥದಲ್ಲಿರಿಸಿದ ಕನಕದಾಸರ ಭಾವಚಿತ್ರದ ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಭಾಗವಹಿಸಲಿವೆ ಎಂದು ತಿಳಿಸಿದರು. ಆಹ್ವಾನ ಪತ್ರಿಕೆ ಮುದ್ರಿಸಿ ಎಲ್ಲಾ ಜನಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಬೇಕು. ಕನಕದಾಸರ

ನಗರದ ಡಿಸಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿದರು.

ಮಾಹಿತಿಯುಳ್ಳ ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಬೇಕು. ವೇದಿಕೆ ಕಾರ್ಯಕ್ರಮದ ಬ್ಯಾಕ್‌ಡ್ರಾಪ್ ಆಕರ್ಷಕವಾಗಿ ಮುದ್ರಣವಾಗಬೇಕು. ಕನಕದಾಸರ ಬಗ್ಗೆ ಸಂಪನ್ಮೂಲ ವ್ಯಕ್ತಿಯಿಂದ ಮುಖ್ಯ ಭಾಷಣ ಕಾರ್ಯಕ್ರಮದಲ್ಲಿ ಇರಲಿದೆ. ರಂಗಮಂದಿರದ ಹೊರ ಆವರಣ ಹಾಗೂ ಒಳಾವರಣ ಸ್ವಚ್ಛತೆಗೆ ಎಡಿಸಿ ಸೂಚಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್‌ಕುಮಾರ್, ಡಿಎಚ್‌ಒ ಡಾ. ಎಸ್. ಚಿದಂಬರ, ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕಿ ಸುಷ್ಮಾ, ಕುರುಬ ಸಮಾಜದ ಅಧ್ಯಕ್ಷರಾದ ಆರ್. ಉಮೇಶ್, ಪ್ರಧಾನ ಕಾರ್ಯದರ್ಶಿ ಬಿ. ಶಿವಲಿಂಗೇಗೌಡ, ಮುಖಂಡರಾದ ಮಹೇಶ್, ಸೂರ್ಯಕುಮಾರ್, ಮರಿಸ್ವಾಮಿ, ಹೊನ್ನಳ್ಳಿ ಬಸವಣ್ಣ, ನವೀನ್ ಹೊಂಗನೂರು, ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಗ್ರಾಪಂ ಉಪಚುನಾವಣೆಗೆ ಜಿಲ್ಲಾಧಿಕಾರಿ ಅಧಿಸೂಚನೆ

**ಚಾಮರಾಜನಗರ:** ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಒಟ್ಟು 12 ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಡೆಯಲಿದೆ. ಈ ಸಂಬಂಧ ವೇಳಾಪಟ್ಟಿ ನಿಗದಿಯಾಗಿದ್ದು, ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅಧಿಸೂಚನೆ ಹೊರಡಿಸಿದ್ದಾರೆ.

ಚಾಮರಾಜನಗರ ತಾಲೂಕಿನ ಮಂಗಲ ಗ್ರಾಮ ಪಂಚಾಯಿತಿಯ ಮಂಗಲ, ಸಾಗಡೆ ಗ್ರಾಪಂ, ಗುಂಡ್ಲುಪೇಟೆಯ ಕೋಟೆಕೆರೆ ಗ್ರಾಮ ಪಂಚಾಯಿತಿಯ ಕುರುಬರಹುಂಡಿ ಹಾಗೂ ಹೊಣಕನಪುರ, ಹೊರೆಯಾಲ ಗ್ರಾಪಂ, ಕೂತನೂರು ಗ್ರಾಪಂನ ಕೂತನೂರು, ಅಣ್ಣೂರು ಗ್ರಾಮ ಪಂಚಾಯಿತಿಯ ಅಣ್ಣೂರುಕೇರಿ, ಕೊಳ್ಳೇಗಾಲದ ಧನಗೆರೆ ಗ್ರಾಮ ಪಂಚಾಯಿತಿಯ ಉಗನೀಯ, ಹನೂರು ತಾಲೂಕಿನ ಬಂಡಳ್ಳಿ ಗ್ರಾಮ ಪಂಚಾಯಿತಿಯ ಅಣಗಳ್ಳಿದೊಡ್ಡಿ , ರಾಮಾಪುರ ಗ್ರಾಪಂನ ಪುದುರಾಮಾಪುರ, ಶೆಟ್ಟಳ್ಳಿ ಗ್ರಾಮ ಪಂಚಾಯಿತಿಯ ಚೆನ್ನೂರು ಮತ್ತು ಪಿ.ಜಿ ಪಾಳ್ಯ ಗ್ರಾಮ ಪಂಚಾಯಿತಿಯ ಪಿ.ಜಿ. ಪಾಳ್ಯ ಕ್ಷೇತ್ರದ ತಲಾ ಒಂದು ಸ್ಥಾನಗಳು ಸೇರಿ ಒಟ್ಟು 12 ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ನಡೆಯಲಿದೆ.

ನವೆಂಬರ್ 12 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. 13ರಂದು ನಾಮಪತ್ರಗಳ ಪರಿಶೀಲನಾ ಕಾರ್ಯ ನಡೆಯಲಿದೆ. ಉಮೇದುವಾರಿಕೆ ಹಿಂತೆಗೆದುಕೊಳ್ಳಲು ನವೆಂಬರ್ 15ರಂದು ಕಡೆಯ ದಿನವಾಗಿದೆ. ಮತದಾನ ಅವಶ್ಯವಿದ್ದರೆ ನವೆಂಬರ್ 23ರಂದು ಬೆಳಿಗ್ಗೆ 7ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದೆ. ಮರು ಮತದಾನ ಅವಶ್ಯವಿದ್ದರೆ 25ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ಮತದಾನ ನಡೆಯಲಿದೆ. ಮತಗಳ ಎಣಿಕೆ ಕಾರ್ಯವು ಆಯಾ ತಾಲೂಕು ಕೇಂದ್ರಗಳಲ್ಲಿ 26ರಂದು ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ. ನವೆಂಬರ್ 26ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದ್ದಾರೆ.

ಮಡಿಕೇರಿ ನಗರದ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಶ್ರೀವಿಜಯ ವಿನಾಯಕ ದೇವಾಲಯದ 26ನೇ ವಾರ್ಷಿಕೋತ್ಸವ ಶ್ರದ್ಧಾ ಭಕ್ತಿಯಿಂದ ಜರುಗಿತು. ನ.3ರ ಸಂಜೆಯಿಂದಲೇ ದೇವಾಲಯದಲ್ಲಿ ಹೋಮ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿತು. ಮರುದಿನ ಅನ್ನದಾನ ನಡೆಯಿತು. ನಗರದ ವಿವಿಧ ಬಡಾವಣೆಗಳಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

# ಟೆನ್ನಿಸ್ ಬಾಲ್ ಕ್ರಿಕೆಟ್ ಫೆ.8ರಿಂದ

**ಮಡಿಕೇರಿ:** ಕೊಡಗು ಮುಸ್ಲಿಂ ಟ್ರಸ್ಟ್ ಹಾಗೂ ಚಿಲ್ ಬಾಯ್ಸ್ ತಂಡದ ವತಿಯಿಂದ 20ನೇ ವರ್ಷದ ಮುಸ್ಲಿಂ ಕಪ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ 2025ನೇ ಫೆ.8 ರಿಂದ 16ರ ವರೆಗೆ ಮಡಿಕೇರಿಯಲ್ಲಿ ನಡೆಯಲಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಎ.ಅಬ್ದುಲ್ ಖಾದರ್ ಹಾಗೂ ಚಿಲ್ ಬಾಯ್ಸ್‌ನ ಅಧ್ಯಕ್ಷ ಎಂ.ಎ.ಉನ್ನೈಸ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಕ್ರೀಡಾಕೂಟದ ಉಸ್ತುವಾರಿಯನ್ನು ಚಿಲ್ ಬಾಯ್ಸ್ ಮಡಿಕೇರಿ ತಂಡ ವಹಿಸಿಕೊಂಡಿದ್ದು, ಕ್ರೀಡಾಕೂಟಕ್ಕೆ ಸುಮಾರು 25ಲಕ್ಷ ರೂ.ಗೂ ಅಧಿಕ ಹಣ ಖರ್ಚಾಗುತ್ತಿದ್ದು, ಈ ಬಾರಿ ಜಿಲ್ಲೆಯ ಇಬ್ಬರು ಶಾಸಕರು ಆಸಕ್ತಿ ತೋರಿ ಸರಕಾರದಿಂದ ಅನುದಾನ ದೊರಕಿಸಿಕೊಡಬೇಕೆಂದು ಮನವಿ ಮಾಡಿದರು. ಕಳೆದ ವರ್ಷ ಸುಮಾರು 110 ತಂಡಗಳು ನೋಂದಾಯಿಸಿಕೊಂಡಿದ್ದವು. ಈ ಬಾರಿ 130ಕ್ಕೂ ಹೆಚ್ಚು ತಂಡಗಳು ಬರುವ ನಿರೀಕ್ಷೆ ಇದೆ ಎಂದರು.

ಟ್ರಸ್ಟ್‌ನ ಅಧ್ಯಕ್ಷ ಎ.ಅಬ್ದುಲ್ ಖಾದರ್ ಹಾಗೂ ಚಿಲ್ ಬಾಯ್ಸ್‌ನ ಅಧ್ಯಕ್ಷ ಎಂ.ಎ.ಉನ್ನೈಸ್ ಟ್ರಸ್ಟ್‌ನ ಬ್ಯಾನರ್ ಬಿಡುಗಡೆ ಮಾಡಿದರು.

ಪಂದ್ಯಾವಳಿಯಲ್ಲಿ ವಿಜೇತ ತಂಡಕ್ಕೆ ರೂ.79,999 ನಗದು ಹಾಗೂ ಟ್ರೋಫಿ, ದ್ವಿತೀಯ ರೂ.39,999 ಹಾಗೂ ಟ್ರೋಫಿ, ತೃತೀಯ ರೂ.19,999 ಹಾಗೂ ಟ್ರೋಫಿ ಹಾಗೂ ಚತುರ್ಥ 9999 ರು. ನಗದು ಹಾಗೂ ಟ್ರೋಫಿ ನೀಡಲಾಗುವುದು. ಈ ಬಾರಿ ವಿಶೇಷವಾಗಿ ಕೊನೆಯ ದಿನ ಹಗ್ಗಜಗ್ಗಾಟ ಕೂಡ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಹೆಸರು ನೋಂದಣಿಗೆ 2025ರ ಜ.10 ಕೊನೆಯ ದಿನವಾಗಿದ್ದು, ಪ್ರವೇಶ ಶುಲ್ಕ ರೂ.2 ಸಾವಿರ ವಿಧಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಉನ್ನೈಸ್ - 9741091808 ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಸ್.ಆದಂ, ಗೌರವ ಅಧ್ಯಕ್ಷ ಕೆ.ಎ.ಅಬ್ದುಲ್ ರಶೀದ್, ನಿರ್ದೇಶಕರಾದ ಹ್ಯಾರಿಸ್ ಎಂ.ಎಂ ಹಾಗೂ ಉಮ್ಮೆದ್ ಉಪಸ್ಥಿತರಿದ್ದರು.

# ಗೊಬ್ಬರ ದುಬಾರಿಗೆ ಮಾರಾಟ;ದೂರು

**ಪಿರಿಯಾಪಟ್ಟಣ:** ಹಿಂಗಾರು ಹಂಗಾಮಿನ ಭತ್ತ, ರಾಗಿ, ಜೋಳ ಬೆಳೆಗಳಿಗೆ ಮೇಲು ಗೊಬ್ಬರವಾಗಿ ನೀಡಲು ಯೂರಿಯಾ ಗೊಬ್ಬರ ಅತ್ಯವಶ್ಯವಾಗಿದೆ. ಕೇಂದ್ರ ಸರಕಾರ ಸಬ್ಸಿಡಿ ದರದಲ್ಲಿ ಮಾರಾಟ ಮಾಡುತ್ತಿದೆ. ಆದರೆ ಡೀಲರ್‌ಗಳು ನಿಗದಿತ ಬೆಲೆಗಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಸರಕಾರ ನಿಗದಿಪಡಿಸಿದ ದರ 266 ರೂ. ಇದ್ದರೂ 300 ರಿಂದ 330 ರೂ.ಗೆ ಮಾರಾಟ ಮಾಡುತ್ತಿದ್ದಾರೆ. ಅಧಿಕಾರಿಗಳು ಇದರ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ರೈತರು ಆರೋಪಿಸಿದ್ದಾರೆ.

ಬೆಳೆಗಳಿಗೆ ಯೂರಿಯಾ ಗೊಬ್ಬರವನ್ನು ಪೂರೈಕೆ ಮಾಡದಿದ್ದಲ್ಲಿ ಬೆಳೆಗಳು ವಿಪರೀತ ಶೀತದಿಂದ ಕಂದು ಬಣ್ಣಕ್ಕೆ ತಿರುಗಿ ಬೆಳೆ ಪ್ರಮಾಣ ಕುಂಠಿತವಾಗುತ್ತದೆ ಎಂದು ರೈತರು ಯೂರಿಯಾ ಗೊಬ್ಬರ ಖರೀದಿಸಲು ಮುಂದಾಗಿದ್ದಾರೆ. ಆದರೆ ಕೆಲವು ವ್ಯಾಪಾರಸ್ಥರು ಯೂರಿಯಾ ಗೊಬ್ಬರದ ಕೃತಕ ಅಭಾವ ಸೃಷ್ಟಿಸಿ ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ರೈತರು ಆರೋಪಿಸಿದರು.

# ಕೊಡವ ಜನಪದ ಸಾಂಸ್ಕೃತಿಕ ಮೇಳ ನ.9 ರಂದು

**ಮಡಿಕೇರಿ:** ಕೊಡವ ಜನಪದ ಕಲೆಗಳಿಗೆ ಒತ್ತು ನೀಡುವ ಸಲುವಾಗಿ ಮಡಿಕೇರಿಯ ಸುಬ್ರಮಣ್ಯ ಕೊಡವ ಕೇರಿಯ ನೇತೃತ್ವದಲ್ಲಿ ನ.9 ರಂದು 7ನೇ ಕೊಡವ ಅಂತರ್‌ಕೇರಿ ಜನಪದ ಸಾಂಸ್ಕೃತಿಕ ಮೇಳವನ್ನು ಆಯೋಜಿಸಲಾಗಿದೆ ಎಂದು ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ತಿಳಿಸಿದ್ದಾರೆ.
ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕೊಡವ ಸಮಾಜದ ಆವರಣದಲ್ಲಿ ಮಡಿಕೇರಿಯ 12 ಕೇರಿಯ ಕೊಡವರು ಈ ಮೇಳದಲ್ಲಿ ಭಾಗವಹಿಸಲಿದ್ದಾರೆ ಎಂದರು. ಅಂದು ಬೆಳಿಗ್ಗೆ 8.45 ಗಂಟೆಗೆ ಕೊಡವ ಸಮಾಜದಲ್ಲಿ ಧ್ವಜಾರೋಹಣ ನೆರವೇರಲಿದೆ. ಸುಬ್ರಹ್ಮಣ್ಯ ಕೊಡವ ಕೇರಿಯ ಸದಸ್ಯ ಕಾಳಿಮಾಡ ನಾಚಪ್ಪ ಮೇಳವನ್ನು ಉದ್ಘಾಟಿಸಲಿದ್ದು, ಹಿರಿಯ ಸದಸ್ಯೆ ನಂದೇಟ್ಟಿರ ಗೌರಮ್ಮ ಮುತ್ತಪ್ಪ ಅಂತರ್ ಕೇರಿ ಜಾನಪದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ನಂತರ ಕೇರಿ ಕೇರಿಗಳ ನಡುವೆ ಬೊಳಕಾಟ್, ಕೋಲಾಟ್, ಮಹಿಳೆಯರ ಉಮ್ಮತಾಟ್, ಕಪ್ಪೆಯಾಟ್, ಬಾಳೋಪಾಟ್, ತಾಲಿಪಾಟ್, ಸಮ್ಮಂದ ಅಡ್‌ಕುವೊ, ವಾಲಗತಾಟ್ ಸ್ಪರ್ಧೆಗಳು ನಡೆಯಲಿದೆ.
ಮಧ್ಯಾಹ್ನ 3.30 ಗಂಟೆಗೆ ಅಂತರಕೇರಿ ಮೇಳದ ಅಧ್ಯಕ್ಷ ಎಂ. ನಾಣಯ್ಯ ಅವರ ಅಧ್ಯಕ್ಷತೆಯಲ್ಲಿ ಸಮಾರೋಪ ನಡೆಯಲಿದ್ದು, ಕೊಡವ ಸಮಾಜದ ಅಧ್ಯಕ್ಷ ಪಿ.ಮುತ್ತಪ್ಪ , ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಮಡಿಕೇರಿ ಶಾಸಕ ಡಾ. ಮಂತರ್ ಗೌಡ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಹೇಶ್ ನಾಚಯ್ಯ, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸುಬ್ರಮಣ್ಯ ಕೊಡವ ಕೇರಿ ಅಧ್ಯಕ್ಷ ಅರೆಯಡ ರಮೇಶ್, ಉಪಾಧ್ಯಕ್ಷ ಕೇಕಡ ಕಿರಣ್, ಸಂಚಾಲಕಿ ಬೊಪ್ಪಂಡ ಸರಳ ಕರುಂಬಯ್ಯ ಹಾಗೂ ಖಜಾಂಚಿ ಪ್ರಕಾಶ್ ಉಪಸ್ಥಿತರಿದ್ದರು.

# ತರಕಾರಿ ಬೀಜಗಳ ವಿತರಣೆ

**ಮದ್ದೂರು:** ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ತರಕಾರಿ ಬೀಜಗಳ (ಹೈಬ್ರೀಡ್ ಹಾಗೂ ಸುಧಾರಿತ ತಳಿ) ವಿತರಣೆ ಕಾರ್ಯಕ್ರಮದಡಿ ಸಣ್ಣ ಮತ್ತು ಅತಿಸಣ್ಣರೈತರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ರೈತರಿಗೆ ಗರಿಷ್ಠ ಎರಡು ಸಾವಿರ ರೂ. ಮೊತ್ತದ ತರಕಾರಿ ಬೀಜಗಳನ್ನು ತರಕಾರಿ ಬೇಸಾಯಕ್ಕೆ ನೀಡಲಾಗುವುದೆಂದು ತೋಟಗಾರಿಕೆ ಸಹಾಯಕ ನಿರ್ದೇಶಕಿ ಕೆ. ಎಂ.ರೇಖಾ ತಿಳಿಸಿದ್ದಾರೆ.

ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದ್ದು ನವೆಂಬರ್ 15 ರಂದು ಕಡೆಯ ದಿನವಾಗಿದೆ. ಮೊದಲು ಅರ್ಜಿ ಸಲ್ಲಿಸಿದವರಿಗೆ ಪ್ರಥಮ ಆದ್ಯತೆ ನೀಡುವುದಾಗಿ ತಿಳಿಸಿದ್ದಾರೆ.

# ಆನ್ ಲೈನ್ ಗೇಮಿಂಗ್ ನಿಷೇಧಕ್ಕೆ ಆಗ್ರಹ

**ತಿ.ನರಸೀಪುರ:** ಆನ್ ಲೈನ್ ಬೆಟ್ಟಿಂಗ್ ಹಾಗೂ ಆನ್ ಲೈನ್ ಗೇಮಿಂಗ್ ವೆಬ್‌ಸೈಟ್‌ಗಳನ್ನು ನಿಷೇಧಿಸುವಂತೆ ಆಗ್ರಹಿಸಿ ನಮ್ಮ ಕರ್ನಾಟಕ ಸೇನೆಯ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಾಲಯದಿಂದ ಮೆರವಣಿಗೆ ಹೊರಟು ಖಾಸಗಿ ಬಸ್ ನಿಲ್ದಾಣದ ಮಾರ್ಗವಾಗಿ ಸಾಗಿ ಮಿನಿವಿಧಾನ ಸೌಧ ಮುಂದೆ ಪ್ರತಿಭಟನೆ ನಡೆಸಿ ಗ್ರೇಡ್-2 ತಹಸೀಲ್ದಾರ್ ರಾಜಾಕಾಂತ್‌ರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಜಿ. ಮುರುಗನ್ ಮಾತನಾಡಿ, ಆನ್ ಲೈನ್ ಬೆಟ್ಟಿಂಗ್ ಆಪ್‌ಗಳಿಂದ ಹಲವು ಯುವಕರು, ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗಾಗಲೇ ಹಲವು ಪೊಲೀಸ್ ಠಾಣೆಗಳಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಬಡಜನರನ್ನು ದೃಷ್ಟಿಯಾಗಿಸಿಕೊಂಡು ಜನರಿಗೆ ಮೋಸ ಮಾಡುವ ದುರುದ್ದೇಶದಿಂದಲೇ ಇರುವ ಆನ್‌ಲೈನ್ ಗೇಮಿಂಗ್ ವೆಬ್ ಸೈಟ್ ಹಾಗೂ ಅಪ್ಲಿಕೇಷನ್‌ಗಳನ್ನು ತಕ್ಷಣ ನಿಷೇಧಿಸುವಂತೆ ಆಗ್ರಹಿಸಿದರು.

ಬಡ ಜನರು, ಆಟೋ ಚಾಲಕರು, ವಿದ್ಯಾರ್ಥಿಗಳಿಗೆ ಹಣದ ಡಬ್ಲಿಂಗ್ ಆಸೆ ತೋರಿಸುವ ಹಲವು ಆನ್ ಲೈನ್ ಆಪ್ ಗಳು ಚಾಲ್ತಿಯಲ್ಲಿದ್ದು, ಇವುಗಳ ಆಮಿಷಕ್ಕೆ ಬಲಿಯಾದವರು ಯಾವುದೇ ಲಾಭವನ್ನು ಪಡೆದಿಲ್ಲ, ಬದಲಾಗಿ ಸಾಕಷ್ಟು ಹಣ ಕಳೆದುಕೊಂಡು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಸಾಕಷ್ಟು ದಿನಗೂಲಿ ಕೆಲಸಗಾರರು ಇದರ ಗೀಳಿಗೆ ಬಿದ್ದು ತಮ್ಮ ಕುಟುಂಬ ನಿರ್ವಹಣೆ ಮಾಡಲಾಗದೆ ಒದ್ದಾಡುತ್ತಿದ್ದಾರೆ. ಹಾಗಾಗಿ ಶೀಘ್ರವೇ ನಿಷೇಧಿಸುವಂತೆ ಆಗ್ರಹಿಸಿದರು.




ಆನ್ ಲೈನ್ ಬೆಟ್ಟಿಂಗ್ ಹಾಗೂ ಆನ್ ಲೈನ್ ಗೇಮಿಂಗ್ ವೆಬ್‌ಸೈಟ್ ನಿಷೇಧಕ್ಕೆ ಆಗ್ರಹಿಸಿ ನಮ್ಮ ಕರ್ನಾಟಕ ಸೇನೆಯ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ತಾಲೂಕು ಅಧ್ಯಕ್ಷ ಮಾದೇಶ್ ಮಾತನಾಡಿ, ರಾಜ್ಯದಲ್ಲಿ ಬಹುತೇಕ ವೃತ್ತಿಪರರು, ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು ಆನ್ ಲೈನ್ ಬೆಟ್ಟಿಂಗ್, ಗೇಮ್‌ಗಳಿಗೆ ದಾಸರಾ ಗುತ್ತಿದ್ದು, ತಾವು ಗಳಿಸಿದ ಹಣ ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ. ಹಾಗಾಗಿ ಸರಕಾರ ಈ ಆಪ್‌ಗಳನ್ನು ತಕ್ಷಣ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು. ತಾಲೂಕು ಉಪಾಧ್ಯಕ್ಷ ಎಂ.ಗಣೇಶ್, ಗೌರವ ಅಧ್ಯಕ್ಷ ಅಂಬರೀಶ್, ಪ್ರಚಾರ ಸಮಿತಿ ಅಧ್ಯಕ್ಷ ಬಸವರಾಜು, ಸಂಚಾಲಕ ರವಿ, ಜಂಟಿ ಕಾರ್ಯದರ್ಶಿ ಎಂ.ಚೇತನ್, ಸಹಕಾರ್ಯ ದರ್ಶಿ ಎಂ. ವಿನೋದ್ ಕುಮಾರ್, ಜೆ.ಕೃಷ್ಣ, ಸಂಘಟನಾ ಕಾರ್ಯದರ್ಶಿಳಾದ ಮಹದೇವನಾಯಕ, ರಾಮು, ಸದಸ್ಯರಾದ ನಾಗೇಂದರ್,ವಿಕಾಸ್, ವೆಂಕಟರಮಣ ಇದ್ದರು.

# ಸಿಎಂ ರಾಜೀನಾಮೆಗೆ ಷಡ್ಯಂತ್ರ

## ದಲಿತ ಸಂಘರ್ಷ ಸಮಿತಿಯಿಂದ ಅರೆಬೆತ್ತಲೆ ಪ್ರತಿಭಟನೆ

**ಚಾಮರಾಜನಗರ:** ಸಾಂವಿಧಾನಿಕ ಸಂಸ್ಥೆಗಳಾದ ಇಡಿ, ಐಟಿ, ಸಿಬಿಐ ಹಾಗೂ ರಾಜಭವನಗಳನ್ನು ಕೇಂದ್ರ ಬಿಜೆಪಿ ಸರಕಾರ ರಾಜಕೀಯ ಲಾಭಕ್ಕಾಗಿ ದುರ್ಬಳಕೆ ಮಾಡಿಕೊಂಡಿದೆ. ಇದನ್ನು ತಡೆಗಟ್ಟಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ (ಸಾಗರ್ ಬಣ) ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂದೆ ಅರೆಬೆತ್ತಲೆ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂದೆ ಅರೆಬೆತ್ತಲೆ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಸಮಿತಿ ಸಂಚಾಲಕ ಸಿ. ಎಂ.ಶಿವಣ್ಣ ಮಾತನಾಡಿ, ಲೋಕಾಯುಕ್ತ ಪೊಲೀಸರು, ಮುಖ್ಯಮಂತ್ರಿ ಸಿದ್ದರಾಮಯ್ಯ ರವರ ಮೇಲೆ ಎಫ್ ಐ ಆರ್ ದಾಖಲಿಸಿ ಅವರು ರಾಜೀನಾಮೆ ಕೊಡಬೇಕೆಂದು ಬಿ.ಜೆ.ಪಿ. ನಾಯಕರು ಹೋರಾಟ ಪ್ರಾರಂಭಿಸಿದ್ದಾರೆ. ಈ ಹೋರಾಟದ ತಾರ್ಕಿಕ ಅಂತ್ಯ ಯಾರ ಮನೆ ಬಾಗಿಲು ತಟ್ಟಬಹುದೆಂಬ ಕನಿಷ್ಠ ಸಾಮಾನ್ಯ ಜ್ಞಾನವಾದರೂ ಈ ನಾಯಕರಿಗಿದಿಯೇ? ಸರಕಾರ ದುರ್ಬಲಗೊಳಿಸಲು ಮುಡಾ ಪ್ರಕರಣದಲ್ಲಿ ಬಿಜೆಪಿ, ಜೆಡಿಎಸ್ ನಡೆಸುತ್ತಿರುವ ಷಡ್ಯಂತ್ರವನ್ನು ಖಂಡಿಸಿದರು. ಎಫ್‌ಐಆರ್ ಆಗಿರುವ ಕಾರಣಕ್ಕೆ ರಾಜೀನಾಮೆ ನೀಡಬೇಕೆಂದು ಮಾನ ದಂಡ ನಿಗದಿಪಡಿಸಿದರೆ ಸಿದ್ದರಾಮ ಯ್ಯ ಮಾತ್ರವಲ್ಲ ಕೇಂದ್ರ ಸಚಿವ ಸಂಪುಟದಲ್ಲಿ ಕನಿಷ್ಠ 23-24 ಸಚಿವರು ರಾಜೀನಾಮೆ ನೀಡಬೇಕಾಗುತ್ತದೆ. ಧರ್ಮದ ಹೆಸರಿನಲ್ಲಿ ರಕ್ತಪಾತ ನಡೆಸಿದವರನ್ನು ಸಮರ್ಥಿಸಿಕೊಂಡು ನ್ಯಾಯಾಲಯಗಳಿಂದ ಛೀಮಾರಿ ಹಾಕಿಸಿಕೊಂಡು ಬೇರೆ ಬೇರೆ ಪಕ್ಷದವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು, ಅಸಹಾಯಕರಿಗೆ, ದಲಿತರಿಗೆ, ಹಿಂದುಳಿದವರಿಗೆ ಅಲ್ಪಸಂಖ್ಯಾತರಿಗೆ, ಶಕ್ತಿ ತುಂಬುವ 5 ಗ್ಯಾರಂಟಿ ಯೋಜನೆಗಳನ್ನು ಕೊಟ್ಟ ಸಿದ್ದರಾಮಯ್ಯರ ನೈತಿಕತೆ ಪ್ರಶ್ನಿಸುವುದು ವಿಪರ್ಯಾಸ. ಬಿಜೆಪಿಗೆ ಸಿಎಂ ರಾಜೀನಾಮೆ ಕೇಳುವ ಯಾವುದೇ ನೈತಿಕ ಹಕ್ಕಿಲ್ಲ. ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬಾರದು ಎಂದರು. ಪ್ರತಿಭಟನೆಯಲ್ಲಿ ಆಟೋ ಉಮೇಶ್, ಗೀಜರ್ ಮಂಜೇಶ್, ಶಿವಸ್ವಾಮಿ ಕೊತ್ತಲವಾಡಿ, ನಾರಾಯಣ್, ರವಿಕುಮಾರ್ ಇತರರು ಭಾಗವಹಿಸಿದ್ದರು.

# ಪರೋಕ್ಷವಾಗಿ ಜೀವ ಉಳಿಸುವ ರಕ್ತದಾನ

**ಪಿರಿಯಾಪಟ್ಟಣ:** ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ. ಅದನ್ನು ಕೇವಲ ದಾನದ ರೂಪದಲ್ಲಿ ಮಾತ್ರ ಪಡೆಯಲು ಸಾಧ್ಯ. ಹಾಗಾಗಿ ರಕ್ತದಾನ ಅತ್ಯಂತ ಪುಣ್ಯದ ಕೆಲಸ ಎಂದು ರೋಟರಿ ಮಿಡ್ ಟೌನ್ ಅಧ್ಯಕ್ಷ ಎಂ.ಎಂ.ರಾಜೇಗೌಡ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಟರಿ ಸಂಸ್ಥೆ ಹಾಗೂ ಕೃಷ್ಣರಾಜೇಂದ್ರ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಮಾತನಾಡಿದರು.

ರಕ್ತವನ್ನು ಎಲ್ಲ ಆರೋಗ್ಯವಂತರು ದಾನ ಮಾಡ ಬಹುದಾಗಿದೆ. ರಕ್ತದಾನದಿಂದ ಜ್ಞಾಪಕ ಶಕ್ತಿ ವದ್ಧಿಸುವ ಜತೆಗೆ ಉತ್ತಮ ಆರೋಗ್ಯ ಸಿಗುತ್ತದೆ. ರಕ್ತದಾನದಿಂದ ಒಂದು ಅಮೂಲ್ಯ ಜೀವ ಉಳಿಸಿದ ನೆಮ್ಮದಿ ನಮಗೆ ಸಿಗುತ್ತದೆ ಎಂದರು.

ಆಡಳಿತಾಧಿಕಾರಿ ಡಾ.ಅನೀಲ್ ಕುಮಾರ್ ಮಾತನಾಡಿ, ರಕ್ತದಾನದಿಂದ ಹೃದಯಾಘಾತವನ್ನು ತಡೆಯ ಬಹುದಾಗಿದೆ. ಯುವಕರು ಪ್ರತಿ 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ ಎಂದರು.

ಕೆ.ಆರ್.ಆಸ್ಪತ್ರೆ ರಕ್ತನಿಧಿ ಕೇಂದ್ರದ ಮುಖ್ಯಸ್ಥೆ ಡಾ.ಕುಸುಮ ಮಾತನಾಡಿ, ರಕ್ತವನ್ನು ದಾನ ಮಾಡಿದರೆ ಪರೋಕ್ಷವಾಗಿ ಹಲವರ ಜೀವ ಉಳಿಸಿದ ಪುಣ್ಯ ಸಿಗುತ್ತದೆ ಎಂದರು.

ರೋ.ಜಿಲ್ಲಾ ಗೌರ್ನರ್ ಆರ್.ಆನಂದ್, ಕಾರ್ಯದರ್ಶಿ ಐಕೆಪಿ ಹೆಗಡೆ, ಸದಸ್ಯರಾದ ಕೆ.ಎ.ಸತ್ಯನಾರಾಯಣ್, ಬಿ.ಎಸ್.ಹರೀಶ್, ಡಾ.ಸುನಿಲ್ ಕುಮಾರ್, ಡಾ.ಶೋಭಾ ಇದ್ದರು.

# ಬಸರಾಳ ಹೋಬಳಿ ಕೇಂದ್ರ ತಾಲೂಕಾಗಲಿ

**ಮಂಡ್ಯ:** ಮಂಡ್ಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಸರಾಳು ಹೋಬಳಿ ಕೇಂದ್ರವಾಗಿದ್ದು, ತಾಲ್ಲೂಕು ಕೇಂದ್ರವಾಗಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕ ಪಿ.ರವಿಕುಮಾರ್ ಗಣಿಗ ತಿಳಿಸಿದರು.

ಬಸರಾಳು ಗ್ರಾಮದಲ್ಲಿ ಬಸರಾಳು-ಮುತ್ತೇಗೆರೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬಸರಾಳು ಹೋಬಳಿ ಕೇಂದ್ರವಾಗಿದ್ದು, ಮಂಡ್ಯ ನಗರದಿಂದ 26 ಕಿ.ಮೀ. ದೂರದಲ್ಲಿದೆ. ಇದರಿಂದಾಗಿ ಬಸರಾಳು ಸುತ್ತಮುತ್ತಲಿನ ಗ್ರಾಮಸ್ಥರು ತಾಲೂಕು ಕಚೇರಿಗೆ ಬರಬೇಕಾದರೆ ಬಹಳ ದೂರ ಕ್ರಮಿಸಬೇಕಾಗಿದೆ. ಹೀಗಾಗಿ ಹೋಬಳಿ ಕೇಂದ್ರವಾಗಿ ಬೆಳೆದಿರುವ ಬಸರಾಳನ್ನು ತಾಲೂಕು ಕೇಂದ್ರವಾಗಿ ಪರವರ್ತಿಸಲು ಉದ್ದೇಶಿಸಲಾಗಿದೆ ಎಂದರು.

**ಕಾಮಗಾರಿ:**

ಬಸರಾಳು-ಮುತ್ತೇಗೆರೆ ರಸ್ತೆಯು ಸುಮಾರು 25 ವರ್ಷಗಳಿಂದ ಅಭಿವೃದ್ಧಿಯನ್ನೇ ಕಂಡಿಲ್ಲ. ಪ್ರಸ್ತುತ ಕಾಲ ಕೂಡಿ ಬಂದಿದ್ದು, 10 ಕೋಟಿ ರೂ. ವೆಚ್ಚದಲ್ಲಿ

4.43 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡಲಾಗುತ್ತಿದೆ. ನಾನು ಶಾಸಕನಾಗಿ ಆಯ್ಕೆಯಾದ ನಂತರ ಈ ಭಾಗದಲ್ಲಿ ಸುಮಾರು 75 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಇನ್ನೂ 15 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೆ ಟೆಂಡರ್ ಕರೆಯಬೇಕಾಗಿದೆ ಎಂದು ಹೇಳಿದರು.

ಮಾಚಗೌಡನಹಳ್ಳಿ-ಬಾಳೇನಹಳ್ಳಿ ರಸ್ತೆ, ಬಸರಾಳು-ಕಂಬದಹಳ್ಳಿ ರಸ್ತೆಗೆ 4.5 ಕೋಟಿ, ಅಂಕುಶಾಪುರ ಕೆರೆ ಕೋಡಿ ಮತ್ತು ಸೇತುವೆ, ಬೆನ್ನಹಟ್ಟಿ ಕೆರೆ ಕೆಳಭಾಗ ಸೇತುವೆಗೆ ಒಟ್ಟು 2.5 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದರು. ಚಿಕ್ಕಮಂಡ್ಯ-ಬಿಳಿದೇಗಲು ವರೆಗಿನ ರಸ್ತೆಯ ಅಭಿವೃದ್ಧಿಗೆ 10 ಕೋಟಿ ರೂ. ಟೆಂಡರ್ ಆಗಿದೆ. ನಾವು ಅಧಿಕಾರದಲ್ಲಿದ್ದಾಗ ಏನು ಅಭಿವೃದ್ಧಿ ಕೆಲಸ ಮಾಡುತ್ತೇವೋ ಅವುಗಳೇ ಹೆಸರನ್ನು ತಂದುಕೊಡುತ್ತವೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಪ್ಪಾಜಿಗೌಡ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕಂಬದಹಳ್ಳಿ ಪುಟ್ಟಸ್ವಾಮಿ, ತಾ.ಪಂ. ಮಾಜಿ ಸದಸ್ಯ ಮಂಜೇಗೌಡ, ಗ್ರಾಪಂ ಅಧ್ಯಕ್ಷ ಜವರಪ್ಪ, ಸದಸ್ಯ ರಾಜು, ಉದ್ಯಮಿ ರವಿ ಬೋಜೇಗೌಡ, ಕಾಂಗ್ರೆಸ್ ಮುಖಂಡ ಪ್ರದೀಪ್ ಹಾಜರಿದ್ದರು.

# ಉದ್ಯಮಿ ಕೊಲೆ: ಆರೋಪಿ ಬಂಧನ

**ಮಡಿಕೇರಿ:** ಜಿಲ್ಲೆಯ ಸುಂಟಿಕೊಪ್ಪ ವ್ಯಾಪ್ತಿಯ ಕಾಫಿ ತೋಟವೊಂದರಲ್ಲಿ ದೊರೆತ ಅರೆಸುಟ್ಟ ಮೃತದೇಹದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಆರೋಪದಡಿ ತಪ್ಪಿಸಿಕೊಂಡಿದ್ದ ಹರಿಯಾಣದ ಕಾರ್ನಲ್ ಗರುಂದ ನಿವಾಸಿ ಅಂಕೂರ್ ರಾಣ(30) ಎಂಬಾತನನ್ನು ಕೊಡಗು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತೆಲಾಂಗಣ ರಾಜ್ಯದಲ್ಲಿ ಸ್ಥಳ ಮಹಜರು ವೇಳೆ ಮೂವರು ಆರೋಪಿಗಳಲ್ಲಿ ಅಂಕೂರ್ ರಾಣ ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದ. ಹರಿಯಾಣ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಸತತ 6 ದಿನಗಳಿಂದ ಕಾರ್ಯಾಚರಣೆ ನಡೆಸಿ ರಾಜಸ್ಥಾನದ ಕೋಟಾ ಎಂಬಲ್ಲಿ ಪೊಲೀಸರು ಬಂಧಿಸಿದ್ದಾರೆ. ಪತಿಯನ್ನೇ ಕೊಲೆ ಮಾಡಲು ಸಂಚು ರೂಪಿಸಿದ ತೆಲಂಗಾಣ ರಾಜ್ಯದ ಯಾದಾದ್ರಿ, ಜಿಲ್ಲೆಯ ಮೋಂಗಿರ್ ನಗರದ ನಿಹಾರಿಕಾ ತನ್ನ ಸ್ನೇಹಿತ ಹರಿಯಾಣ ಮೂಲದ ಅಂಕೂರ್ ರಾಣನ ಸಹಾಯ ಪಡೆದಿದ್ದಾಳೆ. ಡ್ರಾಪ್ ಮಾಡುವ ನೆಪದಲ್ಲಿ ಪತಿ ರಿಯಲ್ ಎಸ್ಟೇಟ್ ಉದ್ಯಮಿ ರಮೇಶ್ ಕುಮಾರ್‌ನ ಕಾರಿನಲ್ಲಿ ಬಂದ ಇಬ್ಬರು ಭುವನಗಿರಿ ಹೆದ್ದಾರಿಯ ಬಳಿ ಕಾರನ್ನು ಬದಿಗೆ ನಿಲ್ಲಿಸಿದ್ದಾರೆ. ನಂತರ ಇಬ್ಬರು ಸೇರಿ ರಮೇಶ್ ಕುಮಾರ್ ಕೊಲೆ ಮಾಡಿ ಸುಂಟಿಕೊಪ್ಪ ಬಳಿಯ ತೋಟಕ್ಕೆ ತಂದು ಬೆಂಕಿ ಹಚ್ಚಿ ಪರಾರಿಯಾಗಿದ್ದರು.

## ಸನ್ಮಾನ ಖಾನ್‌ಗೆ ಬೆದರಿಕೆ: ಆರೋಪಿ ಬಂಧನ

**ಹಾವೇರಿ:** ಬಾಲಿವುಡ್ ನಟ ಸಲ್ಮಾನ್ ಖಾನ್‌ಗೆ ಕೊಲೆ ಬೆದರಿಕೆ ಹಾಕಿದ್ದ ಆರೋಪಿ ರಾಜಸ್ತಾನ ಮೂಲದ ಬಿಕಾರಾಮ್‌ನನ್ನು ಹಾವೇರಿ ನಗರದಲ್ಲಿ ಬುಧವಾರ ಬಂಧಿಸಲಾಗಿದೆ. ರಾಜಸ್ತಾನ ಮೂಲದ ಬಿಕಾರಾಮ್ ಕೂಲಿ ಕೆಲಸಕ್ಕೆಂದು ಇತ್ತೀಚೆಗೆ ಹಾವೇರಿ

ನಗರಕ್ಕೆ ಬಂದಿದ್ದ. ಇಲ್ಲಿನ ಗೌಡರ ಓಣಿಯಲ್ಲಿ ರೂಮ್ ಒಂದರಲ್ಲಿ ಕೂಲಿಕಾರರೊಂದಿಗೆ ವಾಸವಾಗಿದ್ದ. ಗ್ರಿಲ್ ಕೆಲಸ ಮಾಡಿಕೊಂಡಿದ್ದ. ಮುಂಬೈ ಪೊಲೀಸರ ಮಾಹಿತಿ ಆಧಾರದಲ್ಲಿ ಆರೋಪಿಯನ್ನು ಜಿಲ್ಲಾ ಪೊಲೀಸರು ವಶಕ್ಕೆ ಪಡೆದು, ಮುಂಬೈ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಮೊದಲು ಬೇರೆಡೆ ಕೆಲಸ ಮಾಡುತ್ತಿದ್ದ. ಒಂದೂವರೆ ತಿಂಗಳ ಹಿಂದೆ ಬಿಕಾರಾಮ್ ಕೂಲಿಗಾಗಿ ಹಾವೇರಿಗೆ ಬಂದಿದ್ದ. ಮುಂಬೈ ಪೊಲೀಸರ ಮಾಹಿತಿ ಆಧಾರದ ಮೇಲೆ ವಶಕ್ಕೆ ಪಡೆದು ಅವರಿಗೆ ಒಪ್ಪಿಸಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

## ಕೊಳೆತ ಸ್ಥಿತಿಯಲ್ಲಿ ದಂಪತಿಯ ಶವ ಪತ್ತೆ

**ಚಿಕ್ಕೋಡಿ:** ಅಥಣಿ ಹೊರವಲಯದ ಮದಭಾವಿ ರಸ್ತೆಗೆ ಹೊಂದಿಕೊಂಡಿರುವ ಚೌವ್ಹಾಣ್ ಎಂಬ ತೋಟದ ಮನೆಯೊಂದರಲ್ಲಿ ಕೊಳೆತ ಸ್ಥಿತಿಯಲ್ಲಿ ದಂಪತಿಯ ಶವಗಳು ದೊರೆತಿವೆ. ನಾನಾ ಸಾಹೇಬ್ ಬಾಬು ಚೌವ್ಹಾಣ್(58) ಮತ್ತು ಜಯಶ್ರೀ ನಾನಾ ಸಾಹೇಬ್ ಚೌವ್ಹಾಣ್(50) ಮೃತಪಟ್ಟ ದಂಪತಿ. ಸುಮಾರು 5-6 ದಿನಗಳ ಹಿಂದೆ ಮೃತಪಟ್ಟಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಮನೆಯ ಸುತ್ತಲೂ ದುರ್ವಾಸನೆ ಬರುತ್ತಿದ್ದಂತೆ ಪಕ್ಕದ ಮನೆ ಯವರು ಅಥಣಿ ಪೊಲೀಸರಿಗೆ ಮಾಹಿತಿ ನೀಡಿ ದ್ದರು. ಅಥಣಿ ಡಿವೈಎಸ್ಪಿ ಪ್ರಶಾಂತ್ ಮುನ್ನೋಳ್ಳಿ, ಅಥಣಿ ಸಿಪಿಐ ಸಂತೋಷ ಹಳ್ಳೂರ ತಮ್ಮ ಸಿಬ್ಬಂದಿ, ಆರೋಗ್ಯ ಅಧಿಕಾರಿ ಬಸನಗೌಡ ಕಾಗೆ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಅಥಣಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮುಡಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದ್ದೇನೆ: ಸಿಎಂ ಸಿದ್ದು

### ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿ ವಿಚಾರಣೆ ಎದುರಿಸಿದ ಮುಖ್ಯಮಂತ್ರಿ | ಮತ್ತೆ ವಿಚಾರಣೆಗೆ ಹಾಜರಾಗುವಂತೆ ತಿಳಿಸಿಲ್ಲ

**ಮೈಸೂರು:** ಲೋಕಾಯುಕ್ತ ಅಧಿಕಾರಿಗಳು ಕೇಳಿರುವ ಪ್ರಶ್ನೆಗಳಿಗೆ ಎಲ್ಲಾ ರೀತಿ ಉತ್ತರಿಸಿದ್ದೇನೆ. ಮತ್ತೆ ವಿಚಾರಣೆಗೆ ಬರುವಂತೆ ಹೇಳಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಲೋಕಾಯುಕ್ತ ಕಚೇರಿಗೆ ಭೇಟಿ ನೀಡಿ ವಿಚಾರಣೆ ಎದುರಿಸಿ ಹೊರಬಂದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಾಯುಕ್ತ ವಿಚಾರಣೆಗೆ ಹಾಜರಾಗಿದ್ದೆ. ಲೋಕಾಯುಕ್ತ ಅಧಿಕಾರಿಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದೇನೆ. ನನ್ನ ಉತ್ತರವನ್ನು ಅವರು ರೆಕಾರ್ಡ್ ಮಾಡಿಕೊಂಡಿದ್ದಾರೆ. ಕಾನೂನಿನ ಪ್ರಕಾರವೇ ಸೈಟ್ ಪಡೆದಿದ್ದೇನೆ ಎಂದು ತಿಳಿಸಿದ್ದೇನೆ. ಮತ್ತೆ ವಿಚಾರಣೆಗೆ ಹಾಜರಾಗುವಂತೆ ತಿಳಿಸಿಲ್ಲ ಎಂದರು.

ಪ್ರಶ್ನೆ, ಉತ್ತರ ಎಲ್ಲವನ್ನೂ ಅಧಿಕಾರಿಗಳು ರೆಕಾರ್ಡ್ ಮಾಡಿದ್ದಾರೆ. ಸುಳ್ಳು ಕೇಸ್ ಹಾಕಿದ್ದಾರೆ, ವಿಚಾರಣೆ ಮಾಡಿದ್ದಾರೆ. ಇದರಲ್ಲಿ ನನಗೆ ಏಕೆ ಮುಜುಗರ ಆಗಲಿದೆ ಎಂದು ಮಾಧ್ಯಮದವರನ್ನೆ ಪ್ರಶ್ನಿಸಿದರು.

ಮತ್ತೆ ವಿಚಾರಣೆಗೆ ಬರುವಿರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಲೋಕಾಯುಕ್ತ ಅಧಿಕಾರಿಗಳು ಮತ್ತೆ ವಿಚಾರಣೆ ಬರಲು ನನಗೆ ಹೇಳಿಲ್ಲ ಹಾಗಾಗಿ ಬರುವ ಪ್ರಮೇಯ ಬರಲಾರದು. ಸ್ನೇಹಮಯಿ ಕೃಷ್ಣ ಏನು ದೂರು ನೀಡಿದ್ದಾರೊ ಅದಕ್ಕಾಗಿ ನನ್ನ ವಿಚಾರಣೆಗೆ ಕರೆದಿದ್ದಾರೆ, ನಾನು ವಿಚಾರಣೆ ಎದುರಿಸಿದ್ದೇನೆ ಎಂದು ಹೇಳಿದರು.

ಬಿಜೆಪಿ ಅವರು ಗೋ ಬ್ಯಾಕ್ ಹೋರಾಟ ಮಾಡಿದ ರಲ್ಲಾ ಎಂಬ ಪ್ರಶ್ನೆಗೆ, ಹಾಗಾದರೆ ಬಿಜೆಪಿಯವರು ತನಿಖೆಗೆ ವಿರುದ್ಧ ಆಗಿದ್ದಾರಾ, ತನಿಖೆ ಆಗಬಾರದು ಅಂತಾ ಇದ್ದಾರಾ ಅವರು. ಅಂದರೆ ಅವರು ಸುಳ್ಳು ಆರೋಪ ಮಾಡಿದ್ದಾರೆ ಎಂದರ್ಥ ಎಂದರು.

ಲೋಕಾಯುಕ್ತ ಬೇಡಾ ಸಿಬಿಐಗೆ ನೀಡಿ ಎಂದು ಬಿಜೆಪಿಯವರು ಕೇಳಿದ್ದಾರಲ್ಲಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿಎಂ, ಬಿಜೆಪಿ ಯವರು ಯಾವ ಪ್ರಕರಣವನ್ನು ಸಿಬಿಐಗೆ ಕೊಟ್ಟಿದ್ದಾರೆ, ಲೋಕಾಯುಕ್ತ ಮಾಡಿರೋರು ಯಾರು. ಲೋಕಾಯುಕ್ತ ಸ್ವತಂತ್ರವಾಗಿರುವ ಸಂಸ್ಥೆ. ಸ್ವತಂತ್ರವಾಗಿ ತನಿಖೆ ಮಾಡುವ ಸಂಸ್ಥೆ . ಬಿಜೆಪಿ ಅವರಿಗೆ ಕಾನೂನಿನ ಮೇಲೆ ಗೌರವವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯವರು ಕೇಳಿದ್ದಕ್ಕೆ ಉತ್ತರ ಕೊಡಬೇಕು ಅನ್ನೋದು ಏನಿದೆ. ರಾಜ್ಯಪಾಲರು ಯಾರಿಂದ ತನಿಖೆ ಮಾಡಬೇಕೆಂದು ಹೇಳಿದ್ದಾರೆ, ಲೋಕಾಯುಕ್ತದಿಂದ ತಾನೆ, ಅದರಂತೆ ತನಿಖೆ ಆಗಿದೆ ಎಂದು ಟಾಂಗ್ ನೀಡಿದರು.

### ಬಿಜೆಪಿಯವರಿಗೆ ಕಾನೂನಿನ ಮೇಲೆ ಗೌರವವಿಲ್ಲ

ಲೋಕಾಯುಕ್ತ ತನಿಖೆ ಬಗ್ಗೆ ಬಿಜೆಪಿ ಟೀಕೆ ಕುರಿತು ಪ್ರತಿಕ್ರಿಯಿಸಿದ ಸಿಎಂ, ಬಿಜೆಪಿಯವರು ತನಿಖೆಯ ವಿರುದ್ಧವಾಗಿ ಇದ್ದಾರಾ..? ಬಿಜೆಪಿಯವರು ಯಾವುದಾದರೂ ಕೇಸ್ ಸಿಬಿಐಗೆ ಕೊಟ್ಟಿದ್ದಾರಾ..? ಲೋಕಾಯುಕ್ತ ಪೊಲೀಸ್ ಮಾಡಿದ್ದು ಯಾರು? ಬಿಜೆಪಿ ಜೆಡಿಎಸ್ ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಬಿಜೆಪಿಯವರಿಗೆ ಕಾನೂನಿನ ಮೇಲೆ ಗೌರವವಿಲ್ಲ. ಸುಳ್ಳು ಆರೋಪಗಳಿಗೆ ಕೋರ್ಟ್ ನಲ್ಲಿ ಉತ್ತರಿಸುವೆ ಎಂದು ಸಿಎಂ ತಿಳಿಸಿದರು.

### ಲಾಯರ್‌ಗಳು ಫೇಸ್ ಮಾಡ್ತಾರೆ

ಈ ಕೇಸ್‌ಗಳನ್ನು ನಮ್ಮ ಬಳಿ ಇರುವ ಲಾಯರ್‌ಗಳು ಫೇಸ್ ಮಾಡ್ತಾರೆ. ಸುಳ್ಳು ಆರೋಪಗಳು ಬಂದಾಗ ವಿಚಾರಣೆಗೆ ಹಾಜರಾಗಬೇಕಾಗಿದೆ. ನನ್ನ ಬಳಿ ಯಾವುದೇ ಡಾಕ್ಯುಮೆಂಟ್ ಇಲ್ಲ. ಇದು ನನಗೆ ಸಂಬಂಧವೇ ಇಲ್ಲ. ಕೋರ್ಟ್‌ನಲ್ಲಿ ತೀರ್ಮಾನ ಆಗುವವರೆಗೆ ಅದು ಆರೋಪಿ ಅಷ್ಟೇ. ಇದು ನನಗೆ ಕಪ್ಪು ಮಸಿ ಅಲ್ಲ, ಆರೋಪ ಅಷ್ಟೇ ಎಂದು ಸಿಎಂ ಸ್ಪಷ್ಟಪಡಿಸಿದರು.

ಸೈಟ್ ವಿಚಾರ ಎಲ್ಲವೂ ಕಾನೂನು ಪ್ರಕಾರವೇ ನಡೆದಿದೆ. ಬಿಜೆಪಿ ಜೆಡಿಎಸ್‌ನವರು ಸುಳ್ಳು ಆರೋಪ ಮಾಡಿದ್ದಾರೆ. ನಾವು ಸೈಟ್ ವಾಪಸು ನೀಡಿರೋದು ತಪ್ಪು ಮಾಡಿದ್ದೇವೆ ಅಂತಾ ಅಲ್ಲ. ನನ್ನ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ ಅಂತ ನನ್ನ ಪತ್ನಿ ತೀರ್ಮಾನ ತಗೊಂಡಿರೋದು.

-ಸಿದ್ದರಾಮಯ್ಯ ಮುಖ್ಯಮಂತ್ರಿ

### ಲೋಕಾಯುಕ್ತ ತನಿಖೆಯಿಂದ ಏನೂ ಆಗುವುದಿಲ್ಲ: ಬಿಎಸ್‌ವೈ

# ಮುಡಾ ಕೇಸ್ ಸಿಬಿಐಗೆ ವಹಿಸಲು ಆಗ್ರಹ

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ವಿರುದ್ಧ ಕೇಳಿಬಂದಿರುವ ಮುಡಾ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾಯುಕ್ತ ವಿಚಾರಣೆಗೆ ಒಳಪಟ್ಟಿದ್ದಾರೆ. ಲೋಕಾಯುಕ್ತ ತನಿಖೆಯಿಂದ ಏನೂ ಆಗುವುದಿಲ್ಲ ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಮುಖ್ಯಮಂತ್ರಿಗಳು ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಲೋಕಾಯುಕ್ತದ ವಿಚಾರಣೆಗೆ ಹಾಜರಾಗಿದ್ದಾರೆ ಎಂದು ಟೀಕಿಸಿದರು.

ಮುಡಾ ಹಗರಣದ ಸತ್ಯಾಸತ್ಯತೆ ಹೊರಬರಬೇಕು ಎಂದರೆ ಸಿಬಿಐ ತನಿಖೆ ಆಗಲೇಬೇಕು ಎಂದು ಎಲ್ಲರೂ ಹೇಳುತ್ತಿದ್ದಾರೆ. ನಾನು ಸಿಬಿಐ ತನಿಖೆಗೆ ಆಗ್ರಹಿಸುತ್ತೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನನ್ನ ರಾಜಕೀಯ ಜೀವನ ತೆರೆದ ಪುಸ್ತಕ ಎಂದೆಲ್ಲ ಹೇಳುತ್ತಿದ್ದಾರೆ. ಅವರು ಪ್ರಾಮಾಣಿಕರಾಗಿದ್ದರೆ, ಪ್ರಕರಣದ ಸತ್ಯಾಸತ್ಯತೆ ಹೊರಬರಬೇಕು ಎನ್ನುವ ಆಶಯವಿದ್ದರೆ ಕೂಡಲೇ ಸಿಬಿಐ ತನಿಖೆಗೆ ಆದೇಶಿಸಲಿ ಎಂದರು.

**ತಿಮ್ಮಾಪುರ ರಾಜೀನಾಮೆ ನೀಡಲಿ:** ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂದಿದೆ. ಆದ್ದರಿಂದ ಅವರು ಕೂಡಲೇ ರಾಜೀನಾಮೆ ನೀಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರ ಹೆಚ್ಚಾಗಿದೆ. ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಮದ್ಯ ಮಾರಾಟಗಾರರೇ ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಆದ್ದರಿಂದ ಅಬಕಾರಿ ಸಚಿವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ವಕ್ಫ್ ಆಸ್ತಿ ಕಬಳಿಕೆಯ ವಿರುದ್ಧ ಮಠಾಧೀಶರು, ಬಿಜೆಪಿ ನಾಯಕರು ಹೋರಾಟ ನಡೆಸಿದ್ದಾರೆ. ವಕ್ಫ್ ವಿವಾದಕ್ಕೆ ಕಾರಣರಾದ ಸಚಿವ ಜಮೀರ್ ಅಹ್ಮದ್ ಅವರಿಂದ ರಾಜೀನಾಮೆ ಪಡೆದು ವಕ್ಫ್ ಭೂ ಕಬಳಿಕೆಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

### ಕ್ಲೀನ್‌ಚಿಟ್ ಪಡೆಯಲು ತರಾತುರಿ

ಇದೇ ವಿಷಯವಾಗಿ ಹಾವೇರಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಲೋಕಾಯುಕ್ತ ಒತ್ತಡದಲ್ಲಿ ಕೆಲಸ ಮಾಡುತ್ತಿದೆ. ಮುಡಾ ಹಗರಣದ ಪ್ರಕರಣದಲ್ಲಿ ಲೋಕಾಯುಕ್ತ ಅಧಿಕಾರಿಗಳ ತನಿಖೆ ದಿಕ್ಕು ನೋಡಿದರೆ, ತರಾತುರಿಯಲ್ಲಿ ನೋಟಿಸ್ ನೀಡಿದ್ದಾರೆ ಎನಿಸುತ್ತಿದೆ. ಲೋಕಾಯುಕ್ತ ಸಂಸ್ಥೆ ಎಷ್ಟು ಬೇಗ ಕ್ಲೀನ್ ಚಿಟ್ ಕೊಡಬೇಕು ಎನ್ನುವುದನ್ನು ವಿಚಾರ ಮಾಡಿದೆ. ರಾಜ್ಯದ ಮುಖ್ಯಮಂತ್ರಿ ಆರೋಪಿ ಸ್ಥಾನದಲ್ಲಿದ್ದಾರೆ. ನ್ಯಾಯಾಲಯಕ್ಕೆ ಗೌರವಕ್ಕೆ ಕೊಡಬೇಕು ಎಂದರು. ಹಿಂದೆ ವಾಚ್ ಪ್ರಕರಣದಲ್ಲಿ, ಎಸಿಬಿ ರಚನೆ ಮಾಡಿ ತಾವು ಪ್ರಮಾಣಿಕರು ಅಂತಾ ಗುರುತಿಸಿಕೊಳ್ಳುತ್ತಿದ್ದಾರೆ. ತಾವು ಪ್ರಾಮಾಣಿಕರು ಅಂತಾ ತೋರಿಸುತ್ತಿದ್ದಾರೆ. ಲೋಕಾಯುಕ್ತ ತರಾತುರಿಯಲ್ಲಿ ವಿಚಾರಣೆ ಮಾಡಿ ಕ್ಲೀನ್ ಚಿಟ್ ಕೊಡಲು ದಿನೇಶ್ ಎನ್ನುವ ಅಧಿಕಾರಿಯನ್ನು ಬಚ್ಚಿಟ್ಟಿದ್ದಾರೆ ಎಂದು ಆರೋಪಿಸಿದರು.

**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.**
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 18/24–25 ದಿನಾಂಕ: 04.11.2024

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ, 2216–07–053–0–01–200 ವಸತಿ ಗೃಹಗಳು ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ಥಿ . 3054–03– 337–0–05–200 ರಾಜ್ಯ ಹೆದ್ದಾರಿಗಳ ನಿರ್ವಹಣೆ ಅಡಿಯಲ್ಲಿನ ಒಟ್ಟು 4 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW - 1,2 & 3 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.1.54 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.95.00 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 4 ಕಾಮಗಾರಿಗಳಿಗೆ (ಇಂ.ಸಂಖ್ಯೆ: 16488 (2ನೇ ಕರೆ),16596 ದಿನಾಂಕ:20.11.2024, ಇಂ.ಸಂಖ್ಯೆ:15752 (3ನೇ ಕರೆ) ದಿನಾಂಕ: 12.11.2024, ಇಂ.ಸಂಖ್ಯೆ:15973 (2ನೇ ಕರೆ) ದಿನಾಂಕ:13.11.2024 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

**ಸಹಿ/– ಕಾರ್ಯಪಾಲಕ ಇಂಜಿನಿಯರ್,**
**ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು**
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24–25/100/966

**GOVERNMENT OF KARNATAKA**
**ZILLA PANCHAYATH, BELLARY**
**Office of the Executive Engineer, P.R.E. Division, Bellary,**
**No. EE/PRED/BLY/AE-1/A11 Various Heads/TDR/2024-25/1184 Dt. 05.11.2024**

**Short Term Tender Notification**
**(Through KPPP Portal only)**

On behalf of Hon'ble Governor of Karnataka tenders are invited from the eligible contractors who have enrolled in Panchayath Raj Engineering Department for 06 work comprising of approved building, and Bridge works under KKRDB , MLC 2023-24, 2024-25 2210-00-101-0-36-(140), 2024-25 KPS School Special Development Works through KPPP portal. Contractors are required to submit the tender before 13.11.2024 at 4.30 PM by uploading the relevant documents through KPPP portal website **https://kppp.karnataka.gov.in** by downloading the formats for submission of tenders from 05.11.2024 to 13.11.2024 at 4.30 PM. Tenders will be opened through KPPP portal on 14.11.2024 at 5.30 PM. Any changes in the notification will be published KPPP website only. Accepting/rejection of tenders without assigning reason is reserved. Any details can be obtained in person at the office or through telephone No. 08392-266173.

**Sd/- Executive Engineer,**
**Panchayath Raj Engineering Division Ballari**
**DIPR/Ballari/585/KSMCA/2024-25**

**ತುಮಕೂರು ಮಹಾನಗರ ಪಾಲಿಕೆ, ತುಮಕೂರು**
ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ/ಆಶಾ/ಸಿಆರ್–24/2024–25 ದಿನಾಂಕ: 05.11.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999–2000 2000ರಂತೆ ಈ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು kppp.gov.in ನಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

**ಕಾಮಗಾರಿಯ ಹೆಸರು :** 1. ತುಮಕೂರು ಮಹಾನಗರಪಾಲಿಕೆಯಲ್ಲಿ ಡೇ–ನಲ್ಮ್ ಅಭಿಯಾನದ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಬೀದಿಬದಿ ವ್ಯಾಪಾರಸ್ಥರ ಬೆಂಬಲ ಕಾರ್ಯಕ್ರಮದಡಿ ಬೀದಿಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ಮುದ್ರಿಸಿ ಸರಬರಾಜು ಮಾಡುವ ಕಾಮಗಾರಿ. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) :** 08.10.
**ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) :** As per KPPP portal
**ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ :**
1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:06.11.2024 ರಿಂದ 13.11.2024 ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ:13.11.2024 ರಂದು ಸಾಯಂಕಾಲ 4.00 ಗಂಟೆವರೆಗೆ. 3. ಬಿಡ್‌ನ್ನು ತೆರೆಯುವ ದಿನಾಂಕ: 15.11.2024 ಬೆಳಿಗ್ಗೆ 11.30 ಗಂಟೆ.

**ಸಹಿ/–**ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹಾನಾಗರ ಪಾಲಿಕೆ, ತುಮಕೂರು.
DIPR/TUM/412/KSMCA/2024-25

# ನಿಷ್ಪಕ್ಷಪಾತ ತನಿಖೆ ನಡೆಯಲಿ

### ರುದ್ರಣ್ಣವರ ಕುಟುಂಬಕ್ಕೆ ನ್ಯಾಯ ಸಿಗಬೇಕು

**ಬೆಳಗಾವಿ:** ಬೆಳಗಾವಿಯ ತಹಸೀಲ್ದಾರ್ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಯಡವಣ್ಣವರ ಸಾವಿನ ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ಆಗಲಿ, ತಪ್ಪಿತಸ್ಥರಿಗೆ ಶಿಕ್ಷೆ ಆಗಲಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರುದ್ರಣ್ಣ ಯಡವಣ್ಣವರ ಸಾವಿನ ವಿಷಯ ಅತ್ಯಂತ ದುಃಖ ತರುವಂತಹದು. ಇದೊಂದು ದುರದೃಷ್ಟಕರ ಘಟನೆ. ಇಂತಹ ಘಟನೆಗಳು ನಡೆಯಬಾರದು. ರುದ್ರಣ್ಣವರ ಕುಟುಂಬಕ್ಕೆ ನ್ಯಾಯ ಸಿಗಬೇಕು ಎಂದು ಹೇಳಿದರು. ರುದ್ರಣ್ಣ ಸಾವಿನ ಘಟನೆ ಬಗ್ಗೆ ಮಾಧ್ಯಮಗಳಿಂದ ನಾನು ತಿಳಿದಿದ್ದೇನೆ. ಈ ಬಗ್ಗೆ ನನಗೂ ಹೆಚ್ಚೇನು ಮಾಹಿತಿ ಇಲ್ಲ. ಈ ಸಾವಿನ ಹಿಂದೆ ಲಕ್ಷ್ಮೀ ಹೆಬ್ಬಾಳ್ಕರ್ ಪಾತ್ರವಿಲ್ಲವೆಂದು ಅವರೇ ಹೇಳಿದ್ದಾರೆ. ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಏನೂ ಗೊತ್ತಿಲ್ಲ ಎಂದಿರುವ ವಿಡಿಯೊವನ್ನು ಮಾಧ್ಯಮಗಳ ಮೂಲಕ ಗಮನಿಸಿದ್ದೇನೆ. ಈ ಬಗ್ಗೆ ಸತ್ಯಾಸತ್ಯತೆ ಜನರಿಗೆ ತಿಳಿಯಬೇಕು. ಆ ಕುಟುಂಬಕ್ಕೆ ನ್ಯಾಯ ಸಿಗಬೇಕು ಎಂದರು.

ರುದ್ರಣ್ಣವರ ಸಾವಿನ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿ ಪ್ರತಿಭಟನೆ ಮಾಡುತ್ತಿದ್ದಾರೆಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿಯವರಿಗೆ ಪ್ರತಿಭಟನೆ ಮಾಡಬೇಡಿ ಎಂದು ಹೇಳಲು ಆಗುವುದಿಲ್ಲ. ಆದರೆ ಈ ವಿಷಯವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡಬಾರದು. ಸ್ವತಹ ರುದ್ರಣ್ಣನವರೇ ಹೇಳಿದ್ದಾರೆ ಈ ಬಗ್ಗೆ ಮೇಡಂ ಅವರ ಪಾತ್ರವಿಲ್ಲವೆಂದು. ಆದರೂ ವ್ಯರ್ಥ ಆರೋಪ ಮಾಡುವುದು ಸರಿಯಲ್ಲ ಎಂದು ಹೇಳಿದರು.

ಈ ಹಿಂದಿನ ಈಶ್ವರಪ್ಪನವರ ಪ್ರಕರಣಕ್ಕೂ ಮತ್ತು ಈ ಪ್ರಕರಣಕ್ಕೂ ಬಹಳ ವ್ಯತ್ಯಾಸವಿದೆ. ಈ ಸಾವಿನ ಪ್ರಕರಣ ಆದಷ್ಟು ಬೇಗ ತನಿಖೆಯಾಗಲಿ. ನಿಷ್ಪಕ್ಷಪಾತವಾದ ತನಿಖೆ ಆಗಬೇಕೆಂದು ಪೊಲೀಸ್ ತನಿಖಾಧಿಕಾರಿಗಳಿಗೂ ಮನವಿ ಮಾಡುತ್ತೇನೆ. ಸಾವಿಗೀಡಾದ ನೌಕರನ ಕುಟುಂಬಕ್ಕೆ ನ್ಯಾಯ ದೊರಕಬೇಕು.

-ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

### ಮೂವರ ವಿರುದ್ಧ ಪ್ರಕರಣ ದಾಖಲು

ತಹಸೀಲ್ದಾರ್ ಕಚೇರಿ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಯಡವಣ್ಣವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ. ತಹಸೀಲ್ದಾರ್ ಬಸವರಾಜ ನಾಗರಾಳ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪಿಎ ಸೋಮು ಮತ್ತು ನೌಕರ ಅಶೋಕ ಕಬ್ಬಲಿಗೇರ್ ಮೇಲೆ ಖಡೇಬಜಾರ್ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಾಗಿದೆ.

# ಅಹಿಂದ ವರ್ಗಗಳ ಹಿತಕಾಯಲು ಬದ್ಧ

### ಅಹಿಂದ ಸಂಘಟನೆ ಜಿಲ್ಲಾ ಶಾಖೆ ಉದ್ಘಾಟನೆ | ಶಾಸಕ ಪ್ರದೀಪ್ ಈಶ್ವರ್ ಅಭಿಮತ

ಚಿಕ್ಕಬಳ್ಳಾಪುರದಲ್ಲಿ ನಡೆದ ರಾಷ್ಟ್ರೀಯ ಅಹಿಂದ ಸಂಘಟನೆಯ ಜಿಲ್ಲಾ ಶಾಖೆಯ ಉದ್ಘಾಟನೆ ಮಾಡಿ ಶಾಸಕ ಪ್ರದೀಪ್ ಈಶ್ವರ್ ಮಾತನಾಡಿದರು.

**ಚಿಕ್ಕಬಳ್ಳಾಪುರ:** ಅಹಿಂದ ವರ್ಗಗಳ ಆಶೀರ್ವಾದ ಇರಲಿಲ್ಲ ಎಂದರೆ ನಾನು ಇವತ್ತು ಶಾಸಕನಾಗುತ್ತಿರಲಿಲ್ಲ. ನಿಮ್ಮೆಲ್ಲರ ಬೆಂಬಲ ಪ್ರೀತಿ ಅಭಿಮಾನದ ಕಾರಣವಾಗಿಯೇ ಕೇವಲ 25 ದಿನಗಳಲ್ಲಿ ಪೆರೇಸಂದ್ರದ ಅನಾಥ ಹುಡುಗ ಶಾಸಕ ಆಗಿದ್ದಾನೆ. ಅಹಿಂದ ವರ್ಗಗಳ ಹಿತಕಾಯಲು ನಾನು ಸದಾ ಸಿದ್ಧವಾಗಿದ್ದೇನೆ ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಬುಧವಾರ ರಾಷ್ಟ್ರೀಯ ಅಹಿಂದ ಸಂಘಟನೆಯ ಜಿಲ್ಲಾ ಶಾಖೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿ, ಕ್ಷೇತ್ರದ ಜನರಿಗೆ ನನ್ನ ಮೇಲೆ ಭಾರೀ ನಿರೀಕ್ಷೆಯಿದ್ದು ಇದನ್ನು ಈಡೇರಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದೇನೆ.ಗ್ರಾಮೀಣ ಪ್ರದೇಶದ ಮೂಲಭೂತ ಸೌಕರ್ಯಗಳ ವೃದ್ಧಿಗೆ ಮೊದಲ ಆದ್ಯತೆ ನೀಡುತ್ತಿದ್ದು ಸರಕಾರದಿಂದ ಅನುದಾನ ಖಾತರಿಪಡಿಸಿಕೊಂಡೇ ನಮ್ಮ ಶಾಸಕ ನಮ್ಮ ಊರಿಗೆ ಕಾರ್ಯಕ್ರಮ ನಡೆಸುತ್ತಿದ್ದೇನೆ. ಸುಮ್ಮನೆ ನಮ್ಮ ಊರಿಗೊಂದು ಭೇಟಿ ಕೊಡಿ ಎಂದು ನೀವು ಕೇಳುತ್ತೀರಿ.ಬಂದಾಗ ಬೇಡಿಕೆ ಈಡೇರಿಕೆಗೆ ಪಟ್ಟು ಹಿಡಿಯುತ್ತೀರಿ.ಹೀಗಾಗಿಯೇ ಅನುದಾನದ ಖಾತರಿಯ ಮೇಲೆಯೇ ಗ್ರಾಮಗಳ ಭೇಟಿ ಮಾಡುತ್ತಿದ್ದೇನೆ ಸುಮ್ಮನೆ ಬಂದರೆ ಉಪಯೋಗವಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಾಧ್ಯಕ್ಷ ಮುತ್ತಣ್ಣ ಶಿವಳ್ಳಿ, ಜಿಪಂ ಮಾಜಿ ಸದಸ್ಯ ಕೆ.ಎಂ.ಮುನೇಗೌಡ, ಗಂಗರೇಕಾಲುವೆ ನಾರಾಯಣಸ್ವಾಮಿ, ಮೈಸೂರು ಶಿವಣ್ಣ,ಬೀರಲಿಂಗೇಶ್ವರ ಪೂಜಾರಿ, ಎಂ.ಆನಂದ್, ತೋಪಡಾ ನಾಗರಾಜ್, ಕಾರಕೂರಪ್ಪ,ತೌಡು ಅಪ್ಪಾಲಣ್ಣ, ಎಂ.ವಿ.ಕೃಷ್ಣಪ್ಪ ಮತ್ತಿತರರಿದ್ದರು

ಅಹಿಂದ ನಾಯಕರಾಗಿ ಅಕಳಂಕ ಚರಿತ್ರೆ ಹೊಂದಿರುವ ಸಿದ್ದರಾಮಯ್ಯ ಅವರ ಸ್ಥಾನ ವನ್ನು ನಾನು ತುಂಬುತ್ತೇನೋ ಇಲ್ಲವೋ ಗೊತ್ತಿಲ್ಲ.ಆದರೆ ರಾಜಕಾರಣದಲ್ಲಿ ಇರು ವಷ್ಟು ಕಾಲ ಈ ವರ್ಗಗಳ ಕಾವಲುಗಾರ ನಾಗಿ ಕೆಲಸ ಮಾಡುವುದಂತೂ ಸತ್ಯ.ಅಧಿ ಕಾರ ಇರಲಿ ಇಲ್ಲದಿರಲಿ ಅಹಿಂದ ವರ್ಗಗಳ ಬಲವರ್ಧನೆಗಾಗಿ , ಸಂಘಟನೆಯನ್ನು ಬಲಿಷ್ಟವಾಗಿ ಕಟ್ಟಿ ಅದರ ಶಕ್ತಿಯಾಗಿ ನಿಲ್ಲುತ್ತೇನೆ. ಇದರಲ್ಲಿ ಯಾವುದೇ ಅನುಮಾನ ಬೇಡ.

-ಪ್ರದೀಪ್ ಈಶ್ವರ್ ಶಾಸಕ

## ಲಾರಿ, ಕಾರು ನಡುವೆ ಡಿಕ್ಕಿ: ದಂಪತಿ ಸಾವು

**ಗದಗ:** ಲಾರಿ ಮತ್ತು ಕಾರು ನಡುವೆ ಅಪಘಾತ ಸಂಭವಿಸಿದೆ. ಕಾರಿನಲ್ಲಿದ್ದ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇಬ್ಬರು ಮಕ್ಕಳು ಗಾಯ ಗೊಂಡಿರುವ ದಾರುಣ ಘಟನೆ ಗದಗ ಜಿಲ್ಲೆ ನರಗುಂದ ತಾಲೂಕಿನ ಭೈರನಹಟ್ಟಿ ಗ್ರಾಮದ ಬಳಿ ನಡೆದಿದೆ.

ಬಾಗಲಕೋಟೆ ಮೂಲದ ಸಿದ್ದರಾಮ ಹಾಗೂ ಹೇಮಾ ಮೃತ ದಂಪತಿ. ವೆಂಕಟೇಶ್ವರ್, ವೆಂಲ್ಲಿಕಾರ್ಜುನ್ ಹಾಗೂ ಸಹನಾ ಗಾಯಾಳುಗಳು ನರಗುಂದ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಮುಡಾ: ಕಾಂಗ್ರೆಸ್‌ಗೆ ಕಪ್ಪು ಚುಕ್ಕೆ

**ಕಲಬುರಗಿ:** ಮುಡಾ ಹಗರಣದ ಬೆಳವಣಿಗೆ ರಾಜ್ಯಕ್ಕೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಕಪ್ಪು ಚುಕ್ಕೆಯಾಗಿದೆ. ರಾಜ್ಯದ ಮುಖ್ಯಮಂತ್ರಿಯೊಬ್ಬರು ವಿಚಾರಣೆಗೆ ಹಾಜರಾಗುತ್ತಿರುವುದು ರಾಜ್ಯ ಇತಿಹಾಸದಲ್ಲೇ ಇದೆ ಮೊದಲಾಗಿದೆ. ಹಿಂತಹ ಘಟನೆ ನಡೆಯಬಾರದಿತ್ತು ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮುಡಾ ಹಗರಣದಲ್ಲಿ ಕಾಂಗ್ರೆಸ್ ಹೈಕಮಾಂಡ್ ಧೋರಣೆ ಸರಿಯಾಗಿಲ್ಲ. ಮುಡಾ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ಧೋರಣೆ ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣದಂತಾಗಿದೆ. ತಮ್ಮ ಮೇಲೆ ಕೇಸ್ ಬಿದ್ದಾಗ ರಾಜೀನಾಮೆ ಕೊಡುವುದಕ್ಕೆ ತಯಾರಿಲ್ಲ ಎಂದು ಮುಖ್ಯಮಂತ್ರಿ ವಿರುದ್ಧ ಗುಡುಗಿದರು.

## ಮುಡಾ; ಸಿಎಂ ವಿಚಾರಣೆ ಮುಕ್ತಾಯ

← ಮೊದಲಪುಟದಿಂದ

**25ಕ್ಕೂ ಹೆಚ್ಚು ಪ್ರಶ್ನೆ ಕೇಳಿದ ಪೊಲೀಸರು:** ಸುಮಾರು ಎರಡು ಗಂಟೆಗಳ ಕಾಲ ನಡೆದ ವಿಚಾರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ 25ಕ್ಕೂ ಹೆಚ್ಚು ಪ್ರಶ್ನೆಗಳನ್ನು ಪೊಲೀಸರು ಕೇಳಿ, ಉತ್ತರ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪ್ರಮುಖವಾಗಿ ನಿಮ್ಮ ಪತ್ನಿಗೆ ಮುಡಾದಿಂದ 14 ನಿವೇಶನ ಹಂಚಿಕೆಯಾಗಿ ರುವ ಬಗ್ಗೆ ನಿಮಗೆ ಗೊತ್ತಿದೆಯೇ? ಪ್ರಭಾವ ಬಳಸಿ ಈ ನಿವೇಶನಗಳನ್ನು ಮಂಜೂರು ಮಾಡಿಸಿದ್ದೀರಾ? ನಿಮ್ಮ ಪತ್ನಿಗೆ ನಿವೇಶನ ನೀಡಿದ ಸ್ಥಳವನ್ನು ನೀವು ವೀಕ್ಷಣೆ ಮಾಡಿದ್ದೀರಾ? ಮುಡಾ ನಿವೇಶನ ಹಂಚಿಕೆ ಹಗರಣ ಬಯಲಾಗುತ್ತಿದ್ದಂತೆಯೇ ನಿಮ್ಮ ಪತ್ನಿಗೆ ನಿವೇಶನ ವಾಪಸ್ ಮಾಡಲು ನೀವೇ ಸಲಹೆ ಮಾಡಿದ್ದೀರಾ? ಮುಡಾ ವಶಪಡಿಸಿಕೊಂಡಿರುವ ಜಮೀನಿಗೆ ಹಣ ನೀಡಿದರೆ ನಿವೇಶನ ವಾಪಸ್ ಕೊಡುತ್ತೇವೆ ಎಂದು ಹೇಳಿದ್ದಕ್ಕೆ ಕಾರಣ ಏನು? ಈ ನಿವೇಶನ ಹಂಚಿಕೆ ಪ್ರಕರಣದಲ್ಲಿ ನಿಮ್ಮ ಪತ್ನಿ, ಮಗನ ಪಾತ್ರ ಏನು? ಸೇರಿದಂತೆ ವಿವಿಧ ಪ್ರಶ್ನೆಗಳನ್ನು ಕೇಳಿದ್ದಾರೆ.

## ಪಾಲ್ ಭೇಟಿಗೆ ಕಾಂಗ್ರೆಸ್ ವಿರೋಧ

← ಮೊದಲಪುಟದಿಂದ

ಅಧ್ಯಕ್ಷರೊಂದಿಗೆ ಬರಬೇಕಾಗಿರುವುದು ಅವರ ಜವಾಬ್ದಾರಿ. ವೋಟ್ ಬ್ಯಾಂಕ್ ರಾಜಕಾರಣ ಮತ್ತು ತುಷ್ಟೀಕರಣದ ಹಿನ್ನೆಲೆಯಲ್ಲಿ ಸಮಿತಿಗೆ ವಿರೋಧ ವ್ಯಕ್ತಪಡಿಸುತ್ತಿರುವುದು ನಿರೀಕ್ಷಿತ ಎಂದರು.

ಸಮಿತಿ ಅಧ್ಯಕ್ಷರು ಕೇವಲ ಧರಣಿ ಕುಳಿತಿರುವ ಬಿಜೆಪಿಗರ ಅಹವಾಲು ಮಾತ್ರವಲ್ಲ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕುಳಿತು ರೈತರು, ಮಠಾಧೀಶರು, ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸಲಿದೆ. ಕಾಂಗ್ರೆಸ್ ಮುಖಂಡರು ಕೂಡ ತಮ್ಮ ಅಹವಾಲು ಸಲ್ಲಿಸಲು ಅವಕಾಶ ಇದೆ ಎಂದು ಹೇಳಿದರು.

ಪಾಲ್ ಅವರು ರಾಜ್ಯದಲ್ಲಿ ಸದ್ಯ ವಕ್ಫ್ ಸಂಬಂಧಿಸಿದಂತೆ ನಡೆದಿರುವ ನೈಜ ಸಂಗತಿ ಅರಿಯಲಿದ್ದಾರೆ. ಮುಂದೆ ಕಾಯ್ದೆ ತಿದ್ದುಪಡಿ ಮಾಡುವಾಗ ಅನುಕೂಲವಾಗಲಿದೆ. ಇದರಿಂದ ನ್ಯಾಯ ಸಿಗುವ ವಿಶ್ವಾಸ ಇದೆ ಎಂದರು.

## ಹಾಸನ: ತಾಯಿಯನ್ನೇ ಥಳಿಸಿ ಕೊಂದ ಮಗ

**ಹಾಸನ:** ಕುಡಿಯಲು ಹಣ ನೀಡದ ಕಾರಣಕ್ಕೆ ಮನಬಂದಂತೆ ಥಳಿಸಿ ತಾಯಿಯನ್ನೇ ಮಗ ಕೊಂದಿರುವ ಘಟನೆ ಹಾಸನ ಜಿಲ್ಲೆ, ಅರಕಲಗೂಡು ತಾಲೂಕಿನ ಮಧುರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಚಿಕ್ಕಮ್ಮ (61) ಪುತ್ರನಿಂದಲೇ ಕೊಲೆಯಾದ ದುರ್ದೈವಿ ತಾಯಿ. ಭರತ್ (26) ತಾಯಿಯನ್ನು ಕೊಂದ ಮಗ. ಕುಡಿತದ ದಾಸನಾಗಿದ್ದ ಭರತ್ ಪೈಂಟ್ ಕೆಲಸ ಮಾಡುತ್ತಿದ್ದ. ಈತ ಅ.29ರಂದು ಕಂಠಪೂರ್ತಿ ಕುಡಿದು ಮನೆಗೆ ಬಂದಿದ್ದು, ತಾಯಿ ಚಿಕ್ಕಮ್ಮ ಬಳಿ ಕುಡಿಯಲು ಹಣ ನೀಡುವಂತೆ ಒತ್ತಾಯಿಸಿದ್ದನು. ಹಣ ನೀಡಲು ನಿರಾಕರಿಸಿದ ಕಾರಣಕ್ಕೆ ಭರತ್ ಕೋಪಗೊಂಡು ಚಿಕ್ಕಮ್ಮನಿಗೆ ದೊಣ್ಣೆಯಿಂದ ಹೊಡೆದು, ತಲೆಯನ್ನು ಗೋಡೆಗೆ ಬಡಿದು ಪರಾರಿಯಾಗಿದ್ದಾನೆ. ಹಲ್ಲೆಗೊಳಗಾಗಿ ಚಿಕ್ಕಮ್ಮ ಕುಸಿದು ಬಿದ್ದಿರುವುದನ್ನು ಗ್ರಾಮಸ್ಥರು ಕಂಡು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಚಿಕ್ಕಮ್ಮ ಸಾವನ್ನಪ್ಪಿದ್ದಾರೆ.

## ಕಾಂಗ್ರೆಸ್‌ಗೊಂದು, ಬಿಜೆಪಿಗೊಂದು ಕಾನೂನು ಇದೆಯೇ: ಎಚ್ಕೆ ಪಾಟೀಲ್

**ಹುಬ್ಬಳ್ಳಿ:** ಪ್ರಕರಣದ ಆರೋಪದ ಕುರಿತು ತನಿಖೆ ವಿಚಾರದಲ್ಲಿ ಕಾಂಗ್ರೆಸ್‌ಗೊಂದು, ಬಿಜೆಪಿ ಗೊಂದು ಕಾನೂನು ಇದೆಯೇ? ಮುಡಾ ಹಗರಣದ ವಿಚಾರದಲ್ಲಿ ಬಿಜೆಪಿಗರು ಆರೋಪಕ್ಕೂ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ಹಗರಣದಲ್ಲಿ ಸಿಎಂ ರಾಜೀನಾಮೆ ನೀಡಿ ವಿಚಾರಣೆ ಎದುರಿಸಲಿ ಎಂಬುದು ಬಿಜೆಪಿಗರ ಒತ್ತಾಯವಾದರೆ, ಚುನಾವಣ ಬಾಂಡ್ ಹಗರಣದಲ್ಲಿ ಪ್ರಧಾನಿ ರಾಜೀನಾಮೆ ನೀಡಬೇಕಲ್ಲ ಎಂದು ಪ್ರಶ್ನಿಸಿದರು. 16,000 ಕೋಟಿ ಚುನಾವಣಾ ಬಾಂಡ್ ಹರಣದಲ್ಲಿ ಆರೋಪವಲ್ಲ. ಸುಪ್ರೀಂ ಕೋರ್ಟ್ ತನ್ನ ನಿಲುವು ವ್ಯಕ್ತಪಡಿಸಿದೆ.ಇಷ್ಟಾದರು ಪ್ರಧಾನಿ ರಾಜೀನಾಮೆ ನೀಡಿಲ್ಲ. ಇನ್ನು ಮುಡಾ ಹೆಸರಲ್ಲಿ ಸಿಎಂ ರಾಜೀನಾಮೆ ಕೇಳುವ ನೈತಿಕತೆ ಬಿಜೆಪಿಗರಿಗೇನಿದೆ.

ಮುಡಾ ಹಗರಣದಲ್ಲಿ ಲೋಕಾಯುಕ್ತ ತನಿಖೆ ಬಗ್ಗೆ ಬಿಜೆಪಿಗರಿಗೆ ಶಂಕೆ ಯಾಕೆ ವ್ಯಕ್ತವಾಗುತ್ತಿದೆ ಗೊತ್ತಿಲ್ಲ. ಲೋಕಾಯುಕ್ತ ಅಧಿಕಾರಿಗಳ ಮೇಲೆ ಸಿಎಂ ಪ್ರಭಾವ ಬೀರುತ್ತಾರೆ ಎನ್ನುವುದಾದರೆ ಕೇಂದ್ರ ಸಚಿವರ ವಿರುದ್ಧದ ಹಗರಣದ ಬಗ್ಗೆ ಯಾರು ತನಿಖೆ ನಡೆಸಬೇಕು ಎಂದು ಪ್ರಶ್ನಿಸಿದರು.

ವಕ್ಫ್ ಕುರಿತಾಗಿ ಬಿಜೆಪಿ ಅನಗತ್ಯ ರಾಜಕೀಯ ಮಾಡುತ್ತಿದೆ. ಉಪ ಚುನಾವಣೆ ಕಾರಣಕ್ಕೆ ಅದನ್ನು ದೊಡ್ಡದಾಗಿಸಲು ಮುಂದಾಗಿದೆ. ವಕ್ಫ್ ಪ್ರಕರಣದಲ್ಲಿ ಯಾವ ಕಾಯ್ದೆ ಉಲ್ಲಂಘನೆ ಆಗಿದೆ ಎಂದು ಸಂಸದೀಯ ಜಂಟಿ ಸಮಿತಿ ಬರುತ್ತಿದೆಯೋ ಗೊತ್ತಿಲ್ಲ.ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ.

-ಎಚ್.ಕೆ.ಪಾಟೀಲ ಸಚಿವ

## 3 ಮಕ್ಕಳನ್ನು ನದಿಗೆ ಎಸೆದು ವ್ಯಕ್ತಿ ಆತ್ಮಹತ್ಯೆ

**ಗದಗ:** ಕೌಟುಂಬಿಕ ಕಲಹದ ಕಾರಣಕ್ಕೆ ವ್ಯಕ್ತಿಯೊಬ್ಬ ಮೂರು ಮಕ್ಕಳನ್ನು ನದಿಗೆ ಎಸೆದು, ಬಳಿಕ ತಾನೂ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಕೊರ್ಲಹಳ್ಳಿ ಸಮೀಪ ಮಂಗಳವಾರ ಸಂಜೆ ನಡೆದಿದೆ.

ತಾಲೂಕಿನ ಮಕ್ತುಂಪುರ ಗ್ರಾಮದ ಮಂಜುನಾಥ ಅರಕೇರಿ (41), ಮಕ್ಕಳಾದ ಧನ್ಯಾ (6), ಪವನ್ (4) ಹಾಗೂ ಪತ್ನಿಯ ಅಣ್ಣನ ಮಗ ವೇದಾಂತ್ (4) ಮೃತಪಟ್ಟವರು. ಮದ್ಯವ್ಯಸನಿಯಾಗಿದ್ದ ಮಂಜುನಾಥ ಪ್ರತಿದಿನ ಕುಡಿದು ಬಂದು ಪತ್ನಿಯೊಂದಿಗೆ ಜಗಳವಾಡುತ್ತಿದ್ದ. ಕೌಟುಂಬಿಕ ಕಲಹವೇ ಘಟನೆಯೇ ಕಾರಣ ಎನ್ನಲಾಗಿದೆ. ಮುಂಡರಗಿ ಹಾಗೂ ಹೂವಿನಹಡಗಲಿ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ದೇಹ ಪತ್ತೆಗೆ ಶೋಧ ಕೈಗೊಂಡರು. ಮಂಗಳವಾರ ಮೃತ ದೇಹಗಳು ಪತ್ತೆಯಾಗಲಿಲ್ಲ. ಬುಧವಾರ ಬೆಳಗ್ಗೆ ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿಯು ಸ್ಥಳೀಯ ಕೊರ್ಲಹಳ್ಳಿ ಗ್ರಾಮದ ಮೀನುಗಾರರ ನೆರವಿನೊಂದಿಗೆ ಶೋಧ ಕಾರ್ಯ ಕೈಗೊಂಡಿದ್ದಾರೆ. ಈವರೆಗೂ ಮೃತ ದೇಹಗಳು ಪತ್ತೆಯಾಗಿಲ್ಲ.

# ಉಪ ಕದನ

## ಟ್ವೀಟೂ-ಖಾರಾ

**ಬಿ.ಎಸ್.ಯಡಿಯೂರಪ್ಪ**, ಮಾಜಿ ಸಿಎಂ

ಲೋಕಾಯುಕ್ತದೆದುರು ಸಿದ್ದರಾಮಯ್ಯನವರು ವಿಚಾರಣೆಗೆ ಹಾಜರಾಗಿದ್ದಾರೆ. ಈ ತನಿಖೆಯಿಂದ ಯಾವುದೇ ಪ್ರಯೋಜನವಿಲ್ಲ. ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಸಿದ್ದರಾಮಯ್ಯ ಅವರು ಭ್ರಷ್ಟಾಚಾರದಲ್ಲಿ ಮುಳುಗಿರುವುದು ಎಲ್ಲರಿಗೂ ತಿಳಿದಿದೆ. ನನ್ನ ಜೀವನ ತೆರೆದ ಪುಸ್ತಕ ಎನ್ನುತ್ತಿದ್ದ ಸಿದ್ದರಾಮಯ್ಯ ಅವರು ಲೋಕಾಯುಕ್ತದ ಬದಲು ಸಿಬಿಐ ತನಿಖೆ ಎದುರಿಸಲಿ.

**ಸೋಮಶೇಖರ್.ಬಿ**

ಸಾರ್, ಸಿಬಿಐ ಕೇಸ್ ತೆಗೆದುಕೊಳ್ಳಬೇಕು, ನಾವೂ ಒಪ್ಪುತ್ತೇವೆ. ನೀವು ಅಧಿಕಾರಕ್ಕೆ ಬಂದರೆ ಎಸ್ಐಟಿ, ಲೋಕಾಯುಕ್ತ ಮತ್ತು ಇತರ ರಾಜ್ಯ ತನಿಖಾ ತಂಡಗಳನ್ನು ವಿಸರ್ಜಿಸುತ್ತೀರಾ. ಸಿಬಿಐ ತನಿಖೆಯಲ್ಲಿ ಕೇಂದ್ರ ಸರಕಾರ ಮಧ್ಯಪ್ರವೇಶಿಸುವುದಿಲ್ಲವೇ, ಕೇಂದ್ರದಲ್ಲಿ ಎನ್‌ಡಿಎ ಆಡಳಿತದಲ್ಲಿಲ್ಲದಿದ್ದರೆ ಅದೇ ರೀತಿ ಸಲಹೆ ನೀಡುತ್ತೀರಾ?.





ಗುರುವಾರದ ಅತಿಥಿ:
ಡಾ. ಮಲ್ಲಿಕಾರ್ಜುನ ಡಂಬಳ

ವಿಷಯ:
ಮನೋ ಒತ್ತಡದ BPಗೆ ಮಾತ್ರೆಗಳು ಬೇಕೇ? ಬೇಡವೇ?

ಸಂಜೆ: 06.55 ರಿಂದ 08.15 ರವರೆಗೆ

vishwavani.news


## ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ :** ದಾವಣಗೆರೆ

**ಸಮಸ್ಯೆಯೇನು..?**

- ದಾವಣಗೆರೆ ಜಿಲ್ಲೆಯ ಲೋಕಿಕೆರೆ ರಸ್ತೆ ಗುಂಡಿಮಯವಾಗಿದ್ದು, ವಾಹನ ಸವಾರರು ಸಂಚರಿಸಲು ಸಾಧ್ಯವಿಲ್ಲ ಸ್ಥಿತಿ ನಿರ್ಮಾಣ.
- **ಇಲಾಖೆ:** ಲೋಕೋಪಯೋಗಿ ಇಲಾಖೆ
- **ಪರಿಹಾರ:** ಲೋಕಿಕೆರೆ ರಸ್ತೆಯಲ್ಲಿನ ತಗ್ಗು, ಗುಂಡಿಗಳು ಮುಚ್ಚಿಸಲು ಅಗತ್ಯ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ. ಕಾಲಮಿತಿಯಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಭರವಸೆ.

### ಕೂಡ್ಲೂರು ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಭರ್ಜರಿ ಪ್ರಚಾರ

# ಕಣ್ಣೀರಿಡುವುದು ಜೆಡಿಎಸ್ ಟ್ರೇಡ್‌ಮಾರ್ಕ್: ಸಿಎಂ ಸಿದ್ದು

**ಚನ್ನಪಟ್ಟಣ:** ಕಣ್ಣೀರು ಹಾಕುವುದು ಜೆಡಿಎಸ್ ಪಕ್ಷದ ಟ್ರೇಡ್‌ಮಾರ್ಕ್, ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ನಂತರ ಇದೀಗ ನಿಖಿಲ್ ಅಳುತ್ತಿದ್ದಾರೆ, ಅಳುವುದು ನಮ್ಮ ವಂಶದ ಪರಂಪರೆ, ನೀನೂ ಅಳುವುದಕ್ಕೆ ಶುರುಮಾಡು ಎಂದು ನಿಖಿಲ್ ಅವರಿಗೂ ಹೇಳಿಕೊಟ್ಟಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಲೇವಡಿ ಮಾಡಿದರು.

ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಪ್ರಚಾರ ಸಭೆಯಲ್ಲಿ ಮಾತನಾಡಿ, ನಮ್ಮಲ್ಲಿ ಅಳುವ ಗಂಡಸನ್ನು ನಂಬಬಾರದು ಎನ್ನುವ ಮಾತಿದೆ, ಚುನಾವಣೆ ಸಮಯದಲ್ಲಿ ಭಾವನಾತ್ಮಕವಾಗಿ ಜನರನ್ನು ಸೆಳೆಯಲು ಕಣ್ಣೀರು ಹಾಕುತ್ತಾರೆ, ಇದನ್ನು ಜನತೆ ನಂಬಬಾರದು, ಸೋಲುತ್ತೇವೆ ಎಂಬುದು ಅವರಿಗೆ ಈಗಾಗಲೇ ಗೊತ್ತಾಗಿದೆ ಅದಕ್ಕಾಗಿ ಅಳುವುದಕ್ಕೆ ಶುರುಮಾಡಿದ್ದಾರೆ ಎಂದರು.

ಎಚ್.ಡಿ.ದೇವೇಗೌಡ ಅವರು ಮೊಮ್ಮಗನನ್ನು ಗೆಲ್ಲಿಸಿ ನಾಲ್ಕೈದು ದಿನಗಳಿಂದ ಇಲ್ಲೇ ಇದ್ದಾರೆ. ಕಣ್ಣೀರು ಹಾಕುತ್ತಾರೆ ಏಕೆಂದು ಕೇಳಿದರೆ ಕಣ್ಣೀರು ಕಟುಕರಿಗೆ ಬರುವುದಿಲ್ಲ, ಹೃದಯವಂತರಿಗೆ ಮಾತ್ರ ಬರುತ್ತದೆ ಎನ್ನುತ್ತಾರೆ. ಅವರ ಮೊಮ್ಮಗ ಹಾಸನದಲ್ಲಿ ನೂರಾರು ಹೆಣ್ಣುಮಕ್ಕಳ ಕಣ್ಣೀರು ಹಾಕಿಸಿದ್ದಾನೆ. ಅಲ್ಲಿಗೆ ಹೋಗಿ ಯಾಕೆ ಇವರು ಕಣ್ಣೀರು ಹಾಕಲಿಲ್ಲ, ಚನ್ನಪಟ್ಟಣದಲ್ಲಿ ಮಾತ್ರ ಕಣ್ಣೀರು ಬರುತ್ತದೆಯೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದರು, ಈಗ ಕೇಂದ್ರ ಸಚಿವರಾಗಿದ್ದಾರೆ, ಅಧಿಕಾರವಿದ್ದಾಗ ಏನೂ ಮಾಡುವುದಿಲ್ಲ, ಚುನಾವಣೆ ಬಂದಾಗ ಮಾತ್ರ ಜನರ ಮುಂದೆ ಕಣ್ಣೀರು ಹಾಕುತ್ತಾರೆ. ಚನ್ನಪಟ್ಟಣ ಕ್ಷೇತ್ರಕ್ಕೆ ಅವರ ಕೊಡುಗೆ ಏನೂ ಇಲ್ಲ, ನಾನು 500 ಕೋಟಿ ರು.ಗಳಿಗೂ ಹೆಚ್ಚಿನ ಅನುದಾನವನ್ನು ಈ ಕ್ಷೇತ್ರಕ್ಕೆ ನೀಡಿದ್ದೇನೆ. ಯೋಗೇಶ್ವರ್ ಈ ಕ್ಷೇತ್ರವನ್ನು ನೀರಾವರಿಯನ್ನಾಗಿಸಿದ್ದಾರೆ, ಅವರನ್ನು ಗೆಲ್ಲಿಸಿಕೊಟ್ಟು ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದರು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಅವರನ್ನು ಗೆಲ್ಲಿಸುವ ಮೂಲಕ ಸರಕಾರಕ್ಕೆ ಮತ್ತಷ್ಟು ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಸಚಿವರುಗಳಾದ ರಾಮಲಿಂಗಾರೆಡ್ಡಿ, ಎಚ್.ಸಿ. ಮಹದೇವಪ್ಪ, ಸುಧಾಕರ್, ವೆಂಕಟೇಶ್ ಮಾಜಿ ಸಂಸದ ಡಿ.ಕೆ. ಸುರೇಶ್ ಸೇರಿದಂತೆ ಹಲವು ಶಾಸಕರು ಭಾಗವಹಿಸಿದ್ದರು.



ಚನ್ನಪಟ್ಟಣದ ಕೂಡ್ಲೂರು ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು.

ಮುಂದಿನ ಮೂರೂವರೆ ವರ್ಷ ನಮ್ಮ ಸರಕಾರ ಇರುತ್ತದೆ. ಕುಮಾರಸ್ವಾಮಿ ಅವರ ಸರಕಾರ ಬರುವುದಿಲ್ಲ, ಯೋಗೇಶ್ವರ್ ಅವರನ್ನು ಗೆಲ್ಲಿಸಿದರೆ ಇನ್ನೂ ಹೆಚ್ಚಿನ ಅನುದಾನ ಕೊಡುತ್ತೇನೆ. ನಾವು ಸುಮ್ಮನೆ ಮತ ಕೇಳುತ್ತಿಲ್ಲ, ಕೆಲಸ ಮಾಡಿದ್ದೇವೆ, ಕೂಲಿ ಕೇಳುತ್ತಿದ್ದೇವೆ. ಐದು ಗ್ಯಾರಂಟಿ ಅನುಷ್ಠಾನಗೊಳಿಸಿದ್ದೇವೆ. ಮಹಿಳೆಯರಿಗೆ ಶಕ್ತಿ ಯೋಜನೆ, ಗೃಹಲಕ್ಷ್ಮಿ ಯೋಜನೆ ಸಹಕಾರಿಯಾಗಿವೆ.

-**ಸಿದ್ದರಾಮಯ್ಯ**, ಮುಖ್ಯಮಂತ್ರಿ

ಚನ್ನಪಟ್ಟಣ ತಾಲೂಕಿನ ನೀರಾವರಿ ಯೋಜನೆ ಸಾಕಾರಕ್ಕೆ 220ಕೋಟಿ ರು. ಹಣ ಕೊಟ್ಟಿದ್ದು ಸಿಎಂ ಸಿದ್ದರಾಮಯ್ಯ ಅವರು. ಈಗಲೂ 500 ಕೋಟಿ ರು. ಅನುದಾನ ಕೊಟ್ಟಿದ್ದಾರೆ. ತಾಲೂಕಿಗೆ 5000 ಮನೆಗಳನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ಗ್ಯಾರಂಟಿ ಯೋಜನೆಗಳು ಪ್ರತಿ ಮನೆಗೆ ತಲುಪುತ್ತಿವೆ. ಅಭಿವೃದ್ಧಿ ಮಾಡಿರುವುದಾಗಿ ಹೇಳಿಕೊಂಡು ತಿರುಗುತ್ತಿರುವ ವಿರೋಧಿಗಳ ಕಣ್ಣೀರಿಗೆ ಬಲಿಯಾಗಬೇಡಿ. ಮುಂದೆಯೂ ಸರ್ಕಾರ ಇರುತ್ತದೆ, ಸಮಗ್ರ ಅಭಿವೃದ್ಧಿಗೆ ನನ್ನನ್ನು ಗೆಲ್ಲಿಸಿಕೊಡಿ.

-**ಸಿ.ಪಿ.ಯೋಗೇಶ್ವರ್**, ಕಾಂಗ್ರೆಸ್ ಅಭ್ಯರ್ಥಿ.

### ಅಳುವುದರಿಂದ ಕೆರೆಗಳಿಗೆ ನೀರು ತುಂಬುತ್ತಾ?

ರಾಜಕೀಯಕ್ಕೆ ಬರುವುದು ಸೇವೆ ಮಾಡಲಿಕ್ಕೆ, ನಾವೇನು ಅರ್ಜಿ ಹಾಕಿಕೊಂಡು ಬಂದಿದ್ದೆವಾ, ನಾವಾಗಿಯೇ ಸೇವೆ ಮಾಡಲು ಬಂದಿದ್ದೇವೆ, ಬಂದ ಮೇಲೆ ಜನರ ಸೇವೆ, ಕ್ಷೇತ್ರದ ಅಭಿವೃದ್ಧಿ ಮಾಡಬೇಕಿರುವುದು ನಮ್ಮ ಕರ್ತವ್ಯ. ಅಳುವುದರಿಂದ ಕೆರೆಗಳಿಗೆ ನೀರು ತುಂಬುತ್ತಾ, ಜನರ ಕಷ್ಟ ಸುಖ ಸರಿಯಾಗುತ್ತದೆಯಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

- ಜೆಡಿಎಸ್ ನಾಯಕರ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ
- ಚುನಾವಣೆ ಸಮಯದಲ್ಲಿ ಜನರನ್ನು ಸೆಳೆಯಲು ಕಣ್ಣೀರು.
- ಚನ್ನಪಟ್ಟಣ ಕ್ಷೇತ್ರಕ್ಕೆ ಕುಮಾರ ಸ್ವಾಮಿ ಕೊಡುಗೆ ಏನೂ ಇಲ್ಲ

### ಚುನಾವಣೆ ಹೊತ್ತಿನಲ್ಲಿ ಆರೋಪಗಳು ಸಾಮಾನ್ಯ: ಡಿಸಿಎಂ ಡಿ.ಕೆ. ಶಿವಕುಮಾರ್

# ಶಿಗ್ಗಾವಿಯಲ್ಲಿ ಕಾಂಗ್ರೆಸ್ ಗೆಲುವು ಖಚಿತ:ಡಿಕೆಶಿ

**ಹುಬ್ಬಳ್ಳಿ:** ಶಿಗ್ಗಾವಿ ಕ್ಷೇತ್ರವನ್ನು ಕಾರ್ಯಕರ್ತರಿಗೆ ಬಿಟ್ಟುಕೊಡುತ್ತೇವೆ ಎಂದು ಹೇಳಿದ್ದರಂತೆ, ಕೊಟ್ಟ ಮಾತಿನಂತೆ ಬಿಜೆಪಿಯವರು ನಡೆದು ಕೊಳ್ಳಲಿಲ್ಲವಂತೆ. ಹೀಗಾಗಿ ಮತದಾರರು ಸಹ ಬಿಜೆಪಿ ಮೇಲೆ ಆಕ್ರೋಶಗೊಂಡಿದ್ದು, ಕಾಂಗ್ರೆಸ್ ಶಿಗ್ಗಾವಿಯಲ್ಲಿ ಗೆಲ್ಲುವುದು ಖಚಿತ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಗಳಿಸಿದ ಮತಕ್ಕಿಂತ ಹೆಚ್ಚಿನ ಮತಗಳಿಂದ ಈ ಉಪಚುನಾವಣೆಯನ್ನು ನಾವು ಗೆಲ್ಲುತ್ತೇವೆ ಎಂದು ಹೇಳಿದರು.

**ಚುನಾವಣೆ ಹೊತ್ತಿನಲ್ಲಿ ಆರೋಪಗಳು ಸಾಮಾನ್ಯ:** ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಪ್ತನ ಹೆಸರನ್ನು ಬರೆದಿಟ್ಟು ಎಸ್‌ಡಿಎ ಆತ್ಮಹತ್ಯೆ ಪ್ರಕರಣದಿಂದ ಹಾಗೂ ಇತರೇ ಭ್ರಷ್ಟಾಚಾರ ಆರೋಪಗಳಿಂದ ಸರಕಾರಕ್ಕೆ ಮುಜುಗರವಾಗುತ್ತಿಲ್ಲವೇ ಎಂದು ಕೇಳಿದಾಗ, ಚುನಾವಣೆ ಹೊತ್ತಿನಲ್ಲಿ ಇಂತಹ ಆರೋಪಗಳು ಸಾಮಾನ್ಯ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸುತ್ತಾರೆ. ಸಚಿವರ ಆಪ್ತರಾಗಲಿ, ನೀವಾಗಲಿ, ನಾನಾಗಲಿ, ರಸ್ತೆಯಲ್ಲಿ ಹೋಗುವ ಯಾರಾದರಾಗಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

**ಬಿಜೆಪಿಯವರಿಗೆ ಯಾರ ಮೇಲೆ ನಂಬಿಕೆಯಿದೆ?:** ಲೋಕಾಯುಕ್ತದವರು ಮತ್ತು ಮುಖ್ಯಮಂತ್ರಿಗಳು ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿದ್ದಾರೆ ಎನ್ನುವ ಆರ್. ಅಶೋಕ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಲೋಕಾಯುಕ್ತವನ್ನು ಯಾರ ಕಾಲದಲ್ಲಿ ನೇಮಕ ಮಾಡಲಾಗಿದೆ ಎಂಬುದು ತಿಳಿದಿದೆಯೇ? ಬಿಜೆಪಿ ಕಾಲದಲ್ಲಿ ನೇಮಕವಾದ ಅವರ ಬಗ್ಗೆ ಅವರಿಗೇ ನಂಬಿಕೆ ಇಲ್ಲ ಅಂದರೆ, ಇನ್ನು ಯಾರ ಮೇಲೆ ನಂಬಿಕೆ ಇದೆ ಅವರಿಗೆ ಎಂದರು.

ಮುಖ್ಯಮಂತ್ರಿಗಳು ಲೋಕಾಯುಕ್ತಕ್ಕೆ ಗೌರವ ಕೊಟ್ಟು, ಅಧಿಕಾರಿಗಳು ಕರೆದರು ಎಂದು ಅವರ ಕಚೇರಿಗೆ ಹೋಗಿ ಉತ್ತರ ಕೊಟ್ಟು ಬಂದಿದ್ದಾರೆ. ಕಾನೂನಿಗೆ ಗೌರವ ಕೊಡುವ ಮುಖ್ಯಮಂತ್ರಿ ರಾಜ್ಯದಲ್ಲಿ ಇದ್ದಾರೆ ಎಂದು ನೀವೆಲ್ಲರೂ ಸಂತೋಷ ಪಡಬೇಕು.

**ಡಿ.ಕೆಶಿವಕುಮಾರ್**, ಉಪಮುಖ್ಯಮಂತ್ರಿ

- ಲೋಕಸಭಾ ಚುನಾವಣೆಯಲ್ಲಿ ಗಳಿಸಿದ ಮತಕ್ಕಿಂತ ಹೆಚ್ಚಿನ ಮತಗಳಿಂದ ಈ ಉಪಚುನಾವಣೆಯನ್ನು ನಾವು ಗೆಲ್ಲುತ್ತೇವೆ.
- ಬಿಜೆಪಿ ನಾಯಕರ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ

### ಆರ್.ಅಶೋಕ್ ಮಾತು ಖಂಡನೀಯ

ಆರ್. ಅಶೋಕ್ ಅವರು ಮ್ಯಾಚ್ ಫಿಕ್ಸಿಂಗ್ ಎನ್ನುವ ಪದ ಬಳಸಿರುವುದು ನ್ಯಾಯಾಂಗ ಮತ್ತು ನ್ಯಾಯಪೀಠಕ್ಕೆ ಮಾಡಿರುವ ಅಪಮಾನ. ಇದು ಸಾಂವಿಧಾನಿಕ ಹುದ್ದೆಗಳಾದ ಲೋಕಾಯುಕ್ತ ಮತ್ತು ಅಧಿಕಾರಿಗಳ ಸ್ಥಾನಕ್ಕೆ ದೊಡ್ಡ ಅಗೌರವ. ಇವು ರಾಜಕೀಯದವರು ನೇಮಕ ಮಾಡುವ ಹುದ್ದೆಗಳಲ್ಲ, ಸಾಂವಿಧಾನಿಕ ಹುದ್ದೆಗಳು. ಅಶೋಕ್ ಅವರು ನ್ಯಾಯಾಲಯಗಳ ವಿರುದ್ಧ ಹೀಗೆ ಮಾತನಾಡಬಾರದು. ಅಶೋಕ ಅವರು, ತಾವೇ ಸಾಂವಿಧಾನಿಕ ಸ್ಥಾನದಲ್ಲಿ ಕುಳಿತು, ಮತ್ತೊಂದು ಸಾಂವಿಧಾನಿಕ ಹುದ್ದೆಯ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನೀಯ. ಆರ್. ಅಶೋಕ್ ಅವರ ಮೇಲೆ ಲೋಕಾಯುಕ್ತವು ಕ್ರಮ ತೆಗೆದುಕೊಳ್ಳಬೇಕು ಎಂದು ಡಿಸಿಎಂ ಡಿಕೆಶಿ ಆಗ್ರಹಿಸಿದರು.

### ನಿಖಿಲ್ ಕುಮಾರಸ್ವಾಮಿ ಪರ ಎಚ್.ಡಿ.ದೇವೇಗೌಡ ಬಿರುಸಿನ ಪ್ರಚಾರ

# ರಾಜ್ಯದಲ್ಲಿ ಏಳು ಅಣೆಕಟ್ಟು ಕಟ್ಟಿದ್ದೇನೆ

**ರಾಮನಗರ:** ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿ ವರ್ಷ ರೈತರ ಖಾತೆಗೆ ಹಣ ಜಮೆ ಮಾಡುತ್ತಾರೆ. ಎರಡು ರೂಪಾಯಿಗೆ ಅಕ್ಕಿ, ಮೂರು ರೂಪಾಯಿಗೆ ಗೋಧಿ, ಸಕ್ಕರೆ ಕೊಟ್ಟ ವ್ಯಕ್ತಿ ನಿಮ್ಮ ಮುಂದೆ ಕೂತಿದ್ದೇನೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹೇಳಿದರು.

ಚನ್ನಪಟ್ಟಣ ತಾಲೂಕಿನ ತಿಟ್ಟಮಾರನಹಳ್ಳಿ, ಮಾಕಳಿ, ನಾಗವಾರ, ಬೇವೂರು ಪ್ರದೇಶಗಳಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ ಬಿರುಸಿನ ಪ್ರಚಾರ ನಡೆಸಿದ ಅವರು, ಈಗ ಇರುವವರು ಅನೇಕರು ಚಿಕ್ಕ ಹುಡುಗರು, ಪುಸ್ತಕ ಓದಬೇಕು. ಈ ಗೌಡ ಏನು ಮಾಡಿದ್ದಾನೆ ಗೊತ್ತಾಗುತ್ತದೆ, ಅಲಮಟ್ಟಿ ಸೇರಿ ಏಳು ಅಣೆಕಟ್ಟು ಕಟ್ಟಿದ್ದೇನೆ ಎಂದರು.

ಐದು ಗ್ಯಾರಂಟಿ ಕೊಟ್ಟಿದ್ದಾರಂತೆ, ಇದರಲ್ಲಿ ಒಂದು ಗ್ಯಾರಂಟಿಗೆ ತೊಂದರೆ ಇದೆ ಎಂದು ಒಬ್ಬ ಹೇಳುತ್ತಿದ್ದಾನೆ, ಹದಿನೇಳು ಕೆರೆಗಳಿಗೆ ನೀರು ತುಂಬಿಸಿದ್ದೇನೆ ಎಂದು ಒಬ್ಬ ವ್ಯಕ್ತಿ ಹೇಳುತ್ತಿದ್ದಾನೆ ಎಂದು ಡಿ.ಕೆ.ಶಿವಕುಮಾರ್ ಹಾಗೂ ಸಿ.ಪಿ. ಯೋಗೇಶ್ವರ್ ಅವರನ್ನು ಪರೋಕ್ಷವಾಗಿ ಛೇಡಿಸಿದ ದೇವೇಗೌಡ ಅವರು, ನೀರು ತುಂಬಿಸಲು ಮೂಲ ಕಾರಣವಾದ ಇಗ್ಗಲೂರು ಅಣೆಕಟ್ಟು ಕಟ್ಟಿಸಿದವರು ಯಾರು ಎಂದು ಪ್ರಶ್ನಿಸಿದರು.

ಚನ್ನಪಟ್ಟಣ ತಾಲೂಕಿನ ತಿಟ್ಟಮಾರನಹಳ್ಳಿ ಪ್ರದೇಶಗಳಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಪ್ರಚಾರ ನಡೆಸಿದರು.

### ಕೇವಲ ಬಾಯಿ ಮಾತಿನಲ್ಲಿ ಮಾತ್ರ ಭಗೀರಥ

ಕೇವಲ ಬಾಯಿ ಮಾತಿನಲ್ಲಿ ಮಾತ್ರ ಭಗೀರಥ. ಕೃತಿಯಲ್ಲಿ ಅಲ್ಲ. ನಾನು ಸದಾನಂದಗೌಡ ಕೃತಿಯಲ್ಲಿ ಮಾಡಿ ತೋರಿಸಿದ್ದೇವೆ. ಸುಳ್ಳು ಹೇಳಿಕೊಂಡು ತಿರುಗಾಡಬಾರದು. ಅವರಿಗೆ ಎಲ್ಲಾ ಪಕ್ಷಗಳು ಆಗಿ ಹೋಗಿವೆ, ಚನ್ನಪಟ್ಟಣಕ್ಕೆ ಕುಡಿಯುವ ನೀರನ್ನು ಯಾರು ಕೊಟ್ಟಿದ್ದು, ಚನ್ನಪಟ್ಟಣ, ರಾಮನಗರಕ್ಕೆ ತೊರೆಕಾಡನಹಳ್ಳಿಯಲ್ಲಿ ಬೆಂಗಳೂರಿಗೆ ಪಂಪ್ ಮಾಡುವ ನೀರನ್ನು ನಿಮಗೆ ಕೊಟ್ಟಿದ್ದೇನೆ. ನೀರು ಕೊಟ್ಟಿರುವ ವ್ಯಕ್ತಿ ನಾನು ನಿಮ್ಮ ಮುಂದೆ ಜೀವಂತವಾಗಿ ಇದ್ದೇನೆ. ಒಬ್ಬ ಸಾಮಾನ್ಯ ರೈತನ ಮಗ ಏನೇನು ಮಾಡಿದ್ದಾನೆ ಅಂತಾ ಒಂದು ಪುಸ್ತಕ ಮಾಡಿದ್ದಾರೆ ಅದನ್ನು ಓದಿ ಎಂದು ಯೋಗೇಶ್ವರ್ ವಿರುದ್ಧ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಕಿಡಿಕಾರಿದರು.

### ಭಾಗ್ಯಲಕ್ಷ್ಮಿ, ಉಚಿತ ಬೈಸಿಕಲ್, ಸಂಧ್ಯಾ ಸುರಕ್ಷಾ ನಮ್ಮ ಸರಕಾರದ ಕೊಡುಗೆ

# ಎಚ್‌ಡಿಕೆ , ಬಿಎಸ್‌ವೈ ಜಂಟಿ ಪ್ರಚಾರ

**ರಾಮನಗರ:** ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ ಬಿರುಸಿನ ಪ್ರಚಾರ ನಡೆಸಿದರು.

ಚನ್ನಪಟ್ಟಣ ತಾಲೂಕಿನ ಅಂಬಾಡಹಳ್ಳಿ ಮತ್ತು ಸೋಗಾಲ ಗ್ರಾಮಗಳಲ್ಲಿ ಜಂಟಿ ಪ್ರಚಾರ ನಡೆಸಿದ ಇಬ್ಬರೂ, ಬಹುಮತದಿಂದ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸಿಕೊಡಬೇಕು ಎಂದು ಜನತೆಯನ್ನು ಕೋರಿದರು.

ನಂತರ ಮಾತನಾಡಿದ ಮಾಜಿ ಸಿಎಂ ಯಡಿಯೂರಪ್ಪ, ಈ ಹಿಂದೆ ನಾನು ಮತ್ತು ಕುಮಾರಸ್ವಾಮಿ ಅವರು ಸೇರಿ ಸರಕಾರ ಮಾಡಿ ಅತ್ಯುತ್ತಮ ಆಡಳಿತ ನೀಡಿದ್ದೆವು. ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದು ಹೆಣ್ಣುಮಕ್ಕಳ ಕಲ್ಯಾಣಕ್ಕೆ ಉತ್ತಮ ಕಾರ್ಯಕ್ರಮ ಜಾರಿಗೆ ತಂದಿದ್ದೆವು. ನಿಮ್ಮ ಮನೆಯಲ್ಲಿ ಹುಟ್ಟುವ ಹೆಣ್ಣು ಮಗಳು ಹದಿನೆಂಟು ವರ್ಷ ವಯಸ್ಸಿಗೆ ಬರುವ ಹೊತ್ತಿಗೆ ಹತ್ತಾರು ಲಕ್ಷ ರೂಪಾಯಿ ಹಣ ಸಿಗುತ್ತಿತ್ತು ಎಂದು ಹೇಳಿದರು.

ಶಾಲೆಗೆ ತೆರಳುವ ಹೆಣ್ಣು ಮಕ್ಕಳಿಗೆ ನಾನು ಕುಮಾರಸ್ವಾಮಿ ಸೇರಿ ಉಚಿತ ಬೈಸಿಕಲ್ ಯೋಜನೆ ಜಾರಿ ಮಾಡಿದ್ದೆವು. ಸಂಧ್ಯಾ ಸುರಕ್ಷಾ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೆವು. ಸಮಾಜಕ್ಕೆ ಅವೆಲ್ಲ ಉಪಯೋಗ ಆಗಿವೆ. ನಿಮ್ಮೆಲ್ಲರ ಅಭಿವೃದ್ಧಿಗಾಗಿ ನಾನು, ಕುಮಾರಸ್ವಾಮಿ ಶಕ್ತಿಮೀರಿ ಕೆಲಸ ಮಾಡಿದ್ದೇವೆ ಎಂದರು.

ಚನ್ನಪಟ್ಟಣ ತಾಲೂಕಿನ ಅಂಬಾಡಹಳ್ಳಿ ಮತ್ತು ಸೋಗಾಲ ಗ್ರಾಮಗಳಲ್ಲಿ ಬಿ.ಎಸ್. ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ ಪ್ರಚಾರ ನಡೆಸಿದರು.

### ಡಿ.ಕೆ.ಬ್ರದರ್ಸ್ ಜೊತೆ ಮ್ಯಾಚ್ ಫಿಕ್ಸಿಂಗ್

ಕಾಂಗ್ರೆಸ್ ಅಭ್ಯರ್ಥಿ ಬರೀ ಸುಳ್ಳು ಪ್ರಚಾರ ಮಾಡಿಕೊಂಡು ತಿರುಗುತ್ತಿದ್ದಾರೆ. ಜೆಡಿಎಸ್ ಪಕ್ಷದಿಂದ ಟಿಕೆಟ್ ಕೊಡಲು ಸಿದ್ದ ಇದ್ದೆವು. ಕೊನೆಗೆ ಬಿಜೆಪಿ ಟಿಕೆಟ್ ಮೇಲೆ ನಿಲ್ಲುತ್ತೇನೆ ಎಂದು ಕ್ಯಾತೆ ತೆಗೆದರು. ಕೊನೆಗೆ ಬಿಜೆಪಿ ಟಿಕೆಟ್ ಕೊಡಲಿಕ್ಕೆ ಕೂಡ ನಾನು ಸಮ್ಮತಿಸಿದೆ. ಆದರೆ, ಲೋಕಸಭೆ ಚುನಾವಣೆ ವೇಳೆಯಲ್ಲೇ ಕಾಂಗ್ರೆಸ್ ನಾಯಕರ ಜತೆ, ಅದರಲ್ಲಿಯೂ ಡಿಕೆ ಬ್ರದರ್ಸ್ ಜತೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿದ್ದರು. ಅಭ್ಯರ್ಥಿ ಆಯ್ಕೆ ಕೊನೆ ಕ್ಷಣದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜಿಗಿದರು. ನಾವು ಸಮರ್ಥ ಅಭ್ಯರ್ಥಿ ಕಣಕ್ಕೆ ಇಳಿಸುವ ಉದ್ದೇಶದಿಂದ ನಿಖಿಲ್ ಕುಮಾರಸ್ವಾಮಿ ಅವರನ್ನು ಎನ್‌ಡಿಎ ಅಭ್ಯರ್ಥಿಯಾಗಿ ಒಮ್ಮತವಾಗಿ ಕಣಕ್ಕೆ ಇಳಿಸಿದೆವು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

## ಸಮಾಚಾರ ಸಣ್ಣದಲ್ಲ

### ಬಿಜೆಪಿಯಿಂದ ರಾಜ್ಯದಲ್ಲಿ ಗೊಂದಲ

**ಹುಬ್ಬಳ್ಳಿ:** ಸಂಸತ್ತಿನ ಜಂಟಿ ಸಂಸದೀಯ ಸಮಿತಿ ರಚನೆಯಾಗಿರುವುದು ವಕ್ಫ್ ತಿದ್ದುಪಡಿ ಮಸೂದೆ ಕುರಿತು. ಆದರೆ ಇವರು ವಿಜಯಪುರಕ್ಕೆ ಬರುತ್ತಿರುವುದು ಅನಧಿಕೃತ ಎಂದು ಸಚಿವ ಜಮೀರ್ ಅಹ್ಮದ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಿತಿ ರಚನೆ ಮಾಡುವ ಅಧಿಕಾರ ಕೇಂದ್ರ ಸರಕಾರಕ್ಕಿದೆ. ಆದರೆ ಜೆಪಿಸಿ ರಚಿಸಿರುವುದು ತಿದ್ದುಪಡಿ ಮಸೂದೆಗಾಗಿ ವಿನಃ ಇಲ್ಲಿ ವಕ್ಫ್ ಆಸ್ತಿ ವಿಚಾರವಾಗಿ ಅಲ್ಲ. ಇದರಲ್ಲಿ ಯಾವುದೇ ಗೊಂದಲ ಇರಲಿಲ್ಲ. ರಾಜ್ಯದಲ್ಲಿ ಬಿಜೆಪಿ ನಾಯಕರು ವಿನಾಕಾರಣ ಗೊಂದಲ ಸೃಷ್ಟಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರ ಬೇಕಾದರೆ ಸಮಿತಿ ಮಾಡಲಿ ಎಂದರು. ಬಿಜೆಪಿಯವರಿಗೆ ಚುನಾವಣೆ ಮಾಡಲು ಯಾವುದೇ ವಿಚಾರಗಳಿಲ್ಲ. ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿದರೂ ಇವರು ಹೋರಾಟ ಮಾಡುತ್ತಿರುವುದು ಚುನಾವಣೆ ಹಾಗೂ ರಾಜಕೀಯಕ್ಕಾಗಿ. ಪ್ರಮೋದ್ ಮುತಾಲಿಕ್, ಬಿಜೆಪಿ ಎರಡು ಒಂದೇ. ಏಕ್ ದಿಲ್ ದೋ ಜಾನ್ ತರಹ. ಅನ್ನ ನೀಡುವ ರೈತರಿಗೆ ತೊಂದರೆ ಕೊಟ್ಟಿಲ್ಲ, ಕೊಡುವುದಿಲ್ಲ. ರೈತರಿಗೆ ನೋಟಿಸ್ ಕೊಟ್ಟಿದ್ದಾರೆ ಅಂತ ಗೊಂದಲ ಸೃಷ್ಟಿ ಮಾಡಿದರು. ಹೀಗಾಗಿ ವಾಪಸ್ಸು ತೆಗೆದುಕೊಂಡಿದ್ದೇವೆ ಎಂದರು.

### ಲೋಕಾಯುಕ್ತದವರಿಗೆ ಸಿದ್ದರಾಮಯ್ಯ ಭಯ ಕಾಡುತ್ತಿದೆ: ವಿಜಯೇಂದ್ರ

# ಸಿಎಂ ಗಂಡಾಂತರದಿಂದ ಪಾರಾಗಲ್ಲ

**ಹಾವೇರಿ:** ಮುಡಾ ಭೂ ಹಗರಣದ ತನಿಖೆಯನ್ನು ಲೋಕಾಯುಕ್ತದವರು ಒತ್ತಡದಲ್ಲಿ ಮಾಡುತ್ತಿದ್ದಾರೆ. ಯಾವ ಪ್ರಶ್ನೆಗೆ ಏನು ಉತ್ತರ ಕೊಡಬೇಕು ಎನ್ನುವುದು ಮೊದಲೇ ಸಿದ್ಧವಾಗಿದೆ. ಲೋಕಾಯುಕ್ತ ಕ್ಲೀನ್ ಚಿಟ್ ಕೊಟ್ಟರೂ ಸಿದ್ದರಾಮಯ್ಯ ಗಂಡಾಂತರದಿಂದ ಪಾರಾಗಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆ ನೀಡಿದ್ದಾರೆ.

ಬಂಕಾಪುರದಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಮುಡಾ ಹಗರಣದಲ್ಲಿ ಆರೋಪಿ ನಂಬರ್1. ಅವರ ಅಕ್ಕಪಕ್ಕದಲ್ಲಿ ಜಮೀರ್ ಇರಬೇಕು ಇಲ್ಲದಿದ್ದರೆ ಭ್ರಷ್ಟರು ಇರಬೇಕು.

ಚುನಾವಣೆ ಸಂದರ್ಭದಲ್ಲಿ ಸಿಎಂ ಗೆ ನೋಟಿಸ್ ಕೊಟ್ಟಿದ್ದಾರೆ. ತತ್ ಕ್ಷಣ ಸಿಎಂ ವಿಚಾರಣೆಗೆ ಹೋಗಿ ಬಂದಿದ್ದಾರೆ. ಲೋಕಾಯುಕ್ತದವರಿಗೆ ಸಿಎಂ ಭಯ ಕಾಡುತ್ತಿದೆ. ಎಷ್ಟು ಬೇಗ ಸಿಎಂಗೆ ರಿಲೀಫ್ ಕೊಡಬೇಕು, ಬಿ ರಿಪೋರ್ಟ್ ಹಾಕಬೇಕು ಎಂದು ಲೋಕಾಯುಕ್ತ ತನಿಖೆ ಸಾಗುತ್ತಿದೆ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ ಎಂದರು.

ಸಿದ್ದರಾಮಯ್ಯನವರು ಸಿಎಂ ಆಗಿ ಎರಡು ವರ್ಷ ಆಯಿತು. ಹಿಟ್ ಆ್ಯಂಡ್ ರನ್ ಮಾಡುವ ಅವಶ್ಯಕತೆ ಇಲ್ಲ, ಇಷ್ಟು ದಿನ ಏನು ಮಾಡುತ್ತಿದ್ದರು? ವಕ್ಫ್ ವಿಚಾರದಲ್ಲಿ ರೈತರ ಜಮೀನು ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿರುವವರು ನಿಮ್ಮ ಪಕ್ಷದಲ್ಲಿಯೆ ಇದ್ದಾರೆ. ಪ್ರಮಾಣಿಕತೆ ಇದ್ದರೆ ತನಿಖೆ ಮಾಡಿಸಿ, ದಾಖಲೆ ಇದ್ದರೆ ಬಿಡುಗಡೆ ಮಾಡಿ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಭ್ರಷ್ಟ ಮುಖ್ಯಮಂತ್ರಿ ಇಟ್ಟುಕೊಂಡು ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಸಿಎಂ ಕೆಳಗಿಳಿಸಲು ಆಡಳಿತ ಪಕ್ಷದಲ್ಲೇ ಮುಹೂರ್ತ ಫಿಕ್ಸ್ ಆಗಿದೆ. ನಾನು ಹುಡುಗಾಟಿಕೆಗೆ ಈ ಮಾತಾಡುತ್ತಿಲ್ಲ. ಅವತ್ತೂ ಸವಾಲು ಹಾಕಿದ್ದೆ ಇವತ್ತೂ ಸವಾಲು ಹಾಕುತ್ತೇನೆ. ಸಿಎಂ ಐದು ವರ್ಷ ಅವಧಿ ಪೂರ್ಣ ಮಾಡುತ್ತೇನೆ ಎಂದು ಹೇಳಲಿ. ಅದು ಅಸಾಧ್ಯ. ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಕಾಂಗ್ರೆಸ್ ಹೈಕಮಾಂಡ್ ಮುಹೂರ್ತ ಫಿಕ್ಸ್ ಮಾಡಿದೆ.

**ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಶಿಗ್ಗಾವಿ ವಿಧಾನಸಭೆ ಕ್ಷೇತ್ರದ ಹೋತನಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ್ ಪರವಾಗಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಬುಧವಾರ ಭರ್ಜರಿ ರೋಡ್ ಶೋ ನಡೆಸಿ ಚುನಾವಣೆ ಪ್ರಚಾರ ಮಾಡಿದರು. ಸಚಿವ ಈಶ್ವರ್ ಖಂಡ್ರೆ, ಲಕ್ಷ್ಮೀ ಹೆಬ್ಬಾಳ್ಕರ್, ರೆಹಮಾನ್ ಖಾನ್, ಕಾಂಗ್ರೆಸ್ ಮುಖಂಡರಾದ ಎಚ್ ಎಂ ರೇವಣ್ಣ, ಸೈಯದ್ ಅಜ್ಜಂ ಪೀರ್ ಖಾದ್ರಿ, ಕಾಂಗ್ರೆಸ್ ಅಭ್ಯರ್ಥಿ ಯಾಶೀರಖಾನ್ ಪಠಾಣ ಮತ್ತಿತರರು ಉಪಸ್ಥಿತರಿದ್ದರು.

### ಕುಮಾರಸ್ವಾಮಿ ಮೇಲಿನ ಅನುಕಂಪದಿಂದ ನನ್ನ ಮೇಲೆ ಅಪಪ್ರಚಾರ

# ವಿಜಯೇಂದ್ರ ಟಿಕೆಟ್ ಕೊಡಲಿಲ್ಲ

**ರಾಮನಗರ:** ಕೊನೆಯ ದಿನದವರೆಗೂ ಎನ್‌ಡಿಎ ಅಭ್ಯರ್ಥಿಯಾಗಿ ಚುನಾವಣೆ ಎದುರಿಸಬೇಕು ಎಂಬ ವಿಶ್ವಾಸದಲ್ಲಿದ್ದೆ. ಬಿಜೆಪಿಯಲ್ಲಿ 15 ವರ್ಷದಿಂದಲೂ ದುಡಿದಿದ್ದೇನೆ. ನನಗೆ ಟಿಕೆಟ್ ಕೊಡಿ ಎಂದು ವಿಜಯೇಂದ್ರ ಅವರನ್ನು ಕೇಳಿದೆ, ಆದರೆ ಅವರು ಟಿಕೆಟ್ ಕೊಡಲಿಲ್ಲ. ಈಗ ಕುಮಾರಸ್ವಾಮಿ ಮೇಲಿನ ಅನುಕಂಪದಿಂದ ನನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಸಿ.ಪಿ.ಯೋಗೇಶ್ವರ್ ಟಾಂಗ್ ನೀಡಿದರು.

ಚನ್ನಪಟ್ಟಣ ತಾಲೂಕಿನ ಅಪ್ಪಗೆರೆ, ನೀಲಕಂಠನಹಳ್ಳಿ, ಹೊಡಿಕೆ ಹೊಸಹಳ್ಳಿ, ಸಿ.ಬಿ.ದೊಡ್ಡಿ ಗ್ರಾಮಗಳಲ್ಲಿ ಪ್ರಚಾರ ಕೈಗೊಂಡು ಮಾತನಾಡಿ, ಕೊನೆ ದಿನ, ಕೊನೆ ಗಂಟೆವರೆಗೂ ಬಿಜೆಪಿ ಟಿಕೆಟ್‌ಗಾಗಿ ಕಾದಿದ್ದೇನೆ, ಟಿಕೆಟ್ ಘೋಷಣೆ ಯಾಕೆ ಮಾಡಲಿಲ್ಲ ವಿಜಯೇಂದ್ರ ಬಳಿ ಟಿಕೆಟ್ ಇರಲಿಲ್ಲ, ಎರಡು ಕ್ಷೇತ್ರದ ಟಿಕೆಟ್ ಅನೌನ್ಸ್ ಮಾಡಿದಾಗ ಚನ್ನಪಟ್ಟಣ ಟಿಕೆಟ್ ಕೂಡ ಅನೌನ್ಸ್ ಮಾಡಬಹುದಾಗಿತ್ತು ಆದರೆ ಮಾಡಲಿಲ್ಲ ಎಂದರು.

ವಿಜಯೇಂದ್ರ, ಯಡಿಯೂರಪ್ಪ, ಕುಮಾರಸ್ವಾಮಿ ಅವರ ಮಾತಿನಲ್ಲಿ ಯಾವುದೇ ಸತ್ಯವಿಲ್ಲ ಎಂದು ಅರಿತು ಕಾಂಗ್ರೆಸ್ ಸೇರ್ಪಡೆಗೊಂಡೆ. ಕುಮಾರಸ್ವಾಮಿ ತಮ್ಮ ಮಗನನ್ನ ಕಣಕ್ಕೆ ಇಳಿಸಬೇಕೆಂದು ಪೂರ್ವ ನಿಯೋಜಿತ ಸಂಚು ರೂಪಿಸಿ ವಿಶ್ವಾಸ ದ್ರೋಹ ಮಾಡಿದರು ಎಂದು ಹರಿಹಾಯ್ದರು.

ಚನ್ನಪಟ್ಟಣ ತಾಲೂಕಿನ ನೀಲಕಂಠನಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮತಯಾಚನೆ ಮಾಡಿದರು.

### ಸೀಜ್ ಆದ ಪಂಚೆ ಜೆಡಿಎಸ್‌ದು

ಕಾಂಗ್ರೆಸ್ ನಾಯಕರು ಟೋಕನ್ ಎಂಬ ಹಂಚುತ್ತಾರೆ ಎಂಬ ಎಚ್‌ಡಿಕೆ ಹೇಳಿಕೆಗೆ ತಿರುಗೇಟು ನೀಡಿದ ಯೋಗೇಶ್ವರ್, ಯಾವ ಟೋಕನ್ ಇಲ್ಲಾ, ಆಮಿಷವೂ ಇಲ್ಲಾ, ಅದೆಲ್ಲಾ ಕಟ್ಟುಕಥೆ. ಮೊನ್ನೆ ಸೀಜ್ ಆದ ಪಂಚೆ ಎಲ್ಲಾ ಜೆಡಿಎಸ್ ಅವರದ್ದು ಎಂಬ ಮಾಹಿತಿ ಇದೆ. ಮತದಾರರಿಗೆ ಹಂಚಲು ಕುಮಾರಸ್ವಾಮಿ ಅವರು ತರಿಸಿದ್ದಾರೆ.ಈಗ ಸೀಜ್ ಆಗಿದೆ ಅಂತ ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ ಎಂದರು.

# ಮೋದಿ, ಅವರ ಶಿಷ್ಯಂದಿರಿಗೆ ಅಭಿವೃದ್ಧಿ ಬೇಕಿಲ್ಲ

**ರಾಯಚೂರು:** ಬಿಜೆಪಿಯವರಿಗೆ ಅಭಿವೃದ್ಧಿ ಕೆಲಸ ಬೇಕಿಲ್ಲ, ಬಿಜೆಪಿ ವಕ್ಫ್ ವಿಚಾರದಲ್ಲಿ ರಾಜಕೀಯ ಮಾಡುತ್ತಿದೆ. ಪ್ರಧಾನಿ ಮೋದಿ ಹಾಗೂ ಅವರ ಶಿಷ್ಯಂದಿರಿಗೆ ಅಭಿವೃದ್ಧಿ ಬೇಕಿಲ್ಲ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಅಸಮಾಧಾನ ವ್ಯಕ್ತಪಡಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕೇಂದ್ರದ ಜಂಟಿ ಸಂಸದೀಯ ಸಮಿತಿಯಿಂದ ವಕ್ಫ್ ಬಗ್ಗೆ ಮಾಹಿತಿ ಸಂಗ್ರಹ ವಿಚಾರವಾಗಿ, ಓರ್ವ ಪ್ರಧಾನಿ ಸಣ್ಣ ಸಣ್ಣ ವಿಷಯಕ್ಕೆ ನೀತಿ ನಿಯಮ ಇಲ್ಲದೇ ಹುದ್ದೆಗೆ ಗೌರವ ಇಲ್ಲದ ರೀತಿ ರಾಜಕೀಯಕ್ಕಾಗಿ ಮಾಡ್ತಿದ್ದಾರೆ. ಅವರಿಂದ ನಾವು ಕಲಿಯಬೇಕಿರುವುದು ಏನೂ ಇಲ್ಲ ಎಂದರು.

ಮೋದಿಯವರ ಶಿಷ್ಯರೆಲ್ಲಾ ಇದ್ದಾರೆ. ಆದರೆ ರಾಜ್ಯದಲ್ಲಿ ಬಿಜೆಪಿ ಅಧ್ಯಕ್ಷ ಯಾರಿದ್ದಾರೆ? ರಾಜ್ಯದಲ್ಲಿ ಸಾವಿರಾರು ಕೋಟಿ ರು. ಲೂಟಿ ಮಾಡಿದ್ದಾರೆ. ಅದನ್ನು ನಾವು ಹೇಳುತ್ತಿಲ್ಲ. ಬಿಜೆಪಿ ನಾಯಕರೇ ಹೇಳುತ್ತಿದ್ದಾರೆ ಎಂದು ಟೀಕಿಸಿದರು.

ವಿಶ್ವವಾಣಿ

## ಸಂಪಾದಕೀಯ

# ಭಾರತೀಯರೇ 'ಟ್ರಂಪ್' ಕಾರ್ಡ್

ಅಮೆರಿಕದ ಅಧ್ಯಕ್ಷರಾಗಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. ಭಾರತ ಮೂಲದ ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್‌ರನ್ನು ಸೋಲಿಸುವ ಮೂಲಕ ಟ್ರಂಪ್ 2ನೇ ಬಾರಿಗೆ ಗದ್ದುಗೆ ಏರಲು ಸಜ್ಜಾಗಿದ್ದಾರೆ. ವಿಜಯ ಖಚಿತವಾದ ಬಳಿಕ ಮೊದಲ ಭಾಷಣ ಮಾಡಿರುವ ಟ್ರಂಪ್, ಅಮೆರಿಕವನ್ನು ಮತ್ತೆ ಸುವರ್ಣ ಯುಗಕ್ಕೆ ಒಯ್ಯುವುದಾಗಿ ವಾಗ್ದಾನ ಮಾಡಿದ್ದಾರೆ. ಅಕ್ರಮ ವಲಸೆ ತಡೆಗಟ್ಟುವ ಬಗ್ಗೆಯೂ ಮಾತನಾಡಿದ್ದಾರೆ. ಅಮೆರಿಕದ 50 ರಾಜ್ಯಗಳಲ್ಲಿ ಮತದಾನ ನಡೆದರೂ 7 ರಾಜ್ಯಗಳನ್ನು ಹೊರತುಪಡಿಸಿ ಉಳಿದ ರಾಜ್ಯಗಳ ಮತದಾರರು ಹಿಂದಿ ನಿಂದಲೂ ರಿಪಬ್ಲಿಕನ್ ಮತ್ತು ಡೆಮಾಕ್ರಟಿಕ್ ಪಕ್ಷಗಳ ಪೈಕಿ ಒಂದನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಗೆಲುವಿಗೆ ನಿರ್ಣಾಯಕವಾಗಿದ್ದ ಪೆನ್ಸಿಲ್ವೇನಿಯಾ, ಅರಿಜೋನಾ, ಜಾರ್ಜಿಯಾ, ಮಿಚಿಗನ್, ವಿಸ್ಕಾನ್ಸಿನ್ ಮತ್ತು ನೆವಾಡದಲ್ಲಿ ಟ್ರಂಪ್ ಭರ್ಜರಿ ಗೆಲುವು ಸಾಧಿಸುವ ಮೂಲಕ 2ನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಈ ಸಲದ ಅಮೆರಿಕ ಅಧ್ಯಕ್ಷೀಯ ಚುನಾ ವಣೆಯಲ್ಲಿ ಭಾರತೀಯ ಮೂಲದ ಸುಮಾರು 52 ಲಕ್ಷ ಮತದಾರರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಕಮಲಾ ಮತ್ತು ಟ್ರಂಪ್ ಇಬ್ಬರೂ ಹಿಂದೂ ಮತದಾರರ ಮತಗಳನ್ನು ಪಡೆಯಲು ತೀವ್ರ ಪೈಪೋಟಿ ನಡೆಸಿದ್ದರು. ಹಾಲಿ ಅಧ್ಯಕ್ಷ, ಡೆಮಾಕ್ರಟಿಕ್ ಪಕ್ಷದ ನಾಯಕ ಜೋ ಬೈಡೆನ್ ಅವರು ಶ್ವೇತಭವನದಲ್ಲಿ ಈ ಸಲ ವಿಜೃಂಭಣೆಯಿಂದ ದೀಪಾವಳಿ ಆಚರಿಸಿದ್ದರು. ಉಪಾಧ್ಯಕ್ಷ ಹುದ್ದೆಗೆ ಡೆಮಾಕ್ರಟಿಕ್ ಪಕ್ಷದಿಂದ ಸ್ಪರ್ಧಿಸಿದ್ದ ಟಿಮ್ ವಾಲ್ಜ್ ಹಿಂದೂ ದೇವಾಲಯಕ್ಕೆ ತೆರಳಿ ದೀಪಾವಳಿ ಆಚರಿಸಿದ್ದರು. ಆದರೆ ಟ್ರಂಪ್ ಚುನಾವಣಾ ಪ್ರಚಾರದ ವೇಳೆ, ಬಾಂಗ್ಲಾದಲ್ಲಿ ಹಿಂದೂಗಳ ಮೇಲಾಗುತ್ತಿರುವ ದೌರ್ಜನ್ಯವನ್ನು ಖಂಡಿಸಿ ಅಮೆರಿಕದ ಹಿಂದೂಗಳಿಗೆ ನಿಕಟವಾಗಿದ್ದರು. ಪೆನ್ಸಿಲ್ವೇನಿಯಾ, ಜಾರ್ಜಿಯಾ, ಮಿಚಿಗನ್, ನಾರ್ತ್ ಕ್ಯಾರೊಲಿನಾದಲ್ಲಿ ಹಿಂದೂ ಮತಗಳು ನಿರ್ಣಾಯಕವಾಗಿದ್ದು, ಇಲ್ಲಿ ಟ್ರಂಪ್‌ರಿಗೆ ಉತ್ತಮ ಬೆಂಬಲ ಲಭಿಸಿದೆ. ಕಮಲಾ ಭಾರತ ಮೂಲದ ಅಭ್ಯರ್ಥಿಯಾದರೂ ಕಾಶ್ಮೀರ ಸೇರಿದಂತೆ ಹಲವು ವಿಷಯಗಳಲ್ಲಿ ಅವರು ಭಾರತದ ಪರ ನಿಲುವು ಹೊಂದಿರಲಿಲ್ಲ. ಹೀಗಾಗಿ ಭಾರತೀಯ ಮೂಲದ ಮತದಾರರು ಟ್ರಂಪ್ ರನ್ನು ಬೆಂಬಲಿಸಿದ್ದಾರೆ. ಹಾಗೆಂದು ಟ್ರಂಪ್ ಭಾರತ ಪರ ಎಂದು ನಾವು ಸಂಭ್ರಮಿಮಿಸಬೇಕಿಲ್ಲ. ಮೂಲತಃ ಉದ್ಯಮಿಯಾಗಿರುವ ಟ್ರಂಪ್ ಲೆಕ್ಕಾಚಾರದವರು. ಭಾರತ ತನ್ನ ಹಿತಾಸಕ್ತಿಗೆ ತಕ್ಕಂತೆ ವ್ಯವಹರಿಸಬೇಕಾಗಿದೆ.

## ಸೊಂಪಾದಕೀಯ

# ಮಾಮೂಲಿ ವಿಷ್ಯ

ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಒಬ್ಬರ ಹೆಸರು ಮತ್ತು ಫೋಟೋ ಬಳಸಿಕೊಂಡು ನಕಲಿ ಖಾತೆ ತೆರೆದು ಅವರ ಸ್ನೇಹಿತರ ಬಳಿ ಹಣ ಕೇಳುವುದು ಸರ್ವೇಸಾಮಾನ್ಯವಾಗಿದೆ. ಫೇಸ್‌ಬುಕ್‌ನಲ್ಲಂತೂ ಇದು ಎಲ್ಲರಿಗೂ ಗೊತ್ತಾಗಿ, ಯಾರೂ ಇಂಥವರಿಗೆ ದುಡ್ಡು ಕೊಡದೇ ಇದ್ದರೂ ಈ ಟ್ರೆಂಡ್ ಮಾತ್ರ ಇನ್ನೂ ಚಾಲ್ತಿಯಲ್ಲಿದೆ. ತೀರಾ ಯಾರೋ ಸಾಮಾನ್ಯರ ಹೆಸರಲ್ಲಿ ನಕಲಿ ಖಾತೆ ತೆಗೆದು ನಗದು ಕೇಳಿದರೆ ಓಕೆ. ಆದರೆ ತೀರಾ ಪ್ರಭಾವಿಗಳ ಹೆಸರಲ್ಲಿ ಖಾತೆ ತೆರೆದು ಅವರ ಹೆಸರಲ್ಲಿ 5 ಸಾವಿರ, 10 ಸಾವಿರ ದುಡ್ಡು ಕೇಳಿದಾಗ ಅದು ಅನುಮಾನಕ್ಕೆ ಆಸ್ಪದ ಕೊಡುವುದರ ಜತೆಗೆ ಹಾಸ್ಯಾಸ್ಪದವೂ ಆಗುತ್ತದೆ. ವರ್ಷಗಳ ಹಿಂದೆ ಸ್ಯಾಂಡಲ್‌ವುಡ್ ನಿರ್ಮಾಪಕರೊಬ್ಬರ ಹೆಸರಲ್ಲಿ ಫೇಕ್ ಅಕೌಂಟ್ ಮಾಡಿ 10 ಸಾವಿರ ಕೇಳಿದಾಗ, ಸ್ವತಃ ಆ ನಿರ್ಮಾಪಕರು, "ನನ್ನ ಹೆಸರಿಗೆ ಕಳಂಕ ತರ್ತಾ ಇದ್ದಾರೆ. ನನ್ ಫೇಕ್ ಅಕೌಂಟ್ ಮಾಡ್ಲಿ; ಆದ್ರೆ ನನ್ನ ಹೆಸರಲ್ಲಿ ಐದು, ಹತ್ತು ಸಾವಿರ ಕೇಳೋದಾ, ಅಟ್‌ಲೀಸ್ಟ್ ಒಂದ್ ಐದು, ಹತ್ತು ಲಕ್ಷನಾದ್ರೂ ಕೇಳ್ಬೇಕು ತಾನೇ?!" ಅಂತ ತಮಾಷೆ ಮಾಡಿದ್ದರು. ಈ ಸೈಬರ್ ಖದೀಮರು ಬೆಳಗಾವಿಯ ಎಸ್.ಪಿ. ಅವರ ಹೆಸರಲ್ಲಿ ಇನ್‌ಸ್ಟಾಗ್ರಾಮ್‌ನಲ್ಲಿ ಫೇಕ್ ಅಕೌಂಟ್ ಕ್ರಿಯೇಟ್ ಮಾಡಿ ಇದೇ ರಾಗ ಶುರುಮಾಡಿದ್ದರಂತೆ. ಆದರೆ ಪೊಲೀಸರ ಹೆಸರಿನ ಅಕೌಂಟಿನಿಂದ ಹಣದ ಕೋರಿಕೆ ಬಂದಿದ್ದು ನೋಡಿ ಅವರ ಫಾಲೋವರ್ಸ್ ಗಾಬರಿಯಾಗಿದ್ದಾರೆ. ಪೊಲೀಸರು ಎದುರಿಗೆ ಸಿಕ್ಕಾಗ ಹಣ ವಸೂಲಿ ಮಾಡೋದು ಮಾಮೂಲಿ. ಆದ್ರೆ ಆನ್‌ಲೈನಲ್ಲೂ ಮಾಮೂಲಿ ಕೇಳ್ತಾರಾ ಅಂತ ಜನ ಅನುಮಾನಗೊಂಡಿದ್ದಾರೆ. ಅಲ್ಲದೆ ಪೊಲೀಸರು "ಅರ್ಜೆಂಟ್ ದುಡ್ಡು ಬೇಕಿತ್ತು, ನಾಳೆ ಕೊಡ್ತೀನಿ ಅಂತೆಲ್ಲಾ ಸಾಲ ಕೇಳಲ್ವಲ್ಲ, ಅವರದ್ದೇನಿದ್ದರೂ ಇಷ್ಟು ಇಟ್ಟು ರೈಟ್ ಹೇಳು ಅನ್ನೋ ಪಾಲಿಸಿ ಅಲ್ವಾ" ಅಂತಲೂ ಕನ್‌ಫ್ಯೂಸ್ ಆಗಿದ್ದಾರೆ. ಆದರೆ, ಇದನ್ನು ಗಂಭೀರವಾಗಿ ತೆಗೆದುಕೊಂಡರೆ ಈ ಆನ್‌ಲೈನ್ ಚೋರರಿಗೆ ಪೊಲೀಸರ ಭಯವೂ ಇಲ್ಲ ಅನ್ನೋದು ಸ್ಪಷ್ಟವಾಗುತ್ತದೆ. ಹಾಗಾಗಿ ಇದಕ್ಕೆ ಸೈಬರ್ ಪೊಲೀಸರು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

## ಸಂಪಾದಕರ ಸದ್ಯಶೋಧನೆ

# ಲ್ಯಾಂಡಿಂಗ್ ಮಾಡುವಾಗ ಕಾಣದಿದ್ದರೆ?

ಒಮ್ಮೆ ನಾನು ಫ್ರಾನ್ಸಿನ ಟುಲೂಸ್‌ನಿಂದ ಪ್ಯಾರಿಸ್ಸಿಗೆ ವಿಮಾನದಲ್ಲಿ ಆಗಮಿಸುತ್ತಿದ್ದೆ. ವಿಮಾನ ಪ್ಯಾರಿಸ್ಸಿನ ಚಾರ್ಲ್ಸ್ ಡಿಗಾಲ್ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿತ್ತು. ವಿಮಾನ ಲ್ಯಾಂಡ್ ಆಗುವ ಸುಮಾರು 20 ನಿಮಿಷ ಮುನ್ನ ದಟ್ಟವಾದ ಕಪ್ಪು ಮೋಡದಲ್ಲಿ ಸುಮಾರು ಏಳೆಂಟು ನಿಮಿಷ ಹಾದುಹೋಗುತ್ತಿದ್ದರೂ, ಶುಭ್ರ ಆಗಸ ಕಾಣುತ್ತಿರಲಿಲ್ಲ. ಪೈಲಟ್ ವಿಮಾನವನ್ನು ಕೆಳಕ್ಕಿಳಿಸುತ್ತಿದ್ದರೂ, ಭೂಮಿ ಕಾಣುತ್ತಿರಲಿಲ್ಲ. ಅಷ್ಟರಲ್ಲಿ ಒಳಗಿದ್ದ ವಿಮಾನದ ಚಕ್ರಗಳು ತೆರೆದುಕೊಂಡವು. ಪೈಲಟ್ ಒಂದೇ ಸಮನೆ ವಿಮಾನವನ್ನು ಕೆಳಕ್ಕಿಳಿಸುತ್ತಿದ್ದ. ಆದರೂ ಭೂಮಿ ಗೋಚರಿಸುತ್ತಿರಲಿಲ್ಲ. ಇನ್ನೂ ವಿಮಾನ ದಟ್ಟ ಮೋಡದಿಂದ ಹೊರಬಂದಿರಲಿಲ್ಲ. ಪೈಲಟ್‌ಗೆ ಮುಂದೆ ಏನೂ ಕಾಣಿಸುತ್ತಿರಲಿಲ್ಲ. ಆದರೂ ಆತ ವಿಮಾನವನ್ನು ಲ್ಯಾಂಡ್ ಮಾಡಲು ನಿರ್ಧರಿಸಿದ್ದ. ಇದು ಹೇಗೆ ಸಾಧ್ಯ? ಇಂಥ ಸಂದರ್ಭದಲ್ಲಿ ವಿಮಾನವನ್ನು ಇಳಿಸಲು ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್ (ILS) ಸಹಾಯಕ್ಕೆ ಬರುತ್ತದೆ. ಇದು ವಿಮಾನವನ್ನು ನಿಖರವಾಗಿ, ಸುರಕ್ಷಿತವಾಗಿ ಮತ್ತು ನಿಯಂತ್ರಿತವಾಗಿ ನಿಲ್ದಾಣದಲ್ಲಿ ಇಳಿಸಲು ಸಹಾಯ ಮಾಡುವ ತಂತ್ರಜ್ಞಾನ. ಇದು ಹವಾಮಾನ ಪರಿಸ್ಥಿತಿ ಅನನುಕೂಲಕರವಾಗಿದ್ದರೂ, ಪೈಲಟ್‌ಗಳಿಗೆ ಸ್ಪಷ್ಟ ಮಾರ್ಗ ಗೋಚರಿಸದಿದ್ದರೂ, ವಿಮಾನವನ್ನು ಸುರಕ್ಷಿತವಾಗಿ ಇಳಿಸಲು ಪೈಲಟ್‌ಗಳಿಗೆ ಮಾರ್ಗದರ್ಶನ ನೀಡುತ್ತದೆ. ಐಎಲ್‌ಎಸ್ ಸಿಸ್ಟಮ್ ಅನ್ನು ದೊಡ್ಡ ಮತ್ತು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಬಳಸಲಾಗುತ್ತದೆ. ಈ ಸಿಸ್ಟಮ್‌ನಲ್ಲಿ ಲೋಕಲೈಜರ್ ಸಿಗ್ನಲ್ ಮತ್ತು ಗ್ಲೈಡ್ ಸ್ಲೋಪ್ ಸಿಗ್ನಲ್ ಎಂಬ 2 ಪ್ರಮುಖ ವ್ಯವಸ್ಥೆಗಳಿರುತ್ತವೆ. ಅವು ವಿಮಾನವು ಹಾರಾಟ ಮಾರ್ಗದಿಂದ ನಿಲ್ದಾಣದ ರನ್‌ವೇ (Runway)ಗೆ ಸರಿಯಾದ ದಿಕ್ಕಿನಲ್ಲಿ ಇಳಿಯಲು ಗೈಡ್ ಮಾಡುತ್ತವೆ. ಲೋಕಲೈಜರ್ ಆಂಟೆನಾಗಳು ನಿಲ್ದಾಣದ ರನ್‌ವೇ ಮಧ್ಯದಲ್ಲಿ ಮುಂಭಾಗದಲ್ಲಿ ಸ್ಥಾಪಿತವಾಗಿರುತ್ತವೆ. ಇದು ವಿಮಾನದ ಡ್ಯಾಶ್‌ಬೋರ್ಡ್ ಮೇಲೆ ಡಿಜಿಟಲ್/ವಿಜುವಲ್ ಸೂಚನೆಗಳನ್ನು ನೀಡುತ್ತವೆ. ಇದು ಪೈಲಟ್‌ಗಳು ತಮ್ಮ ವಿಮಾನವು ರನ್‌ವೇನ ಮಧ್ಯ ಬಿಂದುದಲ್ಲಿ ಇಳಿಯಲು ಸಹಾಯಮಾಡುತ್ತವೆ. ಐಎಲ್‌ಎಸ್ ಸಿಸ್ಟಮ್‌ನಲ್ಲಿರುವ ಗ್ಲೈಡ್ ಪಾತ್ (Glide Path) ವಿಮಾನವು ಸರಿಯಾದ ಕೋನದಲ್ಲಿ ಇಳಿಯಲು ಸಹಾಯಮಾಡುತ್ತದೆ. ವಿಮಾನವು ರನ್‌ವೇಯಲ್ಲಿ ಇಳಿಯಲು ತಂತ್ರಜ್ಞಾನದ ಮೂಲಕ ನಿಖರವಾದ ಡೇಟಾವನ್ನು ಒದಗಿಸುತ್ತದೆ. ಐಎಲ್‌ಎಸ್ ಸಿಸ್ಟಮ್ ಬಳಸುವ ಸಂದರ್ಭದಲ್ಲಿ, ಪೈಲಟ್‌ಗಳು ತಮ್ಮ ಪ್ಯಾನಲ್‌ನಲ್ಲಿ ರೇಡಿಯೋ ಫ್ರೀಕ್ವೆನ್ಸಿಯನ್ನು ಸರಿಹೊಂದಿಸುತ್ತಾರೆ. ಈ ವ್ಯವಸ್ಥೆಯು ಪೈಲಟ್‌ಗಳಿಗೆ 'ಲ್ಯಾಟರಲ್' (Lateral) ಮತ್ತು 'ವರ್ಟಿಕಲ್' (Vertical) ಮಾರ್ಗದರ್ಶನ ನೀಡುತ್ತದೆ. ಐಎಲ್‌ಎಸ್ ಸಿಸ್ಟಮ್ ಬಳಸುವ ಪೈಲಟ್‌ಗಳು ತಮ್ಮ ವಿಮಾನವನ್ನು 'ಆಟೋಮ್ಯಾಟಿಕ್ ಲ್ಯಾಂಡಿಂಗ್' ಅಥವಾ 'ಮ್ಯಾನ್ಯುಯಲ್ ಲ್ಯಾಂಡಿಂಗ್' ಮೂಲಕವೂ ಇಳಿಸಬಹುದು. ಹವಾಮಾನ ಸಮಸ್ಯೆ ಅಥವಾ ಕಪ್ಪು ದಟ್ಟಮಂಜು ಇದ್ದಾಗ, ಈ ತಂತ್ರಜ್ಞಾನವು ದೋಷರಹಿತ ಸೂಚನೆಯನ್ನು ಪೈಲಟ್‌ಗಳಿಗೆ ನೀಡುವುದರಿಂದ ಅವರು ಸರಿಯಾಗಿ ವಿಮಾನವನ್ನು ಇಳಿಸಲು ಸಹಾಯಕವಾಗುತ್ತದೆ. ಅತಿ ದಟ್ಟ ಮಂಜು ಅಥವಾ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಪೈಲಟ್‌ಗಳು ದೃಶ್ಯ ಸ್ಪಷ್ಟತೆಯ ಕೊರತೆಯಿಂದ ವಿಮಾನವನ್ನು ನಿಖರವಾಗಿ ನೋಡಲು ಸಾಧ್ಯವಾಗದಾಗ, ಐಎಲ್‌ಎಸ್ ಸಿಸ್ಟಮ್ ನೆರವಿಗೆ ಬರುತ್ತದೆ. ವಿಮಾನಗಳು ತ್ವರಿತವಾಗಿ ಇಳಿಯಲೂ ಈ ವ್ಯವಸ್ಥೆಯು ಅನುಕೂಲ ಮಾಡುತ್ತದೆ. ಇದರಿಂದ ವಿಮಾನಗಳು ಬೇಗನೆ ರನ್‌ವೇಯನ್ನು ಬಿಡಬಹುದು ಮತ್ತು ಇತರ ವಿಮಾನಗಳು ಸರಿಯಾಗಿ ಇಳಿಯಲು ಅನುವು ಮಾಡಿಕೊಡಬಹುದು. ಇದು ವಿಮಾನಯಾನ ಕ್ಷೇತ್ರದಲ್ಲಿ ಪೈಲಟ್‌ಗಳಿಗೆ ಅನುಕೂಲ ಮತ್ತು ಸುರಕ್ಷಾ ಮಟ್ಟವನ್ನು ಹೆಚ್ಚಿಸುತ್ತದೆ. ಪ್ರತಿಕೂಲ ಹವಾಮಾನದಿಂದ ಪೈಲಟ್‌ಗೆ ಮುಂದೆ ಏನೇನೂ ಕಾಣದಿದ್ದಾಗ, ಒಂಥರಾ ಕಣ್ಣಿಗೆ ಕಪ್ಪುಬಟ್ಟೆ ಕಟ್ಟಿದಂಥ ಸ್ಥಿತಿ ಉದ್ಭವಿಸಿದಾಗ, ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಮ್ ಅನ್ನು ಅನ್ವಯಿಸಲಾಗುತ್ತದೆ. ಮಳೆಗಾಲ ಅಥವಾ ಚಳಿಗಾಲದಲ್ಲಿ ರಾತ್ರಿ ವೇಳೆಯಲ್ಲಿ ದಟ್ಟ ಮೋಡದಿಂದ ಹತ್ತಿರ ಆಗಮಿಸಿದರೂ ಪೈಲಟ್‌ಗೆ ರನ್‌ವೇ ಕಾಣದಿದ್ದಾಗ ಈ ತಂತ್ರಜ್ಞಾನದ ಸಹಾಯ ಅಪೇಕ್ಷಿಸಲಾಗುತ್ತದೆ.

# ಮಧು ಬಂಗಾರಪ್ಪ ಕನ್ನಡವ್ವೂ, ಶಶಿ ತರೂರ್ ಇಂಗ್ಲಿಷೂ!

**ನಾವು ಶಾಲೆಯಲ್ಲಿ ಓದುವಾಗ, ಕನ್ನಡದಲ್ಲಿ ತಪ್ಪು ಬರೆದರೆ, ತಪ್ಪು ಓದಿದರೆ, ತಪ್ಪು ಉಚ್ಚರಿಸಿದರೆ, ನಮಗೆ ಮೇಷ್ಟ್ರು ಕೆನ್ನೆಗೆ 'ಫಟೀರ್, ಭಟೀರ್' ಎಂದು ಹೊಡೆಯುತ್ತಿದ್ದರು. ಒಂದು ಪದವನ್ನು ನೂರು ಸಲ ಹೇಳು ಎಂದು ಹೇಳಿಸಿ, ಸರಿಯಾಗಿ ಹೇಳುವ ತನಕ ಬಿಡುತ್ತಿರಲಿಲ್ಲ. ಅಷ್ಟಾಗಿಯೂ ತಪ್ಪು ಮಾಡಿದರೆ ಬೆಂಚಿನ ಮೇಲೆ ಕ್ಲಾಸಿನಲ್ಲಿ ಎಲ್ಲರಿಗೂ ಕಾಣುವಂತೆ ಬಗ್ಗಿ ನಿಲ್ಲಿಸುತ್ತಿದ್ದರು. ಆದರೆ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರ ಕನ್ನಡವನ್ನು ತಿದ್ದುವವರು ಯಾರು?**

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ನಮ್ಮ ಮುಂದೆ ಎರಡು ವಿಭಿನ್ನ ಮಾದರಿಗಳಿವೆ. ಈ ಎರಡೂ ಮಾದರಿಗಳು ಒಂದೇ ರಾಜಕೀಯ ಪಕ್ಷಕ್ಕೆ ಸೇರಿದವು. ಒಬ್ಬರು ಕೆಟ್ಟ ಕಾರಣಕ್ಕೆ ಹಾಗೂ ಮತ್ತೊಬ್ಬರು ಒಳ್ಳೆಯ ಕಾರಣಕ್ಕೆ ಸುದ್ದಿಯಲ್ಲಿರುವವರು. ಈ ಎರಡೂ ಮಾದರಿಗಳು ಭಾಷೆಗೆ ಸಂಬಂಧಿಸಿದ ವಿಷಯಗಳ ಬಗ್ಗೆಯೇ ಗಮನ ಸೆಳೆದಿರುವುದು ಗಮನಾರ್ಹ. ಅಂದ ಹಾಗೆ ನಾನು ಹೇಳಲು ಹೊರಟಿರುವುದು ನಮ್ಮ ಪ್ರಾಥಮಿಕ ಶಿಕ್ಷಣ ಮತ್ತು ಗ್ರಂಥಾಲಯ ಖಾತೆ ಸಚಿವರಾದ ಮಧು ಬಂಗಾರಪ್ಪ ಮತ್ತು ಲೋಕಸಭಾ ಸದಸ್ಯ ಶಶಿ ತರೂರ್ ಅವರ ಕುರಿತು.

ಮಧು ಅವರು ನಮ್ಮ ರಾಜ್ಯದ ವರ್ಚಸ್ವಿ ಮತ್ತು ಜನಪ್ರಿಯ ರಾಜಕಾರಣಿಗಳಲ್ಲೊಬ್ಬರೂ, ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದ ಬಂಗಾರಪ್ಪನವರ ಸುಪುತ್ರರು. ಅವರು ಹುಟ್ಟುವಾಗಲೇ ರಾಜಕಾರಣದ ಚಮಚದಲ್ಲಿಯೇ ಹಾಲು ಕುಡಿಯುತ್ತಾ ಬೆಳೆದವರು. ಅವರ ಹೆಸರಿನಲ್ಲಿರುವ 'ಬಂಗಾರಪ್ಪ' ಎಂಬುದೇ ಅವರಿಗೆ ಶ್ರೀರಕ್ಷೆ ಮತ್ತು ಬಹು ದೊಡ್ಡ ಬಂಡವಾಳ. ಮಧು ಅವರಿಗೆ ರಾಜಕೀಯಕ್ಕೆ ಬೇಕಾದ ಎಲ್ಲ ಸವಲತ್ತು-ಸೌಲಭ್ಯಗಳು ಅವರ ಮನೆಯಲ್ಲಿಯೇ ಇದ್ದವು. ಅವರ ಪಾಲಿಗೆ ಅಪ್ಪನಿಗಿಂತ ದೊಡ್ಡ ರೋಲ್ ಮಾಡೆಲ್ ಯಾರೂ ಇರಲಿಲ್ಲ. ಮತ್ತೇನೂ ಅಲ್ಲ, ಅವರು ಬಂಗಾರಪ್ಪನವರ ಗುಣಗಳನ್ನು ಮೈಗೂಡಿಸಿಕೊಂಡಿದ್ದರೂ ಸಾಕಿತ್ತು.

ಆದರೆ ಮಧು ಬಂಗಾರಪ್ಪ ಅವರಿಗೆ ಅಸಲಿಗೆ ಕನ್ನಡವನ್ನೇ ಓದಲು ಸರಿಯಾಗಿ ಬರುವುದಿಲ್ಲವಲ್ಲ? ನಮ್ಮ ರಾಜ್ಯದ ಜನ ಅದ್ಯಾವ ಕರ್ಮ ಮಾಡಿದ್ದಾರೋ ನಾ ಕಾಣೆ. ಕರ್ನಾಟಕ ಸರಕಾರದ, ಕನ್ನಡ ಸರಕಾರದ ಪ್ರಾಥಮಿಕ ಶಿಕ್ಷಣ ಸಚಿವರಿಗೆ ಕನ್ನಡವೇ ಬರುವುದಿಲ್ಲ. 'ಪ್ರಾಥಮಿಕ ಶಿಕ್ಷಣ ಸಚಿವರಿಗೇ ಸರಿಯಾದ ಪ್ರಾಥಮಿಕ ಶಿಕ್ಷಣ ಕೊಟ್ಟು ಪುಣ್ಯ ಕಟ್ಟಿಕೊಳ್ರೋ' ಎಂದು ಬೊಬ್ಬೆ ಹೊಡೆದು ಬೇಡುವ ದಯನೀಯ ಪಾಡು ರಾಜ್ಯದ ಜನರದ್ದಾಗಿದೆ.

ಮೊನ್ನೆ ರಾಜ್ಯೋತ್ಸವದ ದಿನದಂದು ಮಧು ಬಂಗಾರಪ್ಪ ಅವರ ಭಾಷಣವನ್ನು ಕೇಳಿದವರೆಲ್ಲ ಹಣೆ ಹಣೆ ಚಚ್ಚಿಕೊಂಡಿರಬಹುದು. 'ಕನ್ನಡವ ಕಾಪಾಡು ಕನ್ನಡಿಗರಿಂದ' ಎಂಬ ಕುಹಕವಾಣಿಯನ್ನು ಮಧು ಅಪ್ಪಟ ನಿಜಗೊಳಿಸಿಬಿಟ್ಟರು. ಹಾಗೆ ನೋಡಿದರೆ, ಅವರ 'ಕಚಡಾ ಕನ್ನಡ' ಕನ್ನಡಿಗರಿಗೆ ಗೊತ್ತಿಲ್ಲದ ಸಂಗತಿಯೇನಲ್ಲ. ವೇದಿಕೆಯೇರಿ ಅವರು ಕನ್ನಡದಲ್ಲಿ ಮಾತಾಡಲಾರಂಭಿಸಿದರೆ, ಅದರಲ್ಲೂ ಸಿದ್ಧ ಭಾಷಣವನ್ನು ಓದಲಾರಂಭಿಸಿದರೆ ಕನ್ನಡಕ್ಕೆ ಅಪಾಯದ ಸಿಡಿಲು ಬಡಿಯಿತು ಎಂದೇ ಅರ್ಥ. ಅವರ 'ಖನ್ನಡ' ಅಥವಾ 'ಕನಡ' ಕೇಳಿ ತಾಯಿ ಭುವನೇಶ್ವರಿ ಕಿಟಾರನೆ ಕಿರುಚಿಕೊಳ್ಳಬಹುದು. 'ಎಂಥಾ ಮಗನನ್ನು ಹೆತ್ತೆ ನಾನು' ಎಂದು ಅವಳೂ ವ್ಯಾಕುಲಳಾಗಬಹುದು. ಅವರ ಕನ್ನಡ ಹೇಗೇ ಇರಲಿ, ಅದಕ್ಕೆ ಕನ್ನಡಿಗರಾರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಹೇಳಿಕೇಳಿ ಅವರು ನಮ್ಮ ಪ್ರಾಥಮಿಕ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು! ಅವರ ಕನ್ನಡವೇ ಇಷ್ಟು ಕೆಟ್ಟದ್ದಾಗಿದ್ದರೆ, ಅವರು ನಾಡಿಗೆ ಎಂಥಾ ಸಂದೇಶವನ್ನು ನೀಡಬಹುದು?

ಅಂದು ರಾಜ್ಯೋತ್ಸವ ಸಮಾರಂಭದಲ್ಲಿ ಮಧು ಬಂಗಾರಪ್ಪನವರು ಕನ್ನಡದಲ್ಲಿ ಭಾಷಣವನ್ನು ಸಿದ್ಧಪಡಿಸಿಕೊಂಡು ಬಂದಿದ್ದರು.. ಅಲ್ಲಲ್ಲ.. ಯಾರೋ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಓದಿ ಒಪ್ಪಿಸಲು ಬಂದಿದ್ದರು. ಅದೇನು ಹಳೆಗನ್ನಡ, ನಡುಗನ್ನಡ, ಸಂಸ್ಕೃತ, ಪಾಲಿ, ದೇವನಾಗರಿ, ಪ್ರಾಕೃತ ಭಾಷೆಗಳಲ್ಲಾಗಲಿ, ಆ ಭಾಷೆಗಳ ಲಿಪಿಯಲ್ಲಾಗಲಿ ಇರಲಿಲ್ಲ. ಸರಳ ಕನ್ನಡದಲ್ಲಿತ್ತು. ಅದನ್ನು (ಕನ್ನಡ ಮಾಧ್ಯಮದ) ನಾಲ್ಕನೇ ಕ್ಲಾಸಿನ ಮಗುವೂ ನಿರರ್ಗಳವಾಗಿ, ತಪ್ಪಿಲ್ಲದೇ, ಸುಲಭವಾಗಿ ಓದಬಲ್ಲುದು. ಬೆಂಗಳೂರಿಗೆ ಸಮೀಪದ ಬಿಡದಿಯಲ್ಲಿ ನೆಲೆಸಿ ಅಲ್ಲಿನ ಟೊಯೋಟಾ ಫ್ಯಾಕ್ಟರಿಯಲ್ಲಿ ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ಕೆಲವು ಜಪಾನಿಯರಿಗೆ ಕೊಟ್ಟಿದ್ದರೂ ಅವರು ನಿರರ್ಗಳವಾಗಿ, ಚೆಂದವಾಗಿ, ಸುಲಭವಾಗಿ ಆ ಕನ್ನಡವನ್ನು ಓದುತ್ತಿದ್ದರು. ಅಂದು ಮಧು ಬಂಗಾರಪ್ಪನವರು ಓದಲು ಆರಂಭಿಸಿದರು. ಪ್ರತಿ ವಾಕ್ಯದಲ್ಲೂ ತಪ್ಪು, ತಪ್ಪು.. ಅವರ ಸಂಪೂರ್ಣ ಭಾಷಣ ಕೆಟ್ಟ ಕೆಟ್ಟ ಉಚ್ಚಾರ, ಅಪಭ್ರಂಶ, ಏನೋ ಹೇಳಲು ಹೋಗಿ ಇನ್ನೇನೋ ಹೇಳುವುದು, ತಪ್ಪು ಪದ ಪ್ರಯೋಗ, ಅಸಂಬದ್ಧ ಹ್ರಸ್ವ-ದೀರ್ಘಗಳಿಂದ ಕೂಡಿತ್ತು.

ಬದಲಾವಣೆಗೆ ಬದಾವಣೆ, ಶಾಲಾ ಶಿಕ್ಷಣಕ್ಕೆ ಸಾಲ ಶಿಕ್ಷಣ, ಹೆಮ್ಮೆಯ ಸಂಗತಿ ಆಗಿದೆ ಎನ್ನುವ ಬದಲು ಹೆಮ್ಮೆಯ ಸಂಗಾತಿ ಆಗಿದೆ, ಕರ್ನಾಟಕ ಎಂದು ಓದಲು ಕರಾಟಕ, ಸಹಬಾಳ್ವೆ ಎನ್ನಲು ಸಹಬಾಳ್ಮೆ, ವಿದ್ಯಾರ್ಥಿಗಳು ಎನ್ನುವ ಬದಲು ವಿದ್ಯಾರ್ಥಗಳು, ಆಶಯಗಳನ್ನು ಎಂದು ಹೇಳುವ ಬದಲು ಆಶಗಳನ್ನು, ಜಾರಿಗೊಳಿಸಲಾಗಿದೆ ಎನ್ನುವ ಬದಲು ಜಾರಿಗೊಳ್ಳಲಾಗಿದೆ, ಗುಣಾತ್ಮಕ ಎನ್ನುವ ಬದಲು ಗುಣನಾತ್ಮಕ, ದುರಸ್ತಿ ಬದಲು ದುರಸ್ತಿತಿ, ಗುಣಮಟ್ಟದ ಎಂದು ಹೇಳಲು ಹೋಗಿ ಗುಣಮಟ್ಟಣ... ಹೀಗೆ ಅಡಸಲುಬಡಸಲು, ಅಸಡ್ಡಾಳ ಕನ್ನಡವನ್ನು ಉಚ್ಚರಿಸಿ ಮಾತು ಮುಗಿಸಿದರು. ಅದರ ಬದಲು, 'ಇದೋ ನನ್ನ ಭಾಷಣದ ಪ್ರತಿ... ದಯವಿಟ್ಟು ನೀವೇ ಓದಿಕೊಳ್ಳಿ' ಎಂದು ಹೇಳಿದ್ದರೆ ಅವರ

ಮರ್ಯಾದೆಯಾದರೂ ಉಳಿಯುತ್ತಿತ್ತು. ಆ ಮೂಲಕ ಕನ್ನಡಮ್ಮನ ಸೇವೆ ಮಾಡಿದ ಶ್ರೇಯಸ್ಸು, ಶ್ರೇಷ್ಠತೆಯೂ ಅವರದ್ದಾಗುತ್ತಿತ್ತು. ಒಂದು ವಾಕ್ಯವನ್ನೂ ಸ್ಪಷ್ಟವಾಗಿ, ಸಮರ್ಪಕವಾಗಿ ಉಚ್ಚರಿಸಲು ಅವರಿಗೆ ಸಾಧ್ಯವಾಗಲಿಲ್ಲ. ಹೋಗಲಿ, ನಮ್ಮ ರಾಜ್ಯದ ಹೆಸರನ್ನಾದರೂ ಸರಿಯಾಗಿ ಹೇಳಿದರಾ? 'ಕರ್ನಾಟಕ' ಎಂದು ಹೇಳುವ ಬದಲು 'ಕರಾಟಕ' ಎಂದು ಹೇಳಿಬಿಟ್ಟರು!

ಇಂಥವರೇನಾದರೂ ಪಕ್ಕದ ಕೇರಳ ಅಥವಾ ತಮಿಳುನಾಡಿನಲ್ಲಿ ಮಂತ್ರಿಯಾಗಿ ತಪ್ಪು ತಪ್ಪು ಮಲಯಾಳಂ ಅಥವಾ ತಮಿಳಿನಲ್ಲಿ ಮಾತಾಡಿದ್ದರೆ, ರಾಜೀನಾಮೆ ಕೊಡುವ ತನಕ ಬಿಡುತ್ತಿರಲಿಲ್ಲ. ಅಸಲಿಗೆ, ರಾಜ್ಯದ ಅಧಿಕೃತ ಭಾಷೆಯಲ್ಲಿ ಸರಿಯಾಗಿ ಉಚ್ಚರಿಸಲು ಬಾರದವರು ಆ ರಾಜ್ಯದಲ್ಲಿ ಮಂತ್ರಿಯೇ ಆಗುತ್ತಿರಲಿಲ್ಲ. ಒಂದು ವೇಳೆ ಆದರೂ, ಅವರಿಗೆ ಪ್ರಾಥಮಿಕ ಶಿಕ್ಷಣ ಮತ್ತು ಗ್ರಂಥಾಲಯ ಖಾತೆಯನ್ನಂತೂ ಕೊಡುತ್ತಲೇ ಇರಲಿಲ್ಲ. ಆದರೆ ಮಧು ಬಂಗಾರಪ್ಪನವರನ್ನು ನಾವು ಸಹಿಸಿಕೊಂಡಿದ್ದೇವೆ. ಇದು ನಮ್ಮ ದೌರ್ಬಲ್ಯವೋ, ದೌರ್ಭಾಗ್ಯವೋ, ಅಸಹಾಯಕತೆಯೋ, ಪಾಪಕರ್ಮವೋ... ಗೊತ್ತಿಲ್ಲ. ಕನ್ನಡದಲ್ಲಿ ಬರೆದ ನಾಲ್ಕು ಸಾಲುಗಳನ್ನು ನೆಟ್ಟಗೆ ಓದಲು ಬಾರದವರಿಗೆ ಪ್ರಾಥಮಿಕ ಶಿಕ್ಷಣದಂಥ ಅತ್ಯಂತ ಮಹತ್ವದ ಮಂತ್ರಿ ಖಾತೆಯನ್ನು ಕೊಟ್ಟರೆ ಅದೆಂಥ ಅನಾಚಾರವಾಗಬಹುದು ಎಂಬುದಕ್ಕೆ ಮಧು ಬಂಗಾರಪ್ಪ ಒಂದು ನಿದರ್ಶನ. ಬ್ರಿಟನ್ ಮೇಯರ್ ಅಥವಾ ಮಂತ್ರಿಯಾದವರು, ಪಾಕಿಸ್ತಾನದ ಪ್ರಧಾನಿಯಾದವರು ಸ್ಪಷ್ಟ ಕನ್ನಡದಲ್ಲಿ ಮಾತಾಡಬೇಕೆಂದು ಯಾರೂ ಬಯಸುವುದಿಲ್ಲ. ಆದರೆ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು ಶುದ್ಧ ಮತ್ತು ಪರಿಶುದ್ಧ ಕನ್ನಡದಲ್ಲಿ ಮಾತಾಡಬೇಕು ಎಂದು ಕನ್ನಡಿಗರೆಲ್ಲರೂ ಬಯಸುತ್ತಾರೆ. ಕಾರಣ ಅದು ಪ್ರಾಥಮಿಕ ಅರ್ಹತೆ.

ನಾವು ಶಾಲೆಯಲ್ಲಿ ಓದುವಾಗ, ಕನ್ನಡದಲ್ಲಿ ತಪ್ಪು ಬರೆದರೆ, ತಪ್ಪು ಓದಿದರೆ, ತಪ್ಪು ಉಚ್ಚರಿಸಿದರೆ, ನಮಗೆ ಮೇಷ್ಟ್ರು ಕೆನ್ನೆಗೆ 'ಫಟೀರ್, ಛಟೀರ್' ಎಂದು ಹೊಡೆಯುತ್ತಿದ್ದರು. ಒಂದು ಪದವನ್ನು ನೂರು ಸಲ ಹೇಳು ಎಂದು ಹೇಳಿಸಿ, ಸರಿಯಾಗಿ ಹೇಳುವ ತನಕ ಬಿಡುತ್ತಿರಲಿಲ್ಲ. ಅಷ್ಟಾಗಿಯೂ ತಪ್ಪು ಮಾಡಿದರೆ ಬೆಂಚಿನ ಮೇಲೆ ಕ್ಲಾಸಿನಲ್ಲಿ ಎಲ್ಲರಿಗೂ ಕಾಣುವಂತೆ ಬಗ್ಗಿ ನಿಲ್ಲಿಸುತ್ತಿದ್ದರು. ಮರುದಿನವೂ ತಪ್ಪು ಉಚ್ಚರಿಸಿದ ಪದಗಳನ್ನು ಮತ್ತೊಮ್ಮೆ ಹೇಳುವಂತೆ ಪ್ರಾಣ ಹಿಂಡುತ್ತಿದ್ದರು. ಹಾಗೆ ಮಾಡಿಸಿದರೆ ಮಾತ್ರ ಭಾಷೆ ಹದವಾಗಲು ಸಾಧ್ಯ ಎಂದು ತಿದ್ದುತ್ತಿದ್ದರು.

ಆದರೆ ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರ ಕನ್ನಡವನ್ನು ತಿದ್ದುವವರು ಯಾರು? ಇವರನ್ನೇಕೆ ಯಾರೂ ಬೆಂಚಿನ ಮೇಲೆ ಹತ್ತಿಸುತ್ತಿಲ್ಲ? ಹಾಗಂತ ಶಾಲೆಯಲ್ಲಿ ಓದುವ ಮಗು, ಮಧು ಬಂಗಾರಪ್ಪನವರನ್ನು ಕೇಳಿದರೆ ಅವರು ಏನು ಹೇಳಬಹುದು? ಈಗ ಹೇಳಿ, ಅವರಿಗೆ ಆ ಖಾತೆ ನಿರ್ವಹಿಸುವ ನೈತಿಕತೆ ಇದೆಯಾ? ಇವರನ್ನು ಒಬ್ಬ ಮಂತ್ರಿ ಎಂದು ನಾವು ಒಪ್ಪಿಕೊಳ್ಳಬೇಕಾ? ಅಷ್ಟಕ್ಕೂ ಅವರನ್ನು ಮಂತ್ರಿಯನ್ನಾಗಿ ಇಟ್ಟುಕೊಳ್ಳಬೇಕು ಅಂದ್ರೆ, ಇಟ್ಟುಕೊಳ್ಳಲಿ, ಯಾರು ಬೇಡ ಅಂತಾರೆ. ಆದರೆ ಈಗಿನ ಖಾತೆಯಿಂದ ಅವರನ್ನು ಬರಖಾಸ್ತುಗೊಳಿಸಲಿ. ಬೇಕಾದರೆ ಅವರಿಗೆ, ಪಶು ಸಂಗೋಪನೆ, ರೇಷ್ಮೆ, ಮೀನುಗಾರಿಕೆ, ಬಂದರು, ಜವಳಿ, ಸಕ್ಕರೆ, ಹಾಗಲಕಾಯಿ, ಹೀರೆಕಾಯಿ, ಹಿತ್ತಲ ತೋಟ ಖಾತೆಗಳನ್ನು ನೀಡಲಿ. ಪ್ರಾಥಮಿಕ ಶಿಕ್ಷಣ ಮಂತ್ರಿಯಾಗಿ ಮಧು ಬಂಗಾರಪ್ಪ ಅವರನ್ನು ಮುಂದುವರಿಸುವುದು disgrace.

ನಿಮಗೆ ನೆನಪಿರಬಹುದು, ಮಂತ್ರಿಯಾದ ತರುವಾಯದಲ್ಲಿ, ಕನ್ನಡ ಪುಸ್ತಕ ಪ್ರಕಾಶಕರು ಗ್ರಂಥಾಲಯ ಸಚಿವರೂ ಆಗಿರುವ ಮಧು ಬಂಗಾರಪ್ಪನವರನ್ನು ಸೌಜನ್ಯಕ್ಕಾಗಿ ಭೇಟಿಯಾಗಿದ್ದರು. ಮಂತ್ರಿಗಳನ್ನು ನೋಡಲು ಖಾಲಿ ಕೈಯಲ್ಲಿ ಹೋಗಲಾದೀತೇ? ತಮ್ಮ ಪ್ರಕಾಶನ ಪ್ರಕಟಿಸಿದ ಪ್ರಮುಖ ಪುಸ್ತಕಗಳನ್ನು ಅಂದವಾಗಿ ಪ್ಯಾಕ್ ಮಾಡಿಕೊಂಡು ಮಾನ್ಯ ಸಚಿವರಿಗೆ ಕೊಡಲು ಮುಂದಾದಾಗ, 'ನಾನು ಪುಸ್ತಕಗಳನ್ನು ಓದುವುದಿಲ್ಲ. ಮನೆಯಲ್ಲಿ ಈ ಪುಸ್ತಕಗಳನ್ನೆಲ್ಲ ಇಟ್ಟುಕೊಳ್ಳಲು ಜಾಗವಿಲ್ಲ. ಹೀಗಿರುವಾಗ ನೀವೇ ಇವುಗಳನ್ನು ವಾಪಸ್ ತೆಗೆದುಕೊಂಡು ಹೋಗಿ, ನನಗೆ ಬೇಡ' ಎಂದುಬಿಟ್ಟಿದ್ದರು. ಇಂಥ ಮಂತ್ರಿಯ ಬಳಿ ಏನು ಮಾತಾಡೋದು ಎಂದು ಪ್ರಕಾಶಕರೆಲ್ಲ ಪೆಚ್ಚು ಮೋರೆ ಹಾಕಿಕೊಂಡು ಬಂದಿದ್ದರು. ಈ ಮಹಾಶಯ ನಮ್ಮ ಗ್ರಂಥಾಲಯ ಸಚಿವ ಎಂಬ ಕೇಡು ಬೇರೆ. ಇದು ನಿಜಕ್ಕೂ ನಾಚಿಕೆಗೇಡು! ಪ್ರಾಥಮಿಕ ಶಿಕ್ಷಣ ಸಚಿವರಿಗೇ ಪ್ರಾಥಮಿಕ ಶಿಕ್ಷಣ ನೀಡಬೇಕಾದ ಪರಿಸ್ಥಿತಿ. ಗ್ರಂಥಾಲಯ ಸಚಿವರ ಕೈಗೇ ಪುಸ್ತಕವನ್ನಿಡಬೇಕಾಗಿದೆ. ಈಗಲೇ ತಡವಾಯ್ತು, ಇನ್ನಾದರೂ 'ಸರಸ್ವತಿಯ ಶಾಪಪುತ್ರ'ರಿಂದ ಶಿಕ್ಷಣದಂಥ ಮಹತ್ವದ ಖಾತೆಗಳನ್ನು ಕಿತ್ತುಕೊಳ್ಳಲೇಬೇಕಾಗಿದೆ.

ಕಾಂಗ್ರೆಸ್ಸಿನ ಮತ್ತೊಬ್ಬ ನಾಯಕರಿದ್ದಾರೆ. ಅವರು ತಮ್ಮ ಭಾಷಾ ಪ್ರೇಮದಿಂದ ಭಾರತದ ರಾಜಕಾರಣದಲ್ಲಿಯೇ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಅವರ ಭಾಷಾಭಿಮಾನದ ಬಗ್ಗೆ ನನಗೆ ವಿಶೇಷ ಪ್ರೀತಿ. ಲೋಕಸಭಾ ಸದಸ್ಯ ಶಶಿ ತರೂರ್ ಅದ್ಭುತ ಇಂಗ್ಲಿಷ್ ಮಾತುಗಾರರು ಎಂಬುದಕ್ಕಿಂತ, ಅವರಿಗೆ ಆ ಭಾಷೆಯ ಮೇಲಿನ ಮೋಹವನ್ನು ಮೆಚ್ಚಲೇಬೇಕು. ದುಬೈನಿಂದ ಪ್ರಕಟವಾಗುವ 'ಖಲೀಜ್ ಟೈಮ್ಸ್' ಪತ್ರಿಕೆಯಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ವಾರ ವಾರವೂ ತರೂರ್ ಬರೆಯುತ್ತಿದ್ದ ಅಂಕಣವನ್ನು ವರ್ಷಗಟ್ಟಲೆ ತಪ್ಪದೇ ಓದಿದವನು ನಾನು. ಆ ಅಂಕಣವನ್ನು ಓದಲೆಂದೇ ಆ ಪತ್ರಿಕೆಯನ್ನು ತರಿಸಿಕೊಳ್ಳುತ್ತಿದ್ದೆ.

ಇಂದಿನ ದಿನಗಳಲ್ಲಿ ರಾಜಕಾರಣಿಗಳು ಪುಸ್ತಕ ಬರೆಯುವುದು, ಓದುವುದು ಮತ್ತು ಪುಸ್ತಕಗಳ ಕುರಿತು ಮಾತಾಡುವುದು ಅಪರೂಪ. ರಾಜಕಾರಣಿಗಳು ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ಅದು ಮತದಾರರ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂಬ ಭಾವನೆ ಬೆಳೆಸಿಕೊಂಡಿರುವವರ ಮಧ್ಯೆ, ತರೂರ್ ಭಿನ್ನರಾಗಿ ಎದ್ದು ನಿಲ್ಲುತ್ತಾರೆ. ಹೀಗಾಗಿ ಲೋಕಸಭೆಯ 543 ಸದಸ್ಯರು ಮತ್ತು ರಾಜ್ಯಸಭೆಯ 245 ಸದಸ್ಯರ ಪೈಕಿ ಅಂಥ ಅಭಿರುಚಿಯಿರುವವರ ಸಂಖ್ಯೆ ಎರಡಂಕಿ ದಾಟಲಿಕ್ಕಿಲ್ಲ ಅಂದ್ರೆ ಅಚ್ಚರಿಯಾದೀತು. ಅಷ್ಟರಮಟ್ಟಿಗೆ 'ಅಕ್ಷರಪ್ರೇಮಿ'ಗಳು ಸಂಸತ್ತಿನಲ್ಲಿ ವಿನಾಶದ ಅಂಚಿನಲ್ಲಿರುವ 'ಜೀವಿ'ಗಳಾಗಿದ್ದಾರೆ. ಅವರ ಮಧ್ಯೆ ತರೂರ್ 'ನಕ್ಷತ್ರ'ದಂತೆ ಹೊಳೆಯುತ್ತಾರೆ. ತಮ್ಮ ದೈನಂದಿನ ರಾಜಕೀಯ ಚಟುವಟಿಕೆಗಳ ಮಧ್ಯದಲ್ಲೂ ಅವರು ಲಿಟ್ ಫೆಸ್ಟ್‌ಗಳಲ್ಲಿ, ಕಮ್ಮಟಗಳಲ್ಲಿ, ಗೋಷ್ಠಿಗಳಲ್ಲಿ ಭಾಗವಹಿಸುತ್ತಾರೆ, ಪುಸ್ತಕಗಳ ಬಗ್ಗೆ ಬರೆಯುತ್ತಾರೆ, ವಿಮರ್ಶಿಸುತ್ತಾರೆ, ಹತ್ತಾರು ಪುಸ್ತಕಗಳಿಗೆ ಮುನ್ನುಡಿ-ಬೆನ್ನುಡಿ ಬರೆಯುತ್ತಾರೆ, ನಿಯತವಾಗಿ ಪತ್ರಿಕೆಗಳಿಗೆ ಅಂಕಣ ಬರೆಯುತ್ತಾರೆ, ವರ್ಷಕ್ಕೆರಡು ಪುಸ್ತಕಗಳನ್ನಾದರೂ ಹೆರುತ್ತಾರೆ, ನೂರಾರು ಕೃತಿಗಳನ್ನು ಓದುತ್ತಾರೆ.

ಇತ್ತೀಚೆಗೆ ಪ್ರಕಟವಾದ, ತರೂರ್ ಅವರ A Wonderland of Words: Around the Word in 101 Essays ಕೃತಿ ತರೂರ್ ಅವರ ಭಾಷಾ ಪ್ರೇಮಕ್ಕೊಂದು ಕೈಗನ್ನಡಿ. ಇಂಗ್ಲಿಷ್ ಭಾಷೆಯ ವೈಶಿಷ್ಟ್ಯ, ವಿರೋಧಾಭಾಸ, ಭಾಷಾ ಪ್ರಯೋಗದಲ್ಲಾಗುವ ಪ್ರಮಾದ, ಬ್ರಿಟಿಷ್ ವರ್ಸಸ್ ಅಮೆರಿಕನ್ ಇಂಗ್ಲಿಷ್, ಬೇರೆ ಭಾಷೆಗಳಿಂದ ಇಂಗ್ಲಿಷಿಗೆ ಬಳುವಳಿಯಾಗಿ ಬಂದ ಪದಗಳು, ಇಂಗ್ಲಿಷಿನಲ್ಲಿ ಇರಲೇಬೇಕಾದ ಆದರೆ ಇರದ ಪದಗಳು, ಫ್ರೆಂಚ್, ಐರಿಷ್, ಜಪಾನೀಸ್ ಮೂಲದ ಇಂಗ್ಲಿಷ್ ಪದಗಳು, ಬೇರೆ ಭಾಷೆಗಳಿಂದ ಸಾಲ ಪಡೆದ ಪದಗಳು, ಉಕ್ರೇನಿನಿಂದ ಬಂದ ಪದಗಳು, ಹಣಕ್ಕೆ ಸಂಬಂಧಿಸಿದ ಪದಗಳು, ಯುದ್ಧ ಹುಟ್ಟುಹಾಕಿದ ಪದಗಳು, ಚುನಾವಣಾ ಸಂದರ್ಭದಲ್ಲಿನ ಭಾಷೆ, ಸುದ್ದಿಯಲ್ಲಿರುವ ಪದಗಳು, ಮುದ್ರಣ ದೋಷದಿಂದ ಆಗುವ ಅವಾಂತರಗಳು, ಆಗಾಗ ಅರ್ಥ ಬದಲಿಸಿಕೊಳ್ಳುವ ಪದಗಳು, ಹೊಸ ವರ್ಷಕ್ಕೆ ಹೊಸ ಪದಗಳು, ಲಿಮರಿಕ್‌ಗಳು, ಸ್ಪೂನರಿಸಂ, ಪನ್, ಸಂಕ್ಷಿಪ್ತಾಕ್ಷರ, ವಸಾಹತುಶಾಹಿ ಪದಗಳು, ವೈಮಾನಿಕ ಪದಗಳು, ದ್ವೇಷಿಸಲ್ಪಟ್ಟ ಪದಗಳು, ಭಾಷೆ ಮತ್ತು ಲೈಂಗಿಕತೆ.. ಹೀಗೆ ನೂರಾರು ವಿಷಯಗಳ ಬಗ್ಗೆ ತರೂರ್ ಈ ಕೃತಿಯಲ್ಲಿ ಸ್ವಾರಸ್ಯಕರವಾಗಿ ಬರೆದಿದ್ದಾರೆ. ಭಾಷೆಯ ಬಗ್ಗೆ ಉತ್ಕಟ ಮಮತೆಯಿದ್ದವರು ಮಾತ್ರ ಇಂಥ ಪುಸ್ತಕ ಬರೆಯಲು ಸಾಧ್ಯ. ತರೂರ್ ಒಂದು ಪದ ಬಳಸಿದರೆ ಅದು ಗೂಗಲ್‌ನಲ್ಲಿ ಟ್ರೆಂಡ್, ವೈರಲ್ ಆಗುವಷ್ಟರ ಮಟ್ಟಿಗೆ ಅವರು ಭಾಷಾ ಪ್ರೇಮವನ್ನು ಬಿತ್ತುತ್ತಿದ್ದಾರೆ.

ಭಾಷೆಯ ದೃಷ್ಟಿಯಿಂದ, ಒಬ್ಬರು ಕೆಟ್ಟ ಕಾರಣಕ್ಕೆ ದೂರವಾದರೆ, ಮತ್ತೊಬ್ಬರು ಒಳ್ಳೆಯ ಕಾರಣಕ್ಕೆ ಹತ್ತಿರವಾಗುತ್ತಾರೆ.

# ದೀಪದ ಬೆಳಕಿನ ಕೆಳಗೆ ಕಾರ್ಗತ್ತಲ ಆರ್ತನಾದ!

**ನಾವು ಇತ್ತ ದೀಪಾವಳಿ ಆಚರಿಸುತ್ತಿದ್ದರೆ ಅತ್ತ ಯುದ್ಧದ ಭೀಕರತೆಯ ಕರಾಳ ದೃಶ್ಯಾವಳಿಗಳು ಒಂದಾದ ಮೇಲೊಂದರಂತೆ ವೇಷ ಬದಲಿಸುತ್ತಿದ್ದವು. ಸಾವಿನ ನೆರಳು ಎಲ್ಲೆಡೆ ಕವಿದಿತ್ತು. ಈ ಯುದ್ಧ ಎಲ್ಲವನ್ನೂ ತಿಂದುಹಾಕುತ್ತದೆ. ಬೆಂಕಿ ಹಚ್ಚುವವರು ಒಂದು ದಿನ ಅದೇ ಬೆಂಕಿಯಲ್ಲಿ ಸುಟ್ಟುಹೋಗಲಿದ್ದಾರೆ.**

ಸಂಗತ

ಡಾ.ವಿಜಯ್ ದರಡಾ

vveditoped@gmail.com

ಕಳೆದ ವಾರವಷ್ಟೇ ದೀಪಾವಳಿ ಆಚರಿಸಿದೆವು. ಆವತ್ತು ರಾತ್ರಿ ಬಣ್ಣಬಣ್ಣದ ದೀಪಗಳ ಬೆಳಕಿನಲ್ಲಿ ನಮ್ಮ ಮುಖಗಳು ಹೊಳೆಯುತ್ತಿದ್ದವು. ಎಲ್ಲರ ಮನೆ-ಮನಗಳಲ್ಲಿ ಸಂತೋಷ ತುಂಬಿತ್ತು. ಹಬ್ಬವೆಂದರೆ ಭಾರತೀಯರಿಗೆ ಸಂಭ್ರಮ. ಮನೆಗಳಿಗೆ ಬೆಳಗಿನಿಂದ ಸಂಜೆಯವರೆಗೂ ನೆಂಟರಿಷ್ಟರು, ಆಪ್ತರು, ನೆರೆಹೊರೆಯವರು ಬಂದು ಹಬ್ಬದ ಶುಭಾಶಯ ಹೇಳಿ, ಸಿಹಿ ವಿನಿಮಯ ಮಾಡಿಕೊಳ್ಳುತ್ತಿದ್ದರು. ಮಕ್ಕಳಂತೂ ಅವರದೇ ಲೋಕದಲ್ಲಿ ಸಂಭ್ರಮಿಸುತ್ತಿದ್ದರು. ಎಲ್ಲೆಡೆ ಪಟಾಕಿಗಳ ಸದ್ದು, ಝಗಮಗಿಸುವ ಬೆಳಕು. ಮನೆಯಿಂದ ದೂರವಿದ್ದ ಸದಸ್ಯರು ಅಥವಾ ಆಪ್ತೇಷ್ಟರು ಸ್ಮಾರ್ಟ್‌ಫೋನ್‌ಗಳ ವಿಡಿಯೋ ಕಾಲ್‌ಗಳಲ್ಲಿ ಶುಭಾಶಯ ವಿನಿಮಯ ಮಾಡಿಕೊಂಡು ಹಬ್ಬದ ಸಂಭ್ರಮವನ್ನು ಹಂಚಿಕೊಳ್ಳುತ್ತಿದ್ದರು. ನಿಮ್ಮಂತೆ ನಾನು ಕೂಡ ಆವತ್ತು ತಡರಾತ್ರಿಯವರೆಗೂ ಹಬ್ಬದ ಸಂಭ್ರಮದಲ್ಲಿ ಮುಳುಗಿದ್ದೆ. ಹಬ್ಬದ ಸಡಗರವೆಂದರೆ ಹಾಗೇ ಇರಬೇಕು.

ಹಬ್ಬಗಳು ನಮ್ಮ ಸಂಸ್ಕೃತಿಯ ಭಾಗ. ಭಾರತೀಯ ಪರಂಪರೆಯಲ್ಲಿ ಹಬ್ಬಗಳಿಗೆ ವಿಶೇಷ ಸ್ಥಾನವಿದೆ. ಹಬ್ಬಗಳ ಆಚರಣೆಯಲ್ಲೇ ನಮ್ಮ ಬದುಕು ಇನ್ನಷ್ಟು ಸಂತೋಷವನ್ನು ಕಾಣುತ್ತದೆ! ಅದರಲ್ಲಿ ಎರಡು ಮಾತೇ ಇಲ್ಲ.

ಆದರೆ ಆವತ್ತು ರಾತ್ರಿ ಹೊತ್ತೇರುತ್ತಿದ್ದಂತೆ ನನ್ನ ಮನಸ್ಸು ಬೇರೆಯದೇ ಲಹರಿಯತ್ತ ಹೊರಳಿತು. ನಾವೆಷ್ಟು ಅದೃಷ್ಟವಂತರು! ಇಲ್ಲಿ ಸಂಭ್ರಮದಿಂದ ಪಟಾಕಿ ಹೊಡೆಯುತ್ತ, ಸಿಹಿ ತಿನ್ನುತ್ತ, ಶುಭಾಶಯ ವಿನಿಮಯ ಮಾಡಿಕೊಳ್ಳುತ್ತ ಹಬ್ಬ ಆಚರಿಸುತ್ತಿದ್ದೇವೆ. ಆದರೆ ಕೆಲವೇ ಸಾವಿರ ಮೈಲುಗಳ ದೂರದಲ್ಲಿ ಲಕ್ಷಾಂತರ ಜನರು ಪಟಾಕಿಯ ಬದಲು ಬಾಂಬ್‌ಗಳ ಸದ್ದಿಗೆ ಬೆಚ್ಚಿ ಬೀಳುತ್ತಿದ್ದಾರೆ. ಅಲ್ಲಿ ಪಟಾಕಿಗಳ ಬದಲು ಬಾಂಬ್‌ಗಳು, ಕ್ಷಿಪಣಿಗಳು ಸಿಡಿಯುತ್ತಿವೆ! ಸಂಭ್ರಮಾಚರಣೆಗೆ ಸಾಕ್ಷಿಯಾಗುವ ಬದಲು ಅವರೆಲ್ಲರೂ ಸಾವಿನ ರುದ್ರನರ್ತನವನ್ನು ನೋಡುತ್ತಿದ್ದಾರೆ. ಶುಭಾಶಯ ವಿನಿಮಯ ಮಾಡಿಕೊಳ್ಳುವ ಬದಲು ಅವರು ದುಃಖವನ್ನು ಹಂಚಿಕೊಳ್ಳುತ್ತಿದ್ದಾರೆ. ಆ ಬಾಂಬ್‌ಗಳ ಸದ್ದು ನನ್ನನ್ನು ತಲುಪದಿದ್ದರೂ ಅಲ್ಲಿನ ಸ್ಫೋಟಗಳು ನನ್ನ ಸುಪ್ತಪ್ರಜ್ಞೆಯನ್ನು ಇರಿದು ಘಾಸಿಗೊಳಿಸುತ್ತಿದ್ದವು. ನನಗೆ ಕಿರಿಯ ಕವಿಮಿತ್ರ ಅರ್ಮಾನ್ ಆನಂದ್ ಅವರ ಕವಿತೆಯ ಕೆಲ ಸಾಲುಗಳು ನೆನಪಾದವು. 'ಲಡತೇ ಹುಯೇ ಉಕ್ರೇನ್ ಕೆ ನಾಮ್' ಎಂಬ ಕವಿತೆಯ ಸಾಲುಗಳಿವು: "ಆಗಷ್ಟೇ ಅವನು ಹೊಲದಿಂದ ತರಕಾರಿ ಕಿತ್ತುಕೊಂಡು ಮನೆಗೆ ಬರುತ್ತಿದ್ದ, ಇಂಗ್ಲಿಷ್ ಭಾಷೆಯ ಮ್ಯಾನ್ಯುವಲ್ ಜತೆಗೆ, ಒಂದು ಬಂದೂಕು ತಂದು ಕೈಗಿತ್ತು, ಅವರು ಹೇಳಿದರು, ನೀನೀಗ ದೇಶಕ್ಕಾಗಿ ಹೋರಾಡಬೇಕು. ಇಲ್ಲಿಯವರೆಗೆ ಅವನಿಗೆ ದೇಶದ ಹೊಟ್ಟೆ ತುಂಬಿಸಬೇಕಿತ್ತು, ಈಗ ಹೋರಾಡಬೇಕಿದೆ, ಬಹಳ ಹೊತ್ತು ಬಂದೂಕು ಆ ಕಡೆ ಈ ಕಡೆ ಹೊರಳಿಸಿ ನೋಡುತ್ತಲೇ ಇದ್ದ, ಒಂದು ವಿಷಯ ಖಾತ್ರಿಯಾಯಿತು, ಬಂದೂಕಿನಿಂದ ಹೊಲ ಉಳಲು ಸಾಧ್ಯವಿಲ್ಲ, ಅವನ ಗರ್ಭಿಣಿ ಹೆಂಡತಿ ಬಾಗಿಲ ಬಳಿ ನಿಂತು ದೂರದಿಂದ ನೋಡುತ್ತಿದ್ದಳು. ಅವನು ಬಂದೂಕನ್ನು ಒಂದು ಕಡೆ ಇಟ್ಟುಬಿಟ್ಟ, ಬಳಿಕ ಕೊಡಲಿ ಕೈಗೆತ್ತಿಕೊಂಡ, ಅವನ ಕೈಗಳಿಗೆ ಕೊಡಲಿಯ ಪರಿಚಯವಿತ್ತು, ಕೊಡಲಿಗೆ ಅವನ ಭಾಷೆ ತಿಳಿಯುತ್ತಿತ್ತು, ಅವನು ಹೆಂಡತಿಯ ಬಳಿಗೆ ಹೋದ, ಅವಳನ್ನು ತಬ್ಬಿಕೊಂಡು ಹೇಳಿದ, ಮಗುವಿಗೆ ಹೇಳು ನಿನ್ನ ತಂದೆ, ಬಂದೂಕುಧಾರಿಗಳ ಮೇಲೆ ಕೊಡಲಿ ಬೀಸಿದ್ದ, ಎಲ್ಲಿ ಅವನ ಹೆಣ ಬಿದ್ದಿದೆಯೋ ಅಲ್ಲೊಂದು ಚೆರ್ರಿ ಗಿಡವನ್ನು ನೆಟ್ಟುಬಿಡು!".

ಯುದ್ಧದ ಸುದ್ದಿ ನೀವೂ ಕೇಳಿದ್ದೀರಲ್ಲವೇ? ರಷ್ಯಾ ಮತ್ತು ಉಕ್ರೇನ್ ನಡುವೆ, ಹಮಾಸ್-ಹೆಜ್ಬುಲ್ಲಾ ಮತ್ತು ಇಸ್ರೇಲ್ ನಡುವೆ ಬಹಳ ದಿನಗಳಿಂದ ಯುದ್ಧ ನಡೆಯುತ್ತಿದೆ. ಸಾವಿರಾರು ಜನರು ಸತ್ತಿದ್ದಾರೆ. ಹತ್ತಾರು ಸಾವಿರ ಜನರು ಗಾಯಗೊಂಡಿದ್ದಾರೆ. ಈಗಲೂ ಮುಗ್ಧರು ಸಾಯುತ್ತಿದ್ದಾರೆ, ಗಾಯಗೊಳ್ಳುತ್ತಿದ್ದಾರೆ, ಮನೆ-ಮಠ ಕಳೆದುಕೊಂಡು ನಿರಾಶ್ರಿತರಾಗಿ ದಿಕ್ಕಾಪಾಲಾಗುತ್ತಿದ್ದಾರೆ. ಒಂದು ಅಂದಾಜಿನ

ಪ್ರಕಾರ ಈ ಎರಡು ಯುದ್ಧಗಳಲ್ಲಿ 10 ಕೋಟಿಗೂ ಹೆಚ್ಚು ಜನರು ಊರು ತೊರೆದು ಇನ್ನೆಲ್ಲಿಗೋ ಹೋಗಿ ಜೀವ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ. ಅವರಲ್ಲಿ ಸಾಕಷ್ಟು ಜನರು ನಿರಾಶ್ರಿತರ ಕ್ಯಾಂಪುಗಳಲ್ಲಿ ಗಂಜಿ ಕುಡಿಯುತ್ತಿದ್ದಾರೆ. ಮಕ್ಕಳು ಹಾಲು, ಬ್ರೆಡ್ಡು, ಔಷಧಿಗಳು ಸರಿಯಾಗಿ ಸಿಗದೆ ಪರದಾಡುತ್ತಿವೆ. ಪಾಪ, ಅವರೆಲ್ಲರೂ ಸಂತೋಷದಿಂದ ಬದುಕು ಕಟ್ಟಿಕೊಳ್ಳಲು ಬಯಸಿದ್ದವರು. ಅವರೆಲ್ಲರೂ ಶಾಂತಿಯಿಂದ ಬದುಕುವ ಕನಸು ಕಂಡಿದ್ದವರು. ಅವರು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು, ಅವರಿಗಾಗಿ ಒಂದಷ್ಟು ಹಣ ಉಳಿತಾಯ ಮಾಡಿ ಸುಂದರವಾದ ಪುಟ್ಟ ಮನೆ ಕಟ್ಟಿಕೊಂಡು ನೆಮ್ಮದಿಯಿಂದ ಜೀವಿಸಲು ಆಸೆಪಟ್ಟಿದ್ದವರು. ಅವರಿಗೂ ಈದ್ ಆಚರಿಸಬೇಕು, ಕ್ರಿಸ್‌ಮಸ್ ಆಚರಿಸಬೇಕು, ದೀಪಾವಳಿ ಆಚರಿಸಬೇಕು ಎಂಬ ಆಸೆಗಳಿದ್ದವು. ಅವರು ಈ ಜಗತ್ತಿನಿಂದ ಇನ್ನೇನೂ ವಿಶೇಷವಾದುದನ್ನು ಕೇಳುತ್ತಿರಲಿಲ್ಲ; ಅವರಿಗೆ ಬೇಕಿದ್ದುದು ಎರಡು ಹೊತ್ತಿನ ಊಟ, ಶುದ್ಧ ಕುಡಿಯುವ ನೀರು ಮತ್ತು ತಲೆಯ ಮೇಲೊಂದು ಸೂರು. ಆದರೆ ಈಗ ಆಗಿರುವುದೇನು? ಉಕ್ರೇನ್ ಒಂದರಲ್ಲೇ 14 ಲಕ್ಷಕ್ಕೂ ಹೆಚ್ಚು ಜನರಿಗೆ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ. ಅವರ ಆರೋಗ್ಯ ಹದಗೆಡುತ್ತಿದೆ. ಔಷಧಗಳು ಸರಿಯಾಗಿ ಸಿಗುತ್ತಿಲ್ಲ. ಗನ್ ಪೌಡರಿನ ಕೆಟ್ಟ ವಾಸನೆ ಅವರ ಶ್ವಾಸಕೋಶವನ್ನು ಹಿಂಡುತ್ತಿದೆ. ಬಾಂಬುಗಳ ಹೊಗೆಯಲ್ಲಿ ಅವರಿಗೆ ಉಸಿರುಗಟ್ಟುತ್ತಿದೆ. ಪ್ರತಿ ಕ್ಷಣವೂ ಅವರ ಕಿವಿಗೆ ಸ್ಫೋಟದ ಸದ್ದು ಬಂದು ಇರಿಯುತ್ತಿದೆ. ಯಾವಾಗ ಏನಾಗುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ. ಕಣ್ಣೆದುರೇ ತಮ್ಮ ಮಕ್ಕಳು ಬಾಂಬ್ ಸ್ಫೋಟಕ್ಕೆ ಸಿಲುಕಿ ಛಿದ್ರವಾಗುವುದನ್ನು ತಾಯಂದಿರು ನೋಡುತ್ತಿದ್ದಾರೆ. ಕಣ್ಣೆದುರೇ ತಮ್ಮ ಮನೆಯ ಗಂಡಸರು ಯುದ್ಧದಲ್ಲಿ ಸತ್ತು ಶವವಾಗಿ ಮಣ್ಣಾಗುತ್ತಿರುವುದನ್ನು ಅವರು ಅಸಹಾಯಕರಾಗಿ ವೀಕ್ಷಿಸುತ್ತಿದ್ದಾರೆ. ಅವರ ಮಕ್ಕಳು ಅನಾಥರಾಗುತ್ತಿದ್ದಾರೆ. ಮಕ್ಕಳ ಜತೆಗೇ ಅವರೂ ನೆಲೆ ಕಳೆದುಕೊಳ್ಳುತ್ತಿದ್ದಾರೆ.

ಏಕೆ ಈ ಪರಿ ಯುದ್ಧಗಳು ನಡೆಯುತ್ತವೆ? ನಮಗೆ ಶಾಂತಿಯಿಂದ ಬದುಕಲು ಬರುವುದಿಲ್ಲವೇ? ಏಕೆ ಒಂದು ದೇಶವು ಇನ್ನೊಂದು ದೇಶದ ಮೇಲೆ ಬಾಂಬ್‌ಗಳ ಮಳೆ ಸುರಿಸಬೇಕು? ಏಕೆ ಸೇನೆಯ ಯೋಧರು ಪರಸ್ಪರರನ್ನು ಕೊಂದುಕೊಳ್ಳಬೇಕು? ಇತ್ತೀಚೆಗೆ ವಿಶ್ವಸಂಸ್ಥೆಯ ವರದಿಯೊಂದನ್ನು ಓದಿ ಆಘಾತವಾಯಿತು. ಕಳೆದ 200 ವರ್ಷಗಳಲ್ಲಿ ಜಗತ್ತಿನಲ್ಲಿ ಯುದ್ಧ ಮಾಡುತ್ತಾ 3.7 ಕೋಟಿ ಜನರು ಸತ್ತಿದ್ದಾರಂತೆ! ಈ ಲೆಕ್ಕದಲ್ಲಿ ಯುದ್ಧದ ಬಳಿಕ ಹಸಿವು ಹಾಗೂ ರೋಗದಿಂದ ಸತ್ತ ನಾಗರಿಕರ ಸಂಖ್ಯೆ ಸೇರಿಲ್ಲ! ರಷ್ಯಾ ಮತ್ತು ಉಕ್ರೇನ್, ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧ ಹಾಗಿರಲಿ, ಅತ್ತ ಆಫ್ರಿಕಾ ಹಾಗೂ ಇನ್ನೂ ಕೆಲ ಮಧ್ಯಪ್ರಾಚ್ಯ ದೇಶಗಳಲ್ಲಿ ಪ್ರತಿದಿನ ಆಂತರಿಕ ಸಂಘರ್ಷ ಹಾಗೂ ನಾಗರಿಕ ದಂಗೆಗಳಿಂದ ಜನರು ಸಾಯುತ್ತಿದ್ದಾರೆ. ಕೆಲವೇ ವರ್ಷಗಳ ಹಿಂದೆ ನಾವು ಅಫ್ಘಾನಿಸ್ತಾನದಲ್ಲಿ ನಡೆದ ಯುದ್ಧವನ್ನು ನೋಡಿದ್ದೇವೆ. ಬಳಿಕ ಅಲ್ಲಿನ ಜನರು ಪರಿತಪಿಸಿದ್ದನ್ನೂ, ಕಣ್ಣೀರಿನಲ್ಲಿ ಕೈತೊಳೆದಿದ್ದನ್ನೂ ಕಂಡಿದ್ದೇವೆ. ಯುದ್ಧದ ನಂತರ ಆಫ್ಘನ್ನರ ಬದುಕು ಅಕ್ಷರಶಃ ನರಕವೇ ಆಗಿದೆ. ಜಗತ್ತಿನಲ್ಲಿ ನಡೆಯುವ ಪ್ರಮುಖ ಯುದ್ಧಗಳು ಮಾತ್ರ ನಮ್ಮ ಗಮನ ಸೆಳೆಯುತ್ತವೆ. ಆದರೆ, ಯುದ್ಧವೆಂದರೆ ಕೇವಲ ಅಂಕಿ-ಅಂಶಗಳು ಅಲ್ಲವಲ್ಲ! ಅಷ್ಟು ಜನ ಸತ್ತರು, ಇಷ್ಟು ಜನ ಗಾಯಗೊಂಡರು ಎಂಬುದಷ್ಟೇ ಯುದ್ಧದ ಫಲಿತಾಂಶವಲ್ಲ! ಕಾಶ್ಮೀರದಲ್ಲಿ ದಿನನಿತ್ಯವೂ ಯುದ್ಧ ನಡೆಯುತ್ತಿದೆ. ಇದು ಅನಾಮತ್ತು ನಾಲ್ಕು ದಶಕಗಳಿಂದ ನಡೆಯುತ್ತಿದೆ. ತಣ್ಣಗಿನ ಹಿಮದ ಮೇಲೆ ಅಲ್ಲಿ ಕಾಶ್ಮೀರಿಗಳ ರಕ್ತ ಹರಿಯುತ್ತಲೇ ಇದೆ. ಹಾಗಿರುವಾಗ ನಾವು ಹೇಗೆ ತಾನೇ 'ಕದಮ್ ಕದಮ್ ಬಢಾಯೇ ಜಾ, ಖುಷಿ ಕೇ ಗೀತ್ ಗಾಯೇ ಜಾ' (ಹೆಜ್ಜೆಗೆ ಹೆಜ್ಜೆ ಸೇರಿಸಿ ಮುಂದೆ ಸಾಗೋಣ, ಖುಷಿಯ ಹಾಡು ಹಾಡೋಣ) ಎಂದು ಹೇಳಲು ಸಾಧ್ಯ?

ನಿಮಗೊಂದು ವಿಷಯ ಗೊತ್ತೆ? ನಾವಿಲ್ಲಿ ಪ್ರತಿದಿನ ಊಟ-ತಿಂಡಿ-ನಿದ್ರೆ ಮಾಡಿಕೊಂಡು ಇರುವಾಗ ಜಗತ್ತಿನಲ್ಲಿ 20ಕ್ಕೂ ಹೆಚ್ಚು ದೇಶಗಳು ಯುದ್ಧದಲ್ಲಿ ನಿರತವಾಗಿವೆ! ಅಲ್ಲಿ ಸಂಘರ್ಷದಲ್ಲಿ ತೊಡಗಿರುವ ಬೇರೆ ಬೇರೆ ಜನಾಂಗಗಳನ್ನೂ, ಗುಂಪುಗಳನ್ನೂ ಇನ್ನಾವುದೋ ಪ್ರಬಲ ದೇಶವನ್ನು ಆಳುವವರು ಸ್ವಾರ್ಥದ ಬೇಳೆ ಬೇಯಿಸಿಕೊಳ್ಳಲು ರೊಚ್ಚಿಗೇಳಿಸುತ್ತಿದ್ದಾರೆ. ಆ ಪ್ರಬಲ ದೇಶಗಳಿಗೆ ಈ ದುರ್ಬಲ ದೇಶದಲ್ಲಿ ತಮ್ಮಿಷ್ಟದಂತೆ ಕುಣಿಯುವ ಸರಕಾರಗಳು ಪ್ರತಿಷ್ಠಾಪನೆಯಾಗಬೇಕು. ಆ ಪ್ರಬಲ ದೇಶಗಳಿಗೆ ಈ ದುರ್ಬಲ ದೇಶಗಳಲ್ಲಿ ತಮ್ಮ ಮಿಲಿಟರಿ ನೆಲೆಯನ್ನು ಸ್ಥಾಪಿಸಿಕೊಳ್ಳಲು ಜಾಗ ಸಿಗಬೇಕು. ಆ ಪ್ರಬಲ ದೇಶಗಳಿಗೆ ಈ ದುರ್ಬಲ ದೇಶದ ನೈಸರ್ಗಿಕ ಸಂಪನ್ಮೂಲವನ್ನೂ, ಭೂಪ್ರದೇಶವನ್ನೂ ನುಂಗಿ ನೀರು ಕುಡಿಯಬೇಕು! ನಾನಿಲ್ಲಿ ಯಾವುದೇ ದೇಶದ ಹೆಸರು ಹೇಳಲು ಹೋಗುವುದಿಲ್ಲ. ಆದರೆ ಒಂದು ಪ್ರಶ್ನೆಯನ್ನು ಖಂಡಿತ ಕೇಳುತ್ತೇನೆ- ಏಕೆ ಯುದ್ಧ ಮಾಡುವವರಿಗೆ ಕೆಲ ದೇಶಗಳು ನಿರಂತರವಾಗಿ ಹಣ ಹಾಗೂ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುತ್ತವೆ? ಯುದ್ಧದಲ್ಲಿ ತೊಡಗಿರುವ ಕೆಲ ನಾಗರಿಕ ಗುಂಪುಗಳು ಎಷ್ಟೊಂದು ಪ್ರಬಲವಾಗಿವೆ ಅಂದರೆ ಅವು ತಮ್ಮ ದೇಶದ ಸೇನಾಪಡೆಯನ್ನೇ ಮೀರಿಸುತ್ತವೆ! ಜಗತ್ತಿನಾದ್ಯಂತ ಇರುವ ಶಸ್ತ್ರಾಸ್ತ್ರ ತಯಾರಕರಿಗೆ/ವ್ಯಾಪಾರಿಗಳಿಗೆ ಎಲ್ಲಾ ಕಾಲದಲ್ಲೂ ಎಲ್ಲಾದರೊಂದು ಕಡೆ ಯುದ್ಧ ನಡೆಯುತ್ತಲೇ ಇರಬೇಕು. ಏಕೆಂದರೆ ಅವರಿಗೆ ತಾವು ತಯಾರಿಸಿದ/ಖರೀದಿಸಿ ಗುಡ್ಡೆ ಹಾಕಿಟ್ಟುಕೊಂಡ ಶಸ್ತ್ರಾಸ್ತ್ರಗಳು ಬಿಕರಿಯಾಗಬೇಕು. ಈ ಡೀಲರ್‌ಗಳು ಭಯೋತ್ಪಾದಕರಿಗೂ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುತ್ತಾರೆ. ಹಾಗಿದ್ದರೆ ಈ ಗನ್‌ಪೌಡರ್ ಮತ್ತು ಸ್ಫೋಟಕಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಮುಚ್ಚಿಸಲು ಸಾಧ್ಯವಿಲ್ಲವೇ? ಶಸ್ತ್ರಾಸ್ತ್ರಗಳೇ ಇಲ್ಲದಿದ್ದರೆ ಯುದ್ಧವೂ ಇರುವುದಿಲ್ಲ! ಆದರೆ ಶಸ್ತ್ರಾಸ್ತ್ರ ಸಂಗ್ರಹಿಸಿ ಇಟ್ಟುಕೊಳ್ಳಲು ದೇಶದೇಶಗಳ ನಡುವೆ ಹುಚ್ಚು ಪೈಪೋಟಿಯಿದೆ. ಈಗ ಭಗವಾನ್ ಬುದ್ಧ, ಮಹಾವೀರ ಹಾಗೂ ಮಹಾತ್ಮ ಗಾಂಧೀಜಿಯ ನಾಡು ಕೂಡ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದೆ. ಇದು ಶಾಂತಿಗಾಗಿ ಎಂದು ಹೇಳಲಾಗುತ್ತಿದೆ. ಆದರೆ ಎಷ್ಟೆಂದರೂ ಅವು ಶಸ್ತ್ರಾಸ್ತ್ರಗಳು. ಇದೊಂಥರಾ ವಿಚಿತ್ರ ಸನ್ನಿವೇಶ! ವಿಶ್ವಸಂಸ್ಥೆಯಂಥ ವೇದಿಕೆಗಳು ಅಪ್ರಸ್ತುತವಾಗಿವೆ. ನಾವು 'ವಸುಧೈವ ಕುಟುಂಬಕಂ' ಎಂದು ನಂಬುವ ಸಂಸ್ಕೃತಿಯವರು. ಹಿಂದೆ ಪ್ರಧಾನಿ ಜವಾಹರಲಾಲ್ ನೆಹರು ಅವರು ಭಾರತದ ನೆಲದಿಂದ ಜಗತ್ತಿಗೆ ಶಾಂತಿ ಸಂದೇಶ ಕಳುಹಿಸಲು ಪ್ರಯತ್ನಿಸಿದ್ದರು. ಇಂದು ಪ್ರಧಾನಿ ನರೇಂದ್ರ ಮೋದಿ ಕೂಡ ಅದೇ ಕೆಲಸ ಮಾಡುತ್ತಿದ್ದಾರೆ. ಆದರೆ ಈ ಸಂಘರ್ಷದ ಸನ್ನಿವೇಶದಲ್ಲಿ ಎಲ್ಲರಿಗೂ ಅವರದೇ ಆದ ಅಜೆಂಡಾಗಳಿವೆ. ಎಲ್ಲರೂ ದೊಡ್ಡ ದೊಡ್ಡ ಭಾಷಣ ಮಾಡುತ್ತಾರೆ, ಆದರೆ ಯುದ್ಧವೆಂಬ ಕಟುವಾಸ್ತವ ಹಾಗೇ ಉಳಿದಿದೆ. ಕತ್ತಲನ್ನು ಸೀಳಿ ಬರುವ ಆರ್ತನಾದಗಳು ಯಾರಿಗೂ ಕೇಳಿಸುವುದಿಲ್ಲ. ಪಾಪ, ಯುದ್ಧದಲ್ಲಿ ಸಿಲುಕಿದವರು ಹೇಗೆ ಈದ್, ಕ್ರಿಸ್‌ಮಸ್ ಅಥವಾ ದೀಪಾವಳಿ ಆಚರಿಸುತ್ತಾರೆ?

(ಲೇಖಕರು ಹಿರಿಯ ಪತ್ರಿಕೋದ್ಯಮಿ)

## ಭಟ್ಟರ್ ಸ್ಕಾಚ್

- **ಆವಿಕ್ ಬಿ.ಗೊಂದಿಮನೆ, ಕಡೂರು**
ಭಟ್ರೇ, ಆರತಿ ಉಷ್ಣ ಅಂತಾರಲ್ಲ?
- **ನಮ್ಮ ಪಕ್ಕದ ಮನೆ ಆರತಿ ಮಾತ್ರ ಬೆಚ್ಚಗೆ!**

- **ರತ್ನಾಕರ ಹೂವಪ್ಪ, ಹುಲಿಯೂರುದುರ್ಗ**
ಭಟ್ರೇ, ಊರಿಗೆ ಬರ್ತಾಳೆ, ಆದರೆ ನೀರಿಗೆ ಬರೋಲ್ಲವಲ್ಲ?
- **ವಾಟರ್ ಕನೆಕ್ಷನ್ ಕಟ್ ಮಾಡು, ಬರ್ತಾಳೆ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಚನ್ನಪಟ್ಟಣ ಉಪಚುನಾವಣೆಯ ವೈಶಿಷ್ಟ್ಯವೇನು ?
- **ಮತ ಕೇಳಲು ಹೋದರೆ, ಹಣ ಕೊಡಿ ಅಂತಾರಂತೆ!**

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಇತ್ತೀಚೆಗೆ ಗಾಳಿಪಟ ಸ್ಪರ್ಧೆಯನ್ನು ಏರ್ಪಡಿಸುತ್ತಿಲ್ಲವಲ್ಲ?
- **ಈಗೇನಿದ್ದರೂ ಡ್ರೋನ್ ಸ್ಪರ್ಧೆ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಕೆಲವರು ಕರೋನಾ ಸಂದರ್ಭದಲ್ಲಿ ಧರಿಸಿದಂತೆ, ಈಗಲೂ ಮಾಸ್ಕನ್ನು ಧರಿಸುತ್ತಾರಲ್ಲ?
- **ಸಾಲಗಾರರಿಂದ ತಪ್ಪಿಸಿಕೊಳ್ಳಲು ಇದಕ್ಕಿಂತ ಬೇರೆ ಉಪಾಯ ಯಾವುದಿದೆ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಬೆಂಗಳೂರಲ್ಲಿ ಮಳೆಗೆ ಚರಂಡಿ ಉಕ್ಕಿ ಹರಿದರೂ ಯಾವ ಸಚಿವರೂ ತಲೆ ಕೆಡಿಸಿಕೊಳ್ಳಲಿಲ್ಲವಲ್ಲ?
- **ಅದೇ ವಾಸಿ, ಹೋಗಿದ್ದರೆ ಬಾಗಿನ ಕೊಟ್ಟು ಬರ್ತಿದ್ದರು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರಗಿ**
ಭಟ್ರೇ, ದರ್ಶನ್ ಬಿಡುಗಡೆ ಆದ ನಂತರ ಆತನ ಅಭಿಮಾನಿಗಳು ಸೈಲಂಟ್ ಆಗಿದ್ದಾರಲ್ಲ?
- **ಬೊಬ್ಬೆ ಹೊಡೆದು ಗಲಾಟೆ ಮಾಡಿದ್ರೆ ಮತ್ತೆ ಒಳಕ್ಕೆ ಹಾಕಿದ್ರೆ ಎಂಬ ಭಯ ಇದ್ದಿರಬಹುದಾ?!**

- **ಅಶೋಕ್ ವಿ.ರಾವ್, ಉಡುಪಿ**
ಭಟ್ರೇ, ನೀವು ಮೊಯಿಲಿಯವರನ್ನು 'ಆಧುನಿಕ ಬಸವಣ್ಣ' ಅಂತ ಹೊಗಳಬಾರದಿತ್ತು?
- **ತೀರಾ 'ಭಲೇ ಬಸವ' ಅಂತ ಹೇಳಿದ್ರೆ ಚೆನ್ನಾಗಿರಲ್ಲಲ್ಲ?!**

- **ವಿನಾಯಕ ಕೆದೂರು, (ಇಮೇಲ್ ಮೂಲಕ)**
ಭಟ್ರೇ, ಮದುವೆಯಾಗೋ ವಯಸ್ಸಿಗೆ ಆಗದಿದ್ದರೆ ಏನಾಗುತ್ತದೆ?
- **ಪ್ರಜ್ವಲ್ ರೇವಣ್ಣ ಥರಾ ವರ್ತಿಸಬೇಕಾಗುತ್ತದೆ!**

# ಏಲಿಯನ್‌ಗಳು ಬಂದರೆ ಭಾರತಕ್ಕೇ ಬರಬೇಕು!

ಕಾಡುದಾರಿ

ಹರೀಶ್ ಕೇರ

vveditoped@gmail.com

ಪರಲೋಕದ ಜೀವಿಗಳು (ಏಲಿಯನ್ಸ್) ಭೂಮಿಗೆ ಬಂದು ಇಳಿಯುವುದಾದರೆ, ಯಾವ ದೇಶವನ್ನು ಆರಿಸಿಕೊಳ್ತವೆ. ಭಾರತ ದೇಶವನ್ನೇ ಹೊರತು ಬೇರೆಯದನ್ನಲ್ಲ. ಅದಕ್ಕೆ ಕಾರಣಗಳಿವೆ: ಮೊದಲನೆಯದಾಗಿ, ಭಾರತೀಯರು 'ಅತಿಥಿ ದೇವೋ ಭವ' ಎಂಬ ಸಂಸ್ಕೃತಿಯವರು. ಯಾರೇ ಬಂದರೂ ಬೇಡ ಅನ್ನೊಲ್ಲ, ಕೈಕಾಲಿಗೆ ನೀರು ಕವಳ ಕೊಟ್ಟು ಸತ್ಕರಿಸುತ್ತಾರೆ. ಎರಡನೆಯದು, ಭಾರತೀಯರಿಗೆ ಫಾರಿನರ್ಸ್ ಎಂದರೆ ಭಯಪೂರಿತ ಗೌರವ. ಅವರಿಂದ ಆಳಿಸಿಕೊಳ್ಳಲೂ ನಾವು ಸಿದ್ಧ. ಬ್ರಿಟಿಷರು-ಪೋರ್ಚುಗೀಸರು-ಸ್ಪೇನಿಗರನ್ನು ನಾವು ಕಂಡ ರೀತಿಯೇ ಇದಕ್ಕೆ ದೃಷ್ಟಾಂತ. ಮೂರನೆಯದು, ನಮ್ಮ ಅಳತೆಗೆ ಮೀರಿದ್ದನ್ನೆಲ್ಲಾ ನಾವು ದೈವತ್ವಕ್ಕೆ ಏರಿಸಿ ಪೂಜಿಸುವವರು. ಹೀಗಾಗಿ ಏಲಿಯನ್ಸ್ ಬಂದರೆ ಒಂದೇ ವರ್ಷದಲ್ಲಿ ಅವರಿಗೆ ನಾವು ದೇವಾಲಯ ಕಟ್ಟಿಸುವುದು ಖಂಡಿತ. ನಾಲ್ಕನೆಯದು, ಹಿಮಾಲಯದ ತಂಪು ತಾಣಗಳಿಂದ ಹಿಡಿದು ಗೋವಾದ ಬೀಚುಗಳವರೆಗೆ ಏಲಿಯನ್‌ಗಳಿಗೆ ರಜಾದ ಮಜಾ ಉಡಾಯಿಸಲು ವೈವಿಧ್ಯಮಯ ತಾಣಗಳಿವೆ. ಐದನೆಯದು, ಇಲ್ಲಿ ಕ್ರೈಂ ಮಾಡಿ ಸುಲಭವಾಗಿ ಶಿಕ್ಷೆಯಿಲ್ಲದೆ ಪಾರಾಗಬಹುದು. ಭೋಪಾಲ್ ಗ್ಯಾಸ್ ದುರಂತದ ರೂವಾರಿಯಂತೆ ವಿಮಾನ ಹತ್ತಿ ಭಾರತ ದಾಟಿ ಹೋಗಿಬಿಡಬಹುದು!

ಇದು ಇಂಟರ್ನೆಟ್‌ನಲ್ಲಿ ಇತ್ತೀಚೆಗೆ ಓದಿದ ಒಂದು ತಮಾಷೆ. ತಮಾಷೆ ಎಂಬುದೇ ಅಸಂಗತತೆಯ ತಳಹದಿಯ ಮೇಲೆ ನಿಂತಿದೆ. ಆದ್ದರಿಂದ ಇದರ ವಿಶ್ಲೇಷಣೆ ಅನಗತ್ಯ. ಆದರೂ ಪರಲೋಕ ಜೀವಿಗಳ ಬಗ್ಗೆ ಈಗ ಬರೆಯಲು ಒಂದು ಕಾರಣ- ನಮ್ಮ ಹೆಮ್ಮೆಯ ಇಸ್ರೋದ ಅಧ್ಯಕ್ಷ ಎಸ್.ಸೋಮನಾಥ್ ಇತ್ತೀಚೆಗೆ ಏಲಿಯನ್ಸ್ ಬಗ್ಗೆ ನೀಡಿದ ಒಂದು ಹೇಳಿಕೆ. ''ಏಲಿಯನ್ಸ್ ನಮ್ಮ ನಡುವೆಯೇ ಇರಬಹುದು, ಇದ್ದಾರೆ. ಊಹಿಸಿಕೊಳ್ಳಿ, ಇಷ್ಟು ದೊಡ್ಡ ವಿಶ್ವದಲ್ಲಿ ನಮಗಿಂತ ತಂತ್ರಜ್ಞಾನದಲ್ಲಿ 200 ವರ್ಷ ಹಿಂದಿರುವ ಜೀವಿಗಳಿರುವಂತೆ, 1000 ವರ್ಷ ಮುಂದಿರುವ ಜೀವಿಗಳೂ ಇರಬಹುದಲ್ಲ? ಅಂಥ ಹಲವು ಜನಾಂಗಗಳು ಮನುಷ್ಯನ ರೇಡಾರನ್ನೂ ಮೀರಿ ಪರಸ್ಪರ ಸಂಪರ್ಕಿಸಿಕೊಂಡು ಇರಬಹುದು''. ಇದು ರಣವೀರ್ ಅಲಹಾಬಾದಿಯಾ ಎಂಬ ಜನಪ್ರಿಯ ಯುಟ್ಯೂಬ್ ಸಂದರ್ಶನಕಾರನಿಗೆ ಅವರು ಹೇಳಿದ ಮಾತು. ಹಾಗಾದರೆ ಅಂಥ ಪರಲೋಕ ಜೀವಿಗಳಿದ್ದರೆ ಮನುಷ್ಯರು ಅವರನ್ನು ಸಂಪರ್ಕಸಲಿ ಎಂದು ಸೋಮನಾಥ್ ಬಯಸುತ್ತಾರೆಯೆ? ''ಖಂಡಿತ ಇಲ್ಲ. ಯಾಕೆಂದರೆ ಅವರ ಜೀನೋಮ್‌ಗಳು, ಪ್ರೊಟೀನ್ ವ್ಯವಸ್ಥೆಗಳು, ಎಲ್ಲವೂ ಮನುಷ್ಯನಿಗಿಂತ ಪೂರ್ಣ ಭಿನ್ನವಾಗಿರಬಹುದು. ಒಂದು ಜನಾಂಗ ಇನ್ನೊಂದನ್ನು ಹತ್ತಿಕ್ಕಲು ಮುಂದಾದರೆ ಅಪಾಯ ಖಚಿತ''.

ಸೋಮನಾಥ್ ಅವರು ಏರೋಸ್ಪೇಸ್ ಎಂಜಿನಿಯರ್. ಪರಲೋಕಜೀವಿಗಳ ಬಗ್ಗೆ ಭೌತವಿಜ್ಞಾನಿಗಳೋ ಬಾಹ್ಯಾಕಾಶ ತಜ್ಞರೋ ಹೇಳಬೇಕಲ್ಲವೇ ಎಂದು ನೀವು ಲಾ ಪಾಯಿಂಟ್ ಎತ್ತಿದರೆ ನಾನು ಏನೂ ಹೇಳಲಾರೆ. ಆದರೆ ಏಲಿಯನ್ಸ್ ಎಂದಾಗ ಯಾವಾಗಲೂ ನಮ್ಮ ಕಿವಿ ಚುರುಕಾಗುತ್ತದೆ. ನೂರಾರು ಕಲ್ಪನೆಗಳೂ ಆತಂಕಗಳೂ ಹಾದುಹೋಗುತ್ತವೆ. ನಮ್ಮ ಸೈನ್ಸ್ ಫಿಕ್ಷನ್‌ಗಳೂ, ಸೈ-ಫೈ ಮೂವಿಗಳೂ ಏಲಿಯನ್‌ಗಳ ಬಗ್ಗೆ ಬಲು ಭಯಾನಕವಾದ ಚಿತ್ರಣವನ್ನು ಕಟ್ಟಿಕೊಟ್ಟು ಭೀತಿಯ ಬೀಜವನ್ನು ನಮ್ಮಲ್ಲಿ ಬಿತ್ತಿವೆ. ಹೀಗಾಗಿ ಪರಲೋಕಜೀವಿಗಳು ಎಂದರೆ ಅವರ ಆಕ್ರಮಣದ ಸಾಧ್ಯತೆಯೇ ಮೊದಲು ತಲೆಗೆ ಬರುತ್ತದೆ. ಅದನ್ನು ಮೀರಿಯೂ ಈ ವಿಷಯದ ಸುತ್ತಮುತ್ತ ಅನೇಕ ಸ್ವಾರಸ್ಯಗಳಿವೆ ಹಾಗೂ ಇದಕ್ಕೆ ಸಂಬಂಧಿಸಿದ ಅನೇಕ ರೋಚಕ ಸುದ್ದಿಗಳು ಆಗಾಗ ಅಪ್ಡೇಟ್ ಆಗುತ್ತಿರುತ್ತವೆ.

ಇತ್ತೀಚಿನ ಅಂಥದೊಂದು ಸುದ್ದಿಯೆಂದರೆ ಪ್ರಭಾವಿ ಹಾಲಿವುಡ್ ಫಿಲಂ ನಿರ್ಮಾಪಕನೊಬ್ಬ ಹೇಳಿದ್ದು- ''ಅನ್ಯಗ್ರಹ ಜೀವಿಗಳಿವೆ. ಸಾಕ್ಷ್ಯ ದೊರೆತಿದೆ. ಇನ್ನೊಂದು ತಿಂಗಳಲ್ಲಿ ಅದನ್ನು ಹೊರಗೆಡಹಲಾಗುತ್ತದೆ''. ಸಿಮೋನ್ ಹಾಲಂಡ್ ಎಂಬ ಹೆಸರಿನ ಇವನು ನಾಸಾ, ಬಿಬಿಸಿಗಳಿಗೆಲ್ಲ ಡಾಕ್ಯುಮೆಂಟರಿ ಮಾಡಿಕೊಟ್ಟವನು. ಅವನ ಪ್ರಕಾರ ನಾಲ್ಕು ಗಂಟೆಗಳ ತಡೆರಹಿತ ರೇಡಿಯೋ ಅಲೆಯೊಂದು ನಾಸಾಗೆ ದೊರೆತಿದೆ. ಇದು ಭೂಮಿಯಿಂದ 4.2 ಬೆಳಕಿನ ವರ್ಷಗಳಷ್ಟು ದೂರದ ಪ್ರಾಕ್ಸಿಮಾ ಸೆಂಟಾರಿ ನಕ್ಷತ್ರದ ಬಳಿಯಿಂದ ಬಂದಿದೆ. ಆಕ್ಸ್‌ಫರ್ಡ್‌ನ ವಿಜ್ಞಾನಿಗಳ ಒಂದು ತಂಡ ಈ ಕೋಡ್ ಅನ್ನು ಡಿಕೋಡ್ ಮಾಡಲು ಯತ್ನಿಸುತ್ತಿದೆ.

ಅಮೆರಿಕನ್ನರಿಗೆ ಹಾರುವ ತಟ್ಟೆಗಳೆಂದರೆ ವಿಪರೀತ ಗೀಳು; ಅನ್ಯಗ್ರಹ ಜೀವಿಗಳೆಂದರೆ ತೀರದ ಮೋಹ. ವರ್ಷಕ್ಕೆ ಹತ್ತಾದರೂ ಹಾಲಿವುಡ್ ಸಿನಿಮಾಗಳು ಏಲಿಯನ್‌ಗಳ ಬಗ್ಗೆ ಬರುತ್ತಿರುತ್ತವೆ. ವಾಸ್ತವವಾಗಿ ಅಮೆರಿಕನ್ನರೇ ಬೇರೆ ಬೇರೆಡೆಗಳಿಂದ ಆ ನೆಲಕ್ಕೆ ಹೋಗಿ ನಿಂತ ಏಲಿಯನ್‌ಗಳು! ಹಾಲಿವುಡ್ ಸಿನಿಮಾಗಳ ಪ್ರಕಾರ ಏಲಿಯನ್‌ಗಳು ಅಮೆರಿಕದಲ್ಲೆ ಬಂದಿಳಿಯುವುದು ರೂಢಿ. ಅವರಿಂದ ಮನುಕುಲಕ್ಕೆ ಏನಾದರೂ ಗಂಡಾಂತರ ಒದಗಿದರೆ ರಕ್ಷಿಸುವ ಕೆಲಸವನ್ನೂ ಅಮೆರಿಕನ್ನರೇ ಮಾಡಬೇಕು. ಬಹುಶಃ ಹಾಲಿವುಡ್ ಲಾಸ್ ಏಂಜಲೀಸ್‌ನಲ್ಲಲ್ಲದೆ ಬೀಜಿಂಗ್‌ನಲ್ಲಿ ಇದ್ದಿದ್ದರೆ ಚೀನಿಯರು ಈ ಹೀರೋಗಳಾಗಿರುತ್ತಿದ್ದರೋ ಏನೋ. ಇರಲಿ, ಏಲಿಯನ್‌ಗಳ ಬಗ್ಗೆ ಅಮೆರಿಕನ್ನರ ಈ ಗೀಳಿಗೆ ಕಾರಣವೇನು? 1947ರಲ್ಲಿ ಕೆನ್ನೆತ್ ಆರ್ನಾಲ್ಡ್ ಎಂಬ ಇಡಾಹೋದ ಪೈಲಟ್, ತಟ್ಟೆಯಂಥ 9 ಹಾರುವ ವಸ್ತುಗಳನ್ನು ಕಂಡು, ಅವುಗಳನ್ನು ಹಿಂಬಾಲಿಸಿಕೊಂಡ ಹೋದ. ಅವು ಎಲ್ಲೋ ಮಾಯವಾದವು. ಅದನ್ನಾತ ಸುದ್ದಿ ಮಾಡಿದ. ನಂತರ ಈ 'ಹಾರುವ ತಟ್ಟೆಗಳು' (ಯುಎಫ್‌ಒ) ಎಂಬ ಪರಿಕಲ್ಪನೆ ಜನಪ್ರಿಯವಾಯಿತು. ಆರ್ನಾಲ್ಡ್ ಹೇಳಿದ್ದನ್ನೆಲ್ಲ ಜನ ನಂಬಿದರು. ಅಮೆರಿಕದ ಎಲ್ಲೆಡೆ ಜನ ತಾವೂ ಇಂಥದನ್ನು ಕಂಡೆವು ಎಂದು ಹೇಳತೊಡಗಿದರು. ವೈಮಾನಿಕ ಪರಿಭಾಷೆಯಲ್ಲಿ ಇದನ್ನು 'ಫ್ಲ್ಯಾಪ್' ಎನ್ನುತ್ತಾರೆ. ಅಂದರೆ ಸಾಮೂಹಿಕ ಭ್ರಮೆ.

ಹಾಗೆ ನೋಡಿದರೆ, ಏಲಿಯನ್‌ಗಳು ಇಲ್ಲ ಎನ್ನುವುದಕ್ಕಿಂತಲೂ, ಇದ್ದಾರೆ ಎನ್ನುವುದಕ್ಕೇ ಹೆಚ್ಚು ವೈಜ್ಞಾನಿಕ 'ತರ್ಕ'ಗಳು ಹುಟ್ಟಿಕೊಂಡಿವೆ. ಆದರೆ 'ಸಾಕ್ಷಿ'ಗಳು ಸಿಗುವುದಿಲ್ಲ. ಪರಲೋಕಜೀವಿಗಳ ಇರುವಿಕೆಯ ಸಾಧ್ಯತೆಯ ಬಗ್ಗೆ ವಿಜ್ಞಾನ ಲೋಕದಲ್ಲಿ ಹೆಚ್ಚಿನ ನಕಾರವಿಲ್ಲ. ಯಾಕೆಂದರೆ ಈ ಅಗಾಧ ವಿಶ್ವದಲ್ಲಿ ಲೆಕ್ಕಕ್ಕೆ ಮೀರಿದ ಗ್ಯಾಲಕ್ಸಿಗಳೂ, ಅವುಗಳಲ್ಲೆಲ್ಲ ಅಳತೆಗೇ ಸಿಗದಷ್ಟು ನಕ್ಷತ್ರಗಳೂ, ಆ ನಕ್ಷತ್ರಗಳಿಗೆಲ್ಲ ಸೌರವ್ಯೂಹದಂಥ ಗ್ರಹಗಳ ವ್ಯೂಹವೂ ಇರಲು ಸಾಧ್ಯ; ಹಾಗಿದ್ದ ಮೇಲೆ ಇಂಥ ಅಗಾಧ ವಿಶ್ವದಲ್ಲಿ ಭೂಮಿಯಂಥ ಇನ್ನೊಂದು ವಾಸಯೋಗ್ಯ ಗ್ರಹ ಇರುವುದು ಖಂಡಿತ ಸಾಧ್ಯ. ಒಂದೆರಡೇನು, ನೂರಾರು ಇದ್ದರೂ ಇರಬಹುದು. ಇವುಗಳಿಂದ ಬರಬಹುದಾದ ಸಿಗ್ನಲ್‌ಗಳಿಗಾಗಿಯೇ ಹತ್ತಾರು ವರ್ಷಗಳಿಂದ ಆಕಾಶದತ್ತ ಕಣ್ಣು ನೆಟ್ಟು ಕೂತಿರುವ ಬೃಹತ್ ಡಿಶ್‌ಗಳೂ ಇವೆ. ಸ್ಯಾನ್‌ಫ್ರಾನ್ಸಿಸ್ಕೋ ಬಳಿ ಒಂದು ಗ್ರಾಮದಷ್ಟಗಲದ ಲ್ಯಾಬೋರೇಟರಿ ಇದಕ್ಕಾಗಿಯೇ ಮೀಸಲಾಗಿದೆ.

ಹಾಗಾದರೆ ಅವುಗಳಲ್ಲಿ ಒಂದು ಗ್ರಹದ ಜೀವಿಯಾದರೂ ನಮ್ಮನ್ನು ಸಂಪರ್ಕಿಸಬೇಕಿತ್ತಲ್ಲವೆ? ಯಾಕೆ ಇದುವರೆಗೂ ಸಂಪರ್ಕಿಸಿಲ್ಲ? ಇದೇ ಪ್ರಶ್ನೆಯನ್ನೇ 1950ರಲ್ಲಿ ಎನ್ರಿಕೋ ಫರ್ಮಿ ಎಂಬ ವಿಜ್ಞಾನಿ ಕೇಳಿದ. ಮುಂದೆ ಇದನ್ನೇ 'ಫರ್ಮಿ ವಿರೋಧಾಭಾಸ' (Fermi Paradox) ಎಂದು ಕರೆಯಲಾಯಿತು.

ಯಾಕೀ ಕಾಲಕಾಲಾಂತರದ ನಿಗೂಢ ಮೌನ? ಈ ಮೌನವನ್ನೇ 'ಗ್ರೇಟ್ ಸೈಲೆನ್ಸ್' ಎಂದು ವಿಜ್ಞಾನಿಗಳು ಕರೆದರು. ಇದಕ್ಕೆ ಉತ್ತರವಾಗಿ ಫರ್ಮಿಯೇ ಮೂರು ಸಾಧ್ಯತೆಗಳನ್ನೂ ಮುಂದಿಡುತ್ತಾನೆ: 1. ಇಂಟರ್‌ಸ್ಟೆಲ್ಲಾರ್ (ತಾರಾವ್ಯೂಹಗಳ ನಡುವಿನ) ಪ್ರಯಾಣ ಸಾಧ್ಯವಿಲ್ಲ. ಬೆಳಕಿನ ವೇಗವನ್ನೇ ಸಾಧಿಸಿದರೂ ಲಕ್ಷಗಟ್ಟಲೆ ವರ್ಷಗಳು ತಗುಲುತ್ತವೆ. 2. ಒಂದು ವೇಳೆ ಇದು ಸಾಧ್ಯವಾದರೂ, ಇದರಿಂದ ಪ್ರಯೋಜನವಿಲ್ಲ ಎಂದು ಏಲಿಯನ್‌ಗಳು ಸುಮ್ಮನಾಗಿರಬೇಕು. 3. ತಂತ್ರಜ್ಞಾನ ಆಧಾರಿತ ನಾಗರಿಕತೆಗಳು ಬಹಳ ಕಾಲ ಹಾಗೇ ಉಳಿಯುವುದಿಲ್ಲ.

ಈ ಭೂಮಿ ಕಂಡ ಬಲು ಬುದ್ಧಿವಂತ ವಿಜ್ಞಾನಿ ಎನಿಸಿಕೊಂಡ ಸ್ಟೀಫನ್ ಹಾಕಿಂಗ್ ಕೂಡ ನಮ್ಮ ಇಸ್ರೋ ಅಧ್ಯಕ್ಷ ಹೇಳಿದಂತೆಯೇ ಹೇಳಿದ್ದ- ನಾವು ಏಲಿಯನ್‌ಗಳನ್ನು ಭೇಟಿ ಮಾಡೋದು ಬೇಡ ಅಂತಲೇ ಹಾರೈಸಬೇಕು. ಯಾಕೆಂದರೆ ಅದು ಕೊಲಂಬಸ್ ಅಮೆರಿಕದ ಮೂಲನಿವಾಸಿಗಳನ್ನು ಭೇಟಿ ಮಾಡಿದಂತಾದೀತು. ಮೂಲನಿವಾಸಿಗಳ ಕತೆ ಏನಾಗಿದೆ ನೋಡಿ! ಇಲ್ಲಿ ಕೊಲಂಬಸ್‌ನ ಜಾಗದಲ್ಲಿ ಏಲಿಯನ್‌ಗಳನ್ನು ನಾವು ಊಹಿಸಿಕೊಳ್ಳಬೇಕು. ಮಾರ್ಕ್ ಬುಕಾನನ್ ಎಂಬ ವಿಜ್ಞಾನಿ, ''ಅನ್ಯಜೀವಿಗಳು ನಮ್ಮನ್ನು ಸಂಪರ್ಕಿಸಬೇಕಿದ್ದರೆ ಅವರು ನಮಗಿಂತ ತಾಂತ್ರಿಕವಾಗಿ ಬಹಳ ಮುಂದುವರಿದಿರಲೇಬೇಕು. ಅವರು ಅಷ್ಟೆಲ್ಲ ಮುಂದುವರಿದವರಾದರೆ ನಮ್ಮನ್ನು ವಿನಯಪೂರ್ವಕವಾಗಿ ನಡೆಸಿಕೊಳ್ಳಬೇಕು ಎಂದು ನಾವು ನಿರೀಕ್ಷಿಸಲು ಹೇಗೆ ಸಾಧ್ಯ?'' ಎಂದು ಕೇಳಿದ.

ಬಹುಶಃ ನಾವು ಈಗಾಗಲೇ ಅಪಾಯದ ಅಂಚನ್ನು ತಲುಪಿದ್ದೇವೆ. ಪರಿಸ್ಥಿತಿ ನಮ್ಮ ಕೈಮೀರಿ ಹೋಗಿಬಿಟ್ಟಿದೆ. ಯಾಕೆಂದರೆ ನಾವು ಈಗಾಗಲೇ ಬ್ರಹ್ಮಾಂಡದ ಎಲ್ಲೆಡೆ 'ನಾವಿದ್ದೇವೆ' ಎಂಬ ರೇಡಿಯೋ ಸಿಗ್ನಲ್‌ಗಳನ್ನು, ದೃಶ್ಯಾವಳಿಗಳನ್ನು ಕಳಿಸಿದ್ದೇವೆ. ಅನ್ಯಗ್ರಹಜೀವಿಗಳು ನಮ್ಮ ಮೇಲೆ ದಾಳಿ ಮಾಡುವುದಾದರೆ ಇದೀಗ ಅವರಿಗೆ ಸುಸಮಯ; ಬಹುಶಃ ದಾಳಿ ಈಗಾಗಲೇ ನಾವು ಊಹಿಸಲಸಾಧ್ಯವಾದ ರೀತಿಯಲ್ಲಿ ಆರಂಭವಾಗಿರಲೂಬಹುದು. ಕೋವಿಡ್ ಅಂಥದೊಂದು ದಾಳಿಯಾಗಿರಬಹುದು- ಎಂದು ಹೇಳಿ ಹೆದರಿಸುವ ವಿಜ್ಞಾನಿಗಳೂ ಇದ್ದಾರೆ.

ಇದಕ್ಕಿಂತಲೂ ಭಯಗೊಳಿಸುವ ಅಧ್ಯಯನವೊಂದನ್ನು ಕೆಲವು ವಿಜ್ಞಾನಿಗಳು ಇತ್ತೀಚೆಗೆ ಮಾಡಿದ್ದಾರೆ. ಅದರ ಪ್ರಕಾರ, ಯಾವ ಆಧುನಿಕ ತಂತ್ರಜ್ಞಾನವೂ, ಅದರ ಅತ್ಯುಚ್ಚ ಸ್ಥಿತಿ ತಲುಪಿದ ಹಂತದಲ್ಲಿ 1000 ವರ್ಷಗಳಿಗಿಂತ ಹೆಚ್ಚು ಕಾಲ ಉಳಿಯಲಾರದು; ಅಂದರೆ ಅದರ ತಂತ್ರಜ್ಞಾನದ ಉನ್ನತಿಯೇ ಅದನ್ನು ಸರ್ವನಾಶದತ್ತ ಒಯ್ಯುತ್ತದೆ. ಬಹುಶಃ ನಮ್ಮ ಹಿಂದಿನ ಏಲಿಯನ್ ನಾಗರಿಕತೆಗಳು ಹಾಗೆ ಆಗಿರಬಹುದು; ಅಥವಾ ಯಾವುದಾದರೂ ಅನ್ಯಗ್ರಹಜೀವಿಗಳು ನಮ್ಮನ್ನು ಸಂಪರ್ಕಿಸಲು ಯತ್ನಿಸಿದವು ಎಂದಾದರೆ ಅವುಗಳು ಈಗ ಅಳಿವಿನಂಚಿನಲ್ಲಿರಬಹುದು. ಹೊಸ ನೆಲೆಯನ್ನು ಹುಡುಕಿ ಅವು ಹೊರಟಿರಬಹುದು. ಈ ಪ್ರಮೇಯದ ಹಿನ್ನೆಲೆಯಲ್ಲಿ ಇರುವುದು ಭೂಮಿಯದೇ ಸ್ಥಿತಿಗತಿ. ಯಾಕೆಂದರೆ 1800ರ ನಂತರ ಭೂಮಿಯ ಮೇಲೆ ಮನುಷ್ಯ ಬಳಸುತ್ತಿರುವ ಶಕ್ತಿಯ (ಇಂಧನ) ಪ್ರಮಾಣ, ಇಂದು ಇಡೀ ಗ್ರಹವನ್ನೇ ನಾಶದಂಚಿಗೆ ತಂದು ನಿಲ್ಲಿಸಿದೆ. ನಾವು ಅನಿಲ ಮತ್ತು ಕಲ್ಲಿದ್ದಲಿನಿಂದ ಸೃಷ್ಟಿಸಿದ ಶಾಖ ಈ ಗ್ರಹವನ್ನು ಕೊಲ್ಲುವಷ್ಟಿದೆ. ಇದು ಬಾತ್‌ಟಬ್ ಲೀಕ್ ಆದಂತೆ. ಬಾತ್‌ಟಬ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ನೀರಿದ್ದಾಗ ಸೋರಿಕೆ ಕಡಿಮೆ ಇರುತ್ತದೆ. ಟಬ್ ತುಂಬಿದಾಗ ಸೋರಿಕೆ ಹೆಚ್ಚಿ ಒಮ್ಮೆಲೇ ಒಡೆದುಹೋಗಲೂಬಹುದು.

ಅಂದಹಾಗೆ, ಈ ಮೇಲಿನ ಅಧ್ಯಯನವನ್ನು ಮಾಡಿದ ತಂಡದಲ್ಲಿ ಭಾರತೀಯ ಯುವ ವಿಜ್ಞಾನಿಯೊಬ್ಬರಿದ್ದಾರೆ. ಮನಸ್ವಿ ಲಿಂಗಂ ಎಂಬ ಹೆಸರಿನ ಇವರು ಬಾಂಬೆ ಐಐಟಿಯಲ್ಲಿ ಕಲಿತು ಇದೀಗ ಫ್ಲೋರಿಡಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಸ್ಟ್ರೋಫಿಸಿಸಿಸ್ಟ್ ಆಗಿದ್ದಾರೆ. ಅವರ ಪ್ರಕಾರ ಭೂಮಿಯಾಗಲೀ ಬೇರಿನ್ನೊಂದು ಗ್ರಹವಾಗಲೀ ಬದುಕುಳಿಯಲು ಒಂದೇ ದಾರಿ- ಪ್ರಗತಿಯ ವೇಗ ಕಡಿಮೆ ಮಾಡುವುದು, ಭೂಮಿಯನ್ನು ಬಿಸಿ ಮಾಡುವ ಎಲ್ಲ ಕೈವಾಡಗಳನ್ನು ನಿಲ್ಲಿಸುವುದು.

ಏಲಿಯನ್‌ಗಳು ದೇವರು ಇದ್ದ ಹಾಗೆ. ದೇವರು ಇದ್ದಾನೆ ಎಂದು ಸಾಬೀತುಪಡಿಸಿದರೂ ನಾವು ನಂಬುವುದಿಲ್ಲ; ಇಲ್ಲ ಎಂದು ಸಾಬೀತುಪಡಿಸಿದರೂ ನಂಬುವುದಿಲ್ಲ, ಅದೊಂದು ಸದಾ ಚರ್ಚೆಯ ಸಂಗತಿ. ಯುಎಫ್‌ಒಗಳ ಕತೆಯನ್ನು ಜೀವಂತವಾಗಿ ಇಡುವುದರಲ್ಲಿ ಹಲವರಿಗೆ ಲಾಭವಿದೆ; ಸರಕಾರಕ್ಕೆ ಜನರ ಗಮನ ಇನ್ನೊಂದು ಕಡೆ ಸೆಳೆಯಬಹುದು. ಮಿಲಿಟರಿಗೆ ಜನರನ್ನು ನಿಯಂತ್ರಣದಲ್ಲಿಡಲು ಇದೊಂದು ಮಾಧ್ಯಮ. ಮೀಡಿಯಾಗಳಿಗೂ ರೋಚಕವಾದ ಒಂದು ಸರಕು ಆಗಾಗ ಸಿಗುತ್ತಿರುತ್ತದೆ. ಅಂತೂ ನಮಗೊಂದು ನಿಗೂಢತೆ ಬೇಕು. ಉತ್ತರ ಸಿಗುವವರೆಗೂ 'ಗ್ರೇಟ್ ಸೈಲೆನ್ಸ್' ಮಾತ್ರ ಸತ್ಯ. ಬುದ್ಧನ 'ಮಹಾಮೌನ'ದಂತೆ.

## ಅಭಿಮತ

ಕೆ.ಎಸ್.ವಾಸುದೇವಾಚಾರ್ಯ

# ಕುಟುಂಬಕ್ಕೆ ಬರೆದುಕೊಟ್ಟ ಆಸ್ತಿ!

ಕರ್ನಾಟಕ ಬಿಜೆಪಿಯು ಯಡಿಯೂರಪ್ಪನವರ ಕುಟುಂಬಕ್ಕೆ ಬರೆದುಕೊಟ್ಟ ಆಸ್ತಿಯಾಗಿಬಿಟ್ಟಿದೆ!'- ಹೀಗೆ ಹೇಳಿದರೆ ಬಿಜೆಪಿಯವರು ಮತ್ತು ಸಂಘ ಪರಿವಾರದವರು ಎದ್ದೆದ್ದು ಬಂದು ಭಯಂಕರ ವಿರೋಧ ವ್ಯಕ್ತಪಡಿಸುವುದು ಸಹಜ. ಆದರೆ, ಬಿಜೆಪಿಯು ಬಿ.ಎಸ್.ಯಡಿಯೂರಪ್ಪನವರ ಕೈಗೆ ಬಂದು ದಶಕಗಳೇ ಕಳೆದವು; ಹೀಗಾಗಿ, ಬಿಜೆಪಿಯೆಂಬುದು ಈಗ ಒಬ್ಬ ವ್ಯಕ್ತಿಯ ಕುಟುಂಬದ ಆಸ್ತಿಯಾಗಿಬಿಟ್ಟಿದೆ ಎಂಬುದನ್ನೇ ಆರೆಸ್ಸೆಸ್ ಮರೆತುಬಿಟ್ಟಿದೆ. ಅಷ್ಟರಮಟ್ಟಿಗೆ ಬಿಜೆಪಿಯು ಯಡಿಯೂರಪ್ಪನವರ ಕುಟುಂಬದ ಪಿತ್ರಾರ್ಜಿತ ಆಸ್ತಿಯಾಗಿದೆ. ಈ ಮಾತು ಸುಳ್ಳಾಗಿದ್ದರೆ, ಯಡಿಯೂರಪ್ಪನವರು 2 ವರ್ಷ ಹಿನ್ನೆಲೆಗೆ ಸರಿದ ನಂತರವೂ ಅವರ ಪುತ್ರ ಬಿ.ವೈ.ವಿಜಯೇಂದ್ರರೇ ಪಕ್ಷದ ರಾಜ್ಯಾಧ್ಯಕ್ಷರಾಗುತ್ತಿರಲಿಲ್ಲ.

ಕುಟುಂಬವೊಂದು ಹಲವು ಪೀಳಿಗೆಗಳಿಂದ ಸಂಘ ಪರಿವಾರದ ಸೇವೆಯಲ್ಲಿ ತೊಡಗುವುದು ಅತ್ಯಂತ ಸಹಜ ಬೆಳವಣಿಗೆ. ಇದಕ್ಕೆ ಸಾಕಷ್ಟು ಉದಾಹರಣೆಗಳಿವೆ. ವಿಜಯೇಂದ್ರರು ಬಿಜೆಪಿ ರಾಜ್ಯಾಧ್ಯಕ್ಷರಾಗಿರುವುದು ಕೂಡ ಇಂಥ ಸೇವೆಯ ಮುಂದುವರಿಕೆ ಎಂಬ ತಪ್ಪುಕಲ್ಪನೆಯನ್ನು ಬಿತ್ತಲಾಗಿದೆ. ಇದನ್ನು ಅರ್ಥೈಸಿಕೊಳ್ಳಲು ಆರೆಸ್ಸೆಸ್‌ನಲ್ಲೇ ಇರುವ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಶೆಣೈ ಕುಟುಂಬ ('ಪ್ರಜ್ಞಾಪ್ರವಾಹ'ದ ಉಪೇಂದ್ರ ಶೆಣೈ, 'ಭಾರತ ದರ್ಶನ' ಖ್ಯಾತಿಯ ವಿದ್ಯಾನಂದ ಶೆಣೈ, ಯೋಗ ಪ್ರಚಾರಕ ರಾಘವೇಂದ್ರ ಶೆಣೈ), ರಾಮ ರಾಯರ ಮಕ್ಕಳು (ಈಗ ಆರೆಸ್ಸೆಸ್‌ನ ಸಹ ಸರಕಾರ್ಯವಾಹ ಆಗಿರುವ ಮುಕುಂದ, ಪ್ರಾಂತ ಪ್ರಚಾರಕರಾ ಗಿರುವ ನರೇಂದ್ರ, 'ಲಘು ಉದ್ಯೋಗ ಭಾರತಿ'ಯಲ್ಲಿರುವ ಭೋಜರಾಜ), ಕೃ.ನರಹರಿ ಮತ್ತು ಅವರ ಸೋದರ ಕೃ.ಸೂರ್ಯನಾರಾಯಣರಾವ್ ಹೀಗೆ ಒಂದೇ ಕುಟುಂಬದ ಹಲವರು ಆರೆಸ್ಸೆಸ್‌ನ ಪ್ರಚಾರಕರಾಗಿರುವುದು ನಿಜ. ಅದು ದೇಶಸೇವೆಗೆಂದು ಯಾವುದೇ ರಾಜಕೀಯದ ಸೋಂಕಿಲ್ಲದ, ಯಾವುದೇ ಹಣದ ಪಾತ್ರವಿಲ್ಲದ ನಿರಂತರ, ಸ್ವಾರ್ಥರಹಿತ ಸಮಾಜಸೇವೆ. ಇದನ್ನೆಲ್ಲ ಸಂಘದ ಹಿರಿಯರು ಅರಿತೇ ಇದ್ದಾರೆ. ಇವರಲ್ಲದೆ ಇಂಥ ಇನ್ನೂ ಹಲವು ಕುಟುಂಬಗಳ ಸದಸ್ಯರು ನಿಸ್ವಾರ್ಥವಾಗಿ ದೇಶಸೇವೆ ಮಾಡುತ್ತಿದ್ದಾರೆ.

ಆದರೆ ವಿಜಯೇಂದ್ರ? ಕೇವಲ ತಮ್ಮಪ್ಪನ ರಾಜಕೀಯ ಬದುಕಿನ ಕೆಲವು ಸಂಗತಿಗಳ ಮ್ಯಾನೇಜರ್ ಆಗಿದ್ದ ವಿಜಯೇಂದ್ರ, 2018ರವರೆಗೂ ರಾಜಕೀಯಕ್ಕೆ ಬರುವುದೇ ಇಲ್ಲ ಎಂದಾಗಿತ್ತು. ಆದರೆ 2018ರವರೆಗೂ ವಿಜಯೇಂದ್ರ ಪಕ್ಷದಲ್ಲಿ ಕಡಿದು ಕಟ್ಟೆಹಾಕಿದ್ದೇನು? ಎಂಬುದು ಯಾರಿಗೂ ಉತ್ತರ ಗೊತ್ತಿರದ ಪ್ರಶ್ನೆ. ಪಕ್ಷವನ್ನು ಕಟ್ಟಿದ ಯಡಿಯೂರಪ್ಪ ಅವರ ಮಗ ಎಂಬುದನ್ನು ಬಿಟ್ಟರೆ ಬೇರೆ ಯಾವ ಅರ್ಹತೆಯೂ ವಿಜಯೇಂದ್ರರಿಗೆ ಇಲ್ಲವೇ ಇಲ್ಲ. ಯಡಿಯೂರಪ್ಪ ಅವರ ಇನ್ನೊಬ್ಬ ಪುತ್ರ ರಾಘವೇಂದ್ರ ಮೊದಲಿನಿಂದಲೂ ಸಂಸದರಾಗಿದ್ದರು ಎಂಬುದು ನಿಜವಾಗಿದ್ದರೂ, ಅವರ ಮೊದಲ ಚುನಾವಣೆ ನಡೆಯುವ ಸಂದರ್ಭದಲ್ಲಿ ಯಡಿಯೂರಪ್ಪನವರೇ ಪಾರ್ಟಿಯ ಏಕಮೇವಾದ್ವಿತೀಯ ನಾಯಕರಾಗಿ ವಿಜೃಂಭಿಸುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತು. ಇಷ್ಟಾಗಿಯೂ, 2018ರಲ್ಲಿ ಎಂಎಲ್‌ಎ ಟಿಕೆಟ್ ಸಿಕ್ಕೇಬಿಡುತ್ತದೆ ಎಂಬ ವಿಶ್ವಾಸದಲ್ಲಿದ್ದ ವಿಜಯೇಂದ್ರರಿಗೆ ಟಿಕೆಟ್ ತಪ್ಪಿಹೋಯಿತು. ಇಷ್ಟೆಲ್ಲ ನಡೆದರೂ ವಿಜಯೇಂದ್ರ ಈಗ ಶಿಕಾರಿಪುರದ ಶಾಸಕ ಮತ್ತು ಪಕ್ಷದ ರಾಜ್ಯಾಧ್ಯಕ್ಷ!

2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಹೀನಾಯವಾಗಿ ಸೋತ ಮೇಲೆ, ಲೋಕಸಭಾ ಚುನಾವಣೆಯಲ್ಲೂ ಇದೇ ಗತಿ ಉಂಟಾಗಬಹುದು ಎಂಬ ಭಯವು ಬಿಜೆಪಿಯನ್ನು ಕಾಡಿತು. ವಿಧಾನಸಭಾ ಚುನಾವಣೆಯ ಸೋಲಿಗೆ ಯಡಿಯೂರಪ್ಪನವರನ್ನು ಕೆಳಗಿಳಿಸಿದ್ದೇ ಮುಖ್ಯಕಾರಣ ಎಂಬ ಚರ್ಚೆಯನ್ನೂ ಮಾಧ್ಯಮದಲ್ಲಿ ಹರಿಬಿಡಲಾಯಿತು. ಇದರಿಂದಾಗಿ ಯಡಿಯೂರಪ್ಪನವರಿಗೇ ಮತ್ತೆ ಪಾರ್ಟಿಯನ್ನು ವಹಿಸಿಕೊಡಲಾಯಿತು. 5 ವರ್ಷಗಳ ಹಿಂದೆ ಮಗನಿಗೆ ಟಿಕೆಟ್ ಕೂಡಾ ಕೊಡಿಸಲಾಗದ ಯಡಿಯೂರಪ್ಪ ಈಗ ವಿಜಯೇಂದ್ರ ಪಾರ್ಟಿಯ ರಾಜ್ಯಾಧ್ಯಕ್ಷ ಆಗುವಂತೆ ನೋಡಿಕೊಂಡರು.

ಕರ್ನಾಟಕದಲ್ಲಿ ಸಾಮಾನ್ಯವಾಗಿ ವಿಧಾನಸಭಾ ಚುನಾವಣೆಗೂ, ಲೋಕಸಭಾ ಚುನಾವಣೆಗೂ ಫಲಿತಾಂಶದಲ್ಲಿ ವೈರುಧ್ಯ ಇರುತ್ತದೆ. ಕೇಂದ್ರದ ನಾಯಕತ್ವವನ್ನು ಮನ್ನಿಸಿ ಬಿಜೆಪಿಗೆ ಹೆಚ್ಚಿನ ಲೋಕಸಭಾ ಕ್ಷೇತ್ರಗಳು ದಕ್ಕುವ ಸಾಧ್ಯತೆಗಳೇ ಹೆಚ್ಚಾಗಿದ್ದವು. ಆದರೆ ಯಡಿಯೂರಪ್ಪ ತಮ್ಮನ್ನು ತಾವೇ ನಾಯಕ ಎಂದು ಬಿಂಬಿಸಿಕೊಳ್ಳುವ, ಲಿಂಗಾಯತ ಮತಗಳೇ ನಿರ್ಣಾಯಕವಾಗಿದ್ದ ಕಲ್ಯಾಣ ಕರ್ನಾಟಕದಲ್ಲಿಯೇ ಬಿಜೆಪಿ ಸಂಪೂರ್ಣ ನೆಲಕಚ್ಚಿತು. 2013ರಲ್ಲಿ ಕೆಜೆಪಿ ಮೂಲಕ ಬಿಜೆಪಿಯ ಸೋಲಿಗೆ ಕಾರಣರಾದ ಯಡಿಯೂರಪ್ಪ-ವಿಜಯೇಂದ್ರ, ಈ ಬಾರಿ ಪಕ್ಷದ ಒಳಗೇ ಇದ್ದೂ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ಹಿನ್ನಡೆಗೆ ಮೂಲಕಾರಣರಾದರು ಎಂಬುದು ಸ್ಪಷ್ಟ. ಆದರೆ, ಪಕ್ಷವಾಗಲೀ, ಆರೆಸ್ಸೆಸ್ ಆಗಲೀ ಇದನ್ನು ಒಪ್ಪಿಕೊಳ್ಳುತ್ತಿಲ್ಲ ಎಂಬುದೇ ಪಕ್ಷವು ಹೇಗೆ ಖಾಸಗಿ ಆಸ್ತಿಯಾಗಿ ಮಾರ್ಪಟ್ಟಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಕಾರ್ಯಕರ್ತರಿಂದಲೇ ರೂಪುಗೊಂಡ ಪಕ್ಷವನ್ನು 'ಅಪ್ಪನಿಂದ ಬಂದ ಆಸ್ತಿ' ಎಂಬಂತೆ ವಿಜಯೇಂದ್ರರು ಬೇಕಾಬಿಟ್ಟಿ ಬಳಸುತ್ತಿರುವುದು ಸರ್ವವಿದಿತ. ಅಪ್ಪ-ಮಗನ ರಾಜಿಸೂತ್ರದ ರಾಜಕೀಯದಿಂದಾಗಿ ಕರ್ನಾಟಕದಲ್ಲಿ ಬಿಜೆಪಿಯು 7 ಲೋಕಸಭಾ ಕ್ಷೇತ್ರಗಳನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿತು. ಸದ್ಯದಲ್ಲೇ ನಡೆಯಲಿರುವ ಉಪಚುನಾವಣೆಯ ಸಂದರ್ಭದಲ್ಲೂ, ಪಕ್ಷದಲ್ಲಿ ಕಾರ್ಯಕರ್ತರಾಗಿಯೇ ದುಡಿದು ಹಿರಿಯರಾದ ಹಲವರನ್ನು ಪ್ರಚಾರಕಾರ್ಯದಿಂದ ದೂರ ಇಡಲಾಗಿದೆ. ಒಟ್ಟಿನಲ್ಲಿ, ಚುನಾವಣಾ ರಾಜಕೀಯವೇ ಉಸಿರಾಗಿರುವ ರಾಜಕೀಯ ಪಕ್ಷವೊಂದು ಅತ್ಯಂತ ಹೀನಾಯವಾಗಿ ಒಬ್ಬನೇ ವ್ಯಕ್ತಿಯ ಹಿಡಿತಕ್ಕೆ ಸಿಕ್ಕಿದೆ. ಇಡೀ ಪಕ್ಷದ ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು ಒಬ್ಬನೇ ವ್ಯಕ್ತಿಯ ನಿರ್ದೇಶನಗಳನ್ನು ಕೇಳಿ ಕೆಲಸ ಮಾಡಬೇಕಾದ ಸ್ಥಿತಿ ಒದಗಿದೆ. ಪಕ್ಷವು ಸದಾ ಹೆಮ್ಮೆಪಡುತ್ತಿದ್ದ ಸಂಘಟನಾತ್ಮಕ ಜಾಲವು ಕಿತ್ತೆದ್ದುಹೋಗಿದೆ.

ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷವೂ ಇದೇ ರೀತಿ ಏಕವ್ಯಕ್ತಿ ವಶಕ್ಕೆ ಸಿಲುಕಿ ವಿಧಾನಸಭಾ ಚುನಾವಣೆಯಲ್ಲಿ ಮಣ್ಣುಮುಕ್ಕಿದ ತಾಜಾ ಉದಾಹರಣೆ ಜನತೆಯ ಎದುರು ಇದೆ. ಆದರೆ ದೇಶದಲ್ಲೇ ಎಲ್ಲೂ ಕಾಣದ ಏಕವ್ಯಕ್ತಿ ನಿಯಂತ್ರಣದ ವ್ಯವಸ್ಥೆಯು ಕರ್ನಾಟಕದ ಬಿಜೆಪಿಯಲ್ಲಿ 2 ತಲೆಮಾರುಗಳಿಂದ ಜಾರಿಯಲ್ಲಿರುವುದು ಪಕ್ಷಕ್ಕೆ ಒದಗಿದ ಕಂಟಕ ಎಂಬುದನ್ನು ಅರಿಯುವ ಯತ್ನವೇ ನಡೆದಿಲ್ಲ ಎಂಬುದು ವಾಸ್ತವ. ಒಟ್ಟಿನಲ್ಲಿ, ರಾಜ್ಯದಲ್ಲಿ ಕಾಂಗ್ರೆಸ್ಸಿಗೆ ಅಧಿಕಾರವನ್ನು ಬೆಳ್ಳಿತಟ್ಟೆಯಲ್ಲಿ ನೀಡಿದ ಮತ್ತು ಲೋಕಸಭೆಯಲ್ಲಿ ಕರ್ನಾಟಕದ ಬಿಜೆಪಿ ಸಾಧನೆಯನ್ನು ಕುಗ್ಗಿಸಿದ ಅಪಕೀರ್ತಿ ವಿಜಯೇಂದ್ರರಿಗೆ ಸಲ್ಲುತ್ತದೆ ಎನ್ನುವುದೇ ಈ ಹೊತ್ತಿನ ಕಟುವಾಸ್ತವ.

(ಲೇಖಕರು ರಾಜಕೀಯ ಚಿಂತಕರು)

# ಆಯುಷ್ ಇಲಾಖೆಗೆ ಆಗಬೇಕಿದೆ 'ಮೇಜರ್ ಸರ್ಜರಿ'!

ಗಂಟಾಘೋಷ

ಗುರುರಾಜ್ ಗಂಟಿಹೊಳೆ

vveditoped@gmail.com

ಶತಶತಮಾನಗಳಿಂದ ವಿಶ್ವಮಾನ್ಯವೆನಿಸಿದ್ದ ಭಾರತೀಯ ಶಿಕ್ಷಣ ಪದ್ಧತಿ, ಗುರುಕುಲ ಪದ್ಧತಿಗಳು, ಮೊಘಲರ ಹೇರಿಕೆಯ ಕಲಿಕಾ ಪದ್ಧತಿ, ಬ್ರಿಟಿಷರ ಮಿಷನರಿ ಶಿಕ್ಷಣ ಪದ್ಧತಿಯ ದಾಳಿಗೆ ತುತ್ತಾಗಿ, ಪಳೆಯುಳಿಕೆ ಕಾಲಕ್ಕೆ ಎಂದೋ ಸರಿದುಹೋಗಿದೆ. ತಲೆಮಾರಿನಿಂದ ತಲೆಮಾರುಗಳು ಮತ್ತದೇ ಗಂಭೀರ ಕಾಯಿಲೆಗಳಂಥ ಸಮಸ್ಯೆಯಲ್ಲೇ ಕಳೆದುಹೋಗುತ್ತಿವೆ. ಇನ್ನು, ಪ್ರಾಥಮಿಕ ಶಿಕ್ಷಣ ಮುಗಿಸಿ ಹೆಚ್ಚಿನ ಶಿಕ್ಷಣಕ್ಕೆ ಒಡ್ಡಿಕೊಳ್ಳಬೇಕಾದ ಯುವಪೀಳಿಗೆಯು ಕುಟುಂಬ ಸಾಕುವ, ಸಂಕಷ್ಟದಿಂದ ಹೊರಬರುವ ಅನಿವಾರ್ಯತೆಯಿಂದಾಗಿ ತೋಟ-ಗದ್ದೆಗಳಿಗೋ, ಗೋವೆಯಂಥ ಹೊರರಾಜ್ಯಗಳಿಗೋ ತೆರಳಿ ದುಡಿಮೆ ಇಳಿಯಬೇಕಾಗಿ ಬಂದಿದೆ.

ಇಂಥ ಕಾಲಘಟ್ಟದಲ್ಲಿ ಸಂಕೋಲೆಯನ್ನು ಕಿತ್ತೆಸೆದು, ಸದೃಢ ಯುವಪೀಳಿಗೆಯನ್ನೊಳಗೊಂಡ ನವಸಮಾಜವನ್ನು ನಿರ್ಮಿಸಲು ಯತ್ನಿಸಿದಲ್ಲಿ ದೇಶವು ತಾನಾಗಿಯೇ ಸದೃಢವಾಗಿ ಬೆಳೆದು ನಿಲ್ಲುತ್ತದೆ. ಇದಕ್ಕೆ ಮುಖ್ಯ ವಾಹಿನಿಗಳೆಂದರೆ, ಶಿಕ್ಷಣ ಸೌಕರ್ಯ ಮತ್ತು ಸಮಗ್ರ ಆರೋಗ್ಯ ನಿರ್ವಹಣೆ. ಆರೋಗ್ಯದ ವಿಚಾರದಲ್ಲಿ ನಮ್ಮದೇ ವೈದ್ಯಪದ್ಧತಿಯ ಪ್ರಮುಖ ಪ್ರಕಾರವಾಗಿರುವ ಆಯುರ್ವೇದ ಶಿಕ್ಷಣವನ್ನು ಪರಿಗಣಿಸಿದಾಗ, ರಾಜ್ಯದಲ್ಲಿ ಕರಾವಳಿ ಭಾಗಕ್ಕೆ ಗಮನಕೊಟ್ಟಿರುವುದು ಶೂನ್ಯವೆಂದೇ ಹೇಳಬೇಕು. ಒಂದೆರಡು ಪ್ರಮುಖ ಖಾಸಗಿ ಕಾಲೇಜುಗಳನ್ನು ಬಿಟ್ಟರೆ, ಸರಕಾರದಿಂದ ಆಯುರ್ವೇದ ಶಿಕ್ಷಣಕ್ಕೆ ಸೂಕ್ತ ಪ್ರೋತ್ಸಾಹ ಸಿಗದಿರುವುದು ವಿಷಾದನೀಯ.

ಕರ್ನಾಟಕದ ಎಲ್ಲಾ ಸರಕಾರಿ ಮತ್ತು ಖಾಸಗಿ ಆಯುರ್ವೇದ ಕಾಲೇಜುಗಳು ಬೆಂಗಳೂರಿನಲ್ಲಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿವೆ. ಜತೆಗೆ ರಾಜ್ಯದ 24 ಜಿಲ್ಲೆಗಳ ಕೆಲ ಆಯುರ್ವೇದ ವೈದ್ಯಕೀಯ ಕಾಲೇಜುಗಳು ಕೇಂದ್ರದ ಆಯುಷ್ ಇಲಾಖೆಯ Central Council of Indian Medicine (CCIM) ಅಧೀನದಲ್ಲಿ ಬರುತ್ತವೆ. ಬೆರಳೆಣಿಕೆಯ ಹಳೆಯ ವಿದ್ಯಾಲಯಗಳನ್ನು ಹೊರತುಪಡಿಸಿದರೆ ಉಳಿದೆಲ್ಲವೂ ಅಷ್ಟಕ್ಕಷ್ಟೇ ಎಂಬಂತಾಗಿದೆ.

ಆಯುರ್ವೇದ, ಹೋಮಿಯೋಪತಿ, ಯೋಗ, ಯುನಾನಿ ಇತ್ಯಾದಿ ಪದ್ಧತಿಗಳನ್ನೊಳಗೊಂಡಂತೆ 130ಕ್ಕೂ ಹೆಚ್ಚು ಕಾಲೇಜುಗಳು ಆಯುಷ್ ಇಲಾಖೆಯಡಿ ಬರುತ್ತವೆ. ಒಂದು ಕಾಲೇಜಿಗೆ ಕನಿಷ್ಠಪಕ್ಷ 60ರಿಂದ 100 ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬಹುದಾಗಿದ್ದು, ಇದು ಆಯಾ ಕಾಲೇಜಿನ ಮೂಲಸೌಕರ್ಯದ ಮೇಲೆ ಅವಲಂಬಿತವಾಗಿರುತ್ತದೆ. ಹೀಗೆ ವರ್ಷಕ್ಕೆ ಒಂದು ಕಾಲೇಜಿನಿಂದ 60 ವೈದ್ಯರು ಹೊರಬಂದರೂ, ಕನಿಷ್ಠ 7 ಸಾವಿರ ಆಯುರ್ವೇದ ವೈದ್ಯರು ತಯಾರಾಗುತ್ತಾರೆ. ಇಂಥವರಿಗೆ ನಮ್ಮ ವ್ಯವಸ್ಥೆಯಲ್ಲಿರುವ ಉದ್ಯೋಗಾವಕಾಶಗಳೇನು? ಸದ್ಯಕ್ಕಿರುವ ವೈದ್ಯರು ಮಾಡುತ್ತಿರುವುದಾದರೂ ಏನು? ಇವರಿಗೆ ಸರಕಾರದಿಂದ ಏನಾದರೂ ಮಾರ್ಗಸೂಚಿ, ಕಾರ್ಯಸೂಚಿಗಳನ್ನು ನೀಡಲಾಗಿದೆಯೇ ಎಂದು ಗಮನಿಸಿದರೆ, ಯಾವೊಂದು ಅಂಶವೂ ಇಲ್ಲ ಎಂಬುದು ಅರಿವಾಗುತ್ತದೆ! ಹೀಗಾಗಿ, ''ಆಯುರ್ವೇದ ವೈದ್ಯಕೀಯ ಮುಗಿಸಿದವರು ಸಂಪೂರ್ಣವಾಗಿ ಆ ಪದ್ಧತಿಯನ್ನೇ ವೃತ್ತಿಪರವಾಗಿ ನಿರ್ವಹಿಸುತ್ತಿಲ್ಲ'' ಎಂಬುದು ಜನಸಾಮಾನ್ಯರು ಸೇರಿದಂತೆ ಉಳಿದ ಅಲೋಪತಿ ವೈದ್ಯರಿಂದ ಹೊಮ್ಮುವ ಆರೋಪವಾಗಿದೆ!

ಇದು ಸರಿಯೇ. ದಿನಗೂಲಿ ಮಾಡುವವನಿಗೆ, ಹಳ್ಳಿಗನಿಗೆ ಇಷ್ಟುದ್ದದ ಆಯುರ್ವೇದ ಪದ್ಧತಿಯನ್ನು ಅನುಸರಿಸು ಎಂದು ಹೇಳುವುದಾದರೂ ಹೇಗೆ?! ಆತ ದಿನವೂ ದುಡಿದರೇನೇ ಬದುಕು ಸಾಗುವುದು. ಇಂಥವರಿಗೆ ಸ್ವೇದನ, ವಾರಪೂರ್ತಿ ಪಂಚಕರ್ಮ, ತಿಂಗಳುಗಟ್ಟಲೆ ಮಸಾಜ್ ಪದ್ಧತಿಯನ್ನು ಹೇಗೆ ಶಿಫಾರಸು ಮಾಡುವುದು? ಇದು ಆಯುರ್ವೇದ ವೈದ್ಯರ ಅಳಲು. ವೈದ್ಯಕೀಯ ಚಿಕಿತ್ಸಾ ವಿಚಾರದಲ್ಲಿ Integrated/Single window system ಜಾರಿಗೆ ತರಲು ಯೋಚಿಸಬೇಕು. ಉದಾಹರಣೆಗೆ, ಕೆಮ್ಮು, ನೆಗಡಿ, ಮೈ-ಕೈ ನೋವಿನಂಥ ಚಿಕ್ಕಪುಟ್ಟ ಸಮಸ್ಯೆಗಳಿಗೆ ಆಯುರ್ವೇದ ವೈದ್ಯರು ಅಲೋಪತಿಕ್ ಔಷಧಿಗಳನ್ನು ನೀಡಿದರೆ, ಅವರನ್ನು 'ನಕಲಿ' ಎಂದು ದೂಷಿಸುವುದು/ಘೋಷಿಸುವುದು ನಿಲ್ಲಬೇಕು. ಇದೇ ವಿಚಾರವಿಟ್ಟುಕೊಂಡು ಕೆಲ ವರ್ಷಗಳ ಹಿಂದೆ ಆಯುರ್ವೇದ ವೈದ್ಯರು ಮುಷ್ಕರ ಹೂಡಿದ್ದರು.

GNM ಕೋರ್ಸ್ ಮಾಡಿದ ನರ್ಸುಗಳಿಗೆ ಸಾಮಾನ್ಯವಾಗಿ ಎಂ.ಎಸ್‌ಸಿ ಫಾರ್ಮಾ ಆದವರು, ಔಷಧಿಗಳ ಕುರಿತಾಗಿ, I.V.Line ಎಂದರೇನು, ಇಂಜೆಕ್ಷನ್ ಎಂದರೇನು ಎಂಬ ಬಗ್ಗೆ ಸಾಮಾನ್ಯ ಮಾಹಿತಿ ಕೊಟ್ಟಿರುತ್ತಾರೆ. ಹಾಗಿದ್ದರೆ, ಇದನ್ನರಿಯದ ಆಯುರ್ವೇದ ವೈದ್ಯರ ಗತಿಯೇನು? Anatomy, Physiology ಓದಿದಂಥ ಆಯುರ್ವೇದ ವೈದ್ಯರಿಗೆ ರಾಜ್ಯ ಸರಕಾರಗಳು ಸರಿಯಾದ ಸ್ಥಾನಮಾನ ಕೊಡುತ್ತಿಲ್ಲ. ಈ ಕಾರಣಕ್ಕೇ ನಮ್ಮದೇ ವೈದ್ಯಪದ್ಧತಿ ಅವನತಿಯ ಹಾದಿ ಹಿಡಿದಿರುವುದು. ಓದಿ ಹೊರಬಂದವರು ಚಿಕ್ಕಪುಟ್ಟದಕ್ಕೂ Mixed Treatment ಕೊಡುತ್ತಾ ಬದುಕು ಸಾಗಿಸುತ್ತಿರುವುದು.

ಈ ವಾಸ್ತವವನ್ನು ಮನಗಂಡೇ ಪ್ರಧಾನಿ ನರೇಂದ್ರ ಮೋದಿಯವರು ರಾಷ್ಟ್ರವ್ಯಾಪಿಯಾಗಿ ಆಯುರ್ವೇದ ಪದ್ಧತಿಗೆ ವಿಶೇಷ ಗಮನ ಕೊಟ್ಟು ಉನ್ನತೀಕರಿಸಲು ಸೂಚಿಸಿದರು. ಇಂಥ ಕಾರ್ಯಭಾರವನ್ನು ಒಂದು 'ರಾಷ್ಟ್ರಯಜ್ಞ'ದಂತೆ ಕೈಗೊಳ್ಳಬೇಕಿದ್ದ ಆಯುಷ್ ಇಲಾಖೆಯು ಎಷ್ಟು ನಿರ್ಲಕ್ಷಿಸಿ ಹೊದ್ದು ಮಲಗಿದೆಯೆಂದರೆ, ಇಲಾಖೆಯಲ್ಲಿ ಯಾರು ಯಾವ ಕೆಲಸ ಮಾಡುತ್ತಿದ್ದಾರೆ, ಎಲ್ಲೇನು ನಡೆಯುತ್ತಿದೆ ಎಂಬುದರ ಸುಳಿವೂ ಇಲ್ಲ.

ಇನ್ನು ಕೆಲವರು ಕರ್ನಾಟಕ ಆಯುಷ್ ಇಲಾಖೆಯ ಮೇಲೆ ಮಾಡಿರುವ ರಾಶಿಗಟ್ಟಲೆ ದೂರು, ಗಂಭೀರ ಆರೋಪಗಳು ಮಾಧ್ಯಮಗಳಲ್ಲಿ ಸದ್ದುಮಾಡುತ್ತಿವೆ. ಕೇರಳ, ತಮಿಳುನಾಡಿನ ಕೆಲ ಖಾಸಗಿ ಔಷಧಿಗಳನ್ನು ತೆಗೆದುಕೊಂಡು ರೋಗಿಗಳು ಗುಣವಾಗಬಹುದಾದರೆ, ಕರ್ನಾಟಕದ ಆಯುಷ್ ಇಲಾಖೆಯಿಂದ ಯಾಕೆ ಸಾಧ್ಯವಾಗುತ್ತಿಲ್ಲ? ಕಾರಣವಿಷ್ಟೇ- ನಾನೂ ವೈದ್ಯ ಎಂದು ಹೇಳಿಕೊಂಡು ಯಾವುದೋ 'ಎಣ್ಣೆ'ಯನ್ನು ತಯಾರು ಮಾಡಿಕೊಂಡು ಕೊಟ್ಟ ಲೇಬಲ್ಲಿಗೆ ಇಲಾಖೆಯು ಕಣ್ಣುಮುಚ್ಚಿ 'ಒಪ್ಪಿಗೆ ಮುದ್ರೆ' ಕೊಡುತ್ತಿರುವುದೇ ಬಹುದೊಡ್ಡ ಲೋಪಗಳಲ್ಲೊಂದು. ಹೀಗಾಗಿಯೇ ಚಿಕಿತ್ಸೆಯ ನೆಪದಲ್ಲಿ 'ಆಯುರ್ವೇದ ಮಸಾಜ್ ಪಾರ್ಲರ್'ಗಳು ನಗರ ಪ್ರದೇಶಗಳಲ್ಲಿ ಹುಟ್ಟಿಕೊಂಡಿವೆ. ಇನ್ನು ಕೆಲವರು, 'ಯೂಟ್ಯೂಬ್ ಮ್ಯಾಜಿಕ್ ಟ್ರೀಟ್‌ಮೆಂಟ್' ವೈದ್ಯರಾಗಿ ಜನರಿಂದ ಲಕ್ಷಗಟ್ಟಲೆ ಸುಲಿಯುತ್ತಿದ್ದಾರೆ. ಆದರೂ, ಆಯುಷ್ ಇಲಾಖೆ ಮತ್ತು ಸಂಬಂಧಿತ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿರುವುದು ಆಶ್ಚರ್ಯಕರ.

ಇನ್ನು ಕೆಲವರು, ತಂತಮ್ಮ ಮನೆಪದ್ಧತಿ, ಪಾರಂಪರಿಕ ಪದ್ಧತಿ ಎಂದೆಲ್ಲ ಹೇಳಿಕೊಂಡು ಬೇರೆಯವರ ಔಷಧಿಗಳಿಗೆ ತಮ್ಮದೇ ಲೇಬಲ್ ಹಚ್ಚಿ ಚಿಕಿತ್ಸೆ ಕೊಡುತ್ತಿರುವುದು ಕೂಡ ವಂಚನೆಯ ವ್ಯಾಪ್ತಿಯೊಳಗೆ ಬರುತ್ತದೆ ಎಂಬುದು ಇಲಾಖಾಧಿಕಾರಿಗಳಿಗೆ ಗೊತ್ತಿಲ್ಲದ್ದೇನಲ್ಲ, ಆದರೆ ಜಾಣ ಕುರುಡಷ್ಟೇ!

ಆಯುಷ್ ಇಲಾಖೆ ಅಥವಾ ಕೇಂದ್ರ ಸರಕಾರದಿಂದ, ಏಕೀಕೃತವಾದ ಸರಬರಾಜು ಸರಪಳಿಯ ಮೂಲಕವೇ ಜನಸಾಮಾನ್ಯರಿಗೆ ಔಷಧಿಯು ತಲುಪುವಂತಾಗಬೇಕು. ಯಾರೇ ಮನೆ ಔಷಧಿ/ಪಾರಂಪರಿಕ ಔಷಧಿ ತಯಾರಿಸಲಿ, ಅವುಗಳ ಫಾರ್ಮುಲಾ, ತಯಾರಿಸಿದ ಪದ್ಧತಿ ಸಮೇತ ಕೇಂದ್ರಕ್ಕೆ ತಲುಪಿಸಿ, ಅಲ್ಲಿಂದ ಪಾಸಾದ ಮೇಲೆಯೇ ಜನರಿಗೆ ತಲುಪುವಂತಾಗಬೇಕು. ಆದರೆ, ಇಷ್ಟೆಲ್ಲ ಕ್ರಮ ಕೈಗೊಳ್ಳಬೇಕಾದ ಆಯುಷ್ ಇಲಾಖಾಧಿಕಾರಿಗಳು ಸುಮ್ಮನಿರುವುದೇಕೆ? ಎಂಬುದು ಪ್ರಶ್ನೆ.

ಆಯುಷ್ ಇಲಾಖೆಯಲ್ಲಿ DLA (Drug Licence Authority) ಎಂಬುದೊಂದು ಅತ್ಯಂತ ಪ್ರಮುಖ ಹುದ್ದೆಯಿದೆ. ಇವರು ಕೂಡ ಏನು ನಿರ್ವಹಣೆ ಮಾಡುತ್ತಿದ್ದಾರೆಂಬುದನ್ನು ಆ ದೇವರೇ ಬಲ್ಲ! ಇನ್ನು ಕೆಲವರು ದಶಕ ಕಳೆದರೂ ಒಂದೇ ಹುದ್ದೆಯಲ್ಲಿದ್ದು, ಏನು ಮಾಡುತ್ತಿದ್ದಾರೆಂಬುದೂ ಜನರಿಗೆ ತಿಳಿಯುತ್ತಿಲ್ಲ, ಇಲಾಖೆಗೂ ಅರಿವಾಗುತ್ತಿಲ್ಲ. ಇದರಲ್ಲಿ ಕೆಲವರು ಪಕ್ಷಭೇದ ಮರೆತು ಭಾಗಿಯಾಗಿ, ಆಯುಷ್ ಇಲಾಖೆಯನ್ನು ಮುಗುಮ್ಮಾಗಿ ಮುಗಿಸುತ್ತಿದ್ದಾರೆನ್ನಬಹುದು. ಇನ್ನು ಆರೋಗ್ಯ ಇಲಾಖೆಯ ಮತ್ತೊಂದು ಭಾನಗಡಿ ಕೆಲಸವೆಂದರೆ, KPME ಕಾನೂನನ್ನು ಹಳ್ಳಿಯ ಚಿಕ್ಕ ಚಿಕ್ಕ ವೈದ್ಯರ ಮೇಲೆ ಹೇರಿರುವುದು. ಯಾವುದೋ ಹಳ್ಳಿಯ ಮೂಲೆಯಲ್ಲಿ ಕ್ಲಿನಿಕ್ ಹಾಕಿಕೊಂಡು ಚಿಕಿತ್ಸೆ ನೀಡಲು ಹೊರಡುವ ವೈದ್ಯರಿಗೆ ಒಂದು ರಚನಾತ್ಮಕ ಕಾನೂನನ್ನು ತರಬೇಕೇ ಹೊರತು, ವಿಧ್ವಂಸಕ ಕಾನೂನು ತಂದು, ಕಿರುಕುಳ ನೀಡುವಂತೆ ನಡೆಸಿಕೊಂಡು, ಅವರು ಓಡಿಹೋಗುವಂತೆ ಇಲಾಖೆಯೇ ಮಾಡಬಾರದು. ಕೆಲವು ದೊಡ್ಡ ಆಯುರ್ವೇದ ವೈದ್ಯಕೀಯ ಕಾಲೇಜುಗಳು ಚಿಕಿತ್ಸೆಯ ಸಂದರ್ಭದಲ್ಲಿ ಅಲೋಪತಿ ಔಷಧಿಗಳನ್ನೂ ಸಾಂದರ್ಭಿಕವಾಗಿ ಕೊಡುತ್ತಿವೆ; ಹಳ್ಳಿಯಲ್ಲಿ ನೇಮಕಗೊಂಡಿರುವ ಆಯುರ್ವೇದ ವೈದ್ಯರು ಇದನ್ನು ಮಾಡಬಾರದೆಂದರೆ ಅದು ವ್ಯವಸ್ಥೆಯ ದುರಂತವಷ್ಟೇ.

ಕೆಲವು ಜಿಲ್ಲಾ ಆಯುಷ್ ಅಧಿಕಾರಿಗಳು ಹೆಗ್ಗಣದಂತೆ ತಿಂದು ತೇಗುತ್ತ ದಶಕದಿಂದಲೂ ಒಂದೇ ಜಾಗದಲ್ಲಿ ಫೆವಿಕಾಲ್ ಹಾಕಿ ಕುಳಿತುಬಿಟ್ಟಿದ್ದಾರೆ. ಇಂಥವರನ್ನು ಒಕ್ಕಲೆಬ್ಬಿಸುವ, ಆಯಾ ಕಾರ್ಯಕ್ಷೇತ್ರಗಳನ್ನು ಶುಚಿಗೊಳಿಸುವ ಕೆಲಸಗಳಾಗಬೇಕು. ಈ ನಿಟ್ಟಿನಲ್ಲಿ ಸಾರ್ವಜನಿಕರು ಸಾತ್ವಿಕ ಕೋಪ ತೋರಿಸದೇ ಹೋದರೆ, ಮುಂದಿನ ದಿನಗಳು ಇನ್ನೂ ಕಷ್ಟಕರವಾಗಲಿವೆ. ಹಾಗೆಯೇ Prohibition of Advertisement of Magic Remedies act Section-5 ಇದರ ಅಡಿಗೆ ಬರುವಂತೆ, ನಿತ್ಯವೂ ಹತ್ತಾರು 'ಮ್ಯಾಜಿಕಲ್ ಡಾಕ್ಟರ್'ಗಳು ಯೂಟ್ಯೂಬ್ ಮೂಲಕ ಚಿಕಿತ್ಸೆ ಕೊಡುವ, ಥಟ್ಟನೆ ವಾಸಿಮಾಡುವ ಮಾತುಗಳನ್ನು ಆಡುತ್ತಿರುತ್ತಾರೆ. ಇಲಾಖಾಧಿಕಾರಿಗಳು ಇದನ್ನೂ ನೋಡದಷ್ಟು ಕುರುಡರಾಗಿದ್ದಾರೆಂದು ಜನರು ಆಡಿಕೊಳ್ಳುವಂತಾಗಿದೆ.

ಪ್ರಾಂತ್ಯವಾರು ಕಾಲೇಜು ಮತ್ತು ಮೂಲಸೌಕರ್ಯಗಳನ್ನು ಗಮನಿಸಿದಾಗ, ಕರಾವಳಿಯ ಭಾಗದಲ್ಲಿ ಸರಕಾರದಿಂದ ಅಧಿಕೃತವಾಗಿ ಆಯುರ್ವೇದ ಕಾಲೇಜು ಮತ್ತು ಸುಸಜ್ಜಿತ ಆಸ್ಪತ್ರೆಗಳನ್ನು ಕಟ್ಟದಿರುವುದು ನೋಡಿದರೆ, ಬೇಕೆಂದೇ ಕಡೆಗಣಿಸುತ್ತಿದ್ದಾರೆ ಎಂದೆನಿಸದಿರದು. ಇನ್ನು ಜಿಲ್ಲಾ ಆಯುಷ್ ಆಸ್ಪತ್ರೆಗಳ ಸ್ಥಿತಿಗತಿ ಆ ದೇವರಿಗೇ ಪ್ರೀತಿ! ಕೆಲ ಪ್ರಾಥಮಿಕ ಹಂತದ ಚಿಕಿತ್ಸೆಗಳು, ಚಿಕ್ಕಪುಟ್ಟ ಔಷಧಿ-ಮಾತ್ರೆಗಳನ್ನು ಕೊಡುವುದು ಬಿಟ್ಟರೆ, ಇಂಥ ಆಸ್ಪತ್ರೆಗಳು ಇರುವುದೇಕೆ ಎಂದೇ ಜನರಿಗೆ ಅನಿಸುತ್ತದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಜನರೇ ಅಕ್ಕಪಕ್ಕದ ಖಾಸಗಿ ಕ್ಲಿನಿಕ್‌ಗೆ ಹೋಗುವುದನ್ನು ಗಮನಿಸಿದಾಗ, ಜಿಲ್ಲಾ ಆಯುಷ್ ಆಸ್ಪತ್ರೆಗಳ ಗುಣಮಟ್ಟ, ಚಿಕಿತ್ಸಾ ದರ್ಜೆಯ ಅರಿವಾಗುತ್ತದೆ.

ಇಂಥ ವ್ಯವಸ್ಥೆಗಳಿಗೆ ಕಾಯಕಲ್ಪ ನೀಡಿ ನಿಜಕ್ಕೂ ಜನರ ಸೇವೆ ಮಾಡುವ ಹಂಬಲ ಆಡಳಿತಾರೂಢ ಸರಕಾರಕ್ಕೆ ಮತ್ತು ಆರೋಗ್ಯ ಇಲಾಖೆಗೆ ಇದ್ದರೆ, ರಾಜ್ಯದ ಎಲ್ಲಾ ಜಿಲ್ಲಾ ಆಯುಷ್ ಆಸ್ಪತ್ರೆಗಳನ್ನು ಸುಸಜ್ಜಿತವಾಗಿಸಬೇಕು. ಇವುಗಳಿಗೆ ಹೊಂದಿಕೊಂಡಿರುವಂತೆಯೇ ಆಯುರ್ವೇದ ಕಾಲೇಜುಗಳನ್ನು ಸ್ಥಾಪಿಸಬೇಕು. ಚಿಕ್ಕ ಚಿಕ್ಕ 'ಗ್ರಾಮ ಕ್ಲಿನಿಕ್'ಗಳನ್ನು ಆರಂಭಿಸಬೇಕು. ಇದರಿಂದಾಗಿ ಜನರಿಗೆ ಸಕಾಲದಲ್ಲಿ ಸೂಕ್ತ ಪ್ರಾಥಮಿಕ ಚಿಕಿತ್ಸೆ ಲಭಿಸುತ್ತದೆ. ಜತೆಗೆ, ಹಳ್ಳಿಗರಿಗೆ ಆಯುರ್ವೇದದ ಬಗ್ಗೆ ಜಾಗೃತಿಯುಂಟಾಗಿ, ಅದರ ಕಲಿಕೆಯ ಕಡೆಗೂ ಗಮನಹರಿಯುತ್ತದೆ. ತನ್ಮೂಲಕ, ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ಕೆಲಸಕ್ಕೆ ವೈದ್ಯ ಸಿಬ್ಬಂದಿಯೂ ಸಿಗುತ್ತಾರೆ.

ಕೆಲ ಖಾಸಗಿ ಆಯುರ್ವೇದ ವೈದ್ಯಕೀಯ ಸಂಸ್ಥೆಗಳನ್ನು ಪರಿಗಣಿಸಿ, ಒಂದಿಡೀ ಸರಕಾರ ನೀಡಬಹುದಾದ ಚಿಕಿತ್ಸಾ ಸೌಲಭ್ಯ, ಶಿಕ್ಷಣ ಪದ್ಧತಿ, ವೈದ್ಯರ ನೇಮಕ, ಆಡಳಿತ ವ್ಯವಸ್ಥೆ, ರೋಗಿಗಳಿಂದ ಪಡೆಯುವ ಅತ್ಯಲ್ಪ ಚಿಕಿತ್ಸಾ ಶುಲ್ಕ ಇತ್ಯಾದಿ ಅಂಶಗಳನ್ನು ಅವಲೋಕಿಸಿ, ಜನರ ತೆರಿಗೆ ಪಡೆದು ತೆಪ್ಪಗಿರುವ ಸರಕಾರಿ ವ್ಯವಸ್ಥೆಗಳನ್ನು ಅವಕ್ಕೆ ಹೋಲಿಸಿದಾಗ ಮನಸ್ಸಿಗೆ ಖೇದವಾಗುತ್ತದೆ. ಜನರ ಸೇವೆಗೆಂದೇ ಇರುವ ಸರಕಾರಗಳಿಗೆ ಖಾಸಗಿಯವರಂಥ ಸುಸಜ್ಜಿತ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಾಗುತ್ತಿಲ್ಲವೇಕೆ? ಎಂಬ ಪ್ರಶ್ನೆಯೂ ಕಾಡುತ್ತದೆ. ಆದ್ದರಿಂದ, ಇದಕ್ಕೆಂದೇ ಕಾರ್ಯಪಡೆಯೊಂದನ್ನು ರಚಿಸಿ, ಒಂದು ಸಮರ್ಪಕ ಆಯುರ್ವೇದ ವೈದ್ಯಪದ್ಧತಿಯ ಪರಂಪರೆಯನ್ನೇ ರಾಜ್ಯದಲ್ಲಿ ಕಟ್ಟುವ ಅಗತ್ಯವಿದೆ. ಆರೋಗ್ಯ ಸಚಿವರು ಮತ್ತು ಆರೋಗ್ಯ ಇಲಾಖೆ ಈ ನಿಟ್ಟಿನಲ್ಲಿ ಆಲೋಚಿಸಲಿ.

## ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

2027ರಲ್ಲಿ 'ಚಂದ್ರಯಾನ-4' ಕೈಗೊಳ್ಳಲು ಇಸ್ರೋ ಚಿಂತನೆ: ಸುದ್ದಿ

ನಮ್ ಮನೆ 'ವಕ್ಫ್ ಮಂಡಳಿ'ಯ ಪಾಲಾಗೋ ಲಕ್ಷಣ ಇದೆ. ಆ ಚಂದ್ರಯಾನದಲ್ಲಿ ನಮ್ಮನ್ನೂ ಅಲ್ಲಿಗೆ ಕಳಿಸಿ ಪುಣ್ಯ ಕಟ್ಕೊಳ್ಳಿ ಸರ್.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್रಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 318

This is a public announcement for information purposes only and is not a prospectus announcement and does not constitute an invitation or offer to acquire, purchase or subscribe to securities. Not for release, publication or distribution directly or indirectly, outside India.
Initial public offer of Equity Shares (as defined below) on the main board of the Stock Exchanges (as defined below) in compliance with Chapter II of the Securities and Exchange Board of India (Issue of Capital and Disclosure Requirements) Regulations, 2018, as amended ("SEBI ICDR Regulations").

sagility™

# SAGILITY INDIA LIMITED

(Please scan the QR code to view the RHP)

Our Company was originally incorporated as 'Berkmeer India Private Limited' as a private limited company under the Companies Act, 2013 pursuant to a certificate of incorporation dated July 28, 2021, issued by the Registrar of Companies, Karnataka at Bengaluru (the "**RoC**"). Subsequently, pursuant to a resolution passed by our Shareholders at the EGM held on August 25, 2022 the name of our Company was changed to 'Sagility India Private Limited' and a fresh certificate of incorporation was issued by the Registrar of Companies, Karnataka at Bengaluru on September 13, 2022. Subsequently, our Company was converted from a private limited company to a public limited company, pursuant to a special resolution passed by our Shareholders at the EGM held on May 21, 2024 and the name of our Company was changed to 'Sagility India Limited', and a fresh certificate of incorporation was issued to our Company by the RoC, on June 20, 2024. For details of changes in the name and registered office address of our Company, see ***'History and Certain Corporate Matters'*** on page 194 of the red herring prospectus dated October 29, 2024 (read together with public announcement dated October 31, 2024 and Corrigendum-I dated November 5, 2024) filed with the RoC ("**RHP**" or "**Red Herring Prospectus**").

Registered Office: No. 23 & 24, AMR Tech Park, Building 2A, First Floor, Hongasandara Village, Off Hosur Road, Bommanahalli, Bengaluru 560068, Karnataka, India; **Corporate Office:** AMR Tech Park, Building 2A, Third Floor, Hongasandara Village, Off Hosur Road, Bommanahalli, Bengaluru 560 068, Karnataka, India.
**Tel:** +91- 80-7125 1500; **Contact Person:** SatishKumar Sakharayapattana Seetharamaiah, Company Secretary and Compliance Officer; **E-mail:** investorservice@sagilityhealth.com; **Website:** www.sagilityhealth.com; **Corporate Identity Number:** U72900KA2021PLC150054

## PROMOTERS OF OUR COMPANY: SAGILITY B.V. AND SAGILITY HOLDINGS B.V.

**INITIAL PUBLIC OFFERING OF UP TO 702,199,262 EQUITY SHARES OF FACE VALUE OF ₹ 10 EACH ("EQUITY SHARES") OF SAGILITY INDIA LIMITED (OUR "COMPANY" OR THE "ISSUER") FOR CASH AT A PRICE OF ₹ [●] PER EQUITY SHARE INCLUDING A SHARE PREMIUM OF ₹ [●] PER EQUITY SHARE (THE "OFFER PRICE") AGGREGATING UP TO ₹ [●] MILLION (THE "OFFER"). THE OFFER COMPRISES OF AN OFFER FOR SALE OF UP TO 702,199,262 EQUITY SHARES OF FACE VALUE OF ₹ 10 EACH (THE "OFFERED SHARES") AGGREGATING UP TO ₹ [●] MILLION (THE "OFFER FOR SALE" OR THE "OFFER"), BY SAGILITY B.V. THE OFFER WILL CONSTITUTE [●]% OF THE POST-OFFER PAID-UP EQUITY SHARE CAPITAL OF OUR COMPANY.**
**THE OFFER INCLUDES A RESERVATION OF UP TO 1,900,000 EQUITY SHARES OF FACE VALUE OF ₹ 10 EACH, AGGREGATING UP TO ₹ [●] MILLION (CONSTITUTING UP TO [●]% OF THE POST-OFFER PAID-UP EQUITY SHARE CAPITAL), FOR SUBSCRIPTION BY ELIGIBLE EMPLOYEES ("EMPLOYEE RESERVATION PORTION"). THE OFFER LESS THE EMPLOYEE RESERVATION PORTION IS HEREINAFTER REFERRED TO AS "NET OFFER". THE OFFER AND NET OFFER SHALL CONSTITUTE [●]% AND [●]%, OF THE POST-OFFER PAID-UP EQUITY SHARE CAPITAL OF OUR COMPANY, RESPECTIVELY.**

| DETAILS OF THE OFFER FOR SALE BY THE PROMOTER SELLING SHAREHOLDER AND THE WEIGHTED AVERAGE COST OF ACQUISITION PER EQUITY SHARE | | | |
|---|---|---|---|
| NAME OF THE SELLING SHAREHOLDER | TYPE | NUMBER OF EQUITY SHARES BEING OFFERED/AMOUNT (IN ₹ MILLION) | WEIGHTED AVERAGE COST OF ACQUISITION PER EQUITY SHARE (IN ₹)* |
| Sagility B.V. | Promoter Selling Shareholder | Up to 702,199,262 Equity Shares of face value of ₹ 10 each aggregating up to ₹[●] million | 20.79 |

**As certified by Agarwal Jain & Gupta., Chartered Accountants, by way of their certificate dated October 29, 2024.*

**We provide technology-enabled business solutions and services to clients in the U.S. healthcare industry and are a pure-play healthcare focused services provider, and our clients include Payers (U.S. health insurance companies, which finance and reimburse the cost of health services) and Providers (primarily hospitals, physicians, and diagnostic and medical devices companies).**

**The Offer is being made through the Book Building Process in accordance with Regulation 6(2) of the SEBI ICDR Regulations.**
**• QIB Portion: Not less than 75% of the Net Offer • Non-Institutional Portion: Not more than 15% of the Net Offer**
**• Retail Portion: Not more than 10% of the Net Offer • Employee Reservation Portion: Up to 1,900,000 Equity Shares aggregating up to ₹ [•] million**

**PRICE BAND: ₹28 TO ₹30 PER EQUITY SHARE OF FACE VALUE OF ₹10 EACH.**
**THE FLOOR PRICE AND THE CAP PRICE ARE 2.80 TIMES AND 3.00 TIMES THE FACE VALUE OF THE EQUITY SHARES RESPECTIVELY.**
**BIDS CAN BE MADE FOR A MINIMUM OF 500 EQUITY SHARES AND IN MULTIPLES OF 500 EQUITY SHARES THEREAFTER.**
**A DISCOUNT OF ₹ 2 PER EQUITY SHARE IS BEING OFFERED TO ELIGIBLE EMPLOYEES BIDDING IN THE EMPLOYEE RESERVATION PORTION.**
**THE PRICE TO EARNINGS RATIO ("P/E") BASED ON DILUTED EPS FOR FISCAL 2024 AT THE UPPER END OF THE PRICE BAND IS 56.60 TIMES.**
**WEIGHTED AVERAGE RETURN ON NET WORTH FOR LAST THREE FULL FINANCIAL YEARS IS 2.52%**

***In accordance with the recommendation of committee of Independent Directors of our Company, pursuant to their resolution dated October 29, 2024, the above provided price band is justified based on quantitative factors/ KPIs disclosed in the "Basis for Offer Price" section of the RHP vis-à-vis the weighted average cost of acquisition ("WACA") of primary and secondary transactions, as applicable, disclosed in the "Basis for Offer Price" section on page 109 of the RHP.***

***In making an investment decision and purchase in the Offer, potential investors must only rely on the information included in the Red Herring Prospectus and the terms of the Offer, including the merits and risks involved and not rely on any other external sources of information about the Offer available in any manner.***

## RISKS TO INVESTORS:

**For details, refer to *"Risk Factors"* on page 40 of the RHP.**

1. **Competition Risk:** The healthcare services industry is highly competitive and if we are unable to compete effectively, it may adversely affect our business, financial condition and results of operations. Within the healthcare operations outsourcing market, we had a share of approximately 1.18% and approximately 1.23% in 2022 and 2023 respectively *(Source: Everest Report)*.
2. **Industry Risk:** Our business is solely focused on the U.S. healthcare industry and may be adversely affected by factors affecting the U.S. healthcare industry, including a decline in the growth of the U.S. healthcare industry, reduction in outsourcing and other trends.
3. **Risk relating to the price of our Equity Shares:** We have, in the 12 months preceding the date of the Red Herring Prospectus, issued Equity Shares at a price which may be significantly lower than the Offer Price, including an allotment on May 31, 2024, at a price of ₹28.30 per share.
4. **Impairment Risk:** Goodwill and other intangible assets are our largest assets. Any impairment to our goodwill or other intangible assets may adversely affect our reputation and financial condition. As of June 30, 2024, our goodwill and intangible assets amounted ₹56,792.60 million and ₹19,669.87 million, respectively, representing 54.67% and 18.94% of our total assets.
5. **Regulatory Action Risk:** Dr. Shalini Sarin, one of our Independent Directors, has received summons, under the Securities and Exchange Board of India Act, 1992 seeking co-operation and certain information in relation to an ongoing investigation involving Linde India Limited.
6. **Promoters' Credit Risks:** Pursuant to an external financing facility availed by one of our Promoters, Sagility B.V., shares of Sagility B.V. held by our other Promoter, Sagility Holdings B.V. are pledged. In case of an event of default and consequent invocation of security, there may be a change in control, which may adversely impact our business.
7. **Risks relating to regulatory changes:** Anti-outsourcing legislation could adversely affect our business, financial condition and results of operations and impair our ability to service our customers.
8. **Risk relating to our credit rating:** Our Company received a BBB (Stable)/A3+ credit rating from ICRA Limited on October 9, 2024. A downgrade in our credit rating could adversely affect our ability to raise capital in the future.
9. **IP infringement risk:** Any failure to protect our proprietary technologies or information or our intellectual property rights may have an adverse effect on our business, financial condition, and results of operations.
10. **Risks relating to limits on foreign investment:** Under Indian foreign investment laws, an Indian company is permitted to invest in overseas joint ventures or subsidiaries, up to 400% of the Indian company's net worth as at the date of its last audited balance sheet. Our ability to invest in foreign subsidiaries or joint ventures is constrained by such regulations as well as other laws.
11. **OFS related risk:** The proceeds from this Offer for Sale will be paid to the Promoter Selling Shareholder (after deducting applicable Offer related expenses and relevant taxes thereon) and our Company will not receive any such proceeds
12. Weighted average Return on Net Worth for the Financial Years 2024, 2023 and For the period beginning from July 28, 2021 to March 31, 2022 is 2.52%.
13. Details of weighted average cost of acquisition of all Equity Shares transacted in the last three years, 18 months and one year preceding the date of the Red Herring Prospectus:

| Period | Weighted average cost of acquisition (WACA) (in ₹)* | Lower End of the Price Band is 'X' times the WACA | Upper End of the Price Band is 'X' times the WACA | Range of acquisition price Lowest Price - Highest Price (in ₹)* |
|---|---|---|---|---|
| Last three years | 20.79 | 1.35 | 1.44 | 10.00-28.30 |
| Last 18 months | 28.30 | 0.99 | 1.06 | 28.30 |
| Last one year | 28.30 | 0.99 | 1.06 | 28.30 |

** As certified by Agarwal Jain & Gupta, Chartered Accountants, pursuant to their certificate dated October 29, 2024.*

14. Weighted average cost of acquisition ("WACA"), floor price and cap price

| Past Transactions | Weighted average cost of acquisition (in ₹)# | Floor Price (in ₹) | Cap Price (in ₹) |
|---|---|---|---|
| WACA of equity shares that were issued by our Company | 28.30 | 0.99 times | 1.06 times |
| WACA of equity shares that were acquired or sold by way of secondary transactions | N.A | N.A. | N.A. |

*# As certified by Agarwal Jain & Gupta, by way of their certificate dated October 29, 2024*

15. The book running lead managers ("BRLMs") have handled 80 public offers in the past three Financial Years, out of which 19 offers have closed below the offer price on the listing date

| Name of BRLM | Total Public Issues | Issues closed below Offer Price |
|---|---|---|
| ICICI Securities Limited | 32 | 6 |
| IIFL Capital Services Limited *(Formerly known as IIFL Securities Limited)* | 20 | 5 |
| Jefferies India Private Limited | 3 | 0 |
| J. P. Morgan India Private Limited | 4 | 1 |
| Common Issues by BRLMs | 21 | 7 |
| Total | 80 | 19 |

## BID/OFFER PROGRAMME

## BID/ OFFER CLOSES TODAY*

** The UPI mandate end time and date shall be at 5:00 p.m. on Bid/Offer Closing Day.*

**An indicative timetable in respect of the Offer is set out below:**
**Submission of Bids (other than Bids from Anchor Investors):**

| Bid/ Offer Period (except the Bid/ Offer Closing Date) | |
|---|---|
| Submission and Revision in Bids | Only between 10:00 am and 5:00 pm (Indian Standard Time ("**IST**")) |
| **Bid/ Offer Closing Date*** | |
| Submission of electronic applications (Online ASBA through 3-in-1 accounts) - For RIBs | Only between 10:00 a.m. and up to 5:00 p.m. IST |
| Submission of electronic applications (Bank ASBA through Online channels like Internet Banking, Mobile Banking and Syndicate UPI ASBA applications where Bid Amount is up to ₹500,000) | Only between 10:00 a.m. and up to 4:00 p.m. IST |
| Submission of electronic applications (Syndicate Non-Retail, Non-Individual Applications) | Only between 10:00 a.m. and up to 3:00 p.m. IST |
| Submission of physical applications (Bank ASBA) | Only between 10:00 a.m. and up to 1:00 p.m. IST |
| Submission of physical applications (Syndicate Non-Retail, Non-Individual Applications of QIBs and NIIs where Bid Amount is more than ₹500,000) | Only between 10:00 a.m. and up to 12:00 p.m. IST |

| Modification/ Revision/cancellation of Bids | |
|---|---|
| Upward Revision of Bids by QIBs and Non-Institutional Investors categories# | Only between 10.00 a.m. on the Bid/Offer Opening Date and up to 4.00 p.m. IST on Bid/Offer Closing Date |
| Upward or downward Revision of Bids or cancellation of Bids by RIBIs | Only between 10.00 a.m. on the Bid/Offer Opening Date and up to 5.00 p.m. IST on Bid/Offer Closing Date |

** UPI mandate end time and date shall be at 05:00 p.m. on Bid/ Offer Closing Date.*
*# QIBs and Non-Institutional Bidders can neither revise their bids downwards nor cancel/withdraw their bids.*

**Post Offer Schedule:**

| Event | Indicative Date |
|---|---|
| Finalisation of Basis of Allotment with the Designated Stock Exchange | On or about Friday November 8, 2024 |
| Initiation of refunds (if any, for Anchor Investors) / unblocking of funds from ASBA Account* | On or about Friday, November 8, 2024 |
| Credit of the Equity Shares to depository accounts of Allottees | On or about Monday, November 11, 2024 |
| Commencement of trading of the Equity Shares on the Stock Exchanges | On or about Tuesday, November 12, 2024 |


*Continued on next page...*

...continued from previous page.



**THE EQUITY SHARES OF OUR COMPANY WILL GET LISTED ON MAIN BOARD PLATFORM OF BSE LIMITED ("BSE") AND NATIONAL STOCK EXCHANGE OF INDIA LIMITED ("NSE")**

In case of any revision in the Price Band, the Bid/ Offer Period shall be extended for at least three additional Working Days after such revision of the Price Band, subject to the total Bid/Offer Period not exceeding 10 Working Days. In cases of force majeure, banking strike or similar circumstances, our Company in consultation with the BRLMs, for reasons to be recorded in writing, may extend the Bid / Offer Period for a minimum of one Working Days, subject to the Bid/ Offer Period not exceeding 10 Working Days. Any revision in the Price Band, and the revised Bid/ Offer Period, if applicable, shall be widely disseminated by notification to the Stock Exchanges, by issuing a press release, and also by indicating the change on the respective websites of the BRLMs and at the terminals of the Members of the Syndicate and by intimation to Self-Certified Syndicate Banks ("SCSBs"), other Designated Intermediaries and Sponsor Banks, as required under the SEBI ICDR Regulations.

The Offer is being made through the Book Building Process, in terms of Rule 19(2)(b) of the Securities Contracts (Regulation) Rules, 1957, as amended ("**SCRR**") read with Regulation 31 of the SEBI ICDR Regulations and in compliance with Regulation 6(2) of the SEBI ICDR Regulations, wherein not less than 75% of the Net Offer shall be allocated on a proportionate basis to the Qualified Institutional Buyers ("**QIBs**") ("**QIB Portion**"), provided that our Company in consultation with the BRLMs, may allocate up to 60% of the QIB Portion to Anchor Investors on a discretionary basis in accordance with the SEBI ICDR Regulations ("**Anchor Investor Portion**"), of which at least one-third shall be reserved for domestic Mutual Funds, subject to valid Bids being received from domestic Mutual Funds at or above the Anchor Investor Allocation Price. In the event of under-subscription, or non-allocation in the Anchor Investor Portion, the balance Equity Shares shall be added to the Net QIB Portion (excluding the Anchor Investor Portion) ("**Net QIB Portion**"). Further, 5% of the Net QIB Portion shall be available for allocation on a proportionate basis only to Mutual Funds, and the remainder of the Net QIB Portion shall be available for allocation on a proportionate basis to all QIBs other than Anchor Investors, including Mutual Funds, subject to valid Bids being received at or above the Offer Price. Further, not more than 15% of the Net Offer shall be available for allocation on a proportionate basis to Non-Institutional Investors of which (a) one-third of such portion shall be reserved for applicants with application size of more than ₹0.20 million and up to ₹1.00 million; and (b) two-third of such portion shall be reserved for applicants with application size of more than ₹1.00 million, provided that the unsubscribed portion in either of such sub-categories may be allocated to applicants in the other sub-category of Non-Institutional Bidders and not more than 10% of the Net Offer shall be available for allocation to Retail Individual Bidders in accordance with the SEBI ICDR Regulations, subject to valid Bids being received at or above the Offer Price. All potential Bidders (except Anchor Investors) are required to mandatorily utilise the Application Supported by Blocked Amount ("**ASBA**") process providing details of their respective ASBA accounts, and UPI ID (in case of UPI Bidders) if applicable, in which the corresponding Bid Amounts will be blocked by the SCSBs or by the Sponsor Bank(s) under the UPI Mechanism, as applicable, to the extent of the respective Bid Amounts. Anchor Investors are not permitted to participate in the Offer through the ASBA process. For details, see "***Offer Procedure***" beginning on page 434 of the RHP.

**Bidders/Applicants should ensure that DP ID, PAN and the Client ID and UPI ID (for UPI Bidders bidding through UPI Mechanism) are correctly filled in the Bid cum Application Form. The DP ID, PAN and Client ID provided in the Bid cum Application Form should match with the DP ID, PAN, Client ID and UPI ID available (for UPI Bidders bidding through the UPI Mechanism) in the Depository database, otherwise, the Bid cum Application Form is liable to be rejected. Bidders/Applicants should ensure that the beneficiary account provided in the Bid cum Application Form is active. Bidders/Applicants should note that on the basis of the PAN, DP ID, Client ID and UPI ID (for UPI Bidders bidding through the UPI mechanism) as provided in the Bid cum Application Form, the Bidder/Applicant may be deemed to have authorized the Depositories to provide to the Registrar to the Offer, any requested Demographic Details of the Bidder/Applicant as available on the records of the depositories. These Demographic Details may be used, among other things, for giving Allotment Advice or unblocking of ASBA Account or for other correspondence(s) related to the Offer. Bidders/Applicants are advised to update any changes to their Demographic Details as available in the records of the Depository Participant to ensure accuracy of records. Any delay resulting from failure to update the Demographic Details would be at the Bidders/Applicants' sole risk.**

**Investors must ensure that their PAN is linked with Aadhaar and are in compliance with the notification issued by Central Board of Direct Taxes notification dated February 13, 2020 and read with press releases dated June 25, 2021, September 17, 2021, and CBDT circular no. 7 of 2022, dated March 30, 2022 read with press release dated March 28, 2023 and any subsequent press releases in this regard.**

**CONTENTS OF THE MEMORANDUM OF ASSOCIATION OF OUR COMPANY AS REGARDS ITS OBJECTS:** For information on the main objects of our Company, investors are requested to see "***History and Certain Corporate Matters***" on page 194 of the RHP. The Memorandum of Association of our Company is a material document for inspection in relation to the Offer. For further details, see "***Material Contracts and Documents for Inspection***" on page 477 of the RHP.

**LIABILITY OF THE MEMBERS OF OUR COMPANY:** Limited by shares.

**AMOUNT OF SHARE CAPITAL OF OUR COMPANY AND CAPITAL STRUCTURE:** As on the date of the RHP, the authorised share capital of our Company is ₹ 100,000,000,000 divided into 10,000,000,000 Equity Shares of face value of ₹10 each. The issued, subscribed and paid-up Equity share capital of our Company is ₹ 46,813,284,130 divided into 4,681,328,413 Equity Shares of face value of ₹ 10 each. For details of the capital structure of the Company, see "***Capital Structure***" beginning on page 95 of the RHP.

**NAMES OF THE INITIAL SIGNATORIES TO THE MEMORANDUM OF ASSOCIATION OF THE COMPANY AND THE NUMBER OF EQUITY SHARES SUBSCRIBED BY THEM:** The initial signatories of the Memorandum of Association of the Company were Sagility B.V. and Sagility Holdings B.V. For details of the share capital history and capital structure of our Company see "***Capital Structure***" beginning on page 95 of the RHP.

**LISTING:** The Equity Shares that will be offered through the Red Herring Prospectus are proposed to be listed on BSE and NSE. Our Company has received in-principle approvals from BSE and NSE for listing of the Equity Shares pursuant to their letters each dated September 6, 2024. For the purposes of this Offer, NSE shall be the Designated Stock Exchange. A signed copy of the Red Herring Prospectus has been filed with the RoC and a copy of the Prospectus shall be delivered to the RoC for filing in accordance with Sections 26(4) and 32 of the Companies Act, 2013.

**DISCLAIMER CLAUSE OF SECURITIES AND EXCHANGE BOARD OF INDIA ("SEBI"):** SEBI only gives its observations on the offer documents and this does not constitute approval of either the Offer or the specified securities stated in the Offer Document. The investors are advised to refer to page 410 of the RHP for the full text of the disclaimer clause of SEBI.

**DISCLAIMER CLAUSE OF BSE:** It is to be distinctly understood that the permission given by BSE Limited should not in any way be deemed or construed that the RHP has been cleared or approved by BSE Limited nor does it certify the correctness or completeness of any of the contents of the RHP. The investors are advised to refer to the page 412 of the RHP for the full text of the disclaimer clause of BSE.

**DISCLAIMER CLAUSE OF NSE (the Designated Stock Exchange):** It is to be distinctly understood that the permission given by NSE should not in any way be deemed or construed that the Offer Document has been cleared or approved by NSE nor does it certify the correctness or completeness of any of the contents of the Offer Document. The investors are advised to refer to page 413 of the RHP for the full text of the disclaimer clause of NSE.

**GENERAL RISKS:** Investments in equity and equity-related securities involve a degree of risk and investors should not invest any funds in this Offer unless they can afford to take the risk of losing their entire investment. Investors are advised to read the risk factors carefully before taking an investment decision in this Offer. For taking an investment decision, investors must rely on their own examination of the Company and this Offer, including the risks involved. The Equity Shares have not been recommended or approved by the SEBI, nor does SEBI guarantee the accuracy or adequacy of the contents of the Red Herring Prospectus. Specific attention of the investors is invited to "***Risk Factors***" on page 40 of the RHP.

**ASBA*** | **Simple, Safe, Smart way of Application!!!**

*Applications Supported by Blocked Amount ("**ASBA**") is a better way of applying to offers by simply blocking the fund in the bank account. For further details, check section on ASBA.
**Mandatory in public issues.**
**No cheque will be accepted.**

UPI — UNIFIED PAYMENTS INTERFACE

**UPI-Now available in ASBA for Retail Individual Investors and Non Institutional Investor applying in public issues where the application amount is up to ₹ 500,000, applying through Registered Brokers, Syndicate, CDPs & RTAs. Retail Individual Investors and Non-Institutional Investors also have the option to submit the application directly to the ASBA Bank (SCSBs) or to use the facility of linked online trading, demat and bank account. Investors are required to ensure that the bank account used for bidding is linked to their PAN. Bidders must ensure that their PAN is linked with Aadhaar and are in compliance with CBDT notification dated February 13, 2020 and press release dated June 25, 2021 read with press release dated September 17, 2021 and CBDT circular no. 7 of 2022, dated March 30, 2022 read with press release dated March 28, 2023.**

*ASBA has to be availed by all the investors except Anchor Investors. UPI may be availed by (i) Retail Individual Investors in the Retail Category; (ii) Non-Institutional Investors with an application size of up to ₹ 500,000 in the Non-Institutional Portion. For details on the ASBA and UPI process, please refer to the details given in the Bid Cum Application Form and abridged prospectus and also please refer to the section "**Offer Procedure**" on page 434 of the RHP. The process is also available on the website of Association of Investment Bankers of India ("**AIBI**") and Stock Exchanges and in the General Information Document. The Bid Cum Application Form and the Abridged Prospectus can be downloaded from the websites of BSE Limited ("**BSE**") and National Stock Exchange of India Limited ("**NSE**", and together with BSE, the "**Stock Exchanges**") and can be obtained from the list of banks that is displayed on the website of SEBI at www.sebi.gov.in/sebiweb/other/OtherAction.do?doRecognisedFpi=yes&intmId=35 and https://www.sebi.gov.in/sebiweb/other/OtherAction.do?doRecognisedFpi=yes &intmId=43, respectively as updated from time to time. For the list of UPI apps and banks live on IPO, please refer to the link: www.sebi.gov.in. UPI Bidders Bidding using the UPI Mechanism may apply through the SCSBs and mobile applications whose names appear on the website of SEBI, as updated from time to time. Axis Bank Limited and ICICI Bank Limited have been appointed as the Sponsor Banks for the Offer, in accordance with the requirements of SEBI circular dated November 1, 2018 as amended. For Offer related queries, please contact the BRLMs on their respective email IDs as mentioned below. For UPI related queries, investors can contact NPCI at the toll free number: 18001201740 and mail Id: ipo.upi@npci.org.in.*

**BOOK RUNNING LEAD MANAGERS TO THE OFFER**

ICICI Securities
**ICICI SECURITIES LIMITED**
ICICI Venture House,
Appasaheb Marathe Marg, Prabhadevi,
Mumbai – 400 025, Maharashtra, India
**Tel:** +91 22 6807 7100
**Email:** sagility.ipo@icicisecurities.com
**Investor grievance email:** customercare@icicisecurities.com
**Website:** www.icicisecurities.com
**Contact person:** Hitesh Malhotra / Abhijit Diwan
**SEBI registration no:** INM000011179

IIFL CAPITAL
**IIFL CAPITAL SERVICES LIMITED**
***(Formerly known as IIFL Securities Limited)***
24th Floor, One Lodha Place
Senapati Bapat Marg Lower Parel (West)
Mumbai 400 013 Maharashtra, India
**Tel:** + 91 22 4646 4728
**E-mail:** sagility.ipo@iiflcap.com
**Investor Grievance e-mail:** ig.ib@iiflcap.com
**Website:** www.iiflcap.com
**Contact person:** Yogesh Malpani /Pawan Kumar Jain
**SEBI Registration No.:** INM000010940

Jefferies
**JEFFERIES INDIA PRIVATE LIMITED**
16th Floor, Express Towers,
Nariman Point, Mumbai 400 021
Maharashtra, India
**Tel:** +91 22 4356 6000
**E-mail:** SagilityIndia.IPO@jefferies.com
**Investor grievance e-mail:** jipl.grievance@jefferies.com
**Website:** www. jefferies.com
**Contact Person:** Suhani Bhareja
**SEBI Registration:** INM000011443

J.P.Morgan
**J.P. MORGAN INDIA PRIVATE LIMITED**
J.P. Morgan Tower, Off CST Road,
Kalina, Santacruz East, Mumbai 400 098
Maharashtra, India
**Tel:** +91 22 6157 3000
**E-mail:** SAGILITY_IPO@jpmorgan.com
**Investor grievance e-mail:** investorsmb.jpmipl@jpmorgan.com
**Website:** www.jpmipl.com
**Contact Person:** Vidit Jain /Rishank Chheda
**SEBI Registration:** INM000002970

**REGISTRAR TO THE OFFER**

LINK Intime
**LINK INTIME INDIA PRIVATE LIMITED**
C-101, 1st Floor, 247 Park
L.B.S. Marg, Vikhroli West
Mumbai 400 083 Maharashtra, India
**Tel:** +91 810 811 4949
**E-mail:** sagility.ipo@linkintime.co.in
**Investor grievance e-mail:** sagility.ipo@linkintime.co.in
**Website:** www.linkintime.co.in
**Contact person:** Shanti Gopalkrishnan
**SEBI Registration No.:** INR000004058

**COMPANY SECRETARY AND COMPLIANCE OFFICER**

**SatishKumar Sakharayapattana Seetharamaiah**
**Company Secretary and Compliance Officer**
**Sagility India Limited**
No. 23 & 24, AMR Tech Park, Building 2A,
First Floor, Hongasandara Village, Off Hosur Road,
Bommanahalli, Bengaluru 560068, Karnataka, India
**E-mail:** investorservice@sagilityhealth.com
**Tel.:** +91- 80-7125 1500; **Website:** www.sagilityhealth.com

Investors may contact the Company Secretary and Compliance Officer or the Registrar to the Offer in case of any pre-Offer or post-Offer related problems, such as non-receipt of letters of Allotment, non-credit of Allotted Equity Shares in the respective beneficiary account, non-receipt of refund orders or non-receipt of funds by electronic mode. For all Offer related queries and for redressal of complaints, Investors may also write to the BRLMs.

**NOTICE TO INVESTORS: CORRIGENDUM TO THE RHP DATED OCTOBER 29, 2024, READ TOGETHER WITH PUBLIC NOTICE DATED OCTOBER 31, 2024 and CORRIGENDUM DATED NOVEMBER 5, 2024("CORRIGENDUM-I")**

This corrigendum ("**Corrigendum-II**") is with reference to the Red Hearing Prospectus dated October 29, 2024 (read together with public announcement dated October 31, 2024 as "**RHP**" and Corrigendum-I) filed in relation to the proposed Offer. Attention of investors is drawn to the following:
In the section titled *"Material Contracts and Documents for Inspection"* beginning on page 477 of the RHP, under the sub-heading Material Documents, point 4, 5 and 41 should be read as:
"4. Resolutions of the Board dated June 25, 2024, and the IPO Committee dated June 28, 2024 approving the Draft Red Herring Prospectus
5. Resolutions of the IPO Committee dated June 25, 2024 and the Board of Directors dated October 29, 2024, taking on record the Offer for Sale
41. Tripartite agreement dated May 22, 2024, amongst our Company, CDSL and Registrar to the Offer."
The RHP shall be read in conjunction with this Corrigendum-II. The information provided above supersedes the information in the RHP to the extent inconsistent with the information in the RHP. Further, we undertake to suitably update the sections titled *"Capital Structure"*, *"Summary of the Offer Document"*, *"Other Regulatory and Statutory Disclosures"* and *"Terms of the Offer"* in the Prospectus for the above-mentioned updates.
All capitalized terms used herein but not defined shall have the meaning ascribed to such term in the RHP.

**AVAILABILITY OF THE RHP:** Investors are advised to refer to the RHP and the *"Risk Factors"* beginning on page 40 of the RHP before applying in the Offer. A copy of the RHP will be made available on the website of SEBI at www.sebi.gov.in and is available on the websites of the BRLMs, ICICI Securities Limited at www.icicisecurities.com, IIFL Capital Services Limited *(Formerly known as IIFL Securities Limited)* at www.iiflcap.com, Jefferies India Private Limited at www. jefferies.com and J.P. Morgan India Private Limited at www.jpmipl.com, the website of the Company, **SAGILITY INDIA LIMITED** at www.sagilityhealth.com and the websites of the Stock Exchanges, for BSE at www.bseindia.com and for NSE Limited at www.nseindia.com.

**AVAILABILITY OF THE ABRIDGED PROSPECTUS:** A copy of the Abridged Prospectus shall be available on the website of the Company, the BRLMs and the Registrar to the Offer at www.sagilityhealth.com, www.icicisecurities.com, www.iiflcap.com, www. jefferies.com, www.jpmipl.com and www.linkintime.co.in, respectively.

**AVAILABILITY OF BID CUM APPLICATION FORM:** Bid cum Application Form can be obtained from the Registered Office of our Company, **SAGILITY INDIA LIMITED:** Tel: +91- 80-7125 1500; **BRLMs:** ICICI Securities Limited, Tel: +91 22 6807 7100; IIFL Capital Services Limited *(Formerly known as IIFL Securities Limited)*, Tel: + 91 22 4646 4728; Jefferies India Private Limited, Tel: +91 22 4356 6000 and J.P. Morgan India Private Limited, Tel: +91 22 6157 3000 and at selected locations of Sub-Syndicate Members (as given below), Registered Brokers, SCSBs, Designated RTA Locations and Designated CDP Locations for participating in the Offer. Bid cum Application Forms will also be available on the websites of the Stock Exchanges at www.bseindia.com and www.nseindia.com and at all the Designated Branches of SCSBs, the list of which is available on the websites of the Stock Exchanges and SEBI.

**SUB-SYNDICATE MEMBERS:** Anand Rathi Share & Stock Brokers Ltd., Axis Capital Ltd., Centrum Wealth Management Ltd., Choice Equity Broking Private Limited, DB (International) Stock Brokers Ltd., Eureka Stock & Share Broking Services Ltd., Finwizard Technology Private Limited, HDFC Securities Ltd., J M Financial Services Ltd., J.P. Morgan India Private Limited, Jobanputra Fiscal Services Pvt. Ltd., Kotak Securities Ltd., LKP Securities Ltd., Inventure Growth & Securities Ltd., Motilal Oswal Financial Services Limited, Motilal Oswal Securities Ltd.,Nuvama Wealth and Investment Limited (Edelweiss Broking Limited), Prabhudas Liladhar Pvt Ltd., Pravin Ratilal Share and Stock Brokers Ltd., RR Equity Brokers Pvt Ltd., SBICAP Securities Limited, Sharekhan Ltd., SMC Global Securities Ltd., Systematix Shares and Stocks (India) Limited, Trade Bulls Securities (P) Ltd., Way2wealth brokers Pvt Ltd. and Yes Securities (India) Ltd.

**ESCROW COLLECTION BANK(S)/ REFUND BANK(S)/ SPONSOR BANK:** Axis Bank Limited. | **PUBLIC OFFER ACCOUNT BANK/ SPONSOR BANK:** ICICI Bank Limited.

**UPI:** UPI Bidders can also Bid through UPI Mechanism.

**All capitalised terms used herein and not specifically defined shall have the same meaning as ascribed to them in the RHP.**

**Place:** Bengaluru
**Date:** November 6, 2024

For **SAGILITY INDIA LIMITED**
On behalf of the Board of Directors
Sd/-
SatishKumar Sakharayapattana Seetharamaiah
Company Secretary & Compliance Officer

**SAGILITY INDIA LIMITED** is proposing, subject to receipt of requisite approvals, market conditions and other considerations, to make an initial public offer of its Equity Shares and has filed a red herring prospectus dated October 29, 2024 (read together with public announcement dated October 31, 2024 and Corrigendum-I dated November 5, 2024) with the RoC. The RHP is made available on the website of the SEBI at www.sebi.gov.in as well as on the website of the BRLMs i.e., ICICI Securities Limited at www.icicisecurities.com, IIFL Capital Services Limited *(Formerly known as IIFL Securities Limited)* at www.iiflcap.com, Jefferies India Private Limited at www. jefferies.com and J.P. Morgan India Private Limited at www.jpmipl.com, the website of the NSE at www.nseindia.com and the website of the BSE at www.bseindia.com and the website of the Company at www.sagilityhealth.com. Any potential investor should note that investment in equity shares involves a high degree of risk and for details relating to such risks, please see the section *"Risk Factors"* beginning on page 40 of the RHP. Potential investors should not rely on the DRHP for making any investment decision but should only rely on the information included in the RHP filed by the Company with the RoC (read together with public announcement dated October 31, 2024 and Corrigendum-I dated November 5, 2024).

The Equity Shares have not been and will not be registered under the United States Securities Act of 1933, as amended ("**U.S. Securities Act**") or any state securities laws in the United States, and unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable U.S. state securities laws. Accordingly, the Equity Shares are being offered and sold (i) in the United States solely to "qualified institutional buyers" (as defined in Rule 144A under the U.S. Securities Act) pursuant to Section 4(a) of the U.S. Securities Act and (ii) outside the United States in offshore transactions in reliance on Regulation S of the U.S. Securities Act and the applicable laws of each jurisdiction where such offers and sales are made.

CONCEPT


## ಸಮಾಚಾರ ಸಣ್ಣದಲ್ಲ

### ಹೆಸರುಕಾಳು ಹೆಚ್ಚುವರಿ ಖರೀದಿಗೆ ಕೇಂದ್ರ ಸಮ್ಮತಿ

**ದೆಹಲಿ:** ರೈತರ ಅನುಕೂಲವಾಗಲೆಂದು ರಾಜ್ಯದಲ್ಲಿ ಬೆಂಬಲ ಬೆಲೆಯಲ್ಲಿ ಹೆಚ್ಚುವರಿ ಹೆಸರು ಕಾಳು ಖರೀದಿಗೆ ಕೇಂದ್ರ ಸರಕಾರ ಅನುಮತಿ ನೀಡಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ. ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಈವರೆಗೆ 22,215 ಟನ್ ಹೆಸರುಕಾಳು ಖರೀದಿಸಲಾಗಿದೆ. ರಾಜ್ಯದಲ್ಲಿ ಹೆಸರು ಕಾಳು ಹೆಚ್ಚುವರಿಯಾಗಿ ಬೆಳೆದಿರುವ ಹಿನ್ನೆಲೆ ರೈತರು ಸರಕಾರಕ್ಕೆ ಮನವಿ ಮಾಡಿದ್ದರು. ಹಾಗಾಗಿಯೇ ಹೆಚ್ಚುವರಿಯಾಗಿ 16,105 ಟನ್ ಹೆಸರುಕಾಳು ಖರೀದಿಸಲು ಕೃಷಿ ಸಚಿವರ ಜತೆ ಮಾತುಕತೆ ನಡೆಸಲಾಗಿದೆ. ಕೃಷಿ ಸಚಿವಾಲಯವೂ ಅನುಮತಿ ನೀಡಿದೆ. ಸರಕಾರದ ಈ ನಿರ್ಧಾರದಿಂದಾಗಿ ಈ ಬಾರಿ ಒಟ್ಟು 38,320 ಟನ್ ಹೆಸರುಕಾಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿದಂತಾಗಲಿದೆ ಎಂದು ಸಚಿವರು ವಿವರಿಸಿದ್ದಾರೆ.

### ರಾತ್ರೋರಾತ್ರಿ ಕಟ್ಟಡ ನೆಲಸಮ ಮಾಡುವಂತಿಲ್ಲ

**ದೆಹಲಿ:** ರಸ್ತೆ ವಿಸ್ತರಣೆ ಮತ್ತು ಒತ್ತುವರಿ ತೆರವು ಸಂದರ್ಭದಲ್ಲಿ ಸಂಬಂಧಪಟ್ಟವರಿಗೆ ಮುಂಚಿತವಾಗಿ ನೋಟಿಸ್ ನೀಡದೇ, ಕಟ್ಟಡಗಳನ್ನು ರಾತ್ರೋರಾತ್ರಿ ನೆಲಸಮಗೊಳಿಸುವಂತಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ವಿಚಾರವಾಗಿ ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬುಧವಾರ ನಿರ್ದೇಶನ ನೀಡಿದೆ. 2019ರಲ್ಲಿ ಕಟ್ಟಡವೊಂದನ್ನು ಅಕ್ರಮವಾಗಿ ನೆಲಸಮಗೊಳಿಸಿದ್ದಕ್ಕಾಗಿ ಉತ್ತರ ಪ್ರದೇಶ ಸರಕಾರವನ್ನು ತರಾಟೆಗೆ ತೆಗೆದುಕೊಂಡ ವೇಳೆ ಈ ನಿರ್ದೇಶನ ನೀಡಿದೆ. ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾ. ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, ರಸ್ತೆ ವಿಸ್ತರಣೆಗಾಗಿ 2019ರಲ್ಲಿ ನೆಲಸಮಗೊಳಿಸಿದ ಮನೆಯ ಮಾಲೀಕನಿಗೆ 25 ಲಕ್ಷ ರು. ಪರಿಹಾರ ನೀಡುವಂತೆ ಉತ್ತರ ಪ್ರದೇಶ ಸರಕಾರಕ್ಕೆ ನಿರ್ದೇಶಿಸಿತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಈ ಪೀಠದಲ್ಲಿದ್ದರು. ರಸ್ತೆ ವಿಸ್ತರಣೆ ಕುರಿತ ನಿರ್ದೇಶನಗಳನ್ನು ಒಳಗೊಂಡ ತನ್ನ ಆದೇಶದ ಪ್ರತಿಗಳನ್ನು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸುವಂತೆ ರಿಜಿಸ್ಟ್ರಾರ್ (ನ್ಯಾಯಿಕ) ಅವರಿಗೆ ನ್ಯಾಯಪೀಠ ಸೂಚಿಸಿತು.

# ಹಿರಿಯ ಸಾಹಿತಿ ಕೃಷ್ಣಮೂರ್ತಿ, ಇಂದಿರಾ ಹೆಗಡೆ ವರ್ಷದ ಗೌರವ ಪ್ರಶಸ್ತಿಗೆ ಆಯ್ಕೆ

## 2022ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಪ್ರಕಟ

**ಬೆಂಗಳೂರು:** ಹಿರಿಯ ಸಾಹಿತಿಗಳಾದ ಅಗ್ರಹಾರ ಕೃಷ್ಣಮೂರ್ತಿ, ಇಂದಿರಾ ಹೆಗಡೆ, ಆರ್.ಕೆ.ಹುಡುಗಿ, ರಂಜಾನ್ ದರ್ಗಾ ಹಾಗೂ ತುಂಬಾಡಿ ರಾಮಯ್ಯ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2022ನೇ ಸಾಲಿನ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಗಮನಾರ್ಹ ಸೇವೆ ಪರಿಗಣಿಸಿ ಐದು ಮಂದಿ ಹಿರಿಯ ಸಾಹಿತಿಗಳಿಗೆ 2022ನೇ ವರ್ಷದ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಐವತ್ತು ಸಾವಿರ ನಗದು, ಪ್ರಶಸ್ತಿ ಫಲಕ, ಪ್ರಮಾಣ ಪತ್ರ ಒಳಗೊಂಡಿದೆ ಎಂದು ತಿಳಿಸಿದ್ದಾರೆ.

2022ನೇ ಸಾಲಿನ ಸಾಹಿತ್ಯಶ್ರೀ ಪ್ರಶಸ್ತಿಗೆ ಹತ್ತು ಮಂದಿಯನ್ನು ಆಯ್ಕೆ ಮಾಡಲಾಗಿದ್ದು, ಈ ಬಾರಿ ಸೃಜನಶೀಲ ಸಾಹಿತ್ಯ ಸಾಧನೆಗೈದ ಐದು ಪ್ರಶಸ್ತಿಗಳು ಹಾಗೂ ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ನಾಲ್ಕು ಪ್ರಶಸ್ತಿ ಹಾಗೂ ಸಾಹಿತ್ಯ ಪರಿಚಾರಿಕೆಗೆ ಒಂದು ಪ್ರಶಸ್ತಿ ಸೇರಿದಂತೆ ಒಟ್ಟು ಹತ್ತು ಜನರು ಆಯ್ಕೆಯಾಗಿದ್ದಾರೆ. ಸಾಹಿತ್ಯಶ್ರೀ ಪ್ರಶಸ್ತಿಗೆ ಇಪ್ಪತ್ತೈದು ಸಾವಿರ ನಗದು, ಫಲಕ, ಪ್ರಮಾಣಪತ್ರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಸಾಹಿತ್ಯಶ್ರೀ ಪ್ರಶಸ್ತಿಗೆ ಸಾಹಿತಿಗಳಾದ, ಡಾ.ಬಂಜಗೆರೆ ಜಯಪ್ರಕಾಶ, ರೂಮಿ ಹರೀಶ್, ಡಾ.ಎಂ.ಜಿ.ಮಂಜುನಾಥ, ದಾಸನೂರು ಕೂಸಣ್ಣ, ಡಾ. ರಾಜಶೇಖರ ಹತಗುಂದಿ, ಎಚ್.ಎನ್.ಆರತಿ, ಡಾ. ಸಾರಿಕಾದೇವಿ ಕಾಳಗಿ, ಮಹೇಶ್ ಹರವೆ, ಅನಸೂಯ ಕಾಂಬ್ಳೆ, ಚಲಂ ಹಾಡ್ಲಹಳ್ಳಿ ಆಯ್ಕೆಯಾಗಿದ್ದಾರೆ.

ಕೆಲವು ಸಾಹಿತ್ಯ ಪ್ರಕಾರಗಳಿಗೆ ಸಾಹಿತ್ಯಾಸಕ್ತ ದಾನಿಗಳು ಸ್ಥಾಪಿಸಿರುವ ವಿವಿಧ ದತ್ತಿ ಬಹುಮಾನಗಳಿಗೆ ಹದಿನೆಂಟರಿಂದ ಇಪ್ಪತ್ತೆಂಟರ ಕವಿತೆಗಳುಗೆ ಅಕ್ಷಯ ಕಾಂತಬೈಲು, ಚಪಡ ಇದು ಅಕ್ಷರದ ಪಯಣಕ್ಕೆ ಡಾ. ಶ್ರೀಧರ ಎಚ್.ಜಿ., ಇದು ಬರಿ ಮಣ್ಣಲ್ಲಗೆ ಸಹನಾ ಕಾಂತಬೈಲು, ಹಾಕಿಮಾಂತ್ರಿಕ ಮೇಜರ್ ಧ್ಯಾನಚಂದ್‌ಗೆ ಡಾ.ನಾಗ ಎಚ್.ಹುಬ್ಳಿ, ಬೆಡಗು ಬಿನ್ನಾಣ(ಆಧುನಿಕ ಸಾಹಿತ್ಯ ವಿಮರ್ಶೆ)ಗೆ ಡಾ.ಪ್ರಸಾದಸ್ವಾಮಿ ಎಸ್., ಸೆಬಾಸ್ಟಿಯನ್ ಮತ್ತು ಸನ್ಸ್ ಗೆ ಸುಮಂಗಲಾ, ಬಯಲಲಿ ತೇಲುತ ತಾನುಗೆ ಅಕ್ಷಯ ಪಂಡಿತ್, ಅಸತ್ಯದ ಕೇಡುಗೆ ಡಾ.ಸುಶಿ ಕಾಡನಕುಪ್ಪೆ ಆಯ್ಕೆಯಾಗಿದ್ದಾರೆ.

### 2021ರ ಪುಸ್ತಕ ಬಹುಮಾನಕ್ಕೆ ಆಯ್ಕೆಯಾದವರುವರು

**2021ನೇ ವರ್ಷದ ಪುಸ್ತಕ ಬಹುಮಾನಕ್ಕೆ ರಾಗಿ ಕಾಳುಗೆ ಚೀಮನಹಳ್ಳಿ ರಮೇಶಬಾಬು, ದಡ ಸೇರಿದ ಕನಸುಗೆ ಡಾ.ಶೈಲೇಶ್ ಕುಮಾರ್ ಚೆನ್ನಭೈರಾದೇವಿ ಕರಿಮೆಣಸಿನ ರಾಣಿಯ ಅಕಳಂಕ ಚರಿತೆಗೆ ಡಾ.ಗಜಾನನ ಶರ್ಮ, ಗುಣಸಾಗರಿ ಮತ್ತು ಇತರ ಕತೆಗಳುಗೆ ಜಿ.ವಿ. ಆನಂದಮೂರ್ತಿ, ಮಹಾ ಮಹಿಮ ಎಡೆಯೂರು ಸಿದ್ದಲಿಂಗ ಶಿವಯೋಗಿಗೆ ಬಿ.ಆರ್.ಪೊಲೀಸ್ ಪಾಟೀಲ, ಎಲ್ಲಿಂದಲೋ ಬಂದವರುಗೆ ಭಾರತಿ ಬಿ.ವಿ, ಬುದ್ಧಭಕ್ತರ ನಾಡಿನಲ್ಲಿಗೆ ಡಾ.ಎಸ್.ಬಿ.ಪದ್ಮಪ್ರಸಾದ್, ಅಕ್ಕಯ್‌ಗೆ ಡಾ.ಡೊಮಿನಿಕ್ ಡಿ, ಕಣ್ಣೋಟಗೆ ಡಾ.ಎಚ್.ಎಸ್. ಸತ್ಯನಾರಾಯಣ, ವಜ್ರದ ಕಿರೀಟಗೆ ಸಿ.ವಿ.ಶೇಷಾದ್ರಿ ಹೊಳವನಹಳ್ಳಿ, ಸೆರೆಂಡಿಪಿಟಿ ವೈದ್ಯಲೋಕದ ಅದ್ಭುತ ಆಕಸ್ಮಿಕಗಳುಗೆ ಡಾ. ಕಿರಣ್ ವಿ.ಎಸ್., ಸಂಕೇತ ವ್ಯಾಕರಣ ಮತ್ತು ಪದಕೋಶಕ್ಕೆ ಡಾ.ಕೆ.ಎಸ್.ಪ್ರಭಾಕರ, ಪರ್ದಾ ಮತ್ತು ಪಾಳಿಗಮಿಗೆ ದಾದಾಪೀರ್ ಅಸಾದಿ, ವಚನ ದೀಪಿಕೆಗೆ ಡಾ.ಜಿ.ಕೃಷ್ಣಪ್ಪ, ಊರು ಹೇಳದ ಕಥೆಗೆ ಯಶಸ್ವಿನಿ ಕದ್ರಿ, ಆಯ್ಕೆಯಾಗಿದ್ದಾರೆ.**

# ಗಡಿಯಾರ ಚಿಹ್ನೆಯ ಬಗ್ಗೆ ಪ್ರಕಟಣೆ ನೀಡಿ

**ದೆಹಲಿ:** ಪಕ್ಷಕ್ಕೆ ನೀಡಿರುವ ಗಡಿಯಾರದ ಚಿಹ್ನೆಯ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ ಎಂಬುದನ್ನು ದಿನಪತ್ರಿಕೆಗಳ ಮೂಲಕ ಜನರಿಗೆ ತಿಳಿಸಬೇಕು ಎಂದು ಅಜಿತ್ ಪವಾರ್ ನೇತೃತ್ವದ ಎನ್ಸಿಪಿಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚನೆ ನೀಡಿದೆ.

ಕೋರ್ಟ್ ಆದೇಶ ಬಂದ 36 ಗಂಟೆಗಳಲ್ಲಿ ಈ ಬಗ್ಗೆ ಪತ್ರಿಕೆಗಳ ಮೂಲಕ ಪ್ರಕಟಣೆ ನೀಡಬೇಕು, ಮರಾಠಿ ಪತ್ರಿಕೆಗಳಲ್ಲಿಯೂ ಈ ಪ್ರಕಟಣೆ ಇರಬೇಕು ಎಂದು ಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ದೀಪಾಂಕರ್ ದತ್ತ ಮತ್ತು ಉಜ್ವಲ್ ಭೂಯಾನ್ ಅವರು ಇರುವ ಪೀಠವು ಶರದ್ ಪವಾರ್ ಮತ್ತು ಅಜಿತ್ ಪವಾರ್ ನೇತೃತ್ವದ ಬಣಗಳು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿದೆ. ನೀವು ನಿಮ್ಮ ಶಕ್ತಿಯನ್ನು ಕೋರ್ಟ್‌ನಲ್ಲಿ ವ್ಯರ್ಥ ಮಾಡಬೇಡಿ. ಮತದಾರರ ಬಳಿ ಹೋಗಿ, ಅವರ ಮನ ಒಲಿಸುವ ಕೆಲಸ ಮಾಡಿ ಎಂದು ಪೀಠವು ಹೇಳಿತು.

**ಬಿಜೆಪಿ ಕಾರ್ಯಕ್ರಮದಲ್ಲಿ ಪ್ರಚೋದನಾಕಾರಿ ಭಾಷಣ**

# ಮಿಥುನ್ ಚಕ್ರವರ್ತಿ ಮೇಲೆ ಎಫ್‌ಐಆರ್

**ಕೋಲ್ಕತ್ತ:** ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ, ಬಿಜೆಪಿ ನಾಯಕ ಮಿಥುನ್ ಚಕ್ರವರ್ತಿ ಅವರು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಕಾರ್ಯಕ್ರಮವೊಂದರಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿಸಿ ಬಿಧಾನನಗರ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಅಕ್ಟೋಬರ್ 27ರಂದು ಸಾಲ್ಟ್ ಲೇಕ್ ಪ್ರದೇಶದಲ್ಲಿ ನಡೆದ ಬಿಜೆಪಿ ಕಾರ್ಯಕ್ರಮದಲ್ಲಿ ಮಿಥನ್ ಚಕ್ರವರ್ತಿ ಪ್ರಚೋದನಕಾರಿ ಭಾಷಣ ಮಾಡಿದ್ದರು. ಆ ಸಂಬಂಧ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನ ಕುರಿತು ನಡೆದ ಈ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಉಪಸ್ಥಿತರಿದ್ದರು.

ಈ ಕುರಿತು ಮಿಥುನ್ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ. ಆದರೆ, ಈ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಸುಕಾಂತ ಮಜುಂದಾರ್, ಇದು ಸೇಡಿನ ರಾಜಕಾರಣ. ಮಿಥುನ್ ಅವರ ಭಾಷಣದಲ್ಲಿ ಪ್ರಚೋದನಾರಿ ಅಂಶವೇ ಇರಲಿಲ್ಲ. ಪೊಲೀಸರು ಇದನ್ನು ರಾಜಕೀಯ ಸಾಧನವಾಗಿ ಬಳಸಿಕೊಂಡು, ಬೆದರಿಸುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

2026ರ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಸಿಂಹಾಸನ ಬಿಜೆಪಿಗೆ ದೊರೆಯುತ್ತಿದೆ. ಈ ಗುರಿ ಸಾಧನೆಗೆ ನಾವು ಎಲ್ಲವನ್ನೂ ಮಾಡುತ್ತೇವೆ ಎಂದು ಮಿಥುನ್ ಭಾಷಣದಲ್ಲಿ ಹೇಳಿದ್ದರು ಎಂದು ಎಚ್ಚರಿಸಿದ್ದರು.

# ಇಪ್ಪತ್ತೆಂಟು ವಾರಗಳ ಭ್ರೂಣದ ಗರ್ಭಪಾತಕ್ಕೆ ಕೋರ್ಟ್ ಅನುಮತಿ

## 13 ವರ್ಷದ ಅತ್ಯಾಚಾರ ಸಂತ್ರಸ್ತೆ | ವಾಣಿವಿಲಾಸ ಆಸ್ಪತ್ರೆಗೆ ನಿರ್ದೇಶನ

**ಬೆಂಗಳೂರು:** ಅತ್ಯಾಚಾರಕ್ಕೊಳಗಾಗಿ 28 ವಾರಗಳ ಗರ್ಭಧರಿಸಿರುವ 13 ವರ್ಷದ ಬಾಲಕಿಯ ಗರ್ಭಪಾತಕ್ಕೆ ಹೈಕೋರ್ಟ್ ಅನುಮತಿ ನೀಡಿದೆ. ಜತೆಗೆ ಪ್ರಕರಣದ ತನಿಖೆ ಸಂಬಂಧ ಡಿಎನ್‌ಎ ಪರೀಕ್ಷೆಗಾಗಿ ಭ್ರೂಣ ಸಂರಕ್ಷಣೆ ಮಾಡಲು ನಗರದ ವಾಣಿವಿಲಾಸ ಆಸ್ಪತ್ರೆಗೆ ನಿರ್ದೇಶನ ನೀಡಿದೆ.

13 ವರ್ಷದ ಸಂತ್ರಸ್ತೆಯ ಗರ್ಭಪಾತಕ್ಕೆ ವಾಣಿವಿಲಾಸ ಆಸ್ಪತ್ರೆಗೆ ನಿರ್ದೇಶನ ನೀಡುವಂತೆ ಕೋರಿ ಸಂತ್ರಸ್ತೆಯ ತಾಯಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕ ಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಸಂತ್ರಸ್ತೆಯ ಜೀವಕ್ಕೆ ಹಾನಿಯಾಗದಂತೆ ಗರ್ಭಪಾತ ಮಾಡುವ ಸಂಬಂಧ ವೈದ್ಯರಿಂದ ಅಗತ್ಯ ಪರೀಕ್ಷೆಗಳ ಬಳಿಕ ನಿರ್ಧರಿಸಿ ಕ್ರಮಕ್ಕೆ ಮುಂದಾಗಬೇಕು. ಈ ಪ್ರಕ್ರಿಯೆಯಲ್ಲಿ ವೈದ್ಯಕೀಯ ಗರ್ಭಪಾತ ನಿಯಮಗಳು 1971ರ ಪ್ರಕಾರ ವೈದ್ಯಕೀಯ ಗರ್ಭಪಾತ ಚಿಕಿತ್ಸೆಗೆ ಹಣವನ್ನು ಸಂತ್ರಸ್ತೆಯಿಂದ ಪಡೆದುಕೊಳ್ಳದೇ ಸರಕಾರಿ ವೆಚ್ಚದಲ್ಲಿ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಕೈಗೊಳ್ಳಬೇಕು ಎಂದು ಪೀಠ ಹೇಳಿದೆ.

ಗರ್ಭಪಾದ ಭ್ರೂಣವನ್ನು ಡಿಎನ್‌ಎ ಪರೀಕ್ಷೆಗೆ ಅನುಕೂಲವಾಗುವಂತೆ ಸಂರಕ್ಷಿಸಿ ಅದರ ಮಾದರಿಯನ್ನು ಡಿಎನ್‌ಎ ಪರೀಕ್ಷೆಗಾಗಿ ಬೆಂಗಳೂರಿನ ಕೇಂದ್ರ ವಿಧಿವಿಜ್ಞಾನ ಪರೀಕ್ಷಾ ಪ್ರಯೋಗಾಲಯಕ್ಕೆ ರವಾನಿಸಬೇಕು ಎಂದು ವಾಣಿ ವಿಲಾಸ ಆಸ್ಪತ್ರೆಗೆ ನಿರ್ದೇಶನ ನೀಡಿದೆ. ಗರ್ಭಪಾತ ಮತ್ತು ಆಕೆಯ ಆರೋಗ್ಯ ಪರೀಕ್ಷೆಗಾಗಿ ಸಂತ್ರಸ್ತೆ ಹಾಗೂ ಆಕೆಯ ಕುಟುಂಬಸ್ಥರಿಗೆ ವಾಣಿ ವಿಲಾಸ ಆಸ್ಪತ್ರೆಗೆ ಹೋಗಿ ಬರುವುದಕ್ಕೆ ಉಚಿತವಾಗಿ ವಾಹನ ವ್ಯವಸ್ಥೆ ಮಾಡಬೇಕು. ವೈದ್ಯರ ಸಲಹೆಯ ಮೇರೆಗೆ ಹೆಚ್ಚುವರಿ ಚಿಕಿತ್ಸೆ ಅಗತ್ಯವಿದ್ದಲ್ಲಿ ವಾಹನ ವ್ಯವಸ್ಥೆ ಕಲ್ಪಿಸಬೇಕು ಎಂದು ಚಂದ್ರಾಲೇಔಟ್ ಬಡಾವಣೆ ಪೊಲೀಸರಿಗೆ ಸೂಚನೆ ನೀಡಿದೆ.

ಸಂತ್ರಸ್ತೆಯ ಚಿಕಿತ್ಸೆ ಮತ್ತು ಮುಂದಿನ ಆರೋಗ್ಯ ಸುಧಾರಣೆಗಾಗಿ ಬೆಂಗಳೂರು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ 3 ಲಕ್ಷ ರು. ಹಣ ಮಂಜೂರು ಮಾಡಬೇಕು ಎಂದು ನಿರ್ದೇಶಿಸಿದೆ. ಪ್ರಕರಣದಲ್ಲಿ ಪ್ರತಿವಾದಿಗಳಾಗಿರುವ ಚಂದ್ರಾಲೇಔಟ್ ಬಡಾವಣೆ ಪೊಲೀಸರು, ವಾಣಿವಿಲಾಸ ಆಸ್ಪತ್ರೆ ವೈದ್ಯಾಧಿಕಾರಿಗಳು, ಮಕ್ಕಳ ಕಲ್ಯಾಣ ಸಮಿತಿ ಅಧಿಕಾರಿಗಳು ಆದೇಶದ ಅನುಪಾಲನಾ ವರದಿಯನ್ನು ಮುಂದಿನ ಎರಡು ವಾರಗಳಲ್ಲಿ ಸಲ್ಲಿಸಬೇಕು ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

### ಪ್ರಕರಣ ಹಿನ್ನೆಲೆ

**ಸುಮಾರು 13 ವರ್ಷದ ಅಪ್ರಾಪ್ತೆ ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾಗಿದ್ದರು. ಈ ವಿಚಾರ ಗೊತ್ತಾದ ತಕ್ಷಣ ಆಕೆಯ ತಾಯಿ ಆರೋಪಿಗಳ ವಿರುದ್ಧ ಪೋಕ್ಸೋ ಕಾಯಿದೆಯಡಿ ದೂರು ದಾಖಲಿಸಿದ್ದರು. ಜತೆಗೆ, ಸಂತ್ರಸ್ತೆಗೆ ಗರ್ಭಪಾತ ಮಾಡಲು ವಾಣಿವಿಲಾಸ ಆಸ್ಪತ್ರೆಗೆ ನಿರ್ದೇಶನ ನೀಡಬೇಕು ಮತ್ತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕ್ಕಾಗಿ ಭ್ರೂಣವನ್ನು ಡಿಎನ್‌ಎ ಪರೀಕ್ಷೆಗಾಗಿ ಸಂಗ್ರಹ ಮಾಡಲು ಸೂಚನೆ ನೀಡಬೇಕು ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.**

ವಿಶ್ವವಾಣಿ
@vishwavaninews
ಬೆಂಗಳೂರು
ಗುರುವಾರ
07 | 11 | 2024
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ

**ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಗುಣಮಟ್ಟದ ಕಾಲೇಜುಗಳನ್ನು ಆರಂಭಿಸಿ, ಆ ಕ್ಷೇತ್ರದಲ್ಲಿ ಅನುಪಮ ಕೊಡುಗೆ ನೀಡುತ್ತಿರುವ ಪ್ರೊ. ಎಂ.ಆರ್.ದೊರೆಸ್ವಾಮಿಯವರ ಜನ್ಮದಿನ ಇಂದು. ಸರಕಾರಿ ಶಾಲೆಗಳ ದತ್ತು, ತಾಂತ್ರಿಕ ವಿದ್ಯಾಭ್ಯಾಸದ ಸಿಲಬಸ್‌ನಲ್ಲಿ ಮಹನೀಯರ ಅಧ್ಯಯನದ ಪಠ್ಯ ಇಂತಹ ಕ್ರಾಂತಿಕಾರಕ ಹೆಜ್ಜೆಗಳನ್ನು ಇಟ್ಟಿರುವ ದೊರೆಸ್ವಾಮಿಯವರು, ನಮ್ಮ ನಾಡಿಗೆ ಮಹತ್ತರ ಕೊಡುಗೆ ನೀಡಿದ್ದಾರೆ.**

# ಶಿಕ್ಷಣ ಕ್ಷೇತ್ರದಲ್ಲಿ ಹೊಸತನದ ಹರಿಕಾರ

**• ಡಾ. ವಿಜೇಂದ್ರ ಕುಮಾರ್ ಎಸ್.ಕೆ.**

ಭಾರತೀಯ ಗುರು-ಶಿಷ್ಯ ಪರಂಪರೆಯಲ್ಲಿ ಗುರು ಮತ್ತು ಶಿಷ್ಯರ ನಡುವಿನ ಸಂವಾದಕ್ಕೆ ಬೆಲೆ ಹೆಚ್ಚು. ಉಪನಿಷತ್ತಿಗಳು ಹುಟ್ಟಿರುವುದೇ ಅವರಿಬ್ಬರ ಸಂವಾದದ ಮೇಲೆ. ಈ ಕಲ್ಪನೆ ಅದ್ಭುತವಾಗಿದ್ದರೂ ಅದನ್ನು ಆಧುನಿಕ ಶಿಕ್ಷಣ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವುದು ಕಷ್ಟ. ಈಗಿನ ಶಿಕ್ಷಕರ ಜವಾಬ್ದಾರಿಗಳು, ವಿದ್ಯಾರ್ಥಿಗಳ ಸಂಖ್ಯೆ ಮತ್ತು ಆಧುನಿಕ ಸಾಮಾಜಿಕ ಪದ್ಧತಿಯಲ್ಲಿ ಪ್ರಾಯಶಃ ಈ ಗುರು ಶಿಷ್ಯ ಪರಂಪರೆಯನ್ನು ಮರಳಿ ತರುವುದು ಬಹು ಸವಾಲಿನ ಕೆಲಸ. ಆದರೆ ಆಧುನಿಕ ಶಿಕ್ಷಣ ಪದ್ಧತಿಯಲ್ಲೂ ಕೂಡ, ಈ ಪರಂಪರೆಯನ್ನು ಮೂಲ ರೂಪದಲ್ಲಲ್ಲದಿದ್ದರೂ ಕಾಲಕ್ಕೆ ತಕ್ಕಂತೆ ಬದಲಾದ ರೂಪದಲ್ಲಿ, ಇವತ್ತಿನ ಶೈಕ್ಷಣಿಕ ಜೀವನಕ್ಕನುಸಾರವಾಗಿ ತಂದ ಕೀರ್ತಿ ಪಿಇಎಸ್ ಸಂಸ್ಥೆಗಳ ಸಂಸ್ಥಾಪಕರು ಮತ್ತು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಪ್ರೊ. ಎಂ. ಆರ್. ದೊರೆಸ್ವಾಮಿಯವರಿಗೆ ಸಲ್ಲಬೇಕು. ದೊರೆಸ್ವಾಮಿಯವರ ಮೆಂಟರಿಂಗ್ ಕಲ್ಪನೆಯು ಗುರು-ಶಿಷ್ಯ ಪರಂಪರೆಯ ಮೂಲದಲ್ಲಿದೆ.

ಏಕೆಂದರೆ ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಣ ಬಾಂಧವ್ಯ ಏನಿದ್ದರೂ ತರಗತಿಗಳಿಗೆ ಮಾತ್ರ ಸೀಮಿತ. ಆದರೆ ದೊರೆಸ್ವಾಮಿಯವರು ಅದನ್ನು ವಿಸ್ತರಿಸಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಕ್ಷಕನೊಟ್ಟಿಗೆ ಕುಳಿತು, ತನ್ನ ಹಾಜರಾತಿಯ ಏರುಪೇರು, ವಿದ್ಯಾಭ್ಯಾಸದ ಕ್ರಮ, ಅಂಕಗಳಿಕೆಯ ವ್ಯತ್ಯಾಸ, ಕೌಶಲ್ಯದ ಬೆಳವಣಿಗೆ, ಹೀಗೆ ಹತ್ತು ಹಲವಾರು ವಿದ್ಯಾರ್ಥಿಗಳ ಉನ್ನತಿಗೆ ಅಗತ್ಯವಾದ ಕಲ್ಪನೆಗಳನ್ನು ಗುರು-ಶಿಷ್ಯರ ದ್ವಿಮುಖ ಸಂವಾದದಲ್ಲಿ ಹುಟ್ಟುಹಾಕಿ, ಅದನ್ನು ಯಶಸ್ವಿಯಾಗಿ ನಡೆಸಿದವರು. ಇದು, ಪಿಇಎಸ್ ನ ಸಾವಿರಾರು ವಿದ್ಯಾರ್ಥಿಗಳಲ್ಲಿ ಶಿಕ್ಷಕರ ಮೇಲಿನ ಮನೋಭಾವನೆಯನ್ನೇ ಬದಲು ಮಾಡಿದೆಯೆಂದರೂ ತಪ್ಪಾಗಲಾರದು.

## ಮೆಂಟರಿಂಗ್ ಗುರು

ಶಿಕ್ಷಕರು ಕೇವಲ ಬೋಧಕರಾಗದೇ ವಿಶ್ವಾಸಿಕರಾಗಿ ಮಾರ್ಗದರ್ಶಕರಾದರು. ಶಿಕ್ಷಕರ ನೇರ ಗಮನವು ವಿದ್ಯಾರ್ಥಿಗಳ ಮೇಲಾದಾಗ ಸಹಜವಾಗಿಯೇ ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಬೆಳವಣಿಗೆಗಳು ಕಾಣಲಾರಂಭಿಸಿದವು. ವಿದ್ಯಾರ್ಥಿಗಳ ಆತ್ಮ ವಿಶ್ವಾಸ, ಸಮಸ್ಯೆಯನ್ನು ಪ್ರಸ್ತಾವಿಸುವ ಪರಿ, ಸಂವಾದದಲ್ಲಾಗುವ ವಿಶ್ಲೇಷಣೆಗಳು ಅನೇಕ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮತ್ತು ಮುನ್ನುಗ್ಗುವಿಕೆಯನ್ನು ಹುಟ್ಟುಹಾಕಿತು. ಈ ತರಹದ ನೂತನ ಕಲ್ಪನೆ ಒಡಮೂಡಬೇಕಾದರೆ ಆ ಕಲ್ಪನೆಯನ್ನು ಬಿಂಬಿಸಿದ ವ್ಯಕ್ತಿಯಲ್ಲಿ ಶಿಕ್ಷಣ ಕ್ಷೇತ್ರದ ಮೇಲಿನ ಒಲವು, ವಿದ್ಯಾರ್ಥಿಗಳ ಬಗ್ಗೆ ಕಾಳಜಿ, ಅವರ ಸಮಸ್ಯೆಗಳ ಮತ್ತು ಬೆಳವಣಿಗೆಗಳ ಬಗ್ಗೆ ಇರಬೇಕಾದ ಸಹಾನುಭೂತಿ ಅತ್ಯವಶ್ಯಕ. ಇಂತಹ ಎಲ್ಲ ಅಂಶಗಳು ಮೇಳೈಸಿರುವುದು ದೊರೆಸ್ವಾಮಿಯವರಲ್ಲಿ ಮಾತ್ರ ಎನ್ನುವುದು ಅವರನ್ನು ತಿಳಿದವರು ಹೇಳುವುದರಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ.

### ಸರಕಾರಿ ಶಾಲೆಗಳ ದತ್ತು

**ಸರ್ಕಾರೀ ಶಾಲೆಯಲ್ಲಿ ಓದಿದವರಿಗೆ ಮಾತ್ರ ಗೊತ್ತಿರುತ್ತದೆ, ಆ ಶಾಲೆಗಳಲ್ಲಿನ ನಿಜವಾದ ಸ್ಥಿತಿಗಳ ಬಗ್ಗೆ. ಎಲ್ಲ ಸರ್ಕಾರಗಳೂ ಶಾಲೆಗಳ ಅಭಿವೃದ್ಧಿಗೆ ಆದ್ಯತೆ ನೀಡಿದರೂ ಅದು ವೇದಿಕೆಯ ಮೇಲಿನ ಭಾಷಣಕ್ಕೆ ಮಾತ್ರ ಸೀಮಿತವಾಗಿದೆಯೇ ಹೊರತು ಆಚರಣೆಯಲ್ಲಲ್ಲ. ಈ ನಿಟ್ಟಿನಲ್ಲಿ ಸರ್ಕಾರೀ ಶಾಲೆಗಳು ಉದ್ಧಾರವಾಗಬೇಕಾದರೆ ಅವುಗಳನ್ನು ಪ್ರಜಾ ಪ್ರತಿನಿಧಿಗಳು, ವಿಶ್ವವಿದ್ಯಾಲಯಗಳು ದತ್ತು ಪಡೆದು ಪೋಷಿಸಬೇಕು ಎನ್ನುವ ಹೊಸ ಕಲ್ಪನೆಯನ್ನು ಹೊತ್ತು, ಕರ್ನಾಟಕ ಸರ್ಕಾರದ ಎಲ್ಲ ಶಾಸಕರು, ಪರಿಷತ್ ಸದಸ್ಯರು ತಮ್ಮ-ತಮ್ಮ ಕ್ಷೇತ್ರಗಳಲ್ಲಿ ಕನಿಷ್ಠ ಮೂರು ಶಾಲೆಗಳನ್ನು ದತ್ತು ಪಡೆದು, ಪೋಷಿಸಬೇಕು ಎಂದು ಸಲಹೆ ನೀಡಿ, ಹಾಗೆಯೇ ನಲವತ್ತಕ್ಕೂ ಹೆಚ್ಚು ಸರ್ಕಾರೀ ಶಾಲೆಗಳನ್ನು ದತ್ತು ಪಡೆದು ಅವುಗಳ ಬೆಳವಣಿಗೆಯ ನಿಟ್ಟಿನಲ್ಲಿ ಶ್ರಮಿಸಿದವರು ಪ್ರೊ. ದೊರೆಸ್ವಾಮಿಯವರು. ಬೆಂಗಳೂರಿನ ಐ.ಟಿ. ಸಂಸ್ಥೆಗಳು ತಮ್ಮ ಸಿ.ಎಸ್.ಆರ್. ದತ್ತಿಯ ಒಂದು ವರ್ಷದ ಮೊತ್ತವನ್ನು ಕೊಟ್ಟರೂ ಕರ್ನಾಟಕದ ಸರ್ಕಾರೀ ಶಾಲೆಗಳ ಪ್ರಗತಿಯ ಗತಿಯೇ ಬದಲಾಗುತ್ತದೆ ಎನ್ನುವ ಪ್ರೊ. ದೊರೆಸ್ವಾಮಿಯವರ ದೂರದೃಷ್ಟಿ ಮತ್ತು ಕಾಳಜಿಯನ್ನು ಒಪ್ಪಿಕೊಳ್ಳದಿದ್ದರೆ ಅದು ಆತ್ಮ ವಂಚನೆಯಾಗುತ್ತದೆ ಅಷ್ಟೆ.**

ದೊರೆಸ್ವಾಮಿಯವರದ್ದು ಕೇವಲ ತಮ್ಮ ಮನೆಯನ್ನು ಮಾತ್ರ ಬೆಳಗಬೇಕು ಎನ್ನುವ ಮನಃಸ್ಥಿತಿಯಲ್ಲ, ಅವರದ್ದು ವೈಶ್ವಿಕ ದೃಷ್ಟಿ. ತಮ್ಮ ಮೆಂಟರಿಂಗ್ ಕಲ್ಪನೆಯನ್ನು ಕೇಂದ್ರ ಸರ್ಕಾರಕ್ಕೆ, ಶಿಕ್ಷಣ ಮಂತ್ರಾಲಯಕ್ಕೆ ಕಳುಹಿಸಿ, ಆ ಮೂಲಕ ನೂತನ ಶಿಕ್ಷಣ ನೀತಿಯಲ್ಲಿ ಮೆಂಟರಿಂಗ್ ಪದ್ಧತಿ ಜಾರಿಯಾಗುವಂತೆ ನೋಡಿಕೊಂಡವರು.

## ಚಂದ್ರಬಾಬು ನಾಯ್ಡು ಮನವಿ!

ಶಿಕ್ಷಣ ರಂಗದ ಎಲ್ಲ ಕ್ಷೇತ್ರಗಳಲ್ಲೂ ಸಾಧಿಸಿ ಮುನ್ನಡೆದವರು ಬಹಳ ಅಪರೂಪ. ಈ ರೀತಿಯ ಸಾಧಕರಲ್ಲಿ ಪ್ರೊ. ದೊರೆಸ್ವಾಮಿಯವರು ತಮ್ಮ ಛಾಪನ್ನು ಒತ್ತಿದ್ದಾರೆ. ಸುಮಾರು ಇಪ್ಪತ್ಮೂರು ವರ್ಷಗಳ ಹಿಂದಿನ ಮಾತು, ಆಂಧ್ರದಲ್ಲಿ ಚಂದ್ರಬಾಬು ನಾಯ್ಡುರವರು ಮುಖ್ಯಮಂತ್ರಿಯಾಗಿದ್ದರು. ಅವರ ಕ್ಷೇತ್ರ, ಆ ಕಾಲದಲ್ಲಿ ಹಿಂದುಳಿದ, ಆಂಧ್ರ-ಕರ್ನಾಟಕ ಮತ್ತು ತಮಿಳುನಾಡಿನ ಗಡಿ ಊರು ಕುಪ್ಪಂ ಆಗಿತ್ತು. ಅಂತಹ ಊರಿನಲ್ಲಿ ಒಂದು ವೈದ್ಯಕೀಯ ಕಾಲೇಜನ್ನು ಹೊಂದಬೇಕೆನ್ನುವುದು ನಾಯ್ಡುರವರ ಹಂಬಲ. ತಮ್ಮ ಪರಿಚಯದವರ ಮೂಲಕ ದೊರೆಸ್ವಾಮಿಯವರಿಗೆ ಕೇಳಿಕೊಂಡರು. ದೊರೆಸ್ವಾಮಿಯವರು ಮೂಲತಃ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕಾನೂನಿನಲ್ಲಿ ಪದವಿ ಪಡೆದವರು. ಅವರಿಗೆ ಇಂಜಿನಿಯರಿಂಗ್ ಕಾಲೇಜು ಮತ್ತು ಪದವಿ ಕಾಲೇಜನ್ನು ನಡೆಸಿ ಅನುಭವವಿತ್ತಾದರೂ ವೈದ್ಯಕೀಯ ಕಾಲೇಜಿನ ಕ್ಷೇತ್ರದಲ್ಲಿ ವಿಶೇಷ ಮಾಹಿತಿ ಇರಲಿಲ್ಲ. ಒಂದರೆ ಕ್ಷಣ ಚಂದ್ರಬಾಬು ನಾಯ್ಡುರವರಿಗೆ ಏನೂ ಹೇಳಲಾಗದೇ ಸ್ವಲ್ಪ ಸಮಯ ಪಡೆದುಕೊಂಡು ಹೈದರಾಬಾದ್‌ನಿಂದ ಮರಳಿ ಬಂದರು.

ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾಪ ಎತ್ತಿದಾಗ ಅವರ ಶ್ರೀಮತಿವರೇ ಒಪ್ಪಲಿಲ್ಲ; ಅಮೆರಿಕದಲ್ಲಿ ಓದಿಬಂದ ಮಗ, ಅಮೆರಿಕದಲ್ಲಿಯೇ ವೈದ್ಯೆಯಾಗಿರುವ ಮಗಳೂ ಸುತರಾಂ ಒಪ್ಪಲಿಲ್ಲ. ಕೊನೆಗೆ ನೆಚ್ಚಿಕೊಂಡಿದ್ದ ವೈದ್ಯ ಗೆಳೆಯರೂ ಅಸಾಧುವೆಂದರು. ಆದರೂ ದೊರೆಸ್ವಾಮಿಯವರಿಗೆ ಅಸಾಧ್ಯವಾದುದನ್ನೂ ಸಾಧಿಸಬೇಕೆನ್ನುವ ಛಲ. ಚಂದ್ರಬಾಬು ನಾಯ್ಡುರವರಿಗೆ ಒಪ್ಪಿಗೆ ಸೂಚಿಸಿ, ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವತ್ತ ಹೆಜ್ಜೆ ಇಟ್ಟೇ ಬಿಟ್ಟರು, ಉಳಿದಿರುವುದು ಈಗ ಇತಿಹಾಸ; ಕುಪ್ಪಂನ ಪಿಇಎಸ್ ವೈದ್ಯಕೀಯ ಕಾಲೇಜು ಆಂಧ್ರದ ಗಡಿ ಊರಾದ ಕುಪ್ಪಂನಲ್ಲಿ ಗಟ್ಟಿಯಾಗಿ ತಳವೂರಿದೆ, ಆಂಧ್ರ ಪ್ರದೇಶದ ವೈದ್ಯಕೀಯ ಕ್ಷೇತ್ರದಲ್ಲಿ ತನ್ನದೇ ಆದ ಹೆಸರನ್ನು ಕೆತ್ತಿಕೊಂಡಿದೆ.

ಇದೇ ನವೆಂಬರ್ ಏಳನೇ ತಾರೀಖಿನಂದು ಪ್ರೊ. ದೊರೆಸ್ವಾಮಿಯವರು ಎಂಭತ್ತಾರು ತುಂಬಿ ಎಂಭತ್ತೇಳಕ್ಕೆ ನಡೆಯುತ್ತಾರೆ. ಸುಮಾರು ಒಂದೂವರೆ ದಶಕದಿಂದ ಅವರನ್ನು ಹತ್ತಿರದಿಂದ ನೋಡಿದ ನನಗೆ ಅವರ ಬಗ್ಗೆ ಇಷ್ಟನ್ನೂ ಬರೆಯದಿದ್ದರೆ, ಅದು ಶಿಕ್ಷಣ ಕ್ಷೇತ್ರ ಕ್ಕಾಗುವ ಅನ್ಯಾಯ, ಅದು ಆಗಬಾರದೆಂಬ ಆಶಯದಿಂದ ಹುಟ್ಟಿದ ಒಂದು ಚಿಕ್ಕ ಪ್ರಯತ್ನವಷ್ಟೇ.

### ಕ್ರಾಂತಿಕಾರಕ ಹೆಜ್ಜೆ

**ಕಲಾ ವಿಭಾಗದಲ್ಲಿ ವಿದ್ಯಾರ್ಥಿಗಳು ಇತಿಹಾಸ, ವ್ಯಕ್ತಿಗಳ ಜೀವನ, ಅವರ ನಡೆದು ಬಂದ ದಾರಿ ಮತ್ತು ಸಾಧನೆಗಳನ್ನು ಅಧ್ಯಯನ ಮಾಡುವುದು ಸಾಮಾನ್ಯ. ಆದರೆ ತಾಂತ್ರಿಕ ಶಿಕ್ಷಣದಲ್ಲಿ ಇದಕ್ಕೆ ಅವಕಾಶ ಕಡಿಮೆ. ಆದರೆ ದೊರೆಸ್ವಾಮಿಯಯವರು ಅದನ್ನು ಸುಳ್ಳಾಗಿಸಿದ್ದಾರೆ. ಅವರು ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸರ್. ಎಂ ವಿಶ್ವೇಶ್ವರಯ್ಯ, ಮಹಾತ್ಮಾ ಗಾಂಧಿ, ಮತ್ತು ವಿವೇಕಾನಂದರವರ ಬದುಕು-ಸಾಧನೆಗಳನ್ನು ಪಠ್ಯದೊಳಗಳವಡಿಸಿದ್ದಾರೆ. ಮೊದಲ ವರ್ಷದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಈ ಮೂವರು ಮಹನೀಯರ ಬಗ್ಗೆ ತಿಳಿದುಕೊಳ್ಳುವುದು ರೊಬೊಟಿಕ್ಸ್ ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನದ ಬಗ್ಗೆ ತಿಳಿದು ಕೊಳ್ಳುವಷ್ಟೇ ಅನಿವಾರ್ಯ ಎನಿಸಿದೆ. ಇದನ್ನು ಕ್ರಾಂತಿಕಾರಕ ಹೆಜ್ಜೆ ಎಂದೇ ಶಿಕ್ಷಣ ತಜ್ಞರು ಗುರುತಿಸಿದ್ದಾರೆ.**

---

# ಪಾಕಿಸ್ತಾನದಲ್ಲೊಂದು ಶಕ್ತಿಪೀಠ

**• ಲಿಂಗರಾಜು ಡಿ.ಎಸ್.**

ಹಿಂದೆ ಭಾರತದ ಭಾಗವೇ ಆಗಿದ್ದ ಪಾಕಿಸ್ತಾನದ ಪ್ರಾಂತ್ಯದಲ್ಲಿ, ಹಿಂದೆ ಶೈವ ಪಂಥ ಆಚರಣೆಯಲ್ಲಿತ್ತು. ಕುಲಾರ್ಣವ ತಂತ್ರವು ಉಲ್ಲೇಖಿಸುವ 18 ಶಕ್ತಿಪೀಠಗಳಲ್ಲಿ ಹಿಂಗ್ಲಾಜ್ ಕೂಡಾ ಒಂದು ಮತ್ತು ಇದು ಬಲೂಚಿಸ್ತಾನ ಜಿಲ್ಲೆಯ ಲಸಬೇಲಾದ ಬಳಿ ಇದೆ. ಹಿಂಗ್ಲಾಜ್ ರಾಷ್ಟ್ರೀಯ ಪಾರ್ಕಿನಲ್ಲಿರುವ ಮಾತಾ ದೇವಾಲಯ ಇಂದಿಗೂ ಸಹಸ್ರಾರು ಭಕ್ತರ ಆಕರ್ಷಣೆಯಾಗಿದೆ. ಇಲ್ಲಿನ ಬೆಟ್ಟಗಳ ಗುಹೆಯೊಂದರಲ್ಲಿ ನೆಲೆಯಾಗಿರುವ ಹಿಂಗ್ಲಾಜ್ ಮಾತೆಯ ದರ್ಶನಕ್ಕೆ ವರ್ಷಕ್ಕೊಮ್ಮೆ ಭಕ್ತರು ಭಾರತದಿಂದಲೂ ಆಗಮಿಸುತ್ತಾರೆ. ಪುರಿ ಜಗನ್ನಾಥನ ಅಡುಗೆ ಮನೆಯಲ್ಲಿ ಹಿಂಗೋಲ ಮಾತೆಯನ್ನು ಅಗ್ನಿಯ ರೂಪದಲ್ಲಿ ಪೂಜಿಸಿ ಜಗನ್ನಾಥನ ಮಹಾಭೋಗ ಪ್ರಸಾದದ ತಯಾರಿಕೆ ಆರಂಭಿಸುವ ಸಂಪ್ರದಾಯವಿದೆ.

ಅಮೃತಸರದಿಂದ ಸುಮಾರು 700 ಕಿ.ಮೀ. ದೂರದಲ್ಲಿರುವ ಇಲ್ಲಿಗೆ ರಸ್ತೆಯ ಮೇಲೆ ಪಯಣಿಸಿದರೆ ಐದು ದಿನಗಳ ಪ್ರವಾಸ ಇದು. ಹಸಿರಿನ ಸುಳಿವೇ ಇಲ್ಲದ ಬಿಸಿಲುಗಾಡಿನಲ್ಲಿ ಸಾಗುವ ನೀರಸ ಯಾತ್ರೆ ರೇಜಿಗೆ ಹುಟ್ಟಿಸಿ ಸುಸ್ತು ಮಾಡುತ್ತದೆ. ಇಲ್ಲಿನ ಆಹಾರ ಪದ್ಧತಿಯ ಬಗ್ಗೆ ಅನುಮಾನಗಳು, ಜನರ ಓರೆ ನೋಟ ಮತ್ತು ಅವ್ಯಕ್ತ ಭಯ ಇಲ್ಲಿಗೆ ಬರುವ ಯಾತ್ರಿಕರಲ್ಲಿ ಸಾಮಾನ್ಯ. ವಾಹನ ಚಾಲಕರನ್ನು ಬಿಟ್ಟರೆ ಮತ್ತಾ ್ಯವ ಸಾರ್ವಜನಿಕರೂ ಮುಕ್ತವಾಗಿ ಮಾತನಾಡಲಾರರು.

> ಅಗ್ನಿಯ ರೂಪದಲ್ಲಿ ಪೂಜೆಗೊಳ್ಳುವ ಹಿಂಗ್ಲಾಜ್ ದೇವತೆಯ ದೇಗುಲಕ್ಕೆ ಪ್ರವಾಸವೆಂದರೆ, ಬಹು ಕಠಿಣ.

ಕೆಲವು ವರ್ಷಗಳ ಹಿಂದೆ ತೆರೆಕಂಡಿದ್ದ 'ಸಾಹಸಂ' ಎಂಬ ತೆಲುಗು ಚಿತ್ರದಲ್ಲಿ ಹಿಂಗ್ಲಾಜ್ ಮಾತಾ ದೇವಾಲಯಕ್ಕೆ ತೆರಳುವ ಕಥಾನಾಯಕ, ಅಲ್ಲಿನ ನೆಲಮಾಳಿಗೆಯಲ್ಲಿ ನಿಧಿಯೊಂದನ್ನು ಪತ್ತೆ ಹಚ್ಚುತ್ತಾನೆ. ಆದರೆ, ಇಂದು ಹಿಂಗ್ಲಾಜ್ ದೇಗುಲದ ನೈಜ ಪರಿಸ್ಥಿತಿ ಬೇರೆಯೇ ಇದೆ.

**ಹಿಂಗ್ಲಾಜ್ ಮೂಲ:** ಹಿಂಗ್ಲಾಜ್ ದೇವಿಯನ್ನು ಭಾವಸಾರ ಸಮಾಜ, ಬ್ರಹ್ಮಕ್ಷತ್ರೀಯ ಸಮಾಜ, ಬರೋತ್ ಜನಾಂಗ ಕುಲದೇವಿ ಎಂಬ ಹೆಸರಿನಲ್ಲಿ ಪೂಜಿಸುತ್ತವೆ. ಮಾಲ್ವಾ ಪ್ರಾಂತ್ಯದ ಮಾಹಿಶ್ಮತಿಯ ಅರಸ ಸಹಸ್ರಬಾಹು ಅರ್ಜುನ ಅಥವಾ ಕಾರ್ತವೀರ್ಯಾರ್ಜುನ ಕಾಮಧೇನುವನ್ನು ಪಡೆಯಲು ಜಮದಗ್ನಿ ಋಷಿಯನ್ನು ಕೊಲ್ಲುತ್ತಾನೆ. ಜಮದಗ್ನಿಯ ಪುತ್ರ ಪರಶುರಾಮ ತನ್ನ ತಂದೆಯ ಸಾವಿಗೆ ಕಾರಣರಾದ ಕ್ಷತ್ರೀಯರನ್ನು ಸಂಪೂರ್ಣವಾಗಿ ನಿರ್ನಾಮ ಮಾಡುವುದಾಗಿ ಪಣತೊಟ್ಟು ಹೊರಡುತ್ತಾನೆ. ಇದರಿಂದ ಬೆದರಿದ ಕಾರ್ತವೀರ್ಯಾರ್ಜುನ ಜನಕ ಮಹಾರಾಜನ ಮೊರೆ ಹೊಕ್ಕಾಗ ಆತ ಹಿಂಗ್ಲಾಜ್ ಮಾತೆಯ ಶರಣು ಹೋಗುವಂತೆ ಸಲಹೆ ನೀಡುತ್ತಾನೆ. ಅದರಂತೆ ಕಾರ್ತವೀರ್ಯಾರ್ಜುನ ಹಿಂಗೋಲಕ್ಕೆ ಬಂದು ಮಾತೆಯ ಸೇವೆಯಲ್ಲಿ ನಿರತನಾಗಿದ್ದ ಎಂಬ ಕಥೆಯಿದೆ.

ಕೆಲಕಾಲಾ ನಂತರ ಹಿಂಗೋಳಕ್ಕೆ ಬಂದ ಪರಶುರಾಮನಿಗೆ ಅಲ್ಲಿನ ಪರಿಸರ ಕಂಡು ಆಶ್ಚರ್ಯವಾಗುತ್ತದೆ. ಕ್ಷತ್ರೀಯರು ಅಲ್ಲಿ ಪೂಜೆ-ಪುನಸ್ಕಾರಗಳಂತಹಾ ಬ್ರಾಹ್ಮಣ ಕ್ರಿಯೆಗಳಲ್ಲಿ ನಿರತರಾಗಿರುತ್ತಾರೆ. ಆತನಿಗೆ ಕೋಪ ಉಕ್ಕಿ ತನ್ನ ಕೊಡಲಿಯನ್ನು ಎತ್ತಿದಾಗ ಹಿಂಗ್ಲಾಜ್ ಮಾತೆ ಪರಶುರಾಮನ ಮುಂದೆ ಪ್ರತ್ಯಕ್ಷಳಾಗಿ ಕ್ಷತ್ರೀಯರು ಈಗ ತಮ್ಮ ಶಸ್ತ್ರಾಸ್ತ್ರಗಳನ್ನು ತೊರೆದು ವೇದಾಧ್ಯಯನಗಳಲ್ಲಿ ಮಗ್ನವಾಗಿರುವುದರಿಂದ ಅವರನ್ನು ಕ್ಷಮಿಸಲು ತಿಳಿಸುತ್ತಾಳೆ. ಪರಶುರಾಮ ಕ್ಷಿಸಿದ ಎಂಬ ಕಥೆಯಿದೆ.

**ಹಿಂಗೋಲದ ಬಳಿಯಲ್ಲಿ:** ಹಿಂಗ್ಲಾಜ್ ಗುಹೆಯಲ್ಲಿ ಒಂದು ಕಲ್ಲಿನ ತುಂಡು ಇದ್ದು ಅದನ್ನೇ ಮಾತೆಯ ರೂಪ ಎಂದು ಪೂಜಿಸಲಾಗುತ್ತದೆ. ಗುಹೆಯ ಬಳಿಯಲ್ಲಿ ಗಣೇಶಗುಡಿ, ಕಾಳಿಗುಡಿ, ಗುರುಗೋರಖನಾಥ ಧುನಿ, ಬ್ರಹ್ಮಕುಂಡ, ತೀರ್ ಕುಂಡ, ಗುರುನಾನಕ್ ಖರಾವೋ, ರಾಮ್ ಜರೋಖಾ ಬೇಠಕ್, ಅನೀಲ್ ಕುಂಡ್ ಮುಂತಾದ ಸ್ಥಳಗಳಿವೆ.

ಕೆಲವು ದಶಕಗಳ ಹಿಂದೆ ಯಾತ್ರಿಗಳು ದಿನಗಟ್ಟಲೇ ನಡೆದು ಹಿಂಗ್ಲಾಜ್‌ಗೆ ಬರಬೇಕಾಗುತ್ತಿತ್ತು. ಈಗ ಪಾಕ್ ಸರ್ಕಾರ ಹಿಂಗ್ಲಾಜ್ ಕ್ಷೇತ್ರಕ್ಕೆ ರಸ್ತೆ ನಿರ್ಮಿಸಿದೆ. ಅಮೃತಸರ, ವಾಘಾಗಡಿಯಿಂದ ಲಾಹೋರ್ ಮೂಲಕ ಕರಾಚಿ ಹಾದು, ಮಕ್ರಾನ್ ಕರಾವಳಿ ರಾಷ್ಟ್ರೀಯ ಹೆದ್ದಾರಿಯಗುಂಟಾ ಪ್ರಯಾಣಿಸಿ ಹಿಂಗೋಲ್ ನದಿಯನ್ನು ದಾಟಿ, ಈ ಕ್ಷೇತ್ರವನ್ನು ತಲುಪಬೇಕು. ವರ್ಷಕ್ಕೆ ಸುಮಾರು 25,000 ರಿಂದ 30,000 ಯಾತ್ರಿಕರು ಇಲ್ಲಿಗೆ ಬರುತ್ತಾರೆ. ಮರಳುಗಾಡಿನ ಬಿಸಿಯಿಂದ ಪಾಪಗಳು ಭಸ್ಮವಾಗುತ್ತವೆ ಎಂಬ ನಂಬಿಕೆಯಿಂದ, ಕೆಲವು ಯಾತ್ರಿಕರು ಬರಿಗಾಲಲ್ಲಿ ನಡೆಯುವ ಹರಕೆ ಹೊತ್ತು ಬರುತ್ತಾರೆ.

ಗುಹೆಯ ಬಳಿ ಚಂದ್ರಗುಪ್ ಮತ್ತು ಖಂಡೇವಾರಿ ಎಂಬ ಕೆಸರು ಹೊರಹಾಕುವ ಅಗ್ನಿಪರ್ವತಗಳಿದ್ದು ಭಕ್ತರು ಬೆಟ್ಟ ಏರಿ ತಾವು ತಂದ ತೆಂಗಿನ ಕಾಯನ್ನು ಅದರೊಳಕ್ಕೆ ಬಿಸಾಡುತ್ತಾರೆ. ಕಾಯಿ ಮುಳುಗಿದರೆ ತಮ್ಮ ಇಷ್ಟಾರ್ಥ ನೆರವೇರುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಇಲ್ಲಿ ನಾಲ್ಕು ದಿನಗಳ ಕಾಲ ವಾರ್ಷಿಕ ಜಾತ್ರೆ ನಡೆಯುತ್ತದೆ. ಭಾರತ ಮತ್ತು ಪಾಕ್ ಗಡಿಯಿಂದ ಬರುವ ಸಹಸ್ರಾರು ಜನ, ಈ ಶ್ರಮದಾಯಕವಾದ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಆ ಸಂದರ್ಭದಲ್ಲಿ ಈ ಪರಿಸರವಿಡೀ ಕೆಂಪು ಬಟ್ಟೆಯ ಬಣ್ಣದಲ್ಲಿ ಮಿಂದು ಹೋಗುತ್ತದೆ. ಕರಾಚಿಯಲ್ಲಿರುವ ನಾನದ್ ಪಂಥೀ ಅಖಾಡಾದ ಸಹಯೋಗದಲ್ಲಿ ಆರಂಭವಾಗುವ ಹಿಂಗ್ಲಾಜ್ ಯಾತ್ರೆಯಲ್ಲಿ ಬಹಳಷ್ಟು ಮಂದಿ ಹಠಯೋಗಿಗಳೇ ಇರುತ್ತಾರೆ. ಉಳಿದ ಸಮಯದಲ್ಲೂ ಹಿಂಗ್ಲಾಜ್ ದೇವಾಲಯಕ್ಕೆ ಹೋಗಬಹುದು. ವಾಹನ ಸೌಕರ್ಯ, ಊಟ-ಉಪಚಾರಗಳ ವ್ಯವಸ್ಥೆ ಇಲ್ಲಿ ಇಲ್ಲವಾದುದರಿಂದ ಇವೆಲ್ಲವುಗಳ ಏರ್ಪಾಡು ಮಾಡಿಕೊಂಡೇ ಹೊರಡಬೇಕಾಗುತ್ತದೆ.

**ಶಕ್ತಿಪೀಠ:** ಶಿವನ ಪತ್ನಿ ಸತಿ ದಕ್ಷಕುಂಡದಲ್ಲಿ ಬಿದ್ದು ಭಸ್ಮವಾದ ನಂತರ ಶಿವ ಪತ್ನಿಯ ಶವವನ್ನು ಹೊತ್ತು ಅಲೆಯತೊಡಗುತ್ತಾನೆ. ಆಗ ವಿಷ್ಣು ಸತಿಯ ಶವವನ್ನು ತನ್ನ ಸುದರ್ಶನ ಚಕ್ರದಿಂದ ಕತ್ತರಿಸಿದಾಗ ದೇಹದ ಭಾಗಗಳು ಕಳಚಿ ಬಿದ್ದು ಶಕ್ತಿಪೀಠಗಳು ಎಂಬ ಹೆಸರು ಪಡೆದವು. ಹಿಂಗೋಲದಲ್ಲಿ ದೇವಿಯ ಬ್ರಹ್ಮರಂಧ್ರ ಬಿದ್ದಿದೆ ಎಂಬ ನಂಬಿಕೆ ಇದೆ. ದೇವಿ ಮತ್ತು ಅಂಧಕಾಸುರನ ನಡುವೆ ಇದೇ ಗುಹೆಯಲ್ಲಿ ಯುದ್ಧ ನಡೆದಿತ್ತು. ಇನ್ನೊಂದು ಕಥೆಯ ಪ್ರಕಾರ ಚಂದ್ರ ವಂಶದ ಅರಸನಿಗೆ ಹಿಂಗೋಲ ಮತ್ತು ಸುಂದರ ಎಂಬ ಮಕ್ಕಳಿರುತ್ತಾರೆ. ಇವರ ಸಂಹಾರ ಕೂಡಾ ಇದೇ ಗುಹೆಯಲ್ಲಿ ಆಯಿತು. ದೇವಾಲಯದ ಭಕ್ತವರ್ಗದಲ್ಲಿ ಸ್ಥಳೀಯ ಮುಸ್ಲಿಮರೂ ಇದ್ದು ಹಿಂಗ್ಲಾಜ್ ಮಾತೆಯನ್ನು ನಾನಿ ಮಾತಾ ಎಂದು ಪೂಜಿಸುತ್ತಾರೆ.

---

# ಸೂರ್ಯನ ಪೂಜಿಸುವ ಮಹಿಳೆಯರು

> ಮುಳುಗುತ್ತಿರುವ ಸೂರ್ಯನಿಗೆ ನದಿ ತೀರದಲ್ಲಿ ಅರ್ಘ್ಯ ನೀಡುವ ಅಪರೂಪದ ಆಚರಣೆ ಈ ವಾರ ನಡೆಯುತ್ತಿದೆ.

**• ಶ್ರೀನಿವಾಸ ಜೋಕಟ್ಟೆ, ಮುಂಬೈ**

ಉದಯಿಸುವ ಸೂರ್ಯನಿಗೆ ಅರ್ಘ್ಯ ಪ್ರದಾನ ಮಾಡುವುದು ಎಲ್ಲರಿಗೂ ಗೊತ್ತು. ಆದರೆ ಮುಳುಗುತ್ತಿರುವ ಸೂರ್ಯನಿಗೂ ಅರ್ಘ್ಯಪ್ರದಾನ ಮಾಡುವ ಪರ್ವ ಒಂದಿದೆ. ಅದುವೇ ಛಠ್ ಪರ್ವ. ಇದು ಉತ್ತರ ಭಾರತದಲ್ಲಿ ಹೆಚ್ಚು ಆಚರಣೆಯಲ್ಲಿದೆ. ಉಪವಾಸಗಳಲ್ಲಿ ಛಠ್ ಪರ್ವದ ಉಪವಾಸವನ್ನು ಬಹಳ ಕಷ್ಟಕರವೆಂದು ಪರಿಗಣಿಸಲಾಗಿದೆ. ಛಠ್ ಪೂಜೆಯ ಉಪವಾಸವನ್ನು ಆಚರಿಸುವ ಜನರು ಇಪ್ಪತ್ತನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ನೀರು ಕುಡಿಯದೆಯೇ ಉಪವಾಸವನ್ನು ಮಾಡುತ್ತಾರೆ. ಈ ಹಬ್ಬದ ಮುಖ್ಯ ಉಪವಾಸವನ್ನು ಷಷ್ಠಿ ತಿಥಿಯಂದು ಆಚರಿಸಲಾಗುತ್ತದೆ. ನಾಲ್ಕು ದಿನಗಳ ಛಠ್ ಪೂಜೆಯು ಕಾರ್ತಿಕ ಮಾಸದ ಶುಕ್ಲ ಪಕ್ಷದ ಚತುರ್ಥಿಯಿಂದ (ನವಂಬರ್05) ಪ್ರಾರಂಭವಾಗಿದೆ, ಈ ಪರ್ವ ಸಪ್ತಮಿ ತಿಥಿಗೆ ಬೆಳಿಗ್ಗೆ ಸೂರ್ಯೋದಯ ಸಮಯ ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸಿದ ನಂತರ (ನವಂಬರ್ 08) ಕೊನೆಗೊಳ್ಳುತ್ತದೆ.

ಛಠ್ ಪೂಜೆಯು ನಮ್ಮ ದೇಶದ ಪ್ರಮುಖ ಹಬ್ಬಗಳಲ್ಲಿ ಒಂದು. ದೀಪಾವಳಿ ಹಬ್ಬ ಕಳೆದು ನಾಲ್ಕನೇ ದಿನಕ್ಕೆ ಅಂದರೆ ಕಾರ್ತಿಕ ಮಾಸದ ಶುಕ್ಲ ಪಕ್ಷದ ಚತುರ್ಥಿ ತಿಥಿಯಂದು ನಹಯ್-ಖಯ್ ಎಂಬ ಸಂಪ್ರದಾಯದಿಂದ ಆರಂಭವಾಗುತ್ತದೆ. ಈ ದಿನ

ಮನೆಯನ್ನು ಶುದ್ಧೀಕರಿಸಲಾಗುತ್ತದೆ. ಇದರ ನಂತರ ಛಠ್ ಭಕ್ತರು ಸ್ನಾನ ಮಾಡಿ ಸರಳ ಆಹಾರವನ್ನು ಸೇವಿಸಿ, ತಮ್ಮ ಉಪವಾಸವನ್ನು ಪ್ರಾರಂಭಿಸುತ್ತಾರೆ. ಛಠ್ ಪೂಜೆ, ಛಠ್ ವ್ರತ ಬಿಹಾರ, ಝಾರ್ಖಂಡ್, ಅಸ್ಸಾಮ್ ಮತ್ತು ಉತ್ತರ ಪ್ರದೇಶ ಮತ್ತು ಇತ್ತೀಚಿನ ವರ್ಷಗಳಲ್ಲಿ ಮಹಾರಾಷ್ಟ್ರದಲ್ಲೂ ಪ್ರಸಿದ್ಧಿ ಪಡೆದಿದೆ.

## ನಾಲ್ಕು ದಿನಗಳ ಹಬ್ಬ

ಛಠ್ ಮಹಾಪರ್ವವು ಸೂರ್ಯನ ಆರಾಧನೆಯ ಅತಿದೊಡ್ಡ ಹಬ್ಬ. ಈ ಹಬ್ಬದಲ್ಲಿ, ಛಠ್ ಮಾತೆಯನ್ನು ಭಗವಾನ್ ಸೂರ್ಯನೊಂದಿಗೆ ಸಮಾನವಾದ ಆಚರಣೆಗಳೊಂದಿಗೆ ಪೂಜಿಸಲಾಗುತ್ತದೆ. ನಾಲ್ಕು ದಿನದ ಛಠ್ ಪೂಜೆಯ ಮೊದಲ ದಿನದಂದು ನಹಯ್ -ಖಾಯ್, ಎರಡನೇ ದಿನ ಖರ್ನಾ, ಮೂರನೇ ದಿನ ಸೂರ್ಯನಿಗೆ ಸಂಧ್ಯಾ ಅರ್ಘ್ಯ ಪ್ರದಾನ ಮತ್ತು ನಾಲ್ಕನೇ ದಿನ ಉಷಾಕಾಲದ ಅರ್ಘ್ಯವನ್ನು ಅರ್ಪಿಸುವ ಮೂಲಕ ಛಠ್ ಪರ್ವ ಮುಕ್ತಾಯವಾಗುತ್ತದೆ.

ಈ ಉಪವಾಸದಲ್ಲಿ, ದೀರ್ಘಾಯುಷ್ಯ, ಉಜ್ವಲ ಭವಿಷ್ಯ ಮತ್ತು ಮಕ್ಕಳ ಸಂತೋಷ ಮತ್ತು ಸಮೃದ್ಧಿಯನ್ನು ಹಾರೈಸಲಾಗುತ್ತದೆ. ಛಠ್ ಉಪವಾಸವು ತುಂಬಾ ಕಷ್ಟಕರವಾಗಿದೆ, ಏಕೆಂದರೆ ಅದರಲ್ಲಿ ಭಕ್ತರು ದಿನವಿಡೀ ನೀರಿಲ್ಲದ ಉಪವಾಸವನ್ನು ಆಚರಿಸಬೇಕಾಗುತ್ತದೆ.

## ಬ್ರಹ್ಮನ ಮಗಳು

ಛಠ್ ಮಾತೆಯನ್ನು ಬ್ರಹ್ಮನ ಮಾನಸಿಕ ಮಗಳು ಎಂದು ಹೇಳಲಾಗುತ್ತದೆ. ಮತ್ತೊಂದು ನಂಬಿಕೆಯ ಪ್ರಕಾರ, ಛಠ್ ಮಾತೆಯನ್ನು ಸೂರ್ಯ ದೇವರ ಸಹೋದರಿ. ಛಠ್ ಹಬ್ಬವು ಮಹಾಭಾರತದ ಅವಧಿಯಲ್ಲಿ ಪ್ರಾರಂಭವಾಯಿತು ಎಂದು ಪರಿಗಣಿಸಲಾಗಿದೆ. ಪಾಂಡವರು ಜೂಜಿನಲ್ಲಿ ಕೌರವರಿಗೆ ತಮ್ಮ ಸಂಪೂರ್ಣ ರಾಜ್ಯವನ್ನು ಕಳೆದುಕೊಂಡಾಗ, ದ್ರೌಪದಿ ಛಠ್ ಉಪವಾಸವನ್ನು ಆಚರಿಸಿದಳು ಎಂಬುದಕ್ಕೆ ಸಂಬಂಧಿಸಿದಂತೆ ಮತ್ತೊಂದು ಕಥೆಯೂ ಇದೆ. ವಿಶೇಷವಾಗಿ ಬಿಹಾರ, ಝಾರ್ಖಂಡ್, ಉತ್ತರಪ್ರದೇಶದ ಜನರು ಎಲ್ಲೆಲ್ಲಿದ್ದಾರೋ ಅಲ್ಲೆಲ್ಲ ಈ ಪರ್ವವನ್ನು ಅತಿ ಉತ್ಸಾಹದಿಂದ ಆಚರಿಸುತ್ತಾರೆ.

## ಮಹಿಳೆಯರ ಹಬ್ಬ

ದೀಪಾವಳಿಯ ಆರನೇ ದಿನ ನದಿತೀರದಲ್ಲಿ ಅಥವಾ ಸರೋವರಗಳ ತೀರದಲ್ಲಿ ಮುಖ್ಯವಾಗಿ ಮಹಿಳೆಯರು ಸೂರ್ಯನ ಆರಾಧನೆಯನ್ನು ಮಾಡುತ್ತಾರೆ. ಆ ದಿನ ಆಚರಿಸುವ ಸೂರ್ಯ ಆರಾಧನೆಯನ್ನು ಛಠ್ ವ್ರತ ಎನ್ನುತ್ತಾರೆ.

ಛಠ್ ಅನ್ನುವುದು ಷಷ್ಠಿಯ ಅಪಭ್ರಂಶ. ಛಠೀ ಮೈಯಾ ಪೂಜೆ ಅಂತಲೂ ಕರೆಯುತ್ತಾರೆ. ಇದನ್ನು ಸೂರಜ್ ಬಾಬಾ ಮತ್ತು ಸೂರಜ್ ಮಲ್ಲ ಪೂಜೆ ಎಂದೂ ಕರೆಯುತ್ತಾರೆ. ಈ ದಿನಗಳಲ್ಲಿ ಛಠೀ ಮಯ್ಯ ಹಾಡುಗಳನ್ನು ಹಾಡುತ್ತಾರೆ. ಇವು ಅಜ್ಞಾತ ಕವಿಗಳ ರಚನೆಗಳು. ಭೋಜಪುರಿ ಛಠ್ ಹಾಡುಗಳು ಬಹು ಪ್ರಖ್ಯಾತಿ.

ಷಷ್ಟಿ ತಿಥಿಯ ಸಂಜೆಗೆ ಸೂರ್ಯಾಸ್ತದ ಸಮಯ (ಅಸ್ತಮಿಸುವ ) ಸೂರ್ಯನಿಗೆ ಅರ್ಘ್ಯ ನೀಡುವುದು ಪೂಜೆಯ ವಿಶೇಷತೆ. ಆ ದಿನ ಮಹಿಳೆಯರು ತಮ್ಮ ಮನೆಯ ಅಂಗಳವನ್ನು ಸೆಗಣಿಯಿಂದ ಸಾರಿಸಿ, ದೊಡ್ಡ ರಂಗೋಲಿ ಹಾಕುತ್ತಾರೆ. ರಂಗೋಲಿಯ ನಡುವೆ ಕಬ್ಬಿನ ಜಲ್ಲೆಗಳನ್ನು ಇರಿಸಿ ಮಂಟಪ ರಚಿಸುತ್ತಾರೆ. ನಾಲ್ಕು ಕಡೆ ದೀಪವನ್ನು ಹೊತ್ತಿಸುತ್ತಾರೆ. ಹಣ್ಣು-ಹಂಪಲು ಇರಿಸಿ ಪೂಜಿಸುತ್ತಾರೆ. ರಾತ್ರಿಯಿಡೀ ದೀಪವನ್ನು ಹೊತ್ತಿಸುತ್ತಾರೆ. ಮಹಿಳೆಯರು ಮಂಟಪದ ಹತ್ತಿರವೇ ಗೀತೆಗಳನ್ನು ಹಾಡುತ್ತಾರೆ. ರಾತ್ರಿ ಇಡೀ ಛಠ್ ಗೀತೆಗಳನ್ನು ಹಾಡುವ ಈ ಮಹಿಳೆಯರಲ್ಲಿ ಆಯಾಸದ ಬದಲು ಆನಂದ ಮತ್ತು ಶ್ರದ್ಧೆ ಎದ್ದು ಕಾಣುತ್ತದೆ.

ಛಠ್ ಪರ್ವವನ್ನು ವರ್ಷದಲ್ಲಿ ಎರಡು ಬಾರಿ ಆಚರಿಸುವ ಸಂಪ್ರದಾಯವಿದೆ. ಚೈತ್ರ (ಮಾರ್ಚ್) ಮತ್ತು ಕಾರ್ತಿಕ (ನವಂಬರ್) ದೀಪಾವಳಿಯ ಆರನೇ ದಿನ ಪ್ರಮುಖ ಛಠ್ ಪರ್ವ ಇದ್ದು ಮರುದಿನ ಬೆಳಿಗ್ಗೆ ಸೂರ್ಯೋದಯಕ್ಕೆ ಪೂಜಾವ್ರತ ಮುಗಿಯುತ್ತದೆ.

ವಿಶ್ವವಾಣಿ
07.11.2024 ಗುರುವಾರ
vishwavani.news


## ದಿನ ದರ್ಶಿಕೆ

ಕಾರ್ತಿಕ ಮಾಸ, ಶುಕ್ಲ ಪಕ್ಷ, ಷಷ್ಠಿ ತಿಥಿ, ಪೂರ್ವಾ ಆಷಾಢ ನಕ್ಷತ್ರ, ಧೃತಿ ಯೋಗ, ಕೌಲವ ಕರಣ, ಹೇಮಂತ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

## ಮನೆಮದ್ದು

ವೇರಿಕೋಸ್ ಸಮಸ್ಯೆ ಇದ್ದರೆ, ದೊಡ್ಡ ಗಾತ್ರದ ಒಂದು ಚೆಂಡು ಹೂವಿನ ಎಸಳನ್ನು ಚೆನ್ನಾಗಿ ರುಬ್ಬಿ ದಪ್ಪಗೆ ಪೇಸ್ಟ್ ಮಾಡಿಕೊಂಡು, ರಾತ್ರಿ ಮಲಗುವ ಮುನ್ನ ಪೇಸ್ಟ್ ಅನ್ನು ಉಬ್ಬಿರುವ ಕಾಲಿನ ರಕ್ತನಾಳದ ಭಾಗಕ್ಕೆ ದಪ್ಪಗೆ ಹಚ್ಚಿಕೊಂಡು ಮಲಗಿ, ಆಮೇಲೆ ಬೆಳಗ್ಗೆ ಎದ್ದ ತಣ್ಣೀರಿನಿಂದ ಚೆನ್ನಾಗಿ ತೊಳೆಯಿರಿ.

## ಸೌಂದರ್ಯ ಸೂತ್ರ



ಕೂದಲ ಆರೈಕೆಗಾಗಿ ಕೂದಲನ್ನು ಅತಿಯಾದ ಶಾಖದಿಂದ ದೂರವಿರಿಸಿ. ಅತಿಯಾದ ರಾಸಾಯನಿಕವಿರುವ ಶ್ಯಾಂಪೂವನ್ನು ಬಳಸದಿರಿ. ಶ್ಯಾಂಪೂ ಆಯ್ಕೆಯಲ್ಲಿ ಜಾಗರೂಕರಾಗಿರಿ. ಕೂದಲಿನ ಆರೈಕೆಗೆ ಕಬ್ಬಿಣ, ಸತು, ವಿಟಮಿನ್‌ಗಳು ಮತ್ತು ಪ್ರೋಟೀನ್‌ಗಳಿರುವ ಪೂರಕ ಆಹಾರದ ಸೇವನೆ ಅತ್ಯಗತ್ಯ.

## ದಿನ ಭವಿಷ್ಯ

**ಮೇಷ** ಹೊರಾಂಗಣ ಚಟುವಟಿಕೆಗಳು ಉಪಯುಕ್ತವಾಗುತ್ತವೆ. ಉತ್ತಮ ಸ್ನೇಹಿತರೊಂದಿಗೆ, ಉಚಿತ ಸಮಯವನ್ನು ಆನಂದಿಸಬಹುದು.

**ವೃಷಭ** ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ.

**ಮಿಥುನ** ಕೆಲಸ, ಮನೆಯಲ್ಲಿನ ಕೆಲವು ಒತ್ತಡ ಸಹನೆಯನ್ನು ಪರೀಕ್ಷಿಸುತ್ತದೆ. ಹೊರಡುವ ವ್ಯಾಪಾರಿಗಳು ಹಣ ಜಾಗರೂಕವಾಗಿಡಿ

**ಕಟಕ** ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ.

**ಸಿಂಹ** ಪ್ರಕೃತಿಯು ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ - ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ.

**ಕನ್ಯಾ** ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ. ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಆರ್ಥಿಕವಾಗಿ ಲಾಭ ಪಡೆಯಬಹುದು.

**ತುಲಾ** ಭರವಸೆಯ ಮಾಯಾ ಜಾಲದಲ್ಲಿದ್ದೀರಿ. ವನ್ನು ತೆಗೆದುಕೊಂಡಿ ರುವ ಜನರು, ಸಾಲ ವನ್ನು ಮರುಪಾವತಿಸಬೇ ಕಾಗುತ್ತದೆ.

**ವೃಶ್ಚಿಕ** ಹೊರ ಹೋಗುವವರಿಗೆ ಸಂತೋಷ, ಆನಂ'ವ'ನ್ನು ಹಂಚಿಕೊಳ್ಳಿ. ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ.

**ಧನು** ಸಾಮಾನ್ಯ ಜ್ಞಾನದ ಜತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ.

**ಮಕರ** ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಉಂಟುಮಾಡಬಹುದು.

**ಕುಂಭ** ದಿನದಲ್ಲಿ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡಿ ಕುಟುಂಬಕ್ಕೆ ಸಂತೋಷ ಮತ್ತು ಆನಂದ ತೆರೆದಿಡುತ್ತದೆ.

**ಮೀನ** ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ.

● ಕೆ.ಬಿ.ಸಂತೋಷ್ ಗುರೂಜಿ

## ಈ ದಿನ ಇತಿಹಾಸ

- ಮಹಾರಾಷ್ಟ್ರದಲ್ಲಿ ವಿದ್ಯಾರ್ಥಿಗಳ ದಿನ
- ರಾಷ್ಟ್ರೀಯ ಕ್ಯಾನ್ಸರ್ ಅರಿವು ಮೂಡಿಸುವ ದಿನ
- ಖ್ಯಾತ ನಟ, ನಿರ್ದೇಶಕ ಕಮಲ್ ಹಾಸನ್ ಹುಟ್ಟುಹಬ್ಬ
- 1888: ಖ್ಯಾತ ವಿಜ್ಞಾನಿ ಸಿ.ವಿ.ರಾಮನ್ ಜನಿಸಿದ ದಿನ

## ಚಿತ್ರಸ್ಫೂರ್ತಿ

ಮಲ್ಲಿಗೆಯ ಮನುಜ! ಚಿತ್ರ: ಸುಧಾಕರ ದೇವರಾಜ

# ಸಹಜವಾಗಿ ಬದುಕುವುದರಲ್ಲಿ ಇರುವ ಶ್ರೀಮಂತಿಕೆ

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com


ಒಬ್ಬ ವ್ಯಕ್ತಿ ಬಹಳ ಕಷ್ಟಪಟ್ಟು ಮೇಲೆ ಬಂದು ಬಹಳ ಶ್ರೀಮಂತನಾಗಿದ್ದ. ಅವನು ತಾನು ವಾಸ ಮಾಡುತ್ತಿದ್ದ ಪಟ್ಟಣದಲ್ಲಿ ದೊಡ್ಡ ಅರಮನೆಯಂತಹ ಒಂದು ಮನೆಯನ್ನು ಕಟ್ಟಿಸಿದ. ಸುಮಾರು ಐವತ್ತು ಜನರು ಒಟ್ಟಿಗೆ ಆರಾಮವಾಗಿ ವಾಸ ಮಾಡಬಹುದಾದಂತ ದೊಡ್ಡ ಮನೆ ಅದಾಗಿತ್ತು. ಆ ಮನೆಯಲ್ಲಿರುವ ಪೀಠೋಪಕರಣಗಳನ್ನೆಲ್ಲ ಹೊರದೇಶಗಳಿಂದ ತರಲಾಗಿತ್ತು. ಮನೆಯ ಮುಂದಿನ ವಿಶಾಲವಾದ ತೋಟದಲ್ಲಿ ಬಣ್ಣ ಬಣ್ಣದ ನೀರಿನ ಕಾರಂಜಿಗಳು, ಹೂಗಿಡಗಳು ಮನೆಯ ಹಿಂಭಾಗದಲ್ಲಿ ದೊಡ್ಡದಾದ ಈಜುಕೊಳವೂ ಇತ್ತು.

ಈ ವ್ಯಕ್ತಿಗೆ ತನ್ನ ಶ್ರೀಮಂತಿಕೆಯ ಬಗ್ಗೆ ,ತನ್ನ ಮನೆಯ ಬಗೆ ತುಂಬಾ ಹೆಮ್ಮೆ ಇತ್ತು. ಇವನಿಗೆ ಹದಿನೈದು ವರ್ಷದ ಒಬ್ಬನೇ ಮಗನಿದ್ದ. ತನ್ನ ಮಗನಿಗೆ ಬಡತನ ಎಂದರೆ, ಏನೆಂದೇ ಗೊತ್ತಿಲ್ಲ. ಒಮ್ಮೆ ಅವನಿಗೆ ತಾನು ಇದನ್ನೆಲ್ಲ ಎಷ್ಟು ಕಷ್ಟ ಪಟ್ಟು ಸಂಪಾದನೆ ಮಾಡಿದೆನೆಂಬುದರ ಬಗೆ ಅರಿವು ಮೂಡಿಸಬೇಕೆನಿಸಿತು. ಅದಕ್ಕಾಗಿ ಅವನು, ತನ್ನ ಮಗನನ್ನು ಕಾಡು ಜನಾಂಗದವರು ವಾಸವಾಗಿದ್ದ ದೂರದ ಒಂದು ಕಾಡು ಪ್ರದೇಶಕ್ಕೆ, ಕರೆದುಕೊಂಡು ಹೋದ. ಶ್ರೀಮಂತ, 'ಕಾಡು ಜನಾಂಗದ ಹಿರಿಯನ ಬಳಿ ಬಂದು, ನನ್ನ ಮಗನನ್ನು ನಿಮ್ಮ ಜೊತೆಗೆ ಒಂದೆರಡು ದಿನದ ಮಟ್ಟಿಗೆ ಇರಿಸಿಕೊಳ್ಳಲು ಸಾಧ್ಯವೇ? ಅವನಿಗೆ ಪ್ರಪಂಚ ಹೇಗಿದೆ ಎಂಬುದು ಗೊತ್ತಾಗಲಿ ಎಂಬುದು ನನ್ನ ಉದ್ದೇಶ, ಅವನನ್ನು ನಿಮ್ಮ ಅತಿಥಿ ಎಂದು ಭಾವಿಸದೇ, ಸಹಜವಾಗಿ ನಿಮ್ಮ ಹುಡುಗರಲ್ಲೊಬ್ಬನಂತೆ ಇಟ್ಟುಕೊಳ್ಳಿ' ಎಂದು ವಿನಂತಿಸಿದ. ಅವನು ಬಾಲಕನನ್ನು ತನ್ನ ಗುಡಿಸಲಿನಲ್ಲಿ ಇಟ್ಟುಕೊಳ್ಳಲು ಒಪ್ಪಿಕೊಂಡ.

ಒಂದು ವಾರದ ನಂತರ ಶ್ರೀಮಂತ ತನ್ನ ಮಗನನ್ನು ವಾಪಸ್ಸು ತನ್ನ ಮನೆಗೆ ಕರೆದುಕೊಂಡು ಹೊರಟ. ದಾರಿಯಲ್ಲಿ, ಮಗನನ್ನು 'ಅಲ್ಲಿ ನೀನು ಹೇಗಿದ್ದಿ? ನಿನಗೇನೆನಿಸಿತು? ಒಂದು ವಾರ ಕಳೆಯಲು ನಿನಗೆ ಕಷ್ಟವೆನಿಸಿರಬೇಕಲ್ಲವೇ? ಕಷ್ಟ ಗೊತ್ತಾಗಲಿ ಎಂದೇ ನಾನು ನಿನ್ನನ್ನು ಅಲ್ಲಿ ಬಿಟ್ಟು ಬಂದದ್ದು' ಎಂದು ಹೇಳಿದ. ಆಗ ಮಗ, 'ಅಪ್ಪಾ ನನಗಿದೊಂದು ಮರೆಯಲಾರದ ಒಳ್ಳೆಯ ಅನುಭವ. ನನಗಿನ್ನೂ ಸ್ವಲ್ಪ ದಿನ ಅಲ್ಲೇ ಇರಬೇಕೆಂಬ ಆಸೆ ಇತ್ತು. ನಾವೆಲ್ಲ ಎಷ್ಟು ಬಡವರೆಂದು ನನಗೆ ಅರ್ಥವಾಯಿತು' ಎಂದ .

'ಏನಂದಿ? ನಾವು ಬಡವರೇ? ಅದೂ ಹೇಗೆ' ಎಂದು ಶ್ರೀಮಂತ ಆಶ್ಚರ್ಯದಿಂದ ಕೇಳಿದ. 'ಹೌದಪ್ಪ, ನಮ್ಮ ಮನೆಯ ಸುತ್ತಲೂ ಒಂದು ಗೋಡೆ ಇದೆ, ಆದರೆ ಅಲ್ಲಿ ಗೋಡೆಯೇ ಇಲ್ಲ. ಎಲ್ಲಾ ಜಾಗವೂ ಅವರದ್ದೇ! ನಮ್ಮ ಮನೆಯಲ್ಲಿ ಕಾರಂಜಿಯ ನೀರು ಮುಂದಿನ ಗೋಡೆಯ ತನಕ ಮಾತ್ರ ಹೋಗುತ್ತದೆ, ಆದರೆ ಇಲ್ಲಿಯ ಝರಿಗೆ ಕೊನೆಯೆಂಬುದೇ ಇಲ್ಲ. ಯಾವಾಗಲೂ ಸ್ವಚ್ಛ ಶುದ್ಧವಾದ ನೀರು ಹರಿಯುತ್ತಲೇ ಇರುತ್ತದೆ. ನಮ್ಮ ಮನೆಯಲ್ಲಿ ಸಾಕಿದ ನಾಲ್ಕು ನಾಯಿಗಳಿವೆ. ಆದರೆ ಇಲ್ಲಿ ಎಷ್ಟೊಂದು ನಾಯಿಗಳಿವೆ, ಅವುಗಳಿಗೆ ಸರಪಳಿಯ ಬಂಧನಗಳಿಲ್ಲ, ಅವು ಎಲ್ಲಾ ಕಡೆಗಳಲ್ಲಿ ಆರಾಮವಾಗಿ ಸ್ವೇಚ್ಛೆಯಿಂದ ಓಡಾಡಿಕೊಂಡಿರುತ್ತವೆ. ಮತ್ತೆ ನವಿಲುಗಳು ಜಿಂಕೆಗಳು ಅವು ಕೂಡಾ ಎಲ್ಲೆಂದರಲ್ಲಿ ಸ್ವಚ್ಛಂದವಾಗಿ ಓಡಾಡುತ್ತಿರುತ್ತವೆ. ನಮ್ಮ ತೋಟದಲ್ಲಿ, ಅಲ್ಲಲ್ಲಿ ದೀಪಗಳಿವೆ, ಆದರೆ ಈ ಕಾಡಿನಲ್ಲಿ ಕೋಟ್ಯಾಂತರ ಮಿನುಗುತಾರೆಗಳು ಎಲ್ಲೆಡೆಗೂ ಇವೆ. ನಮ್ಮ ಮನೆಯಲ್ಲಿ ಎಲ್ಲವುದಕ್ಕೂ ಒಂದು ಮಿತಿ ಎನ್ನುವುದು ಇದೆ, ಆದರೆ ಇಲ್ಲಿ ಯಾವುದೇ ಮಿತಿಗಳಿಲ್ಲ ಎಲ್ಲರೂ ಎಲ್ಲಿ ಬೇಕಾದರೂ ಸ್ವತಂತ್ರವಾಗಿ ಓಡಾಡಬಹುದು.

ಮನಸ್ಸು ಸದಾ ಹಗುರವಾಗಿರುತ್ತದೆ. ಆದ್ದರಿಂದ ನಿಜವಾಗಿಯೂ ಅವರೇ ನಮಗಿಂತ ಹೆಚ್ಚು ಸುಖಿಗಳು ಶ್ರೀಮಂತರು' ಎಂದು ಕಾಡಿನ ವೈಭವವನ್ನು ಬಣ್ಣಿಸಿದ ಮಗ. ಆಗ ಅವನ ತಂದೆಗನ್ನಿಸಿತು, ಮಗನಿಗೆ ಬೇರೆಯವರ ಬಡತನವನ್ನು ತೋರಿಸಿ ತಾನೆಷ್ಟು ಶ್ರೀಮಂತನೆಂದು ಸಾಬೀತುಪಡಿಸಲು ಹೋಗಿ, ಮಗನ ಮುಂದೆ ತಾನೇ ಬಡವನಾಗಿ ಬಿಟ್ಟೆನಲ್ಲ. ಅವನಿಗೆ ಕಾಣಿಸಿದ ಹೃದಯ ಶ್ರೀಮಂತಿಕೆ, ತನಗೆ ಕಾಣಲಿಲ್ಲವೆಂದು ತನ್ನ ಬಗೆಗೆ ಅವನಿಗೆ ನಾಚಿಕೆ ಆಯಿತು.

ಒಮ್ಮೆ ಯೋಚಿಸಿ ನೋಡಿ ಎಲ್ಲವನ್ನೂ ಕೇವಲ ಹಣದ ಶ್ರೀಮಂತಿಕೆಯಿಂದಲೇ ಅಳೆಯುವುದಲ್ಲ. ಜೊತೆಗೆ ಮನೋ ಶ್ರೀಮಂತಿಕೆಯೂ ಇರಬೇಕು.

## ಪ ದ ಬಂ ಧ



**ಎಡದಿಂದ ಬಲಕ್ಕೆ:**

1. ಆದಾಯ ಮತ್ತು ಖರ್ಚು ಒಟ್ಟಾಗಿ ಬಂದಿದೆ (4)
3. ಹಬ್ಬ, ಉತ್ಸವಗಳಿಗೆ ಮತ್ತೊಂದು ಹೆಸರು (2)
4. ದಿನನಿತ್ಯ ಬಂದೇ ಬರುವ ಸೂರ್ಯ (4)
5. ಜಗಳಕ್ಕೆ ಮತ್ತೊಂದು ಹೆಸರು (3)
7. ಸುಂಕ ಅಥವಾ ಫೀಸಿಗೆ ಹೀಗೆನ್ನುವರು (2)
8. ವಿವರಣೆಗೆ ಮತ್ತೊಂದು ಹೆಸರು (3)
10. ಅಪರೂಪ ಅಥವಾ ದುರ್ಲಭ (3)
12. ಹೊರದೇಶದಿಂದ ತರಿಸಿಕೊಂಡ ವಸ್ತು (3)
13. ಹಳೆಯ ಕಥೆಯನ್ನು ಹೀಗೆನ್ನಬಹುದು (3)
14. ಸೂರ್ಯನಿಗೊಂದು ಪರ್ಯಾಯ ಪದ (2)
16. ಅಜ್ಞಾನ ಅಥವಾ ಕತ್ತಲೆ (3)
18. ಭಕ್ತಿಯಿಂದ ಬೇಡಿಕೊಂಡ ದೇವರು (4)
19. ದಿನದ ಎಂಟನೆಯ ಒಂದು ಭಾಗಷ್ಟು ಕಾಲ (2)
20. ಇದೊಂದು ಜಾತಿಯ ಪಕ್ಷಿ (4)

**ಮೇಲಿನಿಂದಕೆಳಕ್ಕೆ:**

1. ಮನದಲ್ಲೇನೋ ಹೆದರಿಕೆ (3)
2. ದವಸ, ಧಾನ್ಯ (3)
3. ಜಮದಗ್ನಿ ಋಷಿಯ ಮಗ (5)
6. ಅವಳ ಬಳಿಯಿರುವುದು ನವರತ್ನಗಳಲ್ಲಿ ಒಂದು (3)
9. ಹಿಂದಿನ ಸ್ಮರಣೆ (3)
11. ಆನಂದದ ಅನುಭವವನ್ನು ಹೀಗೆ ಹೇಳಬಹುದೇ (5)
12. ಮತ್ತೊಂದು ಆಜ್ಞೆ (3)
15. ನಮಸ್ಕಾರವು ಇಲ್ಲಿ ಅಸ್ತವ್ಯಸ್ತವಾಗಿ ಬಂದಿದೆ (3)
17. ಅಗಸನಿಗೊಂದು ಇನ್ನೊಂದು ಹೆಸರು (3)

**ನಿನ್ನೆಯ ಉತ್ತರ**

**ಎಡದಿಂದ ಬಲಕ್ಕೆ:** 1. ಗೋವರ್ಧನ 4. ಗವಿ 6. ಅರಸ 8. ಕರಾರು 10. ಪರಕೀಯ 11. ನಾಯಕ 13. ತವರ 15. ರಹದಾರಿ 17. ವನಜ 19. ಕಪೋತ 21. ವರ 23. ವಿನಿಯೋಗ

**ಮೇಲಿನಿಂದ ಕೆಳಕ್ಕೆ:** 1. ಗೋಲಕ 2. ನಗ 3. ಹರ 5. ವಿಸ್ತಾರ 6. ಅನಿಯತ 7. ಸರದಾರ 9. ರಾಧೇಯ 11. ನಾಗರಿಕ 12. ಕರಜಾತ 14. ವತನ 16. ದಾನವ 18. ಜಟ್ಟಿಗ 20. ಪೋರಿ 22. ರವಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

## ದಿನಕ್ಕೊಂದು ಮಾಹಿತಿ

### ಟಾಯ್ಲೆಟ್ ಪೇಪರ್ ಅಲ್ಲ!

ಈಗಿನ ಕಾಲದಲ್ಲಿ ಟಾಯ್ಲೆಟ್ ಕೆಲಸ ಮುಗಿಸಿದ ಮೇಲೆ ಟಾಯ್ಲೆಟ್ ಪೇಪರ್ ಬಳಸುವುದು ಸಾಮಾನ್ಯ. ಭಾರತದಲ್ಲದ ಈ ಸಂಸ್ಕೃತಿ ಅದು ಪಾಶ್ಚಾತ್ಯರಿಂದ ಬಂದಿದ್ದು ಎನ್ನುವುದರಲ್ಲಿ ಬೇರೆ ಮಾತಿಲ್ಲ. ಭಾರತದಲ್ಲಿ ಹಲವು ವರ್ಷಗಳಿಂದಲೂ ನೀರನ್ನು ಉಪಯೋಗಿಸುತ್ತಿರುವುದಂತೂ ಹೊಸವಿಷ ಯವೇನಲ್ಲ. ಇಂದಿನ ಕಾಲದಲ್ಲಿ ಜೆಟ್ ಸ್ಪ್ರೇ ಬಳಸಿದರೆ, ಭಾರತಿ ೀಯ ಕಮೋಡ್‌ಗಳಲ್ಲಿ ತಂಬಿಗೆ ನೀರನ್ನು ಬಳಸುತ್ತಾರೆ. ಅದಕ್ಕೂ ಮೊದಲು ನೀರನ್ನು ಹಿಡಿದುಕೊಂಡು ಹೊಲದ ಕಡೆಗೋ, ಊರಿನಾಚೆ ಎಲ್ಲೋ ದೂರ ಹೋಗಿ ಕೆಲಸವನ್ನು ಮುಗಿಸುತ್ತಿದ್ದರು. ಆದರೆ, ಅಮೆರಿಕದವರು ಟಾಯ್ಲೆಟ್ ಪೇಪರ್ ಅನ್ನು ಬಳಸುತ್ತಿದ್ದಾರೆ. ಆದರೆ, ಟಾಯ್ಲೆಟ್ ಪೇಪರ್ ಕಂಡುಹಿಡಿಯುವ ಮುಂದೆ, ಅಮೆರಿಕದ ಜನರು ಏನು ಬಳಸುತ್ತಿದ್ದರು, ಗೊತ್ತೇ? ಜೋಳದ ಹೊಟ್ಟುಗಳನ್ನು ಬಳಸುತ್ತಿದ್ದರು. ಆದರೆ, ಅದರಿಂದ ಅವರಿಗೆ ಎಷ್ಟು ಸಂಕಟವಾಗುತ್ತಿತ್ತೋ ಅದು ಅವರಿಗೇ ಗೊತ್ತು.

## ಪುಸ್ತಕ ಲೋಕ

### 'ಕೊಟ್ಟು ಹುಟ್ಟದವರ ಬದುಕು'




ಈ ಕೃತಿಯು ಜಂಗಮಕೋಟೆ ಪುರುಷೋತ್ತಮ ಅವರ ಕಥಾಸಂಕಲನವಾಗಿದೆ. ಮೇಲ್ವರ್ಗದ ಜನರಲ್ಲಿ ಆಳವಾಗಿ ಬೇರೂರಿರುವ ಅನೇಕ ಸಂಗತಿಗಳನ್ನು ಪುರುಷೋತ್ತಮ ಅವರು ತುಂಬಾ ಸೂಕ್ಷ್ಮವಾಗಿ ಅಷ್ಟೇ ಪರಿಣಾಮಕಾರಿಯಾಗಿ ಹೊರತೆಗೆದಿದ್ದಾರೆ. ಅವರುಗಳ ಜೀವನ ಕ್ರಮ, ವ್ಯವಹಾರ ಚತುರತೆ, ಸ್ನೇಹದ ಸೋಗು, ಕಾಲೆಳೆಯುವ ಚಾಣತನ ಇವುಗಳನ್ನು ತಮ್ಮ ಸರಳವಾದ ಭಾಷೆಯ ಮೂಲಕ ಕಣ್ಣಮುಂದೆ ತಂದು ನಿಲ್ಲಿಸುತ್ತಾರೆ. ಓದುಗನಿಗೂ ಕತೆಯ ಪಾತ್ರಗಳಿಗೂ ನೇರ ಸಂಪರ್ಕವನ್ನು ಕಲ್ಪಿಸಿಕೊಡುವ ಈ ಕತೆ, ವ್ಯಂಗ್ಯದಲ್ಲಿ ಮುಕ್ತಾಯವಾಗುತ್ತದೆ. ಭಾಷೆಯಲ್ಲಿ ಕ್ಲಿಷ್ಟತೆಯಾಗಲಿ, ಆಡಂಬರವಾಗಲಿ ಇರದೆ ಸರಳವಾಗಿದೆ. ಸರಾಗವಾಗಿ ಹರಿದು ತನ್ನ ಪಾತ್ರವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುವ ನದಿಯ ಗಂಭೀರತೆ, ಆಳ, ಇಲ್ಲಿನ ಕತೆಗಳಿಗೆ ಇರುವುದರಿಂದಲೇ ಅವು ಓದುಗನನ್ನು ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುತ್ತವೆ.

## ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ವಿಜ್ಞಾನಿಗಳಿಂದ ಭಯೋತ್ಪಾದಕ ಪ್ರಾಣಿ ಎಂದು ಹೆಸರಿಸಲಾದ ಉತ್ತರ ಗ್ರೀನ್ ಲ್ಯಾಂಡ್‌ನಲ್ಲಿ ಕಂಡುಬರುವ ಹೊಸದಾಗಿ ಪತ್ತೆಯಾದ ಮಾಂಸಾಹಾರಿ ವರ್ಮ್‌ನ ಹೆಸರೇನು?

- ಎ. ಪೋಲಾರ್ಟೆ ರೋರಿಸ್
- ಬಿ. ಗ್ರೀನ್ ಲ್ಯಾಂಡಿಕಸ್ ಪರಭಕ್ಷಕಗಳು
- ಸಿ. ಟಿಮೊರೆಬೆಸ್ಟಿಯಾ ಕೊಪ್ರಿ
- ಡಿ. ಯಾವುದೂ ಅಲ್ಲ.

ಉತ್ತರ: ಸಿ. ಟಿಮೊರೆಬೆಸ್ಟಿಯಾ ಕೊಪ್ರಿ

### ಮಾಹಿತಿ

ವಿಜ್ಞಾನಿಗಳು ಇತ್ತೀಚೆಗೆ ಉತ್ತರ ಗ್ರೀನ್‌ಲ್ಯಾಂಡ್‌ನಲ್ಲಿ ಹೊಸ ಜಾತಿಯ ಮಾಂಸಾಹಾರಿ ಹುಳುಗಳ ಪಳೆಯುಳಿಕೆಗಳನ್ನು ಪತ್ತೆಹಚ್ಚುವ ಮೂಲಕ ಆವಿಷ್ಕಾರವನ್ನು ಮಾಡಿದ್ದಾರೆ, ಇದನ್ನು ಟೈಮೊರೆಬೆಸ್ಟಿಯಾ ಕೊಪ್ರಿ ಅಥವಾ 'ಭಯೋತ್ಪಾದಕ ಪ್ರಾಣಿ' ಎಂದು ಹೆಸರಿಸಲಾಗಿದೆ. ಈ ಜಾತಿಯು ಆರಂಭಿಕ ಕ್ಯಾಂಬ್ರಿಯನ್ ಅವಧಿಯಲ್ಲಿ ನೀರಿನ ಕಾಲಮ್ ಅನ್ನು ವಸಾಹತುವನ್ನಾಗಿ ಮಾಡಿದ ಆರಂಭಿಕ ಮಾಂಸಾಹಾರಿ ಪ್ರಾಣಿಗಳಲ್ಲಿ ಒಂದಾಗಿವೆ. ಈ ಜೀವಿಯು ಸರಿಸುಮಾರು 541 ಮಿಲಿಯನ್ ನಿಂದ 485.4 ಮಿಲಿಯನ್ ವರ್ಷಗಳ ಹಿಂದೆ ವಾಸವಿತ್ತು. ಟಿಮೊರೆಬೆಸ್ಟಿಯಾ ಕೊಪ್ರಿಯ ಪಳೆಯುಳಿಕೆಗಳು ಉತ್ತರ ಗ್ರೀನ್‌ಲ್ಯಾಂಡ್‌ನ ಆರಂಭಿಕ ಕ್ಯಾಂಬ್ರಿಯನ್ ಸಿರಿಯಸ್ ಪ್ಯಾಸೆಟ್ ಪಳೆಯುಳಿಕೆ ಪ್ರದೇಶದಲ್ಲಿ ಕಂಡುಬಂದಿವೆ. ಈ ಪುರಾತನ ಜೀವಿಗಳು ತಮ್ಮ ಕಾಲದ ದೈತ್ಯರಾಗಿದ್ದರು ಮತ್ತು ಆಹಾರ ಸರಪಳಿಯ ಮೇಲ್ಭಾಗದಲ್ಲಿ ಮಹತ್ವದ ಸ್ಥಾನವನ್ನು ಆಕ್ರಮಿಸಿಕೊಂಡಿದ್ದಾರೆ.

# ಕನ್ನಡ ಕಲಿಸುವ ಆಟೋ ಕನ್ನಡಿಗ

● ಪುರುಷೋತ್ತಮ ವೆಂಕಿ

ಕನ್ನಡ ಮಾತನಾಡಲು ಬರುವುದಿಲ್ಲ ಎಂಬ ಕಾರಣಕ್ಕೆ ಸ್ಥಳೀಯ ಆಟೋ ಚಾಲಕರು ಮತ್ತು ಕನ್ನಡೇತರರ ನಡುವೆ ನಡೆದ ಘರ್ಷಣೆಯಿಂದ ಅಸಮಾಧಾನಗೊಂಡಿರುವ ಬೆಂಗಳೂರಿನ ಆಟೋ ಚಾಲಕರೊಬ್ಬರು ಸ್ಥಳೀಯ ಭಾಷೆಯಲ್ಲಿ ಮೂಲಭೂತ ಸಂವಹನಕ್ಕೆ ಸಹಾಯ ಮಾಡಲು ಮುಂದಾಗಿದ್ದಾರೆ.

ಲರ್ನ್ ಕನ್ನಡ ವಿತ್ ಆಟೋ ಕನ್ನಡಿಗ ಎಂಬ ವಿಶಿಷ್ಟ ಕಾನ್ಸೆಪ್ಟ್ ಮೂಲಕ ಪರ ಭಾಷಿಗರಿಗೆ ಕೆಲವೊಂದು ಬೇಸಿಕ್ ಕನ್ನಡ ಪದಗಳನ್ನು ಕಲಿಸುವಂತಹ ಪ್ರಯತ್ನಕ್ಕೆ ಕೈ ಹಾಕಿದ್ದಾರೆ.

ಈ ಕುರಿತ ಪೋಸ್ಟ್ ಒಂದು ಇದೀಗ ಸಖತ್ ವೈರಲ್ ಆಗುತ್ತಿದೆ. 'ಆಟೋ ಕನ್ನಡಿಗ' ಪ್ರೊಫೈಲ್ ಮೂಲಕ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಜನಪ್ರಿಯವಾಗಿರುವ ಅಜ್ಜು ಸುಲ್ತಾನ್ ಅವರ ಬಗ್ಗೆ ಇಲ್ಲಿದೆ ನೋಡಿ ಮಾಹಿತಿ. ಎಲ್ಲರೂ ಕನ್ನಡ ಮಾತನಾಡಿದರೆ ಸಂವಹನ ಚೆನ್ನಾಗಿರುತ್ತದೆ ಸ್ಪಷ್ಟವಾಗಿ ಅರ್ಥವಾಗುತ್ತೆ ಸೌಹಾರ್ದತೆ ಬೆಳೆಯುತ್ತದೆ ಇವೆಲ್ಲ ಆಗುವುದು ಪರಸ್ಪರ ಒಂದೇ ಭಾಷೆಯಲ್ಲಿ ಅರ್ಥಾತ್ ಕನ್ನಡದಲ್ಲಿ ಮಾತನಾಡಿದಾಗ ಮಾತ್ರ. ಬೆಂಗಳೂರಿಗೆ ಬಂದವರೆಲ್ಲ ಕನ್ನಡದಲ್ಲಿ ಮಾತನಾಡಲಿ ಎಂಬ ಮಹದಾಸೆಯಿಂದ ಆಟೋ ಚಾಲಕ ಅಜ್ಜು ಸುಲ್ತಾನ್ ಅವರು ವಿಶಿಷ್ಟ ಬಗೆಯ ಲರ್ನ್ ಕನ್ನಡ ವಿತ್ ಆಟೋ ಕನ್ನಡಿಗ ಎಂಬ ಫಲಕವನ್ನು ಸಿದ್ಧಪಡಿಸಿದ್ದು ತಮ್ಮ ಆಟೋರಿಕ್ಷಾದ ಒಳಭಾಗದಲ್ಲಿ ಅಳವಡಿಸಿದ್ದಾರೆ. ಇದರಿಂದ ಹೊರ ರಾಜ್ಯ - ವಿದೇಶಗಳಿಂದ ಬರುವ ಕನ್ನಡೇತರರು ಕಡೇ ಪಕ್ಷ ಆಟೋ ಚಾಲಕರ ಜೊತೆಗಾದರೂ ಕನ್ನಡದಲ್ಲಿ ವ್ಯವಹರಿಸಲು ಅವಕಾಶ ಸಿಗಬಹುದೆಂಬ ಆಶಯ ಅಜ್ಜು ಅವರದ್ದು. ಈ ಫಲಕದ ವಿಷಯವನ್ನು ಅಜ್ಜು ತಮ್ಮ ಇತರೆ ಗೆಳೆಯರಿಗೆ ತಿಳಿಸಿದಾಗ ಇದಕ್ಕೆ ಎಲ್ಲರೂ ಕೈ ಜೋಡಿಸಿದ್ದಾರೆ. ಹಾಗಾಗಿ ಬೆಂಗಳೂರಿನ ಸುಮಾರು 500 ಆಟೋಗಳ ಒಳಗೆ ಲರ್ನ್ ಕನ್ನಡ ವಿತ್ ಆಟೋ ಕನ್ನಡಿಗ ಎಂಬ ಕಾರ್ಡ್ ಕಂಡುಬರುತ್ತಿದೆ. ಪರಭಾಷಿಕರಿಗೆ ಕನ್ನಡ ಕಲಿಸುವ ಪ್ರಯತ್ನ ಎಂಬ ಮೊದಲ ವಾಕ್ಯ ಫಲಕಲ್ಲಿದೆ.

**ಫಲಕದಲ್ಲಿ ಏನೆಲ್ಲ ಇದೆ:** ಇದರಲ್ಲಿ ಒಬ್ಬ ಪ್ರಯಾಣಿಕರು ಆಟೋ ಪ್ರಯಾಣದ ವೇಳೆ ಏನೆಲ್ಲ ಮಾತನಾಡುತ್ತಾರೆ ಎಂಬುದನ್ನು ಪಟ್ಟಿ ಮಾಡಿ, ಅದನ್ನು ಅವರಿಗೆ ಅರ್ಥವಾಗುವಂತೆ ಕನ್ನಡದ ವಾಕ್ಯಗಳನ್ನು ಇಂಗ್ಲೀಷಿನಲ್ಲೇ ಸುಲಭವಾಗಿ ಅರ್ಥವಾಗುವಂತೆ ಮುದ್ರಿಸಿದ್ದಾರೆ. ಉದಾಹರಣೆಗೆ ಪ್ರಯಾಣಿಕರು ಆಟೋ ಹತ್ತುವಾಗ, ಚಾಲಕರನ್ನು ಮಾತನಾಡಿಸುವುದು, ಚಿಲ್ಲರೆ ಕೊಡುವುದು, ಹಣ ಪಾವತಿ, ಯಾವ ಸ್ಥಳ ತಲುಪಬೇಕು? ಎಂಬುದನ್ನು ಕನ್ನಡದಲ್ಲಿ ಹೇಗೆ ಕೇಳಬಹುದು ಎಂದು ಅದನ್ನು ಇಂಗ್ಲೀಷ್‌ಗೆ ಟೈಪಿಂಗ್ ಭಾಷೆಯಂತೆ ಸಿದ್ಧಪಡಿಸಿದ್ದಾರೆ. ಈಗ ನಾವು ಹೇಗಿದ್ದೀಯ ಅನ್ನೋದನ್ನ hegiddiya ಎಂದು ಇಂಗ್ಲೀಷ್‌ನಲ್ಲಿ ಚಾಟ್ ಮಾಡುವಂತೆಯೇ ಸುಲಭವಾಗಿ ಪಟ್ಟಿ ಮಾಡಿ ಅಂಟಿಸಿದ್ದಾರೆ. ಉದಾಹರಣೆಗೆ 'ನಮಸ್ಕಾರ ಸರ್, ನಾನು ಕನ್ನಡ ಕಲೀತಾ ಇದ್ದೀನಿ, ಸ್ವಲ್ಪ ಬೇಗ ಹೋಗಿ, ಸ್ವಲ್ಪ ನಿಧಾನ ವಾಗಿ ಹೋಗಿ, ಸ್ವಲ್ಪ ಮುಂದೆ ಹೋಗಿ ಬಲಕ್ಕೆ ತಗೊಳ್ಳಿ...ಇಲ್ಲೇ ನಿಲ್ಸಿ, ಎಷ್ಟು ಆಯ್ತು?, ಯುಪಿಐ ಇದ್ಯಾ ಇಲ್ಲಾ ಕ್ಯಾಶಾ? ನಿಮ್ ಹತ್ರ ನೂರು ರುಪಾಯಿಗೆ ಚಿಲ್ಲರೆ ಇದ್ಯಾ?' ಎಂಬುದನ್ನು ಇಂಗ್ಲೀಷ್‌ನಲ್ಲೇ ಟೈಪ್ ಮಾಡಿ, ಇಂಗ್ಲಿಷ್ ವಾಕ್ಯಗಳನ್ನು ಕನ್ನಡದಲ್ಲಿ ಉಚ್ಚರಿಸುವುದು ಹೇಗೆ? ಎನ್ನುವುದನ್ನು ಹೇಳಿಕೊಡಲು ಮುಂದಾಗಿ ದ್ದಾರೆ. ಇನ್ನು ಆಟೋ ಹತ್ತುವ ಮುನ್ನ ಆನ್ಲೈನ್ ಮೂಲಕ ಆಟೋ ಬುಕ್ ಮಾಡುವಾಗ ಮಾತನಾಡುವ 'ಸರ್...ಎಲ್ಲಿದ್ದೀರ?, ಆ ಏರಿಯಾಗೆ ಬರ್ತೀರಾ? ನಮಗೆ ತುಂಬಾ ಅರ್ಜೆಂಟ್ ಇದೆ, ದಯವಿಟ್ಟು ಬೇಗ ಬರ್ತೀರಾ?, ಬುಕಿಂಗ್ ಕ್ಯಾನ್ಸಲ್ ಮಾಡಬೇಡಿ' ಎನ್ನುವ ವಾಕ್ಯಗಳನ್ನು ಕೂಡ ಈ ಆಟೋ ಕನ್ನಡಿಗ ಅನ್ಯಭಾಷಿಕರಿಗೆ ಪಾಠ ಹೇಳಿಕೊಡಲು ಈ ಹೊಸ ಉಪಾಯ ಕಂಡುಕೊಂಡಿದ್ದಾರೆ.

**ಸಾಮಾಜಿಕ ಜಾಲತಾಣಗಳ ಸಹಾಯ:** ಇದಕ್ಕಾಗಿ ಆಟೋ ಕನ್ನಡಿಗ ಹೆಸರಿನಲ್ಲೇ ಫೇಸ್‌ಬುಕ್, ಇನ್ಸ್ಟಾಗ್ರಾಂ ಹಾಗೂ ಯುಟ್ಯೂಬ್ ಪೇಜ್‌ಗಳನ್ನು ಕೂಡ ಕ್ರಿಯೇಟ್ ಮಾಡಿದ್ದು, ಇದರಲ್ಲಿಯೂ ಕನ್ನಡ ಬಾರದವರು ಸುಲಭವಾಗಿ ಭಾಷೆ ಕಲಿಯಬಹುದು ಎನ್ನಲಾಗಿದೆ. ಇದಲ್ಲದೆ ಒಂದು ಸ್ಕ್ಯಾನರ್ ಕೂಡ ಈ ಪೋಸ್ಟರ್‌ನಲ್ಲಿದ್ದು, ಪ್ರಯಾಣಿಕರು ಅದನ್ನು ಸ್ಕ್ಯಾನ್ ಮಾಡಿದರೆ ಸಾಕು, ಅಲ್ಲಿಯೂ ಕನ್ನಡ ವಾಕ್ಯಗಳ ಉಚ್ಚಾರಣೆ ಕಳಿತುಕೊಳ್ಳಬಹುದು ಎಂದು ಆಟೋ ಚಾಲಕ ತಿಳಿಸಿದ್ದಾರೆ. ಇದು ಪರಭಾಷಿಕರಿಗೆ ಕನ್ನಡ ಕಲಿಸುವ ಪ್ರಯತ್ನ ಎಂದು ಹೊಸ ಹೆಜ್ಜೆ.

# ಮುತ್ತಿಗಿಂತ ಹೊತ್ತು ಉತ್ತಮ

● ರಂಗನಾಥ್ ಗುಡಿಮನಿ

ಜಗತ್ತಿನಲ್ಲಿ ಸರ್ವರಿಗೂ ಒಂದೇ ಸಮನಾಗಿ ಸಿಗುವುದು ಸಮಯ ಮಾತ್ರ. ಅದು ಬಡವನಿಗೂ ಅಷ್ಟೇ, ಬಲ್ಲಿದನಿಗೂ ಅಷ್ಟೇ. ನಮ್ಮ ಭವಿಷ್ಯ ನಮ್ಮ ಕೈಯಲ್ಲಿಲ್ಲ. ಆದರೆ ಸಮಯವಿದೆ, ಸಿಕ್ಕ ಸಮಯವನ್ನು ಸರಿಯಾಗಿ ಬಳಸಿಕೊಂಡಾಗಲೇ ನಮ್ಮ ಭವ್ಯ ಭವಿಷ್ಯ ಉಜ್ವಲವಾಗುವುದು. ಸಮಯ ಯಾವತ್ತೂ ಯಾರಿಗೂ ಕಾಯುವುದಿಲ್ಲ. ಸಮಯಕ್ಕಾಗಿ ನಾವೇ ಕಾದು ಕುಳಿತು ಅದನ್ನು ಸೂಕ್ತ ರೀತಿಯಲ್ಲಿ ವಿನಿಯೋಗ ಮಾಡಿಕೊಳ್ಳಬೇಕು. ಸಮಯವೆಂಬುದು ತುಂಬಾ ಅಮೂಲ್ಯವಾದುದು. ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಕಳೆದು ಹೋಗುತ್ತದೆ. ಯಾವ ವ್ಯಕ್ತಿಯು ಸಮಯವನ್ನು ಅಪಾರವಾಗಿ ಗೌರವಿಸಿ, ಕಾರ್ಯ ನಿರತನಾಗುವನೋ ಅವನನ್ನು ಒಂದಲ್ಲ ಒಂದು ದಿನ ಸಮಯವೇ ಗುರುತಿಸಿ ಗೌರವಿಸುತ್ತದೆ. ನಮಗೆ ಕಾಲ ಕಳೆಯುವುದು ಹೇಗೆ ಎಂಬ ಚಿಂತೆಗಿಂತ, ಕಾಲ ಕಳೆದು ಹೋಗುತ್ತದಲ್ಲ ಎನ್ನುವುದೇ ಚಿಂತೆಯಾಗಬೇಕು. ನಮ್ಮ ಬದುಕಿನ ಅತಿ ದೊಡ್ಡ ಗುರು ಎಂದರೆ ಸಮಯ.ಏಕೆಂದರೆ ಸಮಯ ನಮಗೆ ಎಲ್ಲವನ್ನೂ ಕಲಿಸುತ್ತದೆ.ನಮ್ಮೆಲ್ಲ ಪ್ರಮಾದಗಳನ್ನು ಚಾಚೂತಪ್ಪದೇ ಹೇಳಿಕೊಟ್ಟು, ಗಾಢ ನಿದ್ದೆಯಲ್ಲಿನ ನಮ್ಮನ್ನು ಬಡಿದೆಬ್ಬಿಸಿ ಎಚ್ಚರಿಸುತ್ತದೆ.

ಸಮಯವು ಹಣಕ್ಕಿಂತ ಹೆಚ್ಚಿನ ಮೌಲ್ಯ ಹೊಂದಿದೆ. ಏಕೆಂದರೆ ಖರ್ಚು ಮಾಡಿದ ಹಣವನ್ನು ಪುನಃ ಅದರ ದುಪ್ಪಟ್ಟು ಗಳಿಸಬಹುದು. ಆದರೆ ಒಮ್ಮೆ ಕಳೆದು ಹೋದ ಸಮಯ ಮತ್ತೆಂದೂ ಮರಳಿ ಬಾರದು. ಅದಕ್ಕೆ ಅಲ್ಲವೇ ನಮ್ಮ ಜನಪದರು 'ಮುತ್ತಿಗಿಂತ ಹೊತ್ತು ಉತ್ತಮ'ವೆಂಬ ಮಾತನ್ನು ಹೇಳಿದ್ದು. ಪ್ರಪಂಚ ದಲ್ಲಿಯೇ ಹಣದಿಂದ ಕೊಳ್ಳಲಾಗದ ವಸ್ತುವೆಂದರೆ ಅದು ಸಮಯ. ಈ ಸಮಯವೆಂಬ ಹಣವನ್ನು ಉಪ ಯೋಗಿಸುವ, ದುಡಿಸುವ ಜಾಣ್ಮೆ ನಮ್ಮಲ್ಲಿರಬೇಕು. ಇಂತಹ ಅದ್ಭುತ ಸಮಯವೇ ನಮ್ಮನ್ನು ಅತ್ಯದ್ಭುತ ಸಾಧಕರನ್ನಾಗಿಸುತ್ತದೆ. ಸಮಯದ ಸದ್ಬಳಕೆ ಮಾಡಿಕೊಂಡು ನಮ್ಮ ಬಯಕೆ, ಗುರಿಗಳನ್ನು ಈಡೇರಿಸಿಕೊಳ್ಳ ಬೇಕು. ಪ್ರತಿ ವ್ಯಕ್ತಿಗೂ ಸಮಯ ಪಾಲನೆ, ಸಮಯ ಪ್ರಜ್ಞೆ ಎನ್ನುವುದು ತುಂಬಾ ಅವಶ್ಯಕ. ಈ ರೀತಿಯ ಸಣ್ಣ ಸಣ್ಣ ಸಂಗತಿಗಳೇ ನಮ್ಮನ್ನು ದೊಡ್ಡ ದೊಡ್ಡ ಸಾಧಕರನ್ನಾಗಿಸಿ, ಸಮಾಜದಲ್ಲಿ ಮಾದರಿ, ಆದರ್ಶಪ್ರಾಯ ವ್ಯಕ್ತಿಯಾಗಿಸುತ್ತದೆ.

## ಸಮಾಚಾರ ಸಣ್ಣದಲ್ಲ

### ಇಸ್ರೇಲ್‌ನ ರಕ್ಷಣಾ ಸಚಿವ ಗ್ಯಾಲಂಟ್ ವಜಾ

**ಟೆಲ್‌ಅವಿವ್:** ಗಾಜಾ ಯುದ್ಧ ಬಗ್ಗೆ ಸಾರ್ವಜನಿಕ ಭಿನ್ನಾಭಿಪ್ರಾಯ ಹಿನ್ನೆಲೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ರಕ್ಷಣಾ ಸಚಿವ ಯೋವ್ ಗ್ಯಾಲಂಟ್‌ರನ್ನು ಮಂಗಳವಾರ ವಜಾಗೊಳಿಸಿದ್ದಾರೆ. ಅವರ ಸ್ಥಾನಕ್ಕೆ ಉನ್ನತ ರಾಜತಾಂತ್ರಿಕ ಮಾಜಿ ಅಧಿಕಾರಿ ಇಸ್ರೇಲ್ ಕಾಟ್ಜ್‌ರನ್ನು ನೇಮಿಸಿದ್ದಾರೆ. ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳನ್ನು ನಿಭಾಯಿಸುವಲ್ಲಿ ನೆತನ್ಯಾಹು ಅವರ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

### ವಿಕಿಪೀಡಿಯಗೆ ಕೇಂದ್ರ ನೋಟಿಸ್

**ದೆಹಲಿ:** ಮಾಹಿತಿ ಜಾಲ ತಾಣ 'ವಿಕಿಪೀಡಿಯ'ಗೆ ಕೇಂದ್ರ ಸರಕಾರ ಮಂಗಳವಾರ ನೋಟಿಸ್ ನೀಡಿ, ಪಕ್ಷಪಾತದ ವರದಿ, ತಪ್ಪು ಮಾಹಿತಿ ಪ್ರಕಟವಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದೆ. ವಿಕಿಪೀಡಿಯದ ಸಂಪಾದಕೀಯ ವಿಭಾಗವನ್ನು ಸಣ್ಣ ಗುಂಪು ಹಿಡಿದಿಟ್ಟುಕೊಂಡು ತನ್ನಿಷ್ಟದಂತೆ ವರ್ತಿಸುತ್ತಿರುವಂತಿದೆ ಎಂದು ಆರೋಪಿಸಿದೆ. ವಿಕಿಪೀಡಿಯವನ್ನು ಮಾಹಿತಿ ಹಂಚಿಕೊಳ್ಳುವ 'ವೇದಿಕೆ'ಯಾಗಿ ಪರಿಗಣಿಸುವ ಬದಲು 'ಪ್ರಕಾಶಕ' ಎಂದೇಕೆ ಪರಿಗಣಿಸಬಾರದು? ಎಂಬ ಪ್ರಶ್ನೆಯನ್ನೂ ಕೇಂದ್ರ ಸರಕಾರ ನೋಟಿಸ್‌ನಲ್ಲಿ ಕೇಳಿದೆ.

### ಬಂಡಾಯ: 40 ಬಿಜೆಪಿ ನಾಯಕರ ಉಚ್ಚಾಟನೆ

**ಮುಂಬೈ:** ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಕ್ಷೇತ್ರದಲ್ಲೀಗ ಉಚ್ಚಾಟನೆ ಪರ್ವ ನಡೆದಿದೆ. 37 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಧಿಕೃತ ಅಭ್ಯರ್ಥಿ ವಿರುದ್ಧವಾಗಿ ಸ್ಪರ್ಧೆ ಮಾಡಿದ 40 ನಾಯಕರು ಮತ್ತು ಪದಾಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಿರುವ ಬಿಜೆಪಿ, 40 ಮಂದಿ ಯನ್ನೂ ಪಕ್ಷದಿಂದ ಉಚ್ಚಾಟಿಸಿ ಬುಧವಾರ ಕ್ರಮ ಕೈಗೊಂಡಿದೆ. ಶಿವಸೇನೆ(ಉದ್ಧವ್ ಬಣ) ಕೂಡಾ ಪಕ್ಷ ಮತ್ತು ಮಿತ್ರಪಕ್ಷಗಳ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಸ್ಪರ್ಧೆ ಮಾಡಿದ ಐವರು ನಾಯಕರ ವಿರುದ್ಧ ಉಚ್ಚಾಟನೆ ಕ್ರಮ ಜರುಗಿಸಿದೆ.

### ಬಾಹ್ಯಾಕಾಶದಿಂದಲೇ ಸುನೀತಾ ಮತದಾನ!

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ನಾಸಾ ಗಗನಯಾತ್ರಿ ಸುನೀತಾ ವಿಲಿಯಮ್ಸ್, ಬುಚ್ ವಿಲ್ಮೋರ್ ಮತ್ತಿಬ್ಬರು ಗಗನಯಾತ್ರಿಗಳು ಭೂಮಿಯ ಮೇಲ್ಮೈಯಿಂದ 400 ಕಿ.ಮೀ. ಎತ್ತರದ ಲ್ಲಿರುವ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ದಿಂದಲೇ ಮಂಗಳವಾರ ಮತ ಚಲಾಯಿಸಿದ್ದಾರೆ! ಬಾಹ್ಯಾಕಾಶದಿಂದ ಮತಚಲಾಯಿಸುತ್ತಿರುವುದು ಒಂದು ಅದ್ಭುತ ಅನುಭವ ಎಂದು ಸುನೀತಾ ಹೇಳಿದ್ದಾರೆ.

### 370 ವಿಧಿ ಮರು ಸ್ಥಾಪನೆ: ಕಾಶ್ಮೀರ ಸದನ ನಿರ್ಣಯ

**ಶ್ರೀನಗರ:** ವಿಧಿ 370 ಇದ್ದಾಗಿನಂತೆಯೇ ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ದೊರಕಿಸಿಕೊಡಬೇಕು ಎಂಬ ನಿರ್ಣಯವನ್ನು ಜಮ್ಮು-ಕಾಶ್ಮೀರ ವಿಧಾನಸಭೆ ಬುಧವಾರ ಅಂಗೀಕರಿಸಿದೆ. ಸದ್ಯ ನಡೆದಿರುವ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆಯ ಮೊದಲ ಅಧಿವೇಶನದಲ್ಲಿ ಉಪ ಮುಖ್ಯಮಂತ್ರಿ ಸುರೀಂದರ್ ಸಿಂಗ್ ಚೌಧರಿ ಅವರು 370ನೇ ವಿಧಿಯಡಿ ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಮರಳಿ ದೊರಕಿಸಿಕೊಡುವ ನಿರ್ಣಯವನ್ನು ಮಂಡಿಸಿದರು. ಆರೋಗ್ಯ-ಶಿಕ್ಷಣ ಸಚಿವೆ ಸಕೀನಾ ಇಟೂ ನಿರ್ಣಯವನ್ನು ಅನುಮೋದಿಸಿದರು. ಸದನದಲ್ಲಿ ನಿರ್ಣಯ ಮಂಡಿಸುತ್ತಿದ್ದಂತೆಯೇ ಬಿಜೆಪಿ ಶಾಸಕರು ಪ್ರತಿಭಟಿಸಿ, ಇಂದಿನ ಸದನದ ಕಲಾಪದಲ್ಲಿ ಈ ವಿಚಾರವನ್ನೇ ಸೇರಿಸಿಲ್ಲ. ಹಾಗಾಗಿ ನಿರ್ಣಯ ಮಂಡನೆ ಸರಿಯಲ್ಲ ಎಂದು ವಿರೋಧಿಸಿದರು. ಗದ್ದಲದ ನಡುವೆಯೇ ನಿರ್ಣಯ ಅಂಗೀಕರಿಸಲಾಯಿತು. 5 ವರ್ಷಗಳ ಹಿಂದೆಯೇ ಕೇಂದ್ರದ ಎನ್‌ಡಿಎ ಸರಕಾರ 370ನೇ ವಿಧಿ ರದ್ದುಪಡಿಸಿದೆ. ಅಲ್ಲದೇ, 2023ರ ಡಿಸೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಕೂಡಾ 370ನೇ ವಿಧಿ ತಾತ್ಕಾಲಿಕ ನಿಬಂಧನೆಯಾಗಿದೆ. ಹಾಗಾಗಿ ರದ್ದುಗೊಳಿಸುವ ಕ್ರಮ ಸರಿಯಾಗಿಯೇ ಇದೆ ಎಂದು ಕೇಂದ್ರ ಸರಕಾರದ ಕ್ರಮವನ್ನು ಎತ್ತಿಹಿಡಿದಿದೆ.

### ಹನುಮ ಮಂದಿರ ಧ್ವಂಸ

**ಶಂಶಾಬಾದ್:** ತೆಲಂಗಾಣ ರಾಜ್ಯದ ಶಂಶಾಬಾದ್‌ನಲ್ಲಿ ಹನುಮಾನ್ ಮಂದಿರ ಧ್ವಂಸ ಮಾಡಲಾಗಿದೆ. ಏರ್‌ಪೋರ್ಟ್ ಕಾಲೋನಿಯ ಹನುಮಾನ್ ದೇವಸ್ಥಾನದ ಆಸ್ತಿಗೆ ಹಾನಿಯಾಗಿದೆ. ಘಟನೆ ಸಂಬಂಧ ಒಬ್ಬನನ್ನು ಬಂಧಿಸಿ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದ್ದಾರೆ. ಇತ್ತೀಚೆಗೆ ಹೈದರಾಬಾದ್‌ನಲ್ಲಿ 2 ಹಿಂದೂ ವಿಗ್ರಹಗಳ ಧ್ವಂಸ ಘಟನೆಗಳು ನಡೆದಿವೆ.

{ **ಹೇಮಂತ್ ಸೊರೆನ್** } ಜಾರ್ಖಂಡ್ ಸಿಎಂ

**ಜಾರ್ಖಂಡ್ ಆದಿವಾಸಿಗಳಿಗೆ ಸೇರಿದ್ದು, ಅವರೇ ರಾಜ್ಯ ಆಳುತ್ತಾರೆ. 2011ರ ಗಣತಿ ಪ್ರಕಾರ 3.29 ಕೋಟಿ ಜನಸಂಖ್ಯೆಯಲ್ಲಿ 86.45 ಲಕ್ಷ(ಶೇ.26.21) ಆದಿವಾಸಿಗಳಿದ್ದಾರೆ. ರಾಜ್ಯದಲ್ಲಿ ಹಿಂದೂಗಳಿಗೆ ಅಪಾಯ ವಿಲ್ಲ. ಆದರೆ ಬಿಜೆಪಿ ಹಿಂದೂ-ಮುಸ್ಲಿಮರ ನಡುವೆ ಸಂಘರ್ಷ ಸೃಷ್ಟಿಗೆ ಯತ್ನಿಸುತ್ತಿದೆ. ಸಿಬಿಐ, ಇ.ಡಿ ಮೂಲಕ ಬಿಜೆಪಿ ನನ್ನನ್ನು ಬೆದರಿಸುತ್ತಿದೆ. ಸುಳ್ಳು ಆರೋಪ ಹೊರಿಸಿ ಜೈಲಿಗೆ ಕಳುಹಿಸಿದೆ.**



## ಫ್ಲೋರಿಡಾ ರಾಜ್ಯದಲ್ಲಿ ಟ್ರಂಪ್ 'ವಿಜಯದ ಭಾಷಣ'

**ಫ್ಲೋರಿಡಾ:** ಬನ್ನಿ, ಎಲ್ಲರೂ ಸೇರಿಕೊಂಡು ನಮ್ಮ ದೇಶ ಅಮೆರಿಕವನ್ನು ಮತ್ತೊಮ್ಮೆ ಶ್ರೇಷ್ಠವಾಗಿಸಿ ಎಂದು ಅಮೆರಿಕದ 47ನೇ ಅಧ್ಯಕ್ಷರಾಗಿ ಚುನಾಯಿತರಾಗಿರುವ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ದೇಶದ ಜನತೆಗೆ ಕರೆ ನೀಡಿದರು. ಅದಕ್ಕೆ ಪ್ರತಿಯಾಗಿ ಫ್ಲೋರಿಡಾ ರಾಜ್ಯದಲ್ಲಿ ವೆಸ್ಟ್‌ಪಾಮ್ ಬೀಚ್‌ನಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಕಿಕ್ಕಿರಿದಿದ್ದ ರಿಪಬ್ಲಿಕನ್ ಪಕ್ಷದ ನಾಯಕರು, ಕಾರ್ಯಕರ್ತರು, ಬೆಂಬಲಿಗರು 'ಯುಎಸ್‌ಎ, ಯುಎಸ್‌ಎ, ಯುಎಸ್‌ಎ' ಎಂದು ಹರ್ಷಾತಿರೇಕದಿಂದ ಕೂಗಿ ಸಭಾಂಗಣವೇ ಹಲವು ಬಾರಿ ಮಾರ್ದನಿಸುವಂತೆ ಮಾಡಿದರು.

ಚುನಾವಣೆ ಗೆಲುವಿಗೆ ಸಮೀಪಿಸಿದ್ದಾಗಲೇ ಫ್ಲೋರಿಡಾದ ವೆಸ್ಟ್‌ಪಾಮ್ ಬೀಚ್‌ನ ಸಮ್ಮೇಳನ ಸಭಾಂಗಣದಲ್ಲಿ ದೇಶದ ಜನರನ್ನು ಉದ್ದೇಶಿಸಿ 'ವಿಜಯದ ಭಾಷಣ' ಮಾಡಿದ ಡೊನಾಲ್ಡ್ ಟ್ರಂಪ್, ನನ್ನನ್ನು ಮತ್ತೊಮ್ಮೆ ಗೆಲ್ಲಿಸಿದ್ದಕ್ಕೆ ಅಮೆರಿಕ ಜನತೆಗೆ ಧನ್ಯವಾದ. ಇನ್ನು ಅಮೆರಿಕದ ಪಾಲಿಗೆ ಸುವರ್ಣ ಯುಗ ಆರಂಭವಾಗಲಿದೆ. ಅದಕ್ಕಾಗಿಯೇ ಜನತೆ ನನ್ನನ್ನು ಗೆಲ್ಲಿಸಿದ್ದಾರೆ ಎಂದು ಅಮೆರಿಕದ 47ನೇ ಅಧ್ಯಕ್ಷರಾಗಿ ಸ್ಪಷ್ಟ ಬಹುಮತದಿಂದ ಆಯ್ಕೆಯಾದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಹೇಳಿದರು. ಈ ಸಂದರ್ಭ ವೇದಿಕೆಯಲ್ಲಿ ಟ್ರಂಪ್ ಎಡಬಲದಲ್ಲಿ ಪತ್ನಿ ಮೆಲನಿಯಾ ಟ್ರಂಪ್, ಅಮೆರಿಕ ಉಪಾಧ್ಯಕ್ಷ ಹುದ್ದೆಗೆ ರಿಪಬ್ಲಿಕನ್ ಅಭ್ಯರ್ಥಿ ಜೆ.ಡಿ.ವೇನ್ಸ್ ಮತ್ತು ಅವರ ಪತ್ನಿ ಉಪಸ್ಥಿತರಿದ್ದರು. ಅಮೆರಿಕ ಮತ್ತು ಅಮೆರಿಕದ ಪ್ರತಿಯೊಬ್ಬರ ಪಾಲಿಗೆ ಇದು ಅಭೂತಪೂರ್ವ ವಿಜಯ. ಅಮೆರಿಕದ ಘನತೆ ಎತ್ತಿ ಹಿಡಿ ಯಲು, ಅಮೆರಿಕವನ್ನು ಮತ್ತೊಮ್ಮೆ ಅದ್ಭುತ ರಾಷ್ಟ್ರವಾಗಿಸಲು ಈ ಚುನಾವಣೆ ಗೆಲುವು ಸಹಕಾರಿಯಾಗಿದೆ. ಬನ್ನಿ, ಎಲ್ಲರೂ ಒಗ್ಗೂಡಿ ಅಮೆರಿಕವನ್ನು ಮತ್ತೊಮ್ಮೆ ಶ್ರೇಷ್ಠವಾಗಿಸೋಣ ಎಂದರು.

ಪತ್ನಿಗೆ ಪ್ರಶಂಸೆ: ಬಳಿಕ ಪತ್ನಿ ಮೆಲನಿಯಾ ಕಡೆ ತಿರುಗಿದ ಟ್ರಂಪ್, 'ಪ್ರಥಮ ಮಹಿಳೆ' ಎಂದೇ ಸಂಬೋಧಿಸಿದರು. ಆಕೆ ಇತ್ತೀಚೆಗೆ ಪ್ರಕಟಿಸಿದ ಪುಸ್ತಕ ಭಾರೀ ಬೇಡಿಕೆ ಗಳಿಸಿದೆ ಎಂದು ಪ್ರಶಂಸಿಸಿದರು. ದೇಶದ ಉಪಾಧ್ಯಕ್ಷ ಹುದ್ದೆಗೆ ಸ್ಪರ್ಧಿಸಲು ಜೆ.ಡಿ.ವೇನ್ಸ್ ಸರಿಯಾದ ಆಯ್ಕೆ ಎಂಬುದು ನನಗೆ ಮೊದಲೇ ಗೊತ್ತಿತ್ತು ಎಂದರು. ಈ ಬಾರಿಯ ಚುನಾವಣೆಯಲ್ಲಿ ಉತ್ತಮ ಬೆಂಬಲ ನೀಡಿದ ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್‌ಗೆ ಟ್ರಂಪ್ ಧನ್ಯವಾದ ಹೇಳಿದರು. ಮಸ್ಕ್ ರಿಪಬ್ಲಿಕನ್ ಪಕ್ಷದ ಹೊಸ ಸ್ಟಾರ್ ಎಂದು ಬಣ್ಣಿಸಿದರು. ಮಸ್ಕ್ ಅಸಾಧಾರಣ ವ್ಯಕ್ತಿ, ಅದ್ಭುತ ಮನುಷ್ಯ ಎಂದು ಪ್ರಶಂಸಿಸಿದರು.

### ಅಮೆರಿಕದ ಭಾವಿ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಭಾರತ ನಂಟು!



ವಾಷಿಂಗ್ಟನ್: ಅಮೆರಿಕದ ನೂತನ ಉಪಾಧ್ಯಕ್ಷರಾಗಿ ಅಯ್ಕೆಯಾಗಿರುವ ರಿಪಬ್ಲಿಕನ್ ಪಕ್ಷದ ನಾಯಕ ಜೆ.ಡಿ.ವ್ಯಾನ್ಸ್ ಅವರಿಗೂ ಭಾರತಕ್ಕೂ ನಂಟಿದೆ. ವ್ಯಾನ್ಸ್ ಆಂಧ್ರಪ್ರದೇಶದ ಅಳಿಯ. ಅವರ ಪತ್ನಿ ಉಷಾ ಚಿಲುಕುರಿ ಅವರ ಬೇರುಗಳು ಭಾರತದ ತೆಲುಗು ರಾಜ್ಯದ ಜತೆ ಬೆಸೆದುಕೊಂಡಿವೆ. ಉಷಾ ಅವರ ಪೋಷಕರು ಆಂಧ್ರಪ್ರದೇಶ ಕೃಷ್ಣಾ ಜಿಲ್ಲೆಯ ಪಮಾರು ಗ್ರಾಮದವರು. ನಂತರ ಪೋಷಕರು ಅಮೆರಿಕಕ್ಕೆ ತೆರಳಿದರು. ಕ್ಯಾಲಿಫೋರ್ನಿಯಾದಲ್ಲಿ ಜನಿಸಿದ ಯೇಲ್ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಅಧ್ಯಯನ ಮಾಡಿ, ನಂತರ ಕೇಂಬ್ರಿಡ್ಜ್ ವಿವಿಯಲ್ಲಿ ಆಧುನಿಕ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಯೇಲ್ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗಲೇ ವ್ಯಾನ್ಸ್ ಅವರನ್ನು ಭೇಟಿಯಾದರು. ಬಳಿಕ ಇಬ್ಬರೂ 2014ರಲ್ಲಿ ವಿವಾಹವಾದರು. ಉಷಾ ಚಿಲುಕುರಿ ಹಿಂದೂ, ವ್ಯಾನ್ಸ್ ರೋಮನ್ ಕ್ಯಾಥೋಲಿಕ್. ಆದರೆ, ಕೆಂಟುಕಿಯಲ್ಲಿ ಹಿಂದೂ ಸಂಪ್ರದಾಯ ಪ್ರಕಾರ ವಿವಾಹವಾದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಸದ್ಯ ಉಷಾ ಚಿಲುಕುರಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಹಿರಿಯ ವಕೀಲರಾಗಿದ್ದಾರೆ. ಇವರ ಸಂಬಂಧಿಕರಲ್ಲಿ ಕೆಲವರು ಕಷ್ಣಾ ಜಿಲ್ಲೆಯ ಉಯ್ಯೂರು ಮಂಡಲದ ಸಾಯಿಪುರಂ ಗ್ರಾಮದಲ್ಲಿದ್ದರೆ, ಕೆಲವು ಸಂಬಂಧಿಕರು ವೈಜಾಗ್‌ನಲ್ಲಿದ್ದಾರೆ.

### ಡೆಮಾಕ್ರಟಿಕ್ ಭಾರತೀಯರ ಗೆಲುವು

**ವಾಷಿಂಗ್ಟನ್: ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಜತೆಗೇ ವಿವಿಧ ಜಿಲ್ಲೆಗಳಲ್ಲಿ ನಡೆದ ಚುನಾವಣೆಯಲ್ಲಿ ಭಾರತೀಯ ಮೂಲದ ಹಲವರು ಡೆಮಾಕ್ರಟಿಕ್ ಪಕ್ಷದಿಂದ ಗೆಲುವು ದಾಖಲಿಸಿದ್ದಾರೆ. ಇಲಿನಾಯ್ಸ್‌ನ 8ನೇ ಕಾಂಗ್ರೆಷನಲ್ ಡಿಸ್ಟ್ರಿಕ್ಟ್‌ನಿಂದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಸ್ಪರ್ಧೆ ಮಾಡಿದ್ದ ರಾಜಾ ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ. ವರ್ಜೀನಿಯಾದ 10ನೇ ಕಾಂಗ್ರೆಷನಲ್ ಡಿಸ್ಟ್ರಿಕ್ಟ್‌ನ ಪ್ರತಿನಿಧಿ ಸ್ಥಾನವನ್ನು ಸುಹಾಸ್ ಸುಬ್ರಮಣಿಯಂ ಗೆದ್ದಿದ್ದಾರೆ. ಕ್ಯಾಲಿಫೋರ್ನಿಯಾದ 17ನೇ ಕಾಂಗ್ರೆಷನಲ್ ಡಿಸ್ಟ್ರಿಕ್ಟ್‌ನಲ್ಲಿ ರೋ ಖನ್ನಾ ಎರಡನೇ ಬಾರಿ ಗೆಲುವು ದಾಖಲಿಸಿದ್ದಾರೆ. ಅಮೆರಿಕ ಹೌಸ್‌ನಲ್ಲಿ ವಾಷಿಂಗ್ಟನ್‌ನ 7ನೇ ಕಾಂಗ್ರೆಷನಲ್ ಡಿಸ್ಟ್ರಿಕ್ಟ್‌ನ ಪ್ರತಿನಿಧಿ ಸ್ಥಾನದ ಚುನಾವಣೆಯಲ್ಲಿ ಪ್ರಮೀಳಾ ಜಯಪಾಲ್ ಗೆದ್ದಿದ್ದಾರೆ. ಮಿಚಿಗನ್‌ನ 13ನೇ ಕಾಂಗ್ರೆಷನಲ್ ಡಿಸ್ಟ್ರಿಕ್ಟ್‌ನಲ್ಲಿ ಭಾರತೀಯ ಅಮೆರಿಕನ್ ಕಾಂಗ್ರೆಸ್‌ಮನ್ ಥನೇಡರ್ ಮರು ಚುನಾವಣೆಯಲ್ಲಿ ಗೆದ್ದಿದ್ದಾರೆ. ಅವರು ರಿಪಬ್ಲಿಕನ್ ಎದುರಾಳಿ ಮಾರ್ಟೆಲ್ ಬಿವಿಂಗ್ಸ್ ಅವರನ್ನು ಶೇ.35ಕ್ಕಿಂತ ಹೆಚ್ಚು ಮತಗಳಿಂದ ಸೋಲಿಸಿದ್ದಾರೆ.**

ಟ್ರಂಪ್ ಎರಡನೇ ಬಾರಿಗೆ ಅಮೆರಿಕ ಅಧ್ಯಕ್ಷಗಾದಿಗೆ। ಕಮಲಾ ಹ್ಯಾರಿಸ್ ಎದುರು ಭರ್ಜರಿ ಜಯ। ಜೋ ಬೈಡೆನ್ ಎದುರಿನ ಸೋಲಿಗೆ ತಿರುಗೇಟು। ಕಮಲಾ ಬದಲು ಟ್ರಂಪ್ ಬೆಂಬಲಕ್ಕೆ ನಿಂತ ಎನ್ನಾರೈಗಳು

# ಮತ್ತೊಮ್ಮೆ ಅಮೆರಿಕ ಶ್ರೇಷ್ಠವಾಗಿಸೋಣ

### ಟ್ರಂಪ್ ಅತ್ಯಂತ ಹಿರಿಯ ಅಧ್ಯಕ್ಷ

ವಾಷಿಂಗ್ಟನ್: ಅಮೆರಿಕದ ಇತಿಹಾಸದಲ್ಲೇ ಅಧ್ಯಕ್ಷ ಹುದ್ದೆಗೆ ಆಯ್ಕೆಯಾದ ಅತ್ಯಂತ ಹಿರಿಯ ಅಧ್ಯಕ್ಷ ಎಂಬ ಖ್ಯಾತಿಗೆ 78 ವರ್ಷದ ಡೊನಾಲ್ಡ್ ಟ್ರಂಪ್ ಪಾತ್ರರಾಗಲಿದ್ದಾರೆ. ಈ ಮೊದಲು 77ನೇ ವಯಸ್ಸಿನಲ್ಲಿ ಚುನಾಯಿತರಾಗಿದ್ದ ಅಧ್ಯಕ್ಷ ಜೋ ಬಿಡೆನ್ ಅತಿ ಹಿರಿಯ ಅಧ್ಯಕ್ಷ ಎನಿಸಿಕೊಂಡಿದ್ದರು. ಅದಕ್ಕೂ ಮುನ್ನ ರೊನಾಲ್ಡ್ ರೇಗನ್ ಅವರು 1981ರ ಜ.20ರಂದು ಮೊದಲ ಅವಧಿಗೆ ಅಮೆರಿಕ ಅಧ್ಯಕ್ಷರಾದಾಗ ಅವರಿಗೆ 70 ವರ್ಷವಾಗಿತ್ತು. ಎರಡನೇ ಬಾರಿ 1986ರಲ್ಲಿ ಅಧ್ಯಕ್ಷರಾದಾಗ 74 ವರ್ಷ.

### ಗಡಿಭದ್ರತೆ, ಆರ್ಥಿಕ ಪುನಶ್ಚೇತನಕ್ಕೆ ಆದ್ಯತೆ

ದೇಶದ ರಾಜಕೀಯದಲ್ಲಿ ಯಾರೂ ನಿರೀಕ್ಷಿಸದೇ ಇರುವ ವಿದ್ಯಮಾನವಿದು. ನನ್ನ ಗೆಲುವಿನಿಂದ ದೇಶ ಮತ್ತೆ ಬಲಿಷ್ಠವಾಗಲಿದೆ. ಅದರ ಹಿರಿಮೆ ಮರಳಲಿದೆ. ಮುಖ್ಯವಾಗಿ ದೇಶದ ಗಡಿಭಾಗವನ್ನು ಬಲಪಡಿಸಬೇಕಿದೆ. ಅಕ್ರಮ ನುಸುಳುವಿಕೆ ತಡೆಯಬೇಕಿದೆ. ದೇಶವನ್ನು ಮತ್ತೆ ಮೊದಲಿನಂತೆ ಆರ್ಥಿಕವಾಗಿ ಬಲಾಢ್ಯಗೊಳಿಸಬೇಕಿದೆ. ಅಮೆರಿಕದ ಜನರೆಲ್ಲರೂ ಅದ್ಭುತ ಜೀವನ ನಡೆಸಲು ಅಗತ್ಯ ಇರುವುದನ್ನು ಖಾತರಿಪಡಿಸದ ಹೊರತೂ ನಾನು ಎಂದೂ ವಿರಮಿಸುವುದಿಲ್ಲ ಎಂದು ಟ್ರಂಪ್ ದೇಶದ ಜನತೆಗೆ ವಚನ ನೀಡಿದರು.

### ಮಹತ್ವದ ಉದ್ದೇಶಕ್ಕಾಗಿ ದೇವರೇ ನನ್ನ ಬದುಕಿಸಿ

ಈ ಬಾರಿಯ ಚುನಾವಣೆ ಪ್ರಚಾರ ಕಾಲದಲ್ಲಿ ನನ್ನ ಮೇಲೆ ಹಲವು ಬಾರಿ ದಾಳಿಗಳಾಗಿವೆ. ಜುಲೈನಲ್ಲಿ ಪ್ರಚಾರ ಸಭೆಯಲ್ಲಿದ್ದಾಗ ಹಂತಕ ಹಾರಿಸಿದ ಗುಂಡು ಕಿವಿಯನ್ನು ಕೊರೆದುಕೊಂಡೇ ಮುಂದೆ ಹೋಗಿದೆ. ಆ ದಾಳಿಯಲ್ಲಿ ನಾನು ಬದುಕಿದ್ದೇ ಒಂದು ಪವಾಡ. ಮಹತ್ವದ ಉದ್ದೇಶ ಇಟ್ಟುಕೊಂಡೇ ದೇವರು ನನ್ನನ್ನು ಬದುಕಿಸಿದ್ದಾನೆ. ನನ್ನಿಂದ ದೊಡ್ಡದಾದ ಕೆಲಸವನ್ನೇನೋ ಮಾಡಿಸಬೇಕೆಂದೇ ದೇವರು ನಿರ್ಧರಿಸಿದ್ದಾನೆ. ಎಂಬುದು ಈ ಗೆಲುವಿನಿಂದಲೇ ಅರ್ಥವಾಗುತ್ತದೆ ಎಂದು ಡೊನಾಲ್ಡ್ ಟಂಪ್ ಹರುಷ ಮತ್ತು ಭಾವೋದ್ವೇಗದಿಂದ ಹೇಳಿದರು.

## ಹಿಂದೂ ಮತ ಧ್ರುವೀಕರಣ; ಟ್ರಂಪ್ ಗೆಲುವು!

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಗೆಲುವಿಗೆ ಸ್ವಿಂಗ್ ಸ್ಟೇಟ್ಸ್ ಎಂದೇ ಕರೆಯಲಾಗುವ 7-8 ರಾಜ್ಯಗಳ ಮತಗಳು ರಿಪಬ್ಲಿಕನ್ ಪಕ್ಷದತ್ತ ಧ್ರುವೀಕರಣವಾಗಿದ್ದೇ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಡೆಮಾಕ್ರಟಿಕ್ ಪಕ್ಷದ ಪರವೂ ಅಲ್ಲ, ರಿಪಬ್ಲಿಕನ್ ಕಡೆಗೂ ಇಲ್ಲ ಎನ್ನುವಂತಿರುವ ಈ 'ಸ್ವಿಂಗ್ ಸ್ಟೇಟ್ಸ್'ನ ಮತಗಳು ಈ ಬಾರಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ಪರವಾಗಿ ಹೆಚ್ಚಿನ ಪ್ರಮಾಣದಲ್ಲಿ ಧ್ರುವೀಕರಣಗೊಂಡಿದ್ದೇ ಟ್ರಂಪ್ ಗೆಲುವಿನಲ್ಲಿ, ಕಮಲಾ ಹ್ಯಾರಿಸ್ ಸೋಲಿನಲ್ಲಿ ಪ್ರಮುಖ ಪಾತ್ರ ವಹಿಸಿದವು ಎಂದು ವಿಶ್ಲೇಷಣೆ ಮಾಡಲಾಗಿದೆ.

ಅದರಲ್ಲೂ ಮುಖ್ಯವಾಗಿ ಕೆಲವು ಸ್ವಿಂಗ್ ಸ್ಟೇಟ್ಸ್‌ನಲ್ಲಿ ಭಾರತದ ಮೂಲದವರ, ಅದರಲ್ಲೂ ಹಿಂದೂಗಳ ಮತ ಪ್ರಮಾಣ ಅಧಿಕ ಸಂಖ್ಯೆಯಲ್ಲಿದ್ದು, ಅವೆಲ್ಲವೂ ಟ್ರಂಪ್ ಕಡೆಗೇ ಧ್ರುವೀಕರಣಗೊಂಡಿವೆ. ಹಾಗಾಗಿಯೇ ಟ್ರಂಪ್ ಎಲ್ಲ ಸಮೀಕ್ಷೆಗಳು, ರಾಜಕೀಯ ಪಂಡಿತರ ಲೆಕ್ಕಾಚಾರವನ್ನೂ ತಲೆಕೆಳಗಾಗಿಸಿ ಸರಾಗವಾದ ಗೆಲುವು ಸಾಧಿಸಿದ್ದಾರೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

ಅದರಲ್ಲೂ ಟ್ರಂಪ್, ಮತದಾನಕ್ಕೆ ಕೆಲವೇ ದಿನಗಳಿವೆ ಎನ್ನುವಾಗ, ಬಾಂಗ್ಲಾದೇಶದಲ್ಲಿನ ಹಿಂದೂಗಳ ಮೇಲಿನ ದಾಳಿಗಳನ್ನು ಖಂಡಿಸಿದ್ದು, ವಿಶ್ವಾದ್ಯಂತದ ಹಿಂದೂಗಳ ರಕ್ಷಣೆಗೆ ಬದ್ಧ ಎಂದು ಘೋಷಿಸಿದ್ದು ಅಮೆರಿಕದ ವಿವಿಧ ರಾಜ್ಯಗಳಲ್ಲಿನ ಹಿಂದೂ ಸಮುದಾಯದ ಮತಗಳು ರಿಪಬ್ಲಿಕನ್ ಪಕ್ಷದ ಕಡೆಗೆ ಧ್ರುವೀಕರಣಗೊಳ್ಳುವಂತೆ ಮಾಡಿವೆ ಎಂದು ವಿಶ್ಲೇಷಿಸಲಾಗಿದೆ.

**ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್‌ಗೆ ಭಾರತೀಯರು, ಅದರಲ್ಲೂ ಹಿಂದೂ ಸಮುದಾಯದ ಬೆಂಬಲ ಗಮನ ಸೆಳೆದಿದೆ.**




### ಯಾವ ರಾಜ್ಯದಲ್ಲಿ ಯಾರಿಗೆ ಎಷ್ಟು ಸ್ಥಾನ?

| ಡೊನಾಲ್ಡ್ ಟ್ರಂಪ್ | | ಕಮಲಾ ಹ್ಯಾರಿಸ್ |
|---|---|---|
| ಯೊಮಿಂಗ್ (3) | ಮೊಂಟಾನ (4) | ಕೊಲೊರಾಡೊ (10) |
| ವೆಸ್ಟ್ ವರ್ಜೀನಿಯಾ (4) | ಮಿಸ್ಸಿಸ್ಸಿಪ್ಪಿ (6) | ಕನೆಕ್ಟಿಕಟ್ (7) |
| ಉತಾಹ್ (6) | ಮಿಸ್ಸೌರಿ (10) | ವಾಷಿಂಗ್ಟನ್ (3) |
| ಟೆಕ್ಸಾಸ್ (40) | ಲೂಸಿಯಾನಾ (8) | ಡೆಲವೇರ್ (3) |
| ಟೆನೆಸ್ಸೀ (11) | ಕೆಂಟುಕಿ (8) | ಇಲಿನಿಯೊಸ್ (19) |
| ದಕ್ಷಿಣ ಕರೋಲಿನಾ (9) | ಕಾನ್ಸಾಸ್ (6) | ಮಸ್ಸಾಚುಸೆಟ್ಸ್ (11) |
| ಒಕ್ಲಾಹೊಮಾ (7) | ಇಂಡಿಯಾನಾ (11) | ಮೇರಿಲ್ಯಾಂಡ್ (10) |
| ಒಹಿಯೊ (17) | ಲೋವಾ (6) | ನ್ಯೂಜೆರ್ಸಿ (14) |
| ನೆಬ್ರಸ್ಕಾ (3) | ಫ್ಲೋರಿಡಾ (30) | ನ್ಯೂಯಾರ್ಕ್ (28) |
| ಉತ್ತರ ಡಕೋಟ (3) | ಅರ್ಕಾನ್ಸಸ್ (6) | ರೋಡ್ ಐಸ್‌ಲ್ಯಾಂಡ್ (4) |
| | ಅಲಬಾಮ (9) | ವೆರ್ಮಾಂಟ್ (3) |

### ಯಶಸ್ವಿ ಉದ್ಯಮಿ ಟ್ರಂಪ್‌ಗೆ ರಾಜಕೀಯ ಬೋನಸ್

**ವಾಷಿಂಗ್ಟನ್:** ಡೊನಾಲ್ಡ್ ಟ್ರಂಪ್ ಅಮೆರಿಕದ 47ನೇ ಅಧ್ಯಕ್ಷರಾಗುತ್ತಿದ್ದಾರೆ. 2017ರಲ್ಲಿ ಮೊದಲ ಬಾರಿಗೆ ಅಮೆರಿಕ ಅಧ್ಯಕ್ಷರಾಗಿದ್ದ ಟ್ರಂಪ್, 2024ರಲ್ಲಿ ಎರಡನೇ ಬಾರಿಗೆ ಅಧ್ಯಕ್ಷರಾಗುತ್ತಿದ್ದಾರೆ.

ಟ್ರಂಪ್ ಮೊದಲ ಬಾರಿಗೆ ಅಮೆರಿಕ ಅಧ್ಯಕ್ಷರಾಗಲು ಚುನಾವಣಾ ಕಣಕ್ಕಿಳಿದಾಗ ಬಹಳಷ್ಟು ಜನ ಅಚ್ಚರಿಯಿಂದ ಹುಬ್ಬೇರಿಸಿದ್ದರು. ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ, ಉದ್ಯಮ ಕ್ಷೇತ್ರದಲ್ಲಷ್ಟೇ ತೊಡಗಿ ಸಿಕೊಂಡಿದ್ದ ವ್ಯಕ್ತಿ ಟ್ರಂಪ್, ಅಮೆರಿಕದ ಅಧಿಕಾರ ರಾಜಕಾರಣ ಪ್ರವೇಶಿಸಿದ್ದು, ಅದಾಗಲೇ ಜನಪ್ರಿಯರಾಗಿದ್ದ ಹಿಲರಿ ಕ್ಲಿಂಟನ್ ಅವರನ್ನೇ ಸೋಲಿಸಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದು ಎಲ್ಲವೂ ಅಮೆರಿಕನ್ನರ ಪಾಲಿಗೆ ದೊಡ್ಡ ಅಚ್ಚರಿ. ಟ್ರಂಪ್ ಉದ್ಯಮ ಹಿನ್ನೆಲೆಯಿಂದ ಬಂದವರು. ಅವರ ತಂದೆ ಫ್ರೆಡ್ ಟ್ರಂಪ್ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದರು. ಅಪ್ಪನಿಂದ ರಿಯಲ್ ಎಸ್ಟೇ ಟ್ ವ್ಯವಹಾರ ಬಳುವಳಿಯಂತೆ ಬಂದಿತ್ತು. ಫೋರ್ಬ್ಸ್ ಅಂದಾಜು ಪ್ರಕಾರ ಡೊನಾಲ್ಡ್ ಟ್ರಂಪ್ ನಿವ್ವಳ ಆಸ್ತಿ ಮೌಲ್ಯ 660 ಕೋಟಿ ಡಾಲರ್(55 ಸಾವಿರ ಕೋಟಿ ರು.). ಬ್ಲೂಮ್‌ಬರ್ಗ್ ಬಿಲಿಯನೇರ್ಸ್ ಇಂಡೆಕ್ಸ್ ಪ್ರಕಾರ ಟ್ರಂಪ್ ಆಸ್ತಿ ಮೌಲ್ಯ 770 ಕೋಟಿ ಡಾಲರ್. ಟ್ರಂಪ್ ಉದ್ಯಮ ವಹಿವಾಟು ಈಗ ರಿಯಲ್ ಎಸ್ಟೇಟ್‌ಗಷ್ಟೇ ಸೀಮಿತವಾಗಿಲ್ಲ. ಮತ್ತಷ್ಟು ಉದ್ಯಮ ಕ್ಷೇತ್ರಗಳಲ್ಲಿ ವಿಸ್ತರಿಸಿದೆ.

ಕಾಂಗ್ರೆಸ್, ಚೀನಾ, ಇಟಲಿ ಶುಭಾಶಯ

### ಐತಿಹಾಸಿಕ ಗೆಲುವು: ಟ್ರಂಪ್‌ಗೆ ಪ್ರಧಾನಿ ಮೋದಿ ಅಭಿನಂದನೆ

**ದೆಹಲಿ:** ಸ್ನೇಹಿತ ಡೊನಾಲ್ಡ್ ಟ್ರಂಪ್ ಅವರ ಅಮೆರಿಕ ಅಧ್ಯಕ್ಷೀಯ ಚುನಾವಣೆಯ ವಿಜಯವನ್ನು 'ಐತಿಹಾಸಿಕ ಗೆಲುವು' ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

'ಐತಿಹಾಸಿಕ ಗೆಲುವು ಸಾಧಿಸಿದ ಆತ್ಮೀಯ ಮಿತ್ರನಿಗೆ ಹೃತ್ಪೂರ್ವಕ ಅಭಿನಂದನೆಗಳು. ನಮ್ಮ ದೇಶದ ಜನರ ಯೋಗಕ್ಷೇಮಕ್ಕಾಗಿ ಮತ್ತು ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ಉತ್ತೇಜಿಸಲು ನಾವಿಬ್ಬರೂ ಒಟ್ಟಾಗಿ ಕೆಲಸ ಮಾಡೋಣ. ಹಿಂದಿನ ಅವಧಿ ಯ ಯಶಸ್ಸಿನಂತೆಯೇ ಭಾರತ- ಅಮೆರಿಕ ಸಮಗ್ರ ಜಾಗತಿಕ- ಕಾರ್ಯತಂತ್ರ ಪಾಲುದಾರಿಕೆ ಇನ್ನಷ್ಟು ಬಲಪಡಿಸಲು ನಿಮ್ಮ ಸಹಕಾರ ಎದುರು ನೋಡುವೆ' ಎಂದೂ ಮೋದಿ ಬರೆದಿದ್ದಾರೆ. ಜತೆಗೇ ಈ ಹಿಂದೆ ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿದ್ದ ಸಂದರ್ಭ ತಾವು ಅಮೆರಿಕಕ್ಕೆ ಭೇಟಿ ನೀಡಿ ದಾಗಿನ ಕೆಲ ಫೋಟೊ ಲಗತ್ತಿಸಿ ದ್ದಾರೆ.

**ಕಾಂಗ್ರೆಸ್ ಅಭಿನಂದನೆ:** 'ಅಮೆರಿಕ ನೂತನ ಅಧ್ಯಕ್ಷರಿಗೆ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಶುಭಕೋರುತ್ತದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಎಕ್ಸ್' ಸಂದೇಶ ರವಾನಿಸಿದ್ದಾರೆ. ಭಾರತ-ಅಮೆರಿಕ ದೃಢವಾದ ಸಮಗ್ರ ಜಾಗತಿಕ ಕಾರ್ಯತಂತ್ರ ಪಾಲುದಾರಿಕೆ ಹಂಚಿಕೊಳ್ಳುತ್ತವೆ. ದೀರ್ಘಕಾಲದ ಪ್ರಜಾಪ್ರಭುತ್ವ ಮೌಲ್ಯಗಳು, ಜಾಗತಿಕ ಶಾಂತಿ ಮತ್ತು ಸಮೃದ್ಧಿಗಾಗಿ ಅಮೆರಿಕದೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದ್ದೇವೆ ಎಂದಿದ್ದಾರೆ.

**ಬೀಜಿಂಗ್:** ಪರಸ್ಪರ ಗೌರವ, ಶಾಂತಿಯುತ ಸಹಬಾಳ್ವೆ, ಸಹಕಾರದ ಜತೆಗೇ ಚೀನಾ ಅಮೆರಿಕದೊಂದಿಗೆ ಕೆಲಸ ಮಾಡಲಿದೆ ಎಂದು ಚೀನಾ ವಿದೇಶಾಂಗ ಸಚಿವಾಲಯ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿದೆ.

**ಇಟಲಿ:** ಟ್ರಂಪ್‌ಗೆ ಅಭಿನಂದನೆ. ಮೈತ್ರಿ, ಮೌಲ್ಯಗಳ ಜತೆಗೆ ಅಮೆರಿಕ ದೇಶದೊಂದಿಗೆ ಇಟಲಿ ಐತಿಹಾಸಿಕ ಸ್ನೇಹ ಹೊಂದಿದೆ. ಇಟಲಿ-ಅಮೆರಿಕ ಸೋದರ ರಾಷ್ಟ್ರಗಳಾಗಿವೆ. ಕಾರ್ಯತಂತ್ರ ಪಾಲುದಾರಿಕೆಯನ್ನು ಇನ್ನಷ್ಟು ದೃಢಪಡಿಸೋಣ ಎಂದು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಸಂದೇಶ ರವಾನಿಸಿದ್ದಾರೆ.

### ಬಿಂದಿ ಧರಿಸಿದ ಪಾಕ್ ನಟಿಗೆ ನೆಟ್ಟಿಗರ ತರಾಟೆ

**ಇಸ್ಲಮಾಬಾದ್:** ಹಿಂದೂ ಗೆಳತಿಯರ ಜತೆ ದೀಪಾವಳಿ ಹಬ್ಬ ಆಚರಿಸಿದ ಪಾಕಿಸ್ತಾನಿ ನಟಿ ಸೋನಯ ಹುಸ್ಸೈನ್, ತಾವು ಬಿಂದಿ ಧರಿಸಿದ, ದೀಪಾವಳಿ ಸಂಭ್ರಮದಲ್ಲಿ ಪಾಲ್ಗೊಂಡ ಸಂದರ್ಭದ ವಿಡಿಯೊ ಹಂಚಿಕೊಂಡಿದ್ದರು. ಪರಿಣಾಮ ಅವರು ದೇಶವಾಸಿಗಳಿಂದ ತೀವ್ರ ಟೀಕೆ, ದ್ವೇಷದ ಕಿಡಿಗೆ ಗುರಿಯಾಗಿದ್ದಾರೆ.

ಪಾಕಿಸ್ತಾನ ಹಲವು ಸಂಸ್ಕೃತಿ-ನಂಬಿಕೆಗಳ ವೈವಿಧ್ಯಮಯ ಸುಂದರ ದೇಶ. ಅಲ್ಪಸಂಖ್ಯಾತರ ಸಂಭ್ರಮದಲ್ಲೂ ನಾವು ಪಾಲ್ಗೊಳ್ಳಬೇಕು. ನೀವು ಯಾವುದೇ ಧರ್ಮ-ಜಾತಿ-ಜನಾಂಗಕ್ಕೆ ಸೇರಿರಬಹುದು. ಅದಕ್ಕೂ ದೇಶದ ತತ್ವ-ಸಿದ್ಧಾಂತಗಳಿಗೂ ಸಂಬಂಧವಿಲ್ಲ ಎಂಬ ಮಹಮ್ಮದ್ ಆಲಿ ಜಿನ್ನಾ ಹೇಳಿಕೆಯನ್ನೂ ಲಗತ್ತಿಸಿದ್ದಾರೆ. ದೇಶದ ಪ್ರಜೆಗಳ ಹಕ್ಕು-ಸ್ವಾತಂತ್ರ್ಯ ಗೌರವಿಸೋಣ. ಅವರಿಗೆಲ್ಲಾ ಪಾಕಿಸ್ತಾನ ಎಂಬುದು ಮನೆಯ ವಾತಾವರಣ ನೀಡುವ ದೇಶವಾಗಲಿ' ಎಂಬ ಸಂದೇಶವನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದ ಹುಸ್ಸೈನ್‌ಗೆ, ಬೆದರಿಕೆ ಎದುರಾಗಿದೆ. ನೆಟ್ಟಿಗರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಕೆಲವರಂತೂ, 'ನೀನ್ಯಾಕೆ ಕುಂಕುಮ ಧರಿಸಿದ್ದೀಯಾ? ದೇಶ ಬಿಟ್ಟು ತೊಲಗು..' ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ನಟಿಯ ಇನ್‌ಸ್ಟಾಗ್ರಾಂನಲ್ಲಿ ದ್ವೇಷ, ಬೈಗುಳ, ನೆಗೆಟಿವ್ ಕಮೆಂಟ್‌ಗಳೇ ತುಂಬಿವೆ.

### ಮ.ಪ್ರ ಸರಕಾರಿ ನೌಕರಿ ಮಹಿಳಾ ಮೀಸಲು ಶೇ.35

**ಭೋಪಾಲ್:** ಮಧ್ಯಪ್ರದೇಶದಲ್ಲಿ ಇನ್ನು ಮುಂದೆ ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಶೇ.35ರಷ್ಟು ಮೀಸಲು ಸೌಲಭ್ಯ ಸಿಗಲಿದೆ. ಸರಕಾರದ ನಾಗರಿಕ ಸೇವೆಗಳ ವಿಭಾಗದ ನೌಕರಿಗಳಲ್ಲಿ ಮಹಿಳಾ ಮೀಸಲಾತಿಯನ್ನು ಶೇ.33ರಿಂದ ಶೇ.35ಕ್ಕೆ ಹೆಚ್ಚಿಸಲಾಗಿದ್ದು, ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಈ ಕ್ರಮ ದಿಂದ ರಾಜ್ಯ ಸರಕಾರಿ ನೌಕರಿ ಗಳಲ್ಲಿ ಪುರುಷ-ಮಹಿಳಾ ಲಿಂಗ ಅನುಪಾತದಲ್ಲಿ(3:1ಕ್ಕಿಂತ ಹೆಚ್ಚಿನ) ಸುಧಾರಣೆ ಆಗಲಿದೆ. ಮುಖ್ಯಮಂತ್ರಿ ಮೋಹನ್ ಯಾದವ್ ಸರಕಾರದ ಮೊದಲ ಸಂಪುಟ ಸಭೆಯಲ್ಲಿಯೇ ಮಹಿಳಾ ಮೀಸಲು, ಆರೋಗ್ಯ, ಇಂಧನ ಮತ್ತು ಐಟಿ ಕ್ಷೇತ್ರಗಳಲ್ಲಿಯೂ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕದ ವಯೋಮಿತಿಯನ್ನು 40 ವರ್ಷದಿಂದ 50 ವರ್ಷಕ್ಕೆ ಹೆಚ್ಚಿಸಲಾಗಿದೆ. ಇದರಿಂದ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಸಿಬ್ಬಂದಿ ಕೊರತೆ ನೀಗಲಿದೆ. ನ.12ರಂದು ಉಜ್ಜಯಿನಿಯಲ್ಲಿ ಕಾಳಿದಾಸ್ ಸಮ್ಮಾನ್ ಸಮಾರಂಭ ನಡೆಯಲಿದ್ದು, ಉಪ ರಾಷ್ಟ್ರ ಪತಿ ಜಗದೀಪ್ ಧನಕರ್ ಭಾಗವಹಿಸಲಿದ್ದಾರೆ ಎಂದು ಸಂಪುಟ ಸಭೆ ಬಳಿಕ ಡಿಸಿಎಂ ರಾಜೇಂದ್ರ ಶುಕ್ಲಾ ಮಾಹಿತಿ ನೀಡಿದ್ದಾರೆ.

### ಅಮೆರಿಕ ಮತಗಟ್ಟೆಗೂ ಹುಸಿ ಬಾಂಬ್ ಬೆದರಿಕೆ

**ವಾಷಿಂಗ್ಟನ್:** ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆ ಮುಗಿದು ಫಲಿತಾಂಶವೂ ಪ್ರಕಟವಾಗಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಗೆದ್ದಿದ್ದಾರೆ. ಈ ನಡುವೆ ಮತದಾನ ವೇಳೆ ಅರಿಝೋನಾ, ಜಾರ್ಜಿಯಾ ಮತ್ತು ಪೆನ್ಸಿಲ್ವೇನಿಯಾ ಪ್ರಾಂತ್ಯದ ಹಲವು ಸ್ಥಳಗಳಲ್ಲಿ ಮತಗಟ್ಟೆಗಳಿಗೆ ಬಾಂಬ್ ಬೆದರಿಕೆ ಕರೆ ಬಂದು, ಜನರಲ್ಲಿ ಆತಂಕ ಸೃಷ್ಟಿಯಾಗಿತ್ತು. ಬಳಿಕ ಮತಗಟ್ಟೆ ಶೋಧ ನಡೆಸಿದ್ದು, ಹುಸಿ ಬಾಂಬ್ ಬೆದರಿಕೆ ಎಂಬುದು ಸಾಬೀತಾಗಿದೆ. ಈ ಮತಗಟ್ಟೆಗಳಲ್ಲಿ ಮತದಾನ ಅವಧಿ ವಿಸ್ತರಿಸಲಾಗಿತ್ತು.

ಅರಿಜೋನಾದ ನವಾಜೊ ಕೌಂಟಿಯ ಮೂರು ಮತದಾನದ ಸ್ಥಳಗಳಲ್ಲಿ ಬಾಂಬ್ ಬೆದರಿಕೆಗಳು ವರದಿಯಾಗಿವೆ. ಅಟ್ಲಾಂಟಾ ಒಳಗೊಂಡಿರುವ ಜಾರ್ಜಿಯಾದ ಫುಲ್ಟನ್ ಕೌಂಟಿಯಲ್ಲಿ 32 ಮತಗಟ್ಟೆಗಳಿಗೆ ಬಾಂಬ್ ಬೆದರಿಕೆ ಕರೆಗಳು ಬಂದಿವೆ.

ಬಾಂಬ್ ಬೆದರಿಕೆ ಕರೆಗಳ ಹಿಂದೆ ರಷ್ಯಾ ಕುಟಿಲತೆ ಇದೆ. ಚುನಾವಣಾ ಪ್ರಕ್ರಿಯೆಗೆ ಅಡ್ಡಿಪಡಿಸಲು ಯತ್ನಿಸಿದೆ ಎಂದು ಜಾರ್ಜಿಯಾದ ವಿದೇಶಾಂಗ ಕಾರ್ಯದರ್ಶಿ ಬ್ರಾಡ್ ರಾಫೆನ್ಸ್ಪರ್ಗರ್ ಆರೋಪಿಸಿದ್ದಾರೆ. ಆದರೆ, ಈ ಆರೋಪವನ್ನು ವಾಷಿಂಗ್ಟನ್‌ನಲ್ಲಿರುವ ರಷ್ಯಾ ರಾಯಭಾರ ಕಚೇರಿ ತಳ್ಳಿಹಾಕಿದೆ. ಇದು ಅಮೆರಿಕದ ದುರುದ್ದೇಶಪೂರಿತ ಅಪಪ್ರಚಾರ ಎಂದು ಪ್ರತಿಕ್ರಿಯಿಸಿದೆ.

### ಜನಪದ ಗಾಯಕಿ ಶಾರದಾ ಸಿನ್ಹಾ ನಿಧನ

**ದೆಹಲಿ:** ದೇಶದ ಜನಪ್ರಿಯ ಜನಪದ ಗಾಯಕಿ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತೆ ಶಾರದಾ ಸಿನ್ಹಾ(72) ಅವರು ಮಂಗಳವಾರ ರಾತ್ರಿ ನಿಧನರಾದರು.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರಿಗೆ ದೆಹಲಿಯ ಏಮ್ಸ್ ಆಸ್ಪತ್ರೆ ಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. 'ಹಮ್ ಆಪ್ ಕೆ ಹೈ ಕೌನ್', 'ಗ್ಯಾಂಗ್ಸ್ ಆಫ್ ವಸೇಪುರ್' ಮೊದಲಾದ ಹಿಂದಿ ಸಿನಿಮಾ ಗಳಲ್ಲೂ ಹಿನ್ನೆಲೆ ಗಾಯನ ನಡೆಸಿಕೊಟ್ಟಿದ್ದರು. ಭೋಜಪುರಿ ಮತ್ತು ಮೈಥಿಲಿ ಭಾಷೆಯ ಜನಪದ ಗೀತೆಗಳನ್ನು ಹಾಡುತ್ತಾ ಹೆಸರು ಮಾಡಿದ್ದರು. ಜನತೆ ಅವರಿಗೆ 'ಬಿಹಾರಿ ಕೋಕಿಲಾ' ಎಂದೇ ಕರೆಯುತ್ತಿದ್ದರು. ಶಾರದಾ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಹಾರ ಸಿಎಂ ನಿತೀಶ್ ಕುಮಾರ್ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಶಾರದಾ ಸಿನ್ಹಾ ಜೀ ಅವರು ಛಠ್‌ಪೂಜೆ ಸಂದರ್ಭದಲ್ಲೇ ನಿರ್ಗಮಿಸಿರುವುದು ಅತ್ಯಂತ ದುಃಖಕರ ಎಂದು ಗಾಯಕ ಸೋನು ನಿಗಮ್ ಕಂಬನಿ ಮಿಡಿದಿದ್ದಾರೆ.

## ಸಮಾಚಾರ ಸಣ್ಣದಲ್ಲ

### ಐಸಿಸಿ ಪಟ್ಟಿ: 6ನೇ ಸ್ಥಾನಕ್ಕೇರಿದ ಪಂತ್

**ದುಬೈ:** ನ್ಯೂಜಿಲೆಂಡ್ ವಿರುದ್ಧ ಮುಂಬೈನಲ್ಲಿ ಕಳೆದ ವಾರ ನಡೆದ ಟೆಸ್ಟ್ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ ಕಾರಣ ಭಾರತದ ವಿಕೆಟ್ ಕೀಪರ್

-ಬ್ಯಾಟರ್ ರಿಷಭ್ ಪಂತ್ ಅವರು ಐಸಿಸಿ ಪುರುಷರ ಟೆಸ್ಟ್ ಬ್ಯಾಟರ್‌ಗಳ ಕ್ರಮಾಂಕಪಟ್ಟಿಯಲ್ಲಿ ಐದು ಸ್ಥಾನ ಬಡ್ತಿ ಪಡೆದು ಆರನೇ ಸ್ಥಾನಕ್ಕೆ ಏರಿದ್ದಾರೆ. ಆ ಪಂದ್ಯದ ಎರಡೂ ಇನ್ನಿಂಗ್ಸ್‌ಗಳಲ್ಲಿ ಎಡಗೈ ಬ್ಯಾಟರ್ ಪಂತ್ ಅರ್ಧ ಶತಕ ಗಳಿಸಿದ್ದರು. ಅವರು ತಮ್ಮ ಜೀವನಶ್ರೇಷ್ಠ ಐದನೇ ಸ್ಥಾನ ತಲುಪುವ ಸನಿಹ ಬಂದಿದ್ದಾರೆ. 2022ರ ಜುಲೈನಲ್ಲಿ ಈ ಆಕ್ರಮಣಕಾರಿ ಆಟಗಾರ ಐದನೇ ಸ್ಥಾನಕ್ಕೇರಿದ್ದರು. ಯುವ ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ನಾಲ್ಕನೇ ಸ್ಥಾನದಲ್ಲಿದ್ದಾರೆ. ಸರಣಿಯಲ್ಲಿ ನ್ಯೂಜಿಲೆಂಡ್ ಪರ ಉತ್ತಮ ಪ್ರದರ್ಶನ ನೀಡಿದ ಡೇರಿಲ್ ಮಿಚೆಲ್‌ಗೂ ಬಡ್ತಿ ದೊರಕಿದ್ದು, ಅಗ್ರ 10ರ ಪಟ್ಟಿಯ ಫಲಾನುಭವಿಯಾಗಿದ್ದಾರೆ. ಎಂಟು ಸ್ಥಾನ ಜಿಗಿತ ಕಂಡಿರುವ ಮಿಚೆಲ್ ಈಗ ಏಳನೇ ಸ್ಥಾನದಲ್ಲಿ ನೆಲೆಸಿದ್ದಾರೆ. ಅವರು ಮುಂಬೈ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 82 ರನ್ ಹೊಡೆದಿದ್ದರು. ಇಂಗ್ಲೆಂಡ್‌ನ ಜೋ ರೂಟ್ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್, ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್, ಜೈಸ್ವಾಲ್ ಎರಡರಿಂದ ನಾಲ್ಕರವರೆಗಿನ ಸ್ಥಾನಗಳನ್ನು ಪಡೆದಿದ್ದಾರೆ. ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ರವೀಂದ್ರ ಜಡೇಜ ಅವರು ಎರಡು ಸ್ಥಾನ ಬಡ್ತಿ ಪಡೆದು ಆರನೇ ಕ್ರಮಾಂಕಕ್ಕೆ ಏರಿದ್ದಾರೆ. ಅವರು ಕೊನೆಯ ಟೆಸ್ಟ್‌ನ ಎರಡೂ ಇನ್ನಿಂಗ್ಸ್‌ಗಳಲ್ಲಿ ಐದು ವಿಕೆಟ್ಗಳ ಗೊಂಚಲು ಪಡೆದಿದ್ದರು. ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ, ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್, ಜಸ್ಪ್ರೀತ್ ಬೂಮ್ರಾ, ಪ್ಯಾಟ್ ಕಮಿನ್ಸ್ ಮತ್ತು ರವಿಚಂದ್ರನ್ ಅಶ್ವಿನ್ ಕ್ರಮವಾಗಿ ಮೊದಲ ಐದು ಸ್ಥಾನಗಳಲ್ಲಿದ್ದಾರೆ.

ರಾಷ್ಟ್ರೀಯ ತಂಡಕ್ಕೆ ಕಡೆಗಣಿಸಿರುವ ಬಿಸಿಸಿಐಗೆ ರನ್ನಿನೇಟು | ತ್ರಿಪುರಾ ವಿರುದ್ಧದ ಪಂದ್ಯದಲ್ಲಿ ಮಿಂಚಿದ ಶ್ರೇಯಸ್

# ಅಯ್ಯರ್ ದ್ವಿಶತಕದ ಮಿಂಚು!

**ದೆಹಲಿ:** ಭಾರತ ಟೆಸ್ಟ್ ತಂಡದಲ್ಲಿ ಸ್ಥಾನ ಕಳೆದುಕೊಂಡಿರುವ ಮುಂಬೈ ಸ್ಟಾರ್ ಬ್ಯಾಟರ್ ಶ್ರೇಯಸ್ ಅಯ್ಯರ್ ಪ್ರಸ್ತುತ ನಡೆಯುತ್ತಿರುವ 2024-25ರ ಸಾಲಿನ ರಣಜಿ ಟ್ರೋಫಿ ಟೂರ್ನಿಯಲ್ಲಿ ಸತತ ಎರಡು ಶತಕಗಳನ್ನು ಸಿಡಿಸಿದ್ದಾರೆ. ಆ ಮೂಲಕ ತನ್ನನ್ನು ರಾಷ್ಟ್ರೀಯ ತಂಡಕ್ಕೆ ಕಡೆಗಣಿಸಿರುವ ಬಿಸಿಸಿಐ ಆಯ್ಕೆದಾರರಿಗೆ ತಿರುಗೇಟು ನೀಡಿದ್ದಾರೆ.

ಸದ್ಯ ಶರದ್ ಪವಾರ್ ಅಕಾಡೆಮಿಯಲ್ಲಿ ಒಡಿಶಾ ವಿರುದ್ಧ ನಡೆಯುತ್ತಿರುವ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಅವರು ಸೆಂಚುರಿಯನ್ನು ಬಾರಿಸಿದ್ದಾರೆ. ಸತತ ಮೂರು ವರ್ಷಗಳ ಬಳಿಕ ಬಲಗೈ ಬ್ಯಾಟರ್ ಕಳೆದ ತಿಂಗಳು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಶತಕವನ್ನು ಸಿಡಿಸಿದ್ದರು. ತ್ರಿಪುರ ವಿರುದ್ಧದ ಕೊನೆಯ ಟೆಸ್ಟ್ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದರ ಹೊರತಾಗಿಯೂ ಶ್ರೇಯಸ್, ನೆಟ್ಸ್‌ನಲ್ಲಿ ಸಾಕಷ್ಟು ಅಭ್ಯಾಸವನ್ನು ನಡೆಸಿದ್ದರು. ಇದರ ಫಲವಾಗಿ ಮತ್ತೊಂದು ಶತಕವನ್ನು ಬಾರಿಸಿದ್ದಾರೆ. ಬಲಗೈ ಬ್ಯಾಟರ್‌ನ 15ನೇ ಪ್ರಥಮ ದರ್ಜೆ ಶತಕ ಹಾಗೂ ಪ್ರಸಕ್ತ ಟೂರ್ನಿಯಲ್ಲಿ ಎರಡನೇ ಶತಕ ಇದಾಗಿದೆ.

92 ರನ್ ಗಳಿಸಿದ ಅಂಗ್‌ಕ್ರಿಶ್ ರಘುವಂಶಿ ಅವರ ಬ್ಯಾಟಿಂಗ್ ಬಲದಿಂದ ಮುಂಬೈ ತಂಡ ಈ ಪಂದ್ಯದಲ್ಲಿ ಉತ್ತಮ ಆರಂಭವನ್ನು ಪಡೆದಿತ್ತು. ಇದರ ನಡುವೆ ನಾಯಕ ಅಜಿಂಕ್ಯ ರಹಾನೆ ಗೋಲ್ಡನ್ ಡಕ್‌ಔಟ್ ಆಗಿದ್ದರೆ, ಆರಂಭಿಕ ಆಯುಷ್ ಮ್ಹಾತ್ರೆ ಕೇವಲ 18 ರನ್ ಗಳಿಸಿ ವಿಕೆಟ್ ಒಪ್ಪಿಸಿದ್ದರು. ನಂತರ ಜೊತೆಯಾದ ಶ್ರೇಯಸ್ ಅಯ್ಯರ್ ಮತ್ತು ಸಿದ್ಧಾರ್ಥ್ ಮ್ಹಾತ್ರೆ ಅವರು 150 ರನ್‌ಗಳ ಜತೆಯಾಟವನ್ನು ಆಡುವ ಮೂಲಕ ತಂಡವನ್ನು ಮೇಲೆತ್ತಿದ್ದಾರೆ.

ಬಿಸಿಸಿಐಗೆ ಸಂದೇಶ ರವಾನಿಸಿದ ಶ್ರೇಯಸ್ ಅಯ್ಯರ್

ಈ ವರ್ಷದ ಆರಂಭದಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯ ಬಳಿಕ ಶ್ರೇಯಸ್ ಅಯ್ಯರ್ ಅವರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದರು. ಇದೀಗ ಸತತ ಎರಡು ಶತಕಗಳನ್ನು ಸಿಡಿಸಿದ ಬಳಿಕ ಬಿಸಿಸಿಐ ಆಯ್ಕೆದಾರರ ಗಮನವನ್ನು ಸೆಳೆದಿದ್ದಾರೆ. 2021ರಲ್ಲಿ ನ್ಯೂಜಿಲೆಂಡ್ ವಿರುದ್ಧ ಕಾನ್ಪುರ್ ಟೆಸ್ಟ್‌ನಲ್ಲಿ ಕೊನೆಯ ಪ್ರಥಮ ದರ್ಜೆ ಶತಕವನ್ನು ಬಾರಿಸಿದ್ದರು. ಮತ್ತೊಂದೆಡೆ ಭಾರತ ತಂಡದ ಸ್ಟಾರ್ ಬ್ಯಾಟರ್‌ಗಳು ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಶ್ರೇಯಸ್ ಅಯ್ಯರ್ ಅವರ ಪಾಲಿಗೆ ವರದಾನವಾಗಬಹುದು.

ಕಳೆದ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಶ್ರೇಯಸ್ ಅಯ್ಯರ್ ಅವರಿಂದ ಹೇಳಿಕೊಳ್ಳುವಂಥ ರನ್‌ಗಳು ಮೂಡಿ ಬಂದಿರಲಿಲ್ಲ. ಅವರು ಆರು ಇನ್ನಿಂಗ್ಸ್‌ಗಳಿಂದ ಎರಡು ಅರ್ಧಶತಕಗಳೊಂದಿಗೆ 154 ರನ್‌ಗಳನ್ನು ಕಲೆ ಹಾಕಿದ್ದರು. ಇದರ ಪರಿಣಾಮವಾಗಿ ಅವರನ್ನು ಬಾಂಗ್ಲಾದೇಶ ಹಾಗೂ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಗಳ ಭಾರತ ತಂಡದಿಂದ ಕೈ ಬಿಡಲಾಗಿತ್ತು.

### ಬಿಸಿಸಿಐ ಗುತ್ತಿಗೆಯಿಂದಲೂ ಹೊರಬಿದ್ದಿದ್ದ ಅಯ್ಯರ್

**ವಿಕೆಟ್ ಕೀಪರ್-ಬ್ಯಾಟರ್ ಇಶಾನ್ ಕಿಶನ್ ಅವರೊಂದಿಗೆ ಶ್ರೇಯಸ್ ಅಯ್ಯರ್ ಅವರನ್ನು ಈ ವರ್ಷದ ಆರಂಭದಲ್ಲಿ ಬಿಸಿಸಿಐ ಗುತ್ತಿಗೆಯಿಂದ ಕೈ ಬಿಡಲಾಗಿತ್ತು. ಈ ಇಬ್ಬರೂ ದೇಶಿ ಕ್ರಿಕೆಟ್ ಆಡಲು ನಿರಾಕರಿಸಿದ್ದ ಕಾರಣ ಅವರನ್ನು ಬಿಸಿಸಿಐ ಗುತ್ತಿಗೆಯಿಂದ ಕಡೆಗಣಿಸಲಾಗಿತ್ತು. ಅಂದಹಾಗೆ ಗಾಯದ ಕಾರಣ ಶ್ರೇಯಸ್ ಅಯ್ಯರ್ ಅವರು ಮುಂಬೈ ತಂಡದ ಆರಂಭಿಕ ಪಂದ್ಯಗಳಿಗೆ ಅಲಭ್ಯರಾಗಿದ್ದರು.**

ಸೌದಿಯ ಜೆಡ್ಡಾದಲ್ಲಿ 24, 25 ರಂದು ನಡೆಯಲಿರುವ ಐಪಿಎಲ್ ಮೆಗಾ ಹರಾಜು

# ಐಪಿಎಲ್ ಬಿಡ್‌ನಲ್ಲಿ ಒಟ್ಟು 1524 ಕ್ರಿಕೆಟಿಗರು!

**ದೆಹಲಿ:** ಸೌದಿ ಅರೇಬಿಯಾದ ಜೆಡ್ಡಾದಲ್ಲಿ ಇದೇ 24 ಮತ್ತು 25 ರಂದು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜು ನಡೆಯಲಿದೆ.

ಈ ಬಿಡ್ ಪ್ರಕ್ರಿಯೆಯಲ್ಲಿ ಒಟ್ಟು 1524 ಕ್ರಿಕೆಟಿಗರು ಕಣದಲ್ಲಿದ್ದಾರೆ. ಅವರಲ್ಲಿ 1165 ಮಂದಿ ಭಾರತದ ಆಟಗಾರರಿದ್ದಾರೆ. ಈ ಪಟ್ಟಿಯಲ್ಲಿ 320 ಮಂದಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದವರು ಮತ್ತು 1224 ಮಂದಿ ಅನ್‌ಕ್ಯಾಪ್ಡ್ ಆಟಗಾರರು ಇದ್ದಾರೆ. 30 ಅಸೋಸಿಯೇಟೆಡ್ ರಾಷ್ಟ್ರಗಳ ಆಟಗಾರರು ಕೂಡ ಇದರಲ್ಲಿದ್ದಾರೆ. ಅದರಲ್ಲಿ ಅಮೆರಿಕ, ನೆದರ್ಲೆಂಡ್ಸ್, ಕೆನಡಾ, ಇಟಲಿ, ಯುಎಇ ಮತ್ತು ಸ್ಕಾಟ್ಲೆಂಡ್ ಆಟಗಾರರು ಸೇರಿದ್ದಾರೆ.

ಕ್ಯಾಪ್ಡ್ ಆಟಗಾರರಲ್ಲಿ ಭಾರತದ 48 ಮಂದಿ ಇದ್ದಾರೆ. 965 ಅನ್‌ಕ್ಯಾಪ್ಡ್ ಆಟಗಾರರೂ ಇದ್ದಾರೆ. ಸೋಮವಾರ ಆಟಗಾರರ ನೋಂದಣಿ ಮುಕ್ತಾಯವಾಗಿದೆ. ಅದರಲ್ಲಿ ವಿದೇಶದ 409 ಆಟಗಾರರು ಇದ್ದಾರೆ.

ಎರಡನೇ ಬಾರಿ ಐಪಿಎಲ್ ಬಿಡ್ ಪ್ರಕ್ರಿಯೆಯು ವಿದೇಶದಲ್ಲಿ ನಡೆಯುತ್ತಿದೆ. ಹೋದ ವರ್ಷ ದುಬೈನಲ್ಲಿ ಆಯೋಜನೆಯಾಗಿತ್ತು.

ಐಪಿಎಲ್‌ನಲ್ಲಿರುವ ಪ್ರತಿ ತಂಡವೂ ಗರಿಷ್ಠ 25 ಆಟಗಾರರನ್ನು (ರಿಟೇನಡ್ ಆಟಗಾರರನ್ನು ಸೇರಿಸಿ) ಸೇರಿಸಿಕೊಳ್ಳಬಹುದು. ಈ ಬಾರಿ ಬಿಡ್‌ನಲ್ಲಿ 204 ಆಟಗಾರರ ಖರೀದಿಗೆ ಅವಕಾಶವಿದೆ. ಸದ್ಯ ಎಲ್ಲ 10 ತಂಡಗಳು ಒಟ್ಟು 46 ಆಟಗಾರರನ್ನು ರಿಟೇನ್ ಮಾಡಿಕೊಂಡಿವೆ.

### ಮೊದಲ ಬಾರಿಗೆ ಆಂಡರ್ಸನ್ ಐಪಿಎಲ್‌ಗೆ!

**ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ವೇಗದ ಬೌಲರ್ ಎಂಬ ದಾಖಲೆ ಹೊಂದಿರುವ ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ ಅವರು 2025ರಲ್ಲಿ ನಡೆಯುವ ಐಪಿಎಲ್ ಮೆಗಾ ಹರಾಜಿಗೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಇದೇ ವರ್ಷ ಜುಲೈನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿರುವ 42 ವರ್ಷದ 'ಜಿಮ್ಮಿ', ಅದಾದ ನಂತರ ಸ್ಪರ್ಧಾತ್ಮಕ ಕ್ರಿಕೆಟ್ ಆಡಿಲ್ಲ. ತವರಿನ ಲಾರ್ಡ್ಸ್ ಮೈದಾನದಲ್ಲಿ ವೆಸ್ಟ್‌ಇಂಡೀಸ್ ವಿರುದ್ಧ ವಿದಾಯದ ಪಂದ್ಯವಾಡಿದ್ದರು.**

**1.25 ಕೋಟಿ ರು. ಮೂಲ ಬೆಲೆಯೊಂದಿಗೆ ಹರಾಜಿನಂಗಳಕ್ಕೆ ಬಂದಿರುವ ಇವರು ಕಳೆದ 15 ವರ್ಷಗಳಲ್ಲಿ (2009 ರಿಂದ) ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದೇ ಒಂದು ಟಿ20 ಪಂದ್ಯ ಆಡಿಲ್ಲ. ಒಮ್ಮೆಯೂ ಐಪಿಎಲ್‌ನಲ್ಲಿ ಕಾಣಿಸಿಕೊಂಡಿಲ್ಲ ಎಂಬುದು ವಿಶೇಷ.**

### ಹರಾಜಿನಲ್ಲಿ ಬೆನ್ ಸ್ಟೋಕ್ಸ್ ಹೆಸರಿಲ್ಲ!

**ಇಂಗ್ಲೆಂಡ್‌ನ ಸ್ಟಾರ್ ಆಲ್‌ರೌಂಡರ್ ಬೆನ್ ಸ್ಟೋಕ್ಸ್, ಹೆಸರು ಐಪಿಎಲ್ ಹರಾಜು ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ. ಮತ್ತೊಂದೆಡೆ ಅಮೆರಿಕ ಹಾಗೂ ಇಟಲಿಯ ಆಟಗಾರರು ಕಣದಲ್ಲಿದ್ದಾರೆ. ಥಾಮಸ್ ಡ್ರಾಕಾ ಐಪಿಎಲ್ ಕಣದಲ್ಲಿರುವ ಇಟಲಿಯ ಮೊದಲ ಆಟಗಾರ ಎನಿಸಿಕೊಂಡಿದ್ದಾರೆ. ಭಾರತೀಯ ಮೂಲದ ಅಮೆರಿಕ ಆಟಗಾರ ಸೌರಭ್ ನೇತ್ರವಾಲ್ಕರ್ ಸಹ ಪಟ್ಟಿಯಲ್ಲಿದ್ದಾರೆ. ಈ ಬಿಡ್‌ನಲ್ಲಿ ರಿಷಭ್ ಪಂತ್, ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್, ಯಜುವೇಂದ್ರ ಚಾಹಲ್, ಆರ್.ಅಶ್ವಿನ್ ಸೇರಿ ಹಲವು ಖ್ಯಾತನಾಮ ಆಟಗಾರರು ಲಭ್ಯರಿದ್ದಾರೆ. ಈ ಆಟಗಾರರಿಗೆ 2 ಕೋಟಿ ರು. ಮೂಲಬೆಲೆ ನಿಗದಿಯಾಗುವ ಸಾಧ್ಯತೆಯಿದೆ. ಮೊಹಮ್ಮದ್ ಶಮಿ, ಖಲೀಲ್ ಅಹ್ಮದ್, ಮುಕೇಶ್ ಕುಮಾರ್, ವೆಂಕಟೇಶ್ ಅಯ್ಯರ್, ಆವೇಶ್ ಖಾನ್, ದೀಪಕ್ ಚಾಹರ್, ಇಶಾನ್ ಕಿಶನ್, ಭುವನೇಶ್ವರ್ ಕುಮಾರ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ದೇವದತ್ತ ಪಡಿಕ್ಕಲ್, ಕೃಣಾಲ್ ಪಾಂಡ್ಯ, ಹರ್ಷಲ್ ಪಟೇಲ್, ಪ್ರಸಿದ್ಧ ಕೃಷ್ಣ, ಟಿ.ನಟರಾಜನ್, ವಾಷ್ಟಿಂಗ್ಟನ್ ಸುಂದರ್, ಉಮೇಶ್ ಯಾದವ್, ಸರ್ಫರಾಜ್ ಖಾನ್, ಪೃಥ್ವಿ ಶಾ ಕಣದಲ್ಲಿರುವ ಇತರೆ ಪ್ರಮುಖ ಭಾರತೀಯ ಆಟಗಾರರಾಗಿದ್ದಾರೆ.**

**ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್, ಆಸ್ಟ್ರೇಲಿಯಾದ ನೇಥನ್ ಲಯನ್, ಮಿಚೆಲ್ ಸ್ಟಾರ್ಕ್ ಸಹ ಬಿಡ್‌ನಲ್ಲಿದ್ದಾರೆ.**

ಮೊಣಕಾಲು ಗಾಯದಿಂದ ಹೊರಕ್ಕೆ ಉಳಿದಿದ್ದ ಸಂದೇಶ್

# ಭಾರತ ಫುಟ್ಬಾಲ್ ತಂಡಕ್ಕೆ ಜಿಂಗಾನ್

**ದೆಹಲಿ:** ಭಾರತ ಫುಟ್ಬಾಲ್ ತಂಡವು ಇದೇ 18ರಂದು ಹೈದರಾಬಾದ್‌ನಲ್ಲಿ ಮಲೇಷ್ಯಾ ವಿರುದ್ಧ ಸೌಹಾರ್ದ ಪಂದ್ಯ ಆಡಲಿದ್ದು, 26 ಸಂಭಾವ್ಯ ಆಟಗಾರರನ್ನು ಮಂಗಳವಾರ ಪ್ರಕಟಿಸಲಾಗಿದೆ. ಮೊಣಕಾಲು ಗಾಯದಿಂದ ಚೇತರಿಸಿಕೊಂಡಿರುವ ಅನುಭವಿ ಡಿಫೆಂಡರ್ ಸಂದೇಶ್ ಜಿಂಗಾನ್ ಅವರಿಗೆ ಸ್ಥಾನ ಕಲ್ಪಿಸಲಾಗಿದೆ.

31 ವರ್ಷ ವಯಸ್ಸಿನ ಜಿಂಗಾನ್, ಜನವರಿಯಿಂದ ತಂಡದಿಂದ ಹೊರಗುಳಿದಿದ್ದರು. ಹೀಗಾಗಿ, ಏಷ್ಯನ್ ಕಪ್, ಐಎಸ್‌ಎಲ್ ಋತುವಿನ ಪಂದ್ಯಗಳನ್ನು ಕಳೆದುಕೊಂಡಿದ್ದರು. ಏಷ್ಯನ್ ಕಪ್‌ನಲ್ಲಿ ಸಿರಿಯಾ ವಿರುದ್ಧದ ಭಾರತದ ಪಂದ್ಯದ ವೇಳೆ ಜಿಂಗಾನ್ ಗಾಯಗೊಂಡಿದ್ದರು.

ಸೆಪ್ಟೆಂಬರ್‌ನಲ್ಲಿ ಇಂಟರ್‌ಕಾಂಟಿನೆಂಟಲ್ ಕಪ್‌ನಲ್ಲಿ ಮಾರಿಷಸ್ ವಿರುದ್ಧ ಭಾರತ ತಂಡವನ್ನು ಮುನ್ನಡೆಸಿದ್ದ ರಾಹುಲ್ ಭೇಕೆ ತಮ್ಮ ಸ್ಥಾನವನ್ನು ಉಳಿಸಿಕೊಂಡರೆ, ಮೋಹನ್ ಬಾಗನ್ ನಾಯಕ ಮತ್ತು ಡಿಫೆಂಡರ್ ಸುಭಾಶಿಶ್ ಬೋಸ್ ಅವರನ್ನು ಕೈಬಿಡಲಾಯಿತು.

ಜುಲೈನಲ್ಲಿ ಇಗೋರ್ ಸ್ಟಿಮ್ಯಾಚ್‌ರಿಂದ ಅಧಿಕಾರ ವಹಿಸಿಕೊಂಡ ನಂತರ ಭಾರತದ ಮುಖ್ಯ ಕೋಚ್ ಮನೊಲೊ ಮಾರ್ಕ್ವೆಝ್ ಮೊದಲ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ.

**ಸಂಭಾವ್ಯ ತಂಡ: ಗೋಲ್ ಕೀಪರ್‌ಗಳು:** ಅಮರಿಂದರ್ ಸಿಂಗ್, ಗುರ್‌ಪ್ರೀತ್ ಸಿಂಗ್ ಸಂಧು ಮತ್ತು ವಿಶಾಲ್ ಕೈತ್.
**ಡಿಫೆಂಡರ್ಸ್:** ಆಕಾಶ್ ಸಾಂಗ್ವಾನ್, ಅನ್ವರ್ ಅಲಿ, ಆಶೀಶ್ ರೈ, ಚಿಂಗ್ಲೆನ್ಸಾನಾ ಸಿಂಗ್ ಕೊನ್ಶಮ್, ಹ್ಮಿಂಗ್ಥನ್ಮಾವಿಯಾ ರಾಲ್ಟೆ, ಮೆಹ್ತಾಬ್ ಸಿಂಗ್, ರಾಹುಲ್ ಭೇಕೆ, ರೋಷನ್ ಸಿಂಗ್ ನೌರೆಮ್ ಮತ್ತು ಸಂದೇಶ್ ಜಿಂಗಾನ್.
**ಮಿಡ್‌ಫೀಲ್ಡರ್ಸ್:** ಅನಿರುದ್ಧ್ ಥಾಪಾ, ಬ್ರೆಂಡನ್ ಫರ್ನಾಂಡಿಸ್, ಜೀಕ್ಸನ್ ಸಿಂಗ್, ಜಿತಿನ್ ಎಂ.ಎಸ್, ಲಾಲೆಂಗ್ಮಾವಿಯಾ ರಾಲ್ಟೆ, ಲಿಸ್ಟನ್ ಕೊಲಾಕೊ, ಸುರೇಶ್ ಸಿಂಗ್ ವಾಂಗ್ಜಾಮ್ ಮತ್ತು ವಿಬಿನ್ ಮೋಹನನ್.
**ಫಾರ್ವರ್ಡ್ಸ್:** ಎಡ್ಮಂಡ್ ಲಾಲ್ರಿಂಡಿಕಾ, ಇರ್ಫಾನ್ ಯಾದವಾಡ, ಫಾರೂಕ್ ಚೌಧರಿ, ಲಾಲಿಯನ್ಜುವಾಲಾ ಚಾಂಗ್ಟೆ, ಮನ್ವಿರ್ ಸಿಂಗ್ ಮತ್ತು ವಿಕ್ರಮ್ ಪ್ರತಾಪ್ ಸಿಂಗ್.

## ವಿಟಾಕೀಸ್

ಲಾಕ್ ಡೌನ್ ಹಿನ್ನೆಲೆಯಾಗಿಟ್ಟು ಕೊಂಡು ಸಿನಿಮಾದ ಕಥೆ ಹೆಣೆದಿದ್ದೇವೆ. ಒಂದೇ ಮನೆಯಲ್ಲಿ ನಡೆಯುವ ಕಥೆಯಾದರೂ ಐದು ಪ್ರಮುಖ ಪಾತ್ರಗಳ ಸುತ್ತ ಸಾಗಲಿದೆ. ಟೆನೆಂಟ್ ಒಂದು ರೀತಿಯ ಹೊಸ ಕಥೆ ಎಂದು ಹೇಳಬಹುದು. ಇದು ಎಲ್ಲರಿಗೂ ಕನೆಕ್ಟ್ ಆಗುವ ಕಾಡುವ ಸಿನಿಮಾವಾಗಿದೆ.
-ಶ್ರೀಧರ್ ಶಾಸ್ತ್ರಿ ನಿರ್ದೇಶಕ

# ಟ್ರೇಲರ್‌ನಲ್ಲಿ ಮನಗೆದ್ದ ಟೆನೆಂಟ್

ಟೀಸರ್ ಮತ್ತು ಹಾಡುಗಳ ಮೂಲಕ ಗಮನಸೆಳೆದಿದ್ದ ಟೆನೆಂಟ್ ಈಗ ಟ್ರೇಲರ್ ಮೂಲಕ ನಿರೀಕ್ಷೆ ದುಪ್ಪಟ್ಟುಗೊಳಿಸಿದೆ. ಇದು ಒಂದೇ ಮನೆಯಲ್ಲಿ ನಡೆಯುವ ಕಥೆಯಾಗಿದ್ದು, ಕ್ರೈಂ, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿದೆ. ಬಿಗ್ ಬಾಸ್ ಮನೆಯಲ್ಲಿರುವ ಧರ್ಮ ಕೀರ್ತಿರಾಜ್ ಮತ್ತು ಉಗ್ರಂ ಮಂಜು ಸೇರಿದಂತೆ ನಟ ತಿಲಕ್, ರಾಕೇಶ್ ಮಯ್ಯ, ಸೋನು ಗೌಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಹಿಂದಿನ ಸಿನಿಮಾಗಳಲ್ಲಿ ಲವ್ವರ್ ಬಾಯ್ ಆಗಿ ಮಿಂಚಿದ್ದ ನಟ ಧರ್ಮ ಕೀರ್ತಿರಾಜ್ ಟೆನೆಂಟ್‌ನಲ್ಲಿ ವಿಭಿನ್ನ ಪಾತ್ರದಲ್ಲಿ ನಿರ್ವಹಿಸಿದ್ದಾರೆ. ತಿಲಕ್ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ನಿರ್ದೇಶಕರು ಈ ಸಿನಿಮಾದ ಕಥೆ ಹೇಳಿದಾಗ ಕುತೂಹಲ ಕೆರಳಿಸಿತು. ಹಾಗಾಗಿ ಸಿನಿಮಾದಲ್ಲಿ ನಟಿಸಲು ಒಪ್ಪಿದೆ. ನನ್ನ ಸಿನಿಮಾ ಜೀವನದಲ್ಲಿಯೇ ಇದು ಹೊಸತರದ ಪಾತ್ರವಾಗಿದೆ ಎಂದು ತಿಲಕ್ ಹೇಳಿದರು. ನಿರ್ದೇಶಕರು ಹೇಗೆ ಕಥೆ ಹೆಣೆದಿದ್ದರೋ ಅಂತೆಯೇ ಅದ್ಭುತವಾಗಿ ಚಿತ್ರವನ್ನು ತೆರೆಯಲ್ಲಿ ಕಟ್ಟಿಕಟ್ಟಿದ್ದಾರೆ. ಒಂದೇ ಮನೆಯಲ್ಲಿ ನಡೆಯುವ ಸ್ಟೋರಿ ಇಲ್ಲಿದ್ದು, ಹೊಸತನದ ಸ್ಪರ್ಶವಿದೆ. ಹಾಗಾಗಿ ಈ ಸಿನಿಮಾ ಖಂಡಿತಾ ಎಲ್ಲರಿಗೂ ಹಿಡಿಸಲಿದೆ ಎಂದು ರಾಕೇಶ್ ಮಯ್ಯ ತಿಳಿಸಿದರು. ಮಾಸ್ಟರ್ ಚಾಯ್ಸ್ ಕ್ರಿಯೇಶನ್ಸ್ ಬ್ಯಾನರ್‌ನಲ್ಲಿ ಟಿ.ನಾಗರಾಜ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಗಿರೀಶ್ ಹೊತೂರ್ ಸಂಗೀತ ನಿರ್ದೇಶನ, ಉಜ್ವಲ್ ಸಂಕಲನ, ಮನೋಹರ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಟೆನೆಂಟ್ ಇದೇ ತಿಂಗಳ 22 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ಈ ಸಿನಿಮಾದ ಕಥೆ ಕೇಳಿದ ಮೇಲೆ ಈ ಚಿತ್ರದಲ್ಲಿ ನಟಿಸಬೇಕ ಬೇಡವಾ ಎಂದು ಯೋಚನೆ ಮಾಡಿದ್ದೆ. ಯಾಕೆಂದರೆ ಈ ರೀತಿಯ ಪಾತ್ರ ನಾನು ಯಾವತ್ತು ಮಾಡಿರಲಿಲ್ಲ. ಪ್ರೇಕ್ಷಕರು ನನ್ನನ್ನು ಹೇಗೆ ಸ್ವೀಕಾರ ಮಾಡುತ್ತಾರೆ ಎನ್ನುವ ಭಯವಿತ್ತು. ಆದರೆ ಕಥೆ ಮನಸಿಗೆ ಹಿಡಿತು, ಅಂತು ನಟಿಸಲು ಸಮ್ಮತಿಸಿದೆ. ಇದು ಲಾಕ್‌ಡೌನ್ ಸಮಯದಲ್ಲಿ ನಡೆಯುವ ಕಥೆಯಾಗಿದ್ದು, ಒಂದೇ ಮನೆಯಲ್ಲಿ ಶೂಟಿಂಗ್ ನಡೆಸಿದ್ದೇವೆ. ಸಿನಿಮಾ ಅಂದುಕೊಂಡಂತೆ ಮೂಡಿಬಂದಿದೆ.
-ಸೋನು ಗೌಡ ನಟಿ

## ಪ್ರೀತಿಯ ಮೇಘ ಸಂದೇಶ

ಕಿರುತೆರೆ ಖ್ಯಾತಿ ಪಡೆದಿರುವ ಕಿರಣ್ ರಾಜ್ ಮತ್ತೆ ಲವ್ವರ್ ಬಾಯ್ ಅವತಾರ ತಾಳಿದ್ದಾರೆ. ಈ ಬಾರಿ ಮೇಘ ಚಿತ್ರದ ಮೂಲಕ ಪ್ರೀತಿಯ ಸಂದೇಶ ಹೊತ್ತು ತಂದಿದ್ದಾರೆ. ಹೌದು, ಚರಣ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೇಘ ಚಿತ್ರದಲ್ಲಿ ಕಿರಣ್ ನಾಯಕನಾಗಿ ನಟಿಸಿದ್ದು, ಮನಸಿಗೆ ನಾಟುವ ಲವ್ ಸ್ಟೋರಿ ಹೇಳಲಿದ್ದಾರೆ. ಕಾಜಲ್ ಕುಂದರ್, ಕಿರಣ್ ರಾಜ್‌ಗೆ ಜತೆಯಾಗಿ ನಟಿಸಿದ್ದಾರೆ. ಮೇಘ ನಿಜವಾದ ಸ್ನೇಹ ಮತ್ತು ಪ್ರೀತಿಯ ನಡುವೆ ಇರುವ ಸಣ್ಣ ವ್ಯತ್ಯಾಸವನ್ನು ನಿರೂಪಿಸುತ್ತದೆ. ಇದರ ಜತೆಗೆ ಮಾನವೀಯ ಸಂಬಂಧಗಳ ಮೌಲ್ಯವೂ ಚಿತ್ರದ ಕಥೆಯಲ್ಲಿ ಅಡಕವಾಗಿದೆ. ಅದಕ್ಕೆ ಭಾವನಾತ್ಮಕ ಸ್ಪರ್ಶ ನೀಡಿದ್ದು ಮೇಘ ಎಲ್ಲರಿಗೂ ಬಲು ಬೇಗ ಕನೆಕ್ಟ್ ಆಗಲಿದೆ ಎನ್ನುತ್ತಾರೆ ನಿರ್ದೇಶಕರು.

ರಾಜೇಶ್ ನಟರಂಗ ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಉಳಿದಂತೆ ಶೋಭರಾಜ್, ಸಂಗೀತಾ, ಸುಂದರ್ ವೀಣಾ, ಹನುಮಂತೇಗೌಡ, ತರಂಗ ವಿಶ್ವ ಮತ್ತು ಗಿರೀಶ್ ಶಿವಣ್ಣ ಮುಂತಾದರು ತಾರಾಗಣದಲ್ಲಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ನಿರ್ದೇಶಕ ಚರಣ್ ಚಿತ್ರದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದು, ಜೋಯಲ್ ಸಕ್ಕರಿ ಸಂಗೀತ ಸಂಯೋಜಿಸಿದ್ದಾರೆ. ವಿಜಯ್ ಪ್ರಕಾಶ್ ಹಾಗೂ ವಾಸುಕಿ ವೈಭವ್ ಹಾಡಿಗೆ ದನಿಯಾಗಿ ದ್ದಾರೆ. ಕೃಷಿ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿ ರುವ ಮೇಘ ಚಿತ್ರೀಕರಣ ಮುಗಿಸಿ ತೆರೆಗೆ ಸಿದ್ಧವಾಗಿದೆ.

# ಸೆನ್ಸಾರ್ ಅಂಗಳದಲ್ಲಿ ಫಾರೆಸ್ಟ್

ಸಾಹಸ ಪ್ರಧಾನ ಕಥೆಯ ಜತೆಗೆ ಕಾಮಿಡಿ ಕಥೆಯನ್ನು ಒಳಗೊಂಡಿರುವ ಫಾರೆಸ್ಟ್ ಚಿತ್ರೀಕರಣ ಮುಗಿಸಿದ್ದು, ಸೆನ್ಸಾರ್ ಅಂಗಳ ತಲುಪಿದೆ. ಎನ್.ಎಂ.ಕೆ. ಸಿನಿಮಾಸ್ ಬ್ಯಾನರ್‌ನಲ್ಲಿ ಎನ್.ಎಂ.ಕಾಂತರಾಜ್ ನಿರ್ಮಾಣ ಮಾಡಿರುವ ಈ ಚಿತ್ರವನ್ನು ಡಬಲ್ ಇಂಜಿನ್, ಬ್ರಹ್ಮಚಾರಿ ಚಿತ್ರಗಳನ್ನು ನಿರ್ದೇಶನ ಮಾಡಿ ಪ್ರಸಿದ್ಧಿ ಪಡೆದಿರುವ ಚಂದ್ರಮೋಹನ್ ನಿರ್ದೇಶನ ಮಾಡಿದ್ದಾರೆ. ಕಾಡಿನಲ್ಲೇ ನಡೆಯುವ ಅಡ್ವೆಂಚರಸ್ ಕಾಮಿಡಿ ಕಥೆಯನ್ನು ಈ ಚಿತ್ರದ ಮೂಲಕ ವಿಭಿನ್ನವಾಗಿ ಕಟ್ಟಿಕೊಡಲಾಗಿದೆ. ಚಿಕ್ಕಣ್ಣ, ಅನೀಶ್ ತೇಜೇಶ್ವರ್, ಗುರುನಂದನ್ ಹಾಗೂ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಶರಣ್ಯಾ ಶೆಟ್ಟಿ, ಅರ್ಚನಾ ಕೊಟ್ಟಿಗೆ, ಅವಿನಾಶ್, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ ಪಾಣಾಜೆ, ಸೂರಜ್ ಪಾಪ್ಸ್, ಸುನೀಲ್ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಹಾಡು ಹಾಗೂ ಟೀಸರ್ ಮೂಲಕ ಈಗಾಗಲೇ ಸಿನಿಪ್ರಿಯರ ಮನಗೆದ್ದಿರುವ ಫಾರೆಸ್ಟ್ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಸತ್ಯಶೌರ್ಯ ಸಾಗರ್ ಸಂಭಾಷಣೆ, ಧರ್ಮವಿಶ್ ಸಂಗೀತ ನಿರ್ದೇಶನ, ಆನಂದ್‌ರಾಜಾ ವಿಕ್ರಮ್ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ, ಅಮರ್ ಕಲಾ ನಿರ್ದೇಶನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಬೆಂಗಳೂರು, ಮಡಿಕೇರಿ, ಚಿಕ್ಕಮಗಳೂರು, ಮಲೆ ಮಹಾದೇಶ್ವರ ಬೆಟ್ಟದ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

# ದೀಪಾವಳಿಗೆ ರಾಮಾಯಣ ದರ್ಶನ

ಬಾಲಿವುಡ್‌ನಲ್ಲಿ ರಾಮಾಯಣ ಆಧಾರಿತ ಬಿಗ್ ಬಜೆಟ್ ಸಿನಿಮಾ ಮೂಡಿಬರಲಿದೆ. ಒಂದು ವರ್ಷದ ಹಿಂದೆಯೇ ರಾಮಾಯಣ ಚಿತ್ರದ ಸಿದ್ಧತೆಗಳು ಜೋರಾಗಿ ನಡೆದಿದ್ದವು, ಈಗ ಚಿತ್ರೀಕರಣವೂ ಆರಂಭವಾಗಿದೆ. ವಿಶೇಷ ಎಂದರೆ ಸಿನಿಮಾದ ಶೂಟಿಂಗ್ ಮುಗಿಯುವ ಮೊದಲೇ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ರಾಮಾಯಣ ಎರಡು ಭಾಗದಲ್ಲಿ ಮೂಡಿಬರಲಿದ್ದು ಮೊದಲ ಭಾಗ 20026ರ ದೀಪಾವಳಿ ಹಬ್ಬದಂದು ರಿಲೀಸ್ ಆದರೆ ಎರಡನೇ ಭಾಗ 2027ರ ದೀಪಾವಳಿಯಂದೇ ತೆರೆಗೆ ಬರಲಿದೆ. ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ರಾಮಾಯಣ ಎಷ್ಟು ಅದ್ದೂರಿಯಾಗಿ ಮೂಡಿಬರಲಿದೆ ಎಂಬುದನ್ನು ಕಣ್ತುಂಬಿಕೊಳ್ಳಲು ಕಾತರರಾಗಿದ್ದಾರೆ.

ರಾಮಾಯಣ ಚಿತ್ರವನ್ನು ನಿತೀಶ್ ತಿವಾರಿ ನಿರ್ದೇಶನ ಮಾಡುತ್ತಿದ್ದು, ರಣಬೀರ್ ಕಪೂರ್ ರಾಮನಾಗಿ ಹಾಗೂ ಸಾಯಿ ಪಲ್ಲವಿ ಸೀತೆಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಟ ಯಶ್, ರಾವಣನಾಗಿ ಅಬ್ಬರಿಸಲಿದ್ದಾರೆ. ಮೊದಲ ಭಾಗದಲ್ಲಿ ರಾಮ, ಸೀತೆ, ಲಕ್ಷ್ಮಣರ ಪ್ರಸಂಗ

ಪ್ರಮುಖವಾಗಿದ್ದರೆ, ದ್ವಿತೀಯ ಭಾಗದಲ್ಲಿ ರಾಮ-ರಾವಣರ ನಡುವಿನ ಕಾಳಗ ರೋಚಕವಾಗಿ ಮೂಡಿಬರಲಿದೆ. ಸದ್ಯ ಯಶ್, ಟಾಕ್ಸಿಕ್ ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದು, ಆ ಬಳಿಕ ರಾಮಾಯಣ ಚಿತ್ರತಂಡ ಸೇರರಲಿದ್ದಾರೆ. ಸದ್ಯ ರಾಮಾಯಣ ಚಿತ್ರದ ರಿಲೀಸ್ ಡೇಟ್ ಘೋಷಣೆ ಆಗಿದ್ದು, ಚಿತ್ರದ ಪೋಸ್ಟರ್ ಹೇಗಿರಲಿದೆ ಎಂಬ ಕಾತರವೂ ಇದೆ.